
# ಅಪರಂಜಿ

ತಿಳಿನಗೆಯ ಕಾರಂಜಿ

ಅಕ್ಟೋಬರ್ 2025

## 43ನೇ ವಾರ್ಷಿಕ ವಿಶೇಷಾಂಕ






ಬಿಡಿ ಪ್ರತಿ: ರೂ. 30/–

ಬೀchi

TEMPLE OF KNOWLEDGE

ಬೀchi ಸಾಹಿತ್ಯ

# ಬೀChi Prakashana

1. ರೇಡಿಯೋ ನಾಟಕಗಳು
2. ಮಾತ್ರೆಗಳು
3. ತಿಂಮನ ತಲೆ
4. ದಾಸಕೂಟ
5. ಹುಚ್ಚು ಹುರುಳು
6. ಹನ್ನೊಂದನೆ ಅವತಾರ
7. ಸತೀಸೂಳೆ
8. ಸರಸ್ವತಿ ಸಂಹಾರ
9. ಖಾದೀಸೀರೆ
10. ಬೆಂಗಳೂರು ಬಸ್ಸು
11. ಹೆಣ್ಣು ಕಾಣದ ಗಂಡು
12. ಸತ್ತವನು ಎದ್ದು ಬಂದಾಗ
13. ಚಿನ್ನದ ಕಸ
14. ಕಾಣದ ಸುಂದರಿ
15. ಕಲ್ಲು ಹೇಳಿತು
16. ತಿಮ್ಮ ರಸಾಯನ
17. ದೇವನ ಹೆಂಡ
18. ಏರದ ಬಳೆ
19. ಮೇಡಮ್ಮನ ಗಂಡ
20. ಆಟೋ !
21. ಎಲ್ಲಿರುವೆ ತಂದೆ ಬಾರೋ
22. ಬಂಗಾರದ ಕತ್ತೆ
23. ಎಲ್ಲರೂ ಸಂಪನ್ನರೇ
24. ಟೆಂಟ್ ಸಿನೇಮಾ
25. ಬ್ರಹ್ಮಚಾರಿಯ ಮಗ
26. ಬೆಳ್ಳಿ ತಿಂಮ ನೂರೆಂಟು ಹೇಳಿದ
27. ಮೂರು ಹೆಣ್ಣು ಐದು ಜಡೆ
28. ಮುರಿದ ಬೊಂಬೆ
29. ಹುಲಿಯ ಬೆನ್ನ ಮೇಲಿಂದ
30. ಸುನಂದೂಗೆ ಏನಂತೆ ?
31. ಕಮಲಮ್ಮನ ಕುಂಕುಮ ಬಲ
32. 6-7 ಸ್ತ್ರೀ ಸೌಖ್ಯ
33. ಆಗಿಷ್ಟು-ಈಗಿಷ್ಟು
34. ಸೀತೂ ಮದುವೆ
35. ಲೇವಡಿ ಟೈಪಿಸ್ಟ್
36. ಆರಿದ ಚಹಾ
37. ಸಕ್ಕರೆ ಮೂಟೆ
38. ಬೆಳ್ಳಿ ಪತ್ರಗಳು
39. ಮಹಾಯುದ್ಧ
40. ಲಕ್ಷ್ಮೀ ಪೂಜೆ
41. ದೇವರು ಕೊಟ್ಟಿದ್ದು
42. ಅಮ್ಮಾವ್ರ ಕಾಲ್ಗುಣ
43. ಸಾಹುಕಾರ ಸುಬ್ಬಮ್ಮ
44. ಸುಬ್ಬಿ !
45. ಕತ್ತಲಲ್ಲಿ ಬಂದವಳು
46. ಹೆಂಡತಿ ನಕ್ಕಾಗ
47. ಬಿತ್ತಿದ್ದೇ ಬೇವು
48. ಕಾಮಂಣ
49. ಕಾಮಲೋಕ
50. ಮಾತನಾಡುವ ದೇವರುಗಳು
51. ಅಂದನಾ ತಿಂಮ
52. ಸಂಪನ್ನರಿದ್ದಾರೆ ಎಚ್ಚರಿಕೆ
53. ಗರತಿಯ ಗುಟ್ಟು
54. ಕಮಲೆಯ ಓಲೆಗಳು
55. ನಂಬರ್ ಐವತ್ತೈದು
56. ದೇವರಿಲ್ಲದ ಗುಡಿ
57. ಮನೆತನದ ಗೌರವ
58. ಉತ್ತರ ಭೂಪ
59. ಕನ್ನಡ ಎಮ್ಮೆ
60. ಅಮ್ಮನವರ ಇಚ್ಛಾ
61. ನರಪ್ರಾಣಿ
62. ನನ್ನ ಭಯಾಗ್ರಫಿ
63. ದೇವರಿಗೇ ಪ್ರೀತಿ
64. ಬೀchi ಬುಲ್ಲೆಟಿನ್
65. ಬೀchi ತೋಚಿದ್ದು ಗೀಚಿದ್ದು
66. ಬೊಂಬಾಟ್ ಬೀchi
67. ವಾಗ್ಬಾಣಗಳು (ಗಂಗಾವತಿ ಪ್ರಾಣೇಶ್)
68. ನಗಿಸುವವನ ನೋವುಗಳು (ಗಂಗಾವತಿ ಪ್ರಾಣೇಶ್)
69. **Best of Best** ಬರಹಗಳು ಭಾಗ-1 (ಬಿ.ಎಸ್.ಕೆ)
70. **Best of Best** ಬರಹಗಳು ಭಾಗ-2 (ಬಿ.ಎಸ್.ಕೆ)
71. ಪೊಲೀಸ್ ಎನ್‌ಕೌಂಟರ್ (ಡಾ. ಡಿ.ವಿ. ಗುರುಪ್ರಸಾದ್)
72. ಪೊಲೀಸ್ ಜೀವನದಲ್ಲಿ ಹಾಸ್ಯ (ಡಾ. ಡಿ.ವಿ. ಗುರುಪ್ರಸಾದ್)
73. ವಿಶ್ವ ಪರ್ಯಟನೆ (ಡಾ. ಡಿ.ವಿ. ಗುರುಪ್ರಸಾದ್)
74. ರಾಜೀವ್ ಗಾಂಧಿ ಛೀಕರ ಹತ್ಯೆ
75. ಮರಣದಂಡನೆಗೀಡಾದ ಕುಖ್ಯಾತ ಕೈದಿಗಳು
76. ತ್ರಿಮುಖಿ
77. ರಕ್ಷ-ಖಾ-**NALINI GOWDA**
78. ಕವನ ಸಂಕಲನ-**ARUNDATHI JOSHI**
79. THE PANDEMIC PROSE -VINOD D GANGOLLI
80. AN ATOM OF KNOWLEDGE A RESOURCE OF CURIOUS MINDS -SUBRAY SHAMBHU AVADHANI

MEENA RAMAN BOOKS

81. ESSAYS & POEMS
82. EASY COOKING OF DELICIOUS RECIPES
83. BOOK OF POEMS
84. BIRDS AND OTHER POEMS
85. EASY COOKING OF DELICIOUS RECIPES PART-II
86. CHANDRAYAAN -3 MISSION AND OTHER POEMS (Space Craft)
87. ANECDOTES OF MY STUDENT LIFE
88. EXCERPTS FROM SRIMADH BHAGAVAD GEETA
89. EASY COOKING OF DELICIOUS RECIPES PART-III
90. RAIN AND OTHER POEMS
91. EASY COOKING OF DELICIOUS RECIPES PART-IV
92. SRIMADH BHAGAVAD GEETA



Ph : 080-29731414, Mob : 9845264304.

Website : www.beechi.in

# ಅಂದ ಹಾಗೆ...!

ರಾಂಕಿ ಬೆಳ್ಳೂರ್


ಋಷಿಗಳು ಹೋಮ ಮಾಡುವಾಗ ದನ-ಕರುಗಳನ್ನು ಕದ್ದರು ದುರ್ಯೋಧನನ ಕಡೆಯವರು.. ಯಾಕೆ ಗೊತ್ತೇ ಗಣಪ ?
ವ್ಯಾಸ ಮಹರ್ಷಿಗಳೇ, ಎಷ್ಟಾದರೂ ಅವರು COWರವ-ರಲ್ಲವೇ !

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457







MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

**ವಿಶೇಷ ಸಂಚಿಕೆ**

ಸಂಪುಟ 43
ಸಂಚಿಕೆ – 01
ಅಕ್ಟೋಬರ್ – 2025

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 3 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 4 |
| ಅವಿಸ್ಮರಣೀಯ ನಗೆಗಾರರು–3 | ಶಿವಕುಮಾರ್ | 5 |
| ಅರಿಚ್ಚಂದ್ರ ಅಮರ ! | ಪ್ರೊ.ಎಂ. ಕೃಷ್ಣೇಗೌಡ | 10 |
| ನಿಂಗೆಂತಾ ಗೊತ್ತಿದ್ದು ? | ಭಾಗೀರಥಿ ಹೆಗಡೆ | 15 |
| ಹೂವೇ....ಹೂವೇ | ನಳಿನಿ ಸೂರ್ಯಪ್ರಕಾಶ್ | 19 |
| ಜಾಲತಾಣ ಜಾಣತನ | ಅಣಕು ರಾಮನಾಥ್ | 21 |
| ಶರಲೇಖನ ಪುನರಾಗಮನ | ವತ್ಸನ | 25 |
| ಸೋಮು ಆಫೀಸ್ ನಾಟಕ | ಬೇಲೂರು ರಾಮಮೂರ್ತಿ | 32 |
| ದಾರಿ ಕಾಣದಾಗಿದೆ ರಾಘವೇಂದ್ರನೇ......! | ಲತಾ ಹೆಗಡೆ | 38 |
| ಮನೆ ಬದಲಾಯಿಸಿ ನೋಡು ! | ಸುಚಿತ್ರಾ ಹೆಗಡೆ | 43 |
| ಡೋಕ್ಲಾ ಇನ್ನೊಂದ್ ಹಾಕ್ಲಾ | ಎಂ.ಎಸ್.ನರಸಿಂಹಮೂರ್ತಿ | 46 |
| ಕ್ರಶ್......! | ಚಿತ್ರಾ ರಾಮಚಂದ್ರನ್ | 50 |
| ಇಂದಿನ ಕಾಲದ ನಾಯಕರು | ಎಚ್.ಡುಂಡಿರಾಜ್ | 54 |
| ತುಂತುರು | ದಂನಆ | 55 |
| ಅಥ್ಲೀಟ್ ಆಗೋದೇನ್ಮಹಾ !? | ಜಯಶ್ರೀ ದೇಶಪಾಂಡೆ | 56 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್
ಒಳಪುಟಗಳು : ರಾಂಕಿ ಬೆಳ್ಳೂರ್, ರಘುಪತಿ ಶೃಂಗೇರಿ, ಮಂಜುನಾಥ್ ಶಿವಮೊಗ್ಗ, ಎಸ್.ಎನ್. ಗಣನಾಥ

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com



**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*

| | | |
|---|---|---|
| ಲೈಕಾಯಣ | ಎಸ್ ಎನ್ ಗಣನಾಥ | 60 |
| ಕಾರ್ಟೂನ್ | ರಾಂಕಿ ಬೆಳ್ಳೂರ್ | 62–63 |
| ದೇವರು ಕೊಟ್ಟದ್ದು, ಕೊಡದ್ದು.... | ಎಚ್. ಗೋಪಾಲಕೃಷ್ಣ | 64 |
| ಕಂದನಿಗೇಕೆ ಮುದ್ದಿನ ಭಾಷೆ ? | ಗಣೇಶ ಹೆಗ್ಗಡೆ, ಮೈಸೂರು | 68 |
| ಬಹುಮನಿ ಸಾಮ್ರಾಜ್ಯ | ನಳಿನಿ ಟಿ. ಭೀಮಪ್ಪ, ಧಾರವಾಡ | 72 |
| ಜಯಹೇ ರಸರುಚಿಗಳ ಬೀಡೆ.....! | ಸುಮಾ ರಮೇಶ್, ಹಾಸನ | 75 |
| ನಗಲು ಒಂದೇ ದಿನ ಸಾಕೇ ? | ಕೆ.ಎಸ್.ಸೋಮೇಶ್ವರ | 78 |
| ಹಿರಿಯರ ತೀರ್ಮಾನ | ಡಾ. ಶ್ಯಾಮಲಾ ರವಿಶಂಕರ್ | 83 |
| ನೆನಪಿನ ಶಕ್ತಿ ಜಾಸ್ತಿ ಇರಲಿ...... | ಸಹನ ಪ್ರಸಾದ್ | 85 |
| ಪ್ರವಾಸ ?.....ಪ್ರಯಾಸ !? | ಸೌಮ್ಯ ಮಿತ್ರ | 87 |
| ಮಡಿ ಮಡಿ ಎಂದು ಅಡಿಗಡಿಗ್ಹಾರುವೆ.... | ವೈ.ಎನ್.ಗುಂಡೂರಾವ್ | 91 |
| ಸೂಪರ್ ನಾನಾ ನಾನಿಗಳಾಗಿ ! | ಜಿ.ವಿ. ಅರುಣ | 93 |
| ಸಿ.ಸಿ.ಟಿ.ವಿ ಕ್ಯಾಮೆರಾಗಳ ಸಮಾವೇಶ | ರಾಂಕಿ ಬೆಳ್ಳೂರ್ | 98 |
| ಅಪರೂಪದ ಅಪರಂಜಿ | ಕುಮುದಾ ಪುರುಷೋತ್ತಮ್ | 101 |
| ಸಭಾತ್ಯಾಗ | ಸುಧಾ ಸರನೋಬತ್ | 103 |
| ಸವತಿಯೊಂದಿಗೆ ಸರಸ | ನಿರ್ಮಲ ಮೃತ್ಯುಂಜಯ ಸ್ವಾಮಿ | 105 |
| ಮೈಸೂರಿಗೆ ಹೋಗುವಾಗ..... | ಇ.ಆರ್. ರಾಮಚಂದ್ರನ್ ಮೈಸೂರು | 110 |
| ಶ್ವಾನ ಭೋಜನ–ಬಿಟ್ಟಿ ಬಿರಿಯಾನಿ | ಅಶೋಕ ಪೂಜಾರ | 113 |
| ನಂಗೇ ಬಕ್ರಾ ಮಾಡಿದರೆ....ಬಿಡ್ತೀನಾ ? | ವಿ. ವಿಜಯೇಂದ್ರ ರಾವ್ | 116 |
| ಟೈಪಿಸ್ಟ್ | ಎಂ.ಎನ್.ಸುಂದರ ರಾಜ್ | 118 |
| ಚಿಪ್ಪಿಂಡಿಯಾ ! | ತುರುವೇಕೆರೆ ಪ್ರಸಾದ್ | 126 |






## ಅಪರಂಜಿ ಕಿಡಿ

● ಪ್ರಕಾಶ್

ಮಹಿಳಾ ಏಷ್ಯಾ ಕಪ್ ಹಾಕಿ ;

ಭಾರತ 11 ; ಥಾಯ್ಲೆಂಡ್ 0 ಗೋಲುಗಳು

–ಕ್ರೀಡಾ ಸುದ್ದಿ

ಭಾರತದ ಆಟ ನೋಡುತ್ತ, ಗೋಲ್ ಮಾಡೋದನ್ನೇ ಮರೆತರೇನೋ !!

* * *

ಆರು ಬಾರಿ ಸೀಟ್ ಬೆಲ್ಟ್ ಧರಿಸದ ಸಿ.ಎಂ: ದಂಡ ಪಾವತಿ

– ಪತ್ರಿಕೆ

ಇದರಿಂದ ದಶಗುಣಗಳು ಅರಳುತ್ತವೇನೋ ಕಾದು ನೋಡಬೇಕು !!

* * *

"ಅತಿಥಿ" ಗಳಿಲ್ಲದೇ ಬೋಧನೆ ಸ್ಥಗಿತ

– ಸುದ್ದಿ

ಶಿಕ್ಷಕರು "ದೇವೋಭವ" ಎಂಬುದರ ತಿಥಿ.

* * *

ನಕಲಿ ವೈದ್ಯರ ಕ್ಲಿನಿಕ್‌ಗಳ ಮೇಲೆ ಆರೋಗ್ಯ ಇಲಾಖೆ ದಾಳಿ

– ಸುದ್ದಿ

ಈ ವೈದ್ಯರುಗಳು ಹಲವು ವರ್ಷಗಳಿಂದ 'ಚಿಕಿತ್ಸೆ' ಮಾಡುತ್ತಾ ಇರೋದು ಹೇಗೆ ?

ಎಂದು ಅಪರಂಜಿ ಅಚ್ಚರಿಗೊಂಡಳಂತೆ !!

* * *

ಗಣೇಶ ವಿಸರ್ಜನೆಗೆ ಸರ್ಪಗಾವಲು

– ದಿನಪತ್ರಿಕೆ

ಮೂಷಕವು ಬೆಚ್ಚಿ ಬಿದ್ದಿತಂತೆ !!

* * *

ಲಾಂಗ್ ಟರ್ಮ್ ಹೂಡಿಕೆ ಎಂದರೇನು ರಾಯರೇ ?

ನಮಗೂ ತಿಳಿಯದು ಸ್ವಾಮಿ

* * *



# “ನಮ್ಮ ನಿಮ್ಮಲ್ಲಿ”


**ಶಿವಕುಮಾರ್**

ಶರನ್ನವರಾತ್ರಿಯ ಸಂಭ್ರಮ ಮುಗಿದು ದೀಪಾವಳಿಯ ಬೆಳಕಿನ ಹಬ್ಬವನ್ನು ಇದಿರು ನೋಡುತ್ತಿರುವ ಈ ಸಮಯದಲ್ಲಿ, ಅಪರಂಜಿ ತನ್ನ ವಿಶೇಷ ಉಡುಗೆಯಲ್ಲಿ ನಿಮ್ಮ ಮನೆಗೆ ಕಾಲಿಡುತ್ತಿದ್ದಾಳೆ. ರಾಜಕೀಯ ಪುಡಾರಿಗಳ ಹಿಂದೆ ನಡೆದು ಬರುವ ಚಮಚಾಗಳ ಗುಂಪಿನಂತೆ, ಅವಳ ಜೊತೆಗಿನ ಪರಿವಾರವೇ ಒಂದು ದೊಡ್ಡ ಹಿಂಡು. ಅಲ್ಲಿ ನೋಡಿ, ಮುಂಚೂಣಿಯಲ್ಲಿ ದಾನವ ಲೋಕದಿಂದ ಬಂದಿರುವ ಧುರೀಣ ಸುವರ್ಣಾಕ್ಷನ ಗಂಭೀರ ನಡಿಗೆ. ಅವನ ಹಿಂದೆ ಹೆಜ್ಜೆ ಹಾಕುತ್ತಿರುವವರು ನಮ್ಮ ಹಿರಿಯ ನಗೆಗಾರರಾಗಿದ್ದ ದಾಶರಥಿಯವರು. ಅಲ್ಲೇ ಬಲಗಡೆ ಹುಬ್ಬಳ್ಳಿಯ ಆಶು ಕವಯಿತ್ರಿ ಕಲ್ಲೇಶ್ವರಿ ಹಾಡುತ್ತಾ ಆಗಮಿಸುತ್ತಿದ್ದಾಳೆ. ನಮ್ಮ ನಾಡಿನ ವಿವಿಧ ರುಚಿಗಳಿಗೆ ಜಯಕಾರ ಹಾಕುತ್ತಿರುವ ರಸಋಷಿಗಳೊಂದಿಗೆ ಬರುತ್ತಿರುವ ಪೂಜಾರರ ನಾಯಿಗಳ ಪಡೆ. ಅನತಿ ದೂರದಲ್ಲಿ, ಒಂದು ಜಟಕಾ ಭಾರಿ ಟ್ರಂಕು ಹೊತ್ತು ಬರುತ್ತಿದೆ. ಜೋಕೆ, ಹತ್ತಿರ ಹೋಗಬೇಡಿ, ಟ್ರಂಕು ಗಾಡಿಯಿಂದ ಜಾರಿ ಬಿದ್ದೀತು!. ಅವರ್ಯಾರು, ಆ ದಂಪತಿಗಳು ಅಂತ ಕೇಳಿದ್ರಾ? ಆತ ಸೋಮು, ಮುಖ ದಪ್ಪಗಾಗಿಸಿಕೊಂಡಿರೋ ಮಹಿಳೆ ಸೋಮಿ. ಅಲ್ಲಿ ನೋಡಿ ಮೈಸೂರಿನಿಂದ ಅರುವತ್ತರ ದಶಕದ ಕಾಲೇಜ್ ತರುಣಿಯರ ತಂಡ. ಯಾರನ್ನೋ ಚುಡಾಯಿಸುತ್ತಿರುವಂತೆ ಕಾಣುತ್ತೆ, ಆ ಯುವತಿಯರು. ಇಲ್ಲಿ ನೋಡಿ ನಮ್ಮ ನಾಡಿನ ಪ್ರಸಿದ್ಧ ನಗೆಗಾರರು ಒಂದು ತಟ್ಟೆ ತುಂಬಾ ಡೋಕ್ಲಾ ಇಟ್ಟುಕೊಂಡು ನಿಮಗೆ ಹಾಕ್ಲಾ ಅಂತ ಕೇಳ್ತಾ ಇದ್ದಾರೆ. ಅದ್ಯಾರು ಅಲ್ಲಿ?.... ಓ ಸುದ್ದಿ ಸೂರತ್ತಿಗೆ ! ಓಡಿ, ಓಡಿ. ಆಕೆಯ ಬಾಯಿಗೆ ಸಿಕ್ಕರೆ ಬಿಡುಗಡೆಯೇ ಇಲ್ಲ.

ಎಲ್ಲರನ್ನೂ ಆದರದಿಂದ ಮನೆಯೊಳಗೆ ಬರಮಾಡಿಕೊಳ್ಳಿ. ಪಟ್ಟಾಂಗ ಹೊಡೆಯಿರಿ. ನಿಮ್ಮ ಮನೆಯಲ್ಲಿ ಉದ್ಭವವಾಗುವ ಸಂತಸದ ಚಿಲುಮೆ ನಾಡಿನಲ್ಲೆಲ್ಲಾ ಹರಡಿ, ಜಗತ್ತಿಗೂ ಪಸರಿಸಲಿ. ಎಲ್ಲರಿಗೂ ದೀಪಾವಳಿ ಶುಭಾಶಯಗಳು.












## ಅವಿಸ್ಮರಣೀಯ ನಗೆಗಾರರು–೮

# ದಾಶರಥಿ ದೀಕ್ಷಿತ್

ಶಿವಕುಮಾರ್



**ನ**ಲವತ್ತರ ದಶಕದ ಕೊನೆಯ ಭಾಗ. ಆಗ ನನಗೆ "ದಂಟು" ಎನ್ನಬಹುದಾದ ವಯಸ್ಸು. ಆ ದಿನಗಳಲ್ಲಿ ತಿಂಗಳ ಎರಡನೇ ಭಾನುವಾರ ಬಂತೆಂದರೆ ನಮ್ಮ ಮನೆಯಲ್ಲಿ ಎಲ್ಲಿಲ್ಲದ ಸಂಭ್ರಮ. ಸಹಜವೇ, ಅಪ್ಪ, ಅಮ್ಮಂದಿರು ಮಕ್ಕಳನ್ನು ಸಿನಿಮಾಕ್ಕೋ, ಪಾರ್ಕಿಗೋ ಕರೆದೊಯ್ಯುವ ದಿನ ಅಲ್ಲವೇ ಅಂತ ತಪ್ಪಾಗಿ ಗ್ರಹಿಸಬೇಡಿ. ಸಂಭ್ರಮಕ್ಕೆ ಇದ್ದ ಕಾರಣವೇ ಬೇರೆ. ನಮ್ಮಮ್ಮ ಹೇಳುತ್ತಿದ್ದ ಹಾಗೆ ಅಂದು "ಕೊರವಂಜಿ ಹುಡುಗರು" ನಮ್ಮ ಮನೆಗೆ ಬರುತ್ತಿದ್ದ ದಿನ. ಮಧ್ಯಾಹ್ನದ ನಿದ್ದೆ ಮುಗಿಸಿ ನಮ್ಮ ತಂದೆ ನಾಲ್ಕು ಗಂಟೆಗೆ ಸರಿಯಾಗಿ ಡ್ರಾಯಿಂಗ್ ರೂಮಿನಲ್ಲಿ ಬಂದು ಕೂರುವುದೇ ತಡ, ಒಬ್ಬೊಬ್ಬರಾಗಿ ಕೊರವಂಜಿಯ ತರುಣ ಲೇಖಕರು, ವ್ಯಂಗ್ಯ ಚಿತ್ರಕಾರರು ಮನೆಗೆ ಬರುತ್ತಿದ್ದರು. ಎಲ್ಲರೂ ಬಂದು ಸೇರಿದ ನಂತರ, ನಮ್ಮ ತಾಯಿಯವರಿಂದ ಅವರಿಗೆಲ್ಲಾ ಉಪ್ಪಿಟ್ಟು, ಬೋಂಡಾ ಉಪಚಾರ. ತಿಂಡಿ ಮುಗಿದು ಕಾಫಿ ಕುಡಿಯುವಾಗ, ಮುಂದಿನ ತಿಂಗಳ ಕೊರವಂಜಿಯ ರೂಪು ರೇಷೆಗಳ ಬಗ್ಗೆ ಚರ್ಚೆ ಶುರುವಾಗುತ್ತಿತ್ತು. ಚರ್ಚೆ ಏನು ಬಂತು. ಅರ್ಧ ಕಾಲಾವಧಿಯನ್ನು ರಾ.ಶಿ.ಯವರೇ ನುಂಗಿಬಿಡುತ್ತಿದ್ದರು. ಇಂಗ್ಲೀಷಿನ ಪಂಚ್ ಪತ್ರಿಕೆಯ ಹಲವು ನಗೆಲೇಖನಗಳನ್ನು ಉದಹರಿಸಿ, ಅದನ್ನು ಆಧರಿಸಿ ಯಾರು ಬರೆಯುತ್ತೀರಿ ಅಂತ ನಮ್ಮ ತಂದೆ ಒಂದು ಸವಾಲು ಎಸೆದರೆ, ಯಾರಾದರೊಬ್ಬರು "ಇದು ನನಗಿರಲಿ" ಎಂದು ಹೇಳಿ ಬಹು ಸುಲಭದಲ್ಲಿ ಆ ಐಡಿಯಾದ ಸ್ವಾಮ್ಯ ಪಡೆಯುತ್ತಿದ್ದರು. ಮತ್ತೆ ಇನ್ನೊಬ್ಬ ತರುಣ ಲೇಖಕ ಇನ್ನೊಂದು ನಗೆ ಚಟಾಕಿ ಹಾರಿಸಿ "ಇದನ್ನ ಬರೀತೀನಿ ಸಾರ್" ಅಂತ ಹೇಳಿ ಮುಂದಿನ ಸಂಚಿಕೆಯಲ್ಲಿ ತನ್ನ ಜಾಗವನ್ನ ಭದ್ರಪಡಿಸಿಕೊಳ್ಳುತ್ತಿದ್ದ. ಇದೆಲ್ಲಾ ಡ್ರಾಯಿಂಗ್ ರೂಮಿನಲ್ಲಿ ನಡೆಯುತ್ತಿದ್ದಾಗ ಮನೆಯ ಮಕ್ಕಳಾದ ನಮಗೆ ಯಾರಿಗೂ ಆ ಕೊಠಡಿಗೆ ಪ್ರವೇಶವಿರಲಿಲ್ಲ. ಆದರೆ ಅಲ್ಲಿ ನಡೆಯುತ್ತಿದ್ದ ಅತ್ಯಂತ ಸ್ವಾರಸ್ಯಮಯ ಮಾತುಕತೆಗಳನ್ನು ಕೇಳಿಸಿಕೊಳ್ಳದೇ ಬಿಡುವುದಕ್ಕಾಗುತ್ತದೆಯೇ. ಬಾಗಿಲ ಆಚೆ ಬದಿಯಲ್ಲಿ ನಿಂತು ಭಕ್ತಿಭಾವದಿಂದ ನಾವು ಒಳಗಿನ ವಿದ್ಯಮಾನಗಳ ಆಡಿಯೋ ವರ್ಷನ್ ಅನ್ನು ಆಸ್ವಾದಿಸುತ್ತಿದ್ದೆವು.

ಒಂದು ಭಾನುವಾರ ಸಂಜೆ, ಇಂತಹ ಒಂದು ಸಭೆ ಶುರುವಾಗಿ ಭರದಿಂದ ನಡೆಯುತ್ತಿತ್ತು. ಯಥಾಪ್ರಕಾರ ಬಾಗಿಲ ಈಚೆ ಬದಿ ಗೋಡೆಗೆ ಕಿವಿಯಿಟ್ಟ ಮಕ್ಕಳ ಸಾಲು. ಒಮ್ಮೆಲೇ ಹೊರಬಾಗಿಲ ಕಾಲಿಂಗ್ ಬೆಲ್ ಟ್ರನ್ ಗುಟ್ಟಿತು. ಮಾತುಕತೆ ಕೇಳಿಸಿಕೊಳ್ಳುವ ಪವಿತ್ರ ಕೆಲಸಕ್ಕೆ ವಿಘ್ನ ಬರುವುದನ್ನು ಸಹಿಸದೇ, ನಮ್ಮಕ್ಕ ಚಿಕ್ಕವನಾದ ನನ್ನನ್ನು "ಯಾರು ನೋಡೋ" ಎಂದು ಹೇಳಿ ಅಟ್ಟಿದರು. ಮನಸ್ಸಿಲ್ಲದ ಮನಸ್ಸಿನಿಂದ ನಾನು ಹೊರಬಾಗಿಲಿಗೆ ಹೋದೆ. ಬಾಗಿಲಲ್ಲಿ ನಿಂತಿದ್ದ ತರುಣ,



"ರಾ.ಶಿ. ಅವರು ನನ್ನನ್ನು ಬರಲು ಹೇಳಿದ್ದರು. ಇದ್ದಾರೆಯೇ?" ಅಂತ

ಕೇಳಿದ." ಯಾರು ಬಂದಿದ್ದಾರೆ ಅಂತ ಹೇಳಲಿ?' ಅಂತ ಕೇಳಿದೆ. ಆತ, ನಗುಮುಖದಿಂದ, "ದಾಶರಥಿ ದೀಕ್ಷಿತ್" ಎಂದು ಉತ್ತರಿಸಿದ. ಈ ಉತ್ತರವನ್ನು ರಾ.ಶಿಯವರಿಗೆ ಮುಟ್ಟಿಸಲು ವೆರಾಂಡಾದಿಂದ ನಾನು ಹೊರಟೆ.

ನಮ್ಮ ಮನೆಯಲ್ಲಿ ವೆರಾಂಡಾದಿಂದ, ಡ್ರಾಯಿಂಗ್ ರೂಮಿಗೆ ಹೋಗಬೇಕಾದರೆ, ಗೋಡೆಕಿವಿಯ ಮಕ್ಕಳ ಸಾಲನ್ನು ಬಳಸಿಯೇ ಹೋಗಬೇಕಾಗಿತ್ತು. ನನ್ನನ್ನು ನೋಡಿ ನಮ್ಮಕ್ಕ "ಯಾರಂತೆ?" ಅಂತ ಕೇಳಿದರು. ನಾನು "ಯಾರೋ ದಾಶರಥಿ ದೀಕ್ಷಿತ್ ಅಂತೆ" ಎಂದು ಉತ್ತರಿಸಿ, ಮುಂದಕ್ಕೆ ಹೊರಡಲು ಅನುವಾದೆ. ನಮ್ಮಕ್ಕ ನನ್ನನ್ನು ರಟ್ಟೆ ಹಿಡಿದು ನಿಲ್ಲಿಸಿ, ತಾನೇ ವೆರಾಂಡಾಕ್ಕೆ ಓಡಿ ಹೋಗಿ, "ಬನ್ನಿ, ಬನ್ನಿ, ಕೊರವಂಜೀಲಿ ನಿಮ್ಮ ಕಾಷ್ಠ ವ್ಯಸನ ಓದಿದೀನಿ. ತುಂಬಾ ನಗು ಬಂತು. ನಮ್ಮ ತಂದೆ ಇವತ್ತು ನೀವೂ ಬರ್ತೀರ ಅಂತ ಬೆಳಗಿನಿಂದ ಹೇಳ್ತಾ ಇದ್ರು" ಅಂತ ಸ್ವಾಗತಿಸಿ ಅವರನ್ನು ಸಭೆಗೆ ಕರೆದೊಯ್ದಳು. ದಾಶರಥಿಯವರೊಡನೆ ಇದು ನನ್ನ ಮೊದಲ ಭೇಟಿ.

ದಾಶರಥಿಯವರ ಬರಹದ ಶೈಲಿ ಬಹು ಸರಳ. ದಿನನಿತ್ಯದ ಜನಜೀವನದ ಆಗುಹೋಗುಗಳೇ ಅವರ ನಗೆಲೇಖನಗಳ ಮೂಲಸರಕು. ಕೊರವಂಜಿಗೆ ಬರೆಯಲು ಪ್ರಾರಂಭಿಸಿದಾಗಿನಿಂದಲೂ ಅವರು ಬಹು ಜನಪ್ರಿಯ ಬರಹಗಾರರಾಗಿದ್ದರು. ರಾ.ಶಿ.ಯವರಿಗೆ ದಾಶರಥಿಯವರ ಮೇಲೆ ತುಂಬಾ ಅಭಿಮಾನ. ತರುಣ ಲೇಖಕರು ಪ್ರೇಮ, ವಿರಹ ಅಂತ ಓಡಾಡುತ್ತಿದ್ದ ಕಾಲದಲ್ಲಿ, ಈತ ನಗೆಗಣ್ಣಿನ ಕೊಂಕು ನೋಟವನ್ನು ಬೆಳೆಸಿಕೊಳ್ಳುವ ಯತ್ನ ನಡೆಸಿದ್ದು ರಾಶಿಯವರಿಗೆ ಸಂತಸ ತಂದಿತ್ತು.

ಒಮ್ಮೆ ದಾಶರಥಿಯವರು ನಮ್ಮ ತಂದೆಯವರನ್ನು ನೋಡಲು ಬಂದಿದ್ದಾಗ ಅದೂ ಇದು ಮಾತನಾಡುತ್ತಾ ಇಬ್ಬರಿಗೂ ರಾತ್ರಿ ಎಂಟೂವರೆಯವರೆಗೂ ಸಮಯ ಹೋದದ್ದೇ ತಿಳಿಯಲಿಲ್ಲವಂತೆ. ಆಗ ದೀಕ್ಷಿತರು "ಸಾರ್ ಈಗ ಮನೆಗೆ ಹೋದರೆ ನಮ್ಮನೇಲಿ, ನಾನು ಎಲ್ಲೋ ಅಲೆಯುಕ್ಕೆ ಹೋಗಿದ್ದೆ ಅಂತ ತಿಳ್ಕೊಂಡು ಬಯ್ತಾರಲ್ಲಾ "ಅಂದದ್ದಕ್ಕೆ, ರಾ.ಶಿ.ಯವರು "ಏನೂ ಯೋಚ್ನೆ ಮಾಡ್ಬೇಡಾ" ಅನ್ನುತ್ತಾ ಪ್ಯಾಂಟ್ ಬದಲಿಸಿ, ದಾಶರಥಿಯವರನ್ನು ಕಾರಿನಲ್ಲಿ ಕೂರಿಸಿಕೊಂಡು ಅವರ ಮನೆಗೆ ಹೋಗಿ, ಮನೆಯ ಹಿರಿಯರ ಹತ್ತಿರ "ಈ ಹುಡುಗನಿಗೆ ಒಳ್ಳೆಯ ಪ್ರತಿಭೆ ಇದೆ. ಅದು ಅರಳುಕ್ಕೆ ಅವಕಾಶ ಕೊಡೋದು ನಿಮ್ಮ ಭಾರ" ಅಂತ ಹೇಳಿ ಹೊರಟು ಬಂದರಂತೆ. ಈ ವಿಷಯವನ್ನು ನನಗೆ ಅನೇಕ ವರ್ಷಗಳ ನಂತರ ದಾಶರಥಿಯವರೇ ಹೇಳಿದ್ದರು.

ದಾಶರಥಿಯವರು ತಮ್ಮ ಕಾದಂಬರಿ "ಬಾಳಬಂಧನ" ಬರೆದು ಮೊದಲ ಪ್ರತಿಯನ್ನು "ತಮ್ಮ ಗುರು" ಅಂತ ಅವರೇ ಹೇಳುತ್ತಿದ್ದ ರಾಶಿ.ಯವರಿಗೆ ಕೊಡಲು ಹೋದಾಗ, ರಾಶಿಯವರು ಆ ಪುಸ್ತಕವನ್ನು ಒಮ್ಮೆ ತಿರುವಿ ನೋಡಿ, "ನಿನ್ನಲ್ಲಿ ಉತ್ತಮ ಹಾಸ್ಯ ಸೃಷ್ಟಿಸೋ ಪ್ರತಿಭೆ ಇರೋವಾಗ, ಇದಕ್ಕೆಲ್ಲಾ ಕಾಲಾನ ವ್ಯರ್ಥವಾಗಿ ಹಾಳುಮಾಡ್ತಿದೀಯಲ್ಲೋ" ಎಂದರಂತೆ. ದೀಕ್ಷಿತರು ಈ ಮಾತನ್ನ ಬಹು ಗಂಭೀರವಾಗಿ ಪರಿಗಣಿಸಿ, ಮುಂದೆ "ಮಾವನ ಮನೆ" ಎಂಬ ನಗೆ ಕಾದಂಬರಿ ಬರೆದು ರಾಶಿಯುವರಿಂದ ಶಹಭಾಸ್ ಗಿರಿ ಪಡೆದರಂತೆ. ಇನ್ನೊಮ್ಮೆ ರಾಶಿ, ದಾಶರಥಿಯವರೊಂದಿಗೆ ಮಾತನಾಡುತ್ತಾ "ಹಾಸ್ಯ ಎಂದರೆ, subtle ನಲ್ಲಿರುವ b ನಂತೆ, ಮೊಸರಿನಲ್ಲಿ ತೇಲಿಬರುವ ಬೆಣ್ಣೆಯಂತೆ ಇರಬೇಕು. ಹೇಳುವ ಮಾತಿನಲ್ಲಿ ಹಾಸ್ಯ ಗೌಣವಾಗಿದ್ದು ಮೆಲುನಗೆ ತರುವಂತಿರಬೇಕು "ಎಂದಿದ್ದರು. ದಾಶರಥಿಯವರ ಎಲ್ಲ ಬರಹಗಳಲ್ಲಿ ಈ ಅಂಶವನ್ನು, ಈ ಗುಣವನ್ನು ಕಾಣಬಹುದು.



ಎಚ್.ಎ.ಎಲ್ ನಲ್ಲಿ ಕೆಲಸಮಾಡುತ್ತಿದ್ದ ದೀಕ್ಷಿತ್ ರವರು ಉನ್ನತ ತರಬೇತಿಗೆಂದು ಇಂಗ್ಲೆಂಡಿಗೆ ಹೊರಡುವ ಮುನ್ನ ರಾಶಿಯವರನ್ನು ಭೇಟಿ ಮಾಡಿದ್ದರು."ಹೊಸ ಊರು, ಹೊಸ ಜನ, ಅಲ್ಲಿ ನಿನಗಾಗೋ ಅನುಭವಗಳನ್ನೆಲ್ಲಾ ಬರಿ" ಎಂದು ರಾಶಿ ನೀಡಿದ ಸಲಹೆಯ ಫಲಶ್ರುತಿ "ಗಾಂಪರ ಗುಂಪು". ಈ ಸರಣಿ ಒಂದೆರಡು ವರ್ಷಗಳಷ್ಟು ಕಾಲ ಕೊರವಂಜಿಯಲ್ಲಿ ಬೆಳಕು ಕಂಡು ನಗೆ ರಸಿಕರನ್ನು ರಂಜಿಸಿತು. ದಾಶರಥಿಯವರು ಕನ್ನಡ ಜನರ ಸಮೂಹ ಪ್ರಜ್ಞೆಗೆ ಅನೇಕ ಮರೆಯಲಾಗದ ಬಳುವಳಿಗಳನ್ನು ನೀಡಿದ್ದಾರೆ. ದಫೇದಾರ್ ದೇರಣ್ಣ ಮತ್ತು ಸಾವಂತ್ರಮ್ಮ ದಂಪತಿಗಳು ಇದಕ್ಕೆ ಒಂದು ಉತ್ತಮ ನಿದರ್ಶನ. ಪಕೋಡ ಪ್ರಿಯ ದೇರಣ್ಣನವರ ಸಾಹಸಗಳು ನಿಜಕ್ಕೂ ಕನ್ನಡ ನಗೆ ಸಾಹಿತ್ಯಕ್ಕೊಂದು ಅಪೂರ್ವ ಕೊಡುಗೆ.

1983 ರಲ್ಲಿ "ಅಪರಂಜಿ" ಮಾಸಪತ್ರಿಕೆಯನ್ನು ಹೊರತರುವ ಸಂದರ್ಭ. ಅರಾಸೇ ಮತ್ತು ನಾನು ಜೊತೆಗೂಡಿ ದೀಕ್ಷಿತರನ್ನು ಕಾಣಲು ಹೋಗಿದ್ದೆವು. ದಾಶರಥಿಯವರು ಬಹಳ ವಿಶ್ವಾಸದಿಂದ ನಮ್ಮನ್ನು ಮಾತನಾಡಿಸಿ, ನಮ್ಮ ಹೊಸ ಯತ್ನಕ್ಕೆ ಎಲ್ಲ ಯಶಸ್ಸು ದೊರಕಲೆಂದು ಹರಸಿ ಕಳಿಸಿದರು. ಅಪರಂಜಿಯ ಮೊದಲ ಸಂಚಿಕೆಗೆ "ಸತ್ಯಂ ಶಿವಂ ಸುಂದರಂ" ಎಂಬ ಲೇಖನವನ್ನೂ ಬರೆದು ಕೊಟ್ಟರು. ಈ ಭೇಟಿಯಾದ ಒಂದೆರಡು ವಾರದಲ್ಲಿ, ದಾಶರಥಿಯವರು ವೃದ್ಧಾಪ್ಯದಲ್ಲಿದ್ದ ನಮ್ಮ ತಂದೆಯವರನ್ನು ನೋಡಲು ನಮ್ಮ ಮನೆಗೆ ಬಂದರು. ನಾನೇ ಅವರನ್ನು ಸ್ವಾಗತಿಸಿ ನಮ್ಮ ತಂದೆಯವರಿದ್ದಲ್ಲಿಗೆ ಕರೆದೊಯ್ದೆ. ತಂದೆಯವರು ತೀವ್ರ ಅನಾರೋಗ್ಯದಿಂದ ಬಳಲಿದ್ದರು. ದೀಕ್ಷಿತರನ್ನು ತಂದೆಯವರ ಮುಂದಿದ್ದ ಕುರ್ಚಿಯಲ್ಲಿ ಕುಳ್ಳಿರಿಸಿದೆ. ಹಲವು ಲೋಕಾಭಿರಾಮದ ಮಾತುಕತೆಗಳ ನಂತರ ಒಮ್ಮೆಲೇ ದಾಶರಥಿಯವರು ಬಿಕ್ಕಿ, ಬಿಕ್ಕಿ ಅಳಲು ಪ್ರಾರಂಭಿಸಿದರು. ನಮ್ಮ ತಂದೆಯವರ ಕೊನೆ ಸಮೀಪಿಸುತ್ತಿದ್ದುದರ ಅರಿವಿರಬೇಕು. ತಂದೆಯವರು ಶಾಂತ ಚಿತ್ತದಿಂದ "ದಾಸಿ, ಯಾಕೆ ಅಳ್ತೀಯ. ನಮ್ಮ ಸ್ನೇಹ ಎಲ್ಲಿ ಹೋಗತ್ತೆ. ಅದು ಎಂದಿಗೂ ಶಾಶ್ವತ. ಶಾಶ್ವತವಾಗಿರೋದಕ್ಕೆ ಯಾರಾದ್ರೂ ಅಳ್ತಾರೆಯೇ" ಅಂತ ಹೇಳಿ ನನ್ನನ್ನು ಕಾಫಿ ತರಲು ಕಳಿಸಿದರು. ನಾನು ಕಾಫಿ ತರುವ ಹೊತ್ತಿಗೆ ದಾಶರಥಿಯವರು ಮತ್ತೆ ಸಮಾಧಾನ ಚಿತ್ತರಾಗಿದ್ದರು. ನಮ್ಮ ತಂದೆ ನನ್ನನ್ನು ಕುರಿತು, "ಕುಮಾರ್, ದಾಶರಥಿ ಕ್ಯಾಮೆರಾ ತಂದಿದಾನೆ. ನಾವಿಬ್ಬರೂ ಒಟ್ಟಿಗೆ ಇರೋ ಒಂದು ಫೋಟೋ ಬೇಕಂತೆ ಅವನಿಗೆ. ಸ್ವಲ್ಪ ತೆಗೀತೀಯಾ?" ಅಂತ ನನ್ನನ್ನ ಕೇಳಿದರು. ಮಿತ್ರರಿಬ್ಬರೂ ಒಬ್ಬರ ಪಕ್ಕ ಒಬ್ಬರು ನಿಂತುಕೊಂಡರು. ನಾನು ಕ್ಯಾಮೆರಾ ಹಿಡಿದು ಕ್ಲಿಕ್ ಮಾಡಿದೆ.

ಇದಾದ ಹಲವು ತಿಂಗಳಲ್ಲೇ ರಾಶಿಯವರು ನಿಧನರಾದರು. ಆ ವರ್ಷ ಆಗಸ್ಟಿನಲ್ಲಿ ನರಸಿಂಹರಾಜಾ ಕಾಲನಿಯಲ್ಲಿರುವ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ನಡೆದ ವಿನೋದ ಮಾಸಪತ್ರಿಕೆಯ ವಾರ್ಷಿಕೋತ್ಸವಕ್ಕೆ ಹೋಗಿದ್ದಾಗ ದಾಶರಥಿಯವರು ಸಿಕ್ಕಿದ್ದರು. ಬಹಳ ಆತ್ಮೀಯತೆಯಿಂದ ಅವರು ನನ್ನನ್ನು ಮಾತನಾಡಿಸಿದರು. ಸಮಾರಂಭದಲ್ಲಿ ದಾಶರಥಿಯವರು ಮಾತನಾಡಲು ಪ್ರಾರಂಭಿಸಿದಾಗ ಅವರು ಏದುಸಿರು ಬಿಡುತ್ತಿರುವುದನ್ನು ನಾನು ಗಮನಿಸಿದೆ. ಬೇರೆ ಯಾರೂ ಅದನ್ನು ಗುರುತಿಸಿದಂತೆ ಕಾಣಲಿಲ್ಲ. ಬಹುಶಃ ತಾರುಣ್ಯದಲ್ಲಿ ಅವರ ಮಾತನ್ನು ಕೇಳಿದ್ದ ನನಗೆ ಇದು ಸ್ಪಷ್ಟವಾಗಿ ಕಂಡಿರುವುದು ಸಾಧ್ಯ. ಅದೇ ಅವರೊಂದಿಗೆ ನನ್ನ ಕೊನೆಯ ಭೇಟಿಯಾಗುತ್ತದೆಂದು ಖಂಡಿತ ನಾನು ಊಹಿಸಿರಲಿಲ್ಲ.



1986 ರ ಆಗಸ್ಟ್ ಇಪ್ಪತ್ತೆಂಟರಂದು ದಾಶರಥಿಯವರು ನಿಧನರಾದಾಗ ಅವರಿಗೆ ಅರುವತ್ತೈದು ವಯಸ್ಸು. ಅವರ ಅಗಲಿಕೆಯೊಂದಿಗೆ, "ಕೊರವಂಜಿ ಹುಡುಗರು" ಸೃಷ್ಟಿಸಿದ ನಗೆಯ ಪರಂಪರೆಯೊಂದು ಮುಗಿಯಿತು. ಆಗಿನ ದಿನಗಳ ನಿಷ್ಕಳಂಕ, ನಿರ್ಮಲ, ಮುಗ್ಧ ಹಾಸ್ಯ ಈಗ ಗುರುತಿಸಲಾಗದಷ್ಟು ಬದಲಾಗಿದೆ ಎನ್ನಿಸುತ್ತದೆ.

ಐವತ್ತರ ದಶಕದಲ್ಲಿ ತಿಂಗಳ ಪ್ರಾರಂಭದಲ್ಲಿ ಮನೆಗೆ ಕೊರವಂಜಿ ಬಂತೆಂದರೆ ಪತ್ರಿಕೆ ನನಗೆ ಮೊದಲು ತನಗೆ ಮೊದಲು ಅಂತ ಮನೆ ಮಕ್ಕಳಲ್ಲಿ ಪೈಪೋಟಿ. ಕಾರಣ ಅದರಲ್ಲಿ ಇರುತ್ತಿದ್ದ ದಾಶರಥಿ ದೀಕ್ಷಿತ್ ಅವರ ಲೇಖನ. ಅದರಲ್ಲೂ "ದಫೇದಾರ್ ದೇರಣ್ಣ" ನವರ ಕಥಾನಕಗಳೆಂದರೆ ನಮಗೆ ಪಂಚಪ್ರಾಣ. ಪ್ರತಿತಿಂಗಳೂ ದೇರಣ್ಣ ಮತ್ತು ಸಾವಂತ್ರಮ್ಮನವರ ಬಗ್ಗೆ ಒಂದೊಂದು ಪ್ರಸಂಗ ಇರುತ್ತಿತ್ತು. "ಪಕೋಡದಯ್ಯ"ಎಂಬ ಲೇಖನದಲ್ಲಿ ದೇರಣ್ಣನವರ ಪಕೋಡಪ್ರಿಯತೆಯ ಬಗ್ಗೆ ದಾಶರಥಿಯವರು ಬಹು ತಮಾಷೆಯಾಗಿ ದಾಖಲಿಸುತ್ತಾರೆ. ನಮಗೆಲ್ಲಾ ಮುದ ನೀಡಿದ "ದಾಸಿ" ಅವರ ಹಾಸ್ಯದ ತುಣುಕೊಂದನ್ನು ಇಲ್ಲಿ ನೋಡಿ.

ಒಮ್ಮೆ ಲೇಖಕರು ಜಟಕಾ ಸ್ಟಾಂಡಿನ ಬಳಿ ನಿಂತಿದ್ದಾಗ, ಕಾನ್ಸ್ಟೇಬಲ್ ಫಕೀರಪ್ಪ ಇವರಿಗೆ ಸಿಗುತ್ತಾರೆ. ಫಕೀರಪ್ಪ, ದಫೇದಾರ್ ದೇರಣ್ಣನವರ ಕೈ ಕೆಳಗೆ ಕೆಲಸ ಮಾಡುತ್ತಿದ್ದರು. ಮಾತನಾಡುತ್ತಿದ್ದಾಗ ಫಕೀರಪ್ಪ, "ನೈಟ್ ಬೀಟ್ ಇನ್ನೊಂದು ವಾರ ಪೂರೈಸಿದರೆ ಆಯ್ತು. ಸಧ್ಯ, ದಿನಾ ಒಂದೂವರಾಣೆ ಮಿಗತ್ತೆ" "ಅದು ಹೇಗೆ ಮಿಗತ್ತೆ" ಎಂದಾಗ, ಅವರು "ನಿಜ ಹೇಳ್ತೀನಿ ಕೇಳಿ, ರಾತ್ರಿ ಬೀಟಿಗೆ ಹೋಗೋಕ್ಕೆ ಮುಂಚೆ, ದೇರಣ್ಣೋರ ಮನೆಗೆ ಹೋಗಿ, ಮೂಲೆ ಹೋಟ್ಲು ಈರುಳ್ಳಿ ಪಕೋಡ ಕೊಟ್ಟು ಹೋದರೆ, ರಾತ್ರಿ ಸುಖವಾಗಿ ಮನಿಕ್ಕೋಬಹುದು. ಇಲ್ದಿನಾ ಇದ್ರೆ, ಮರುದಿನ ರಿಪೂರ್ಟೇ "ಎಂದ." ನಿಜವಾಗ್ಲೂ ಪಕೋಡಾಂದ್ರೆ ಅಂಥಾ ಆಸೇನ ಅವರಿಗೆ? "ಎಂದು ಫಕೀರಪ್ಪನನ್ನು ಪೀಡಿಸಿದಾಗ ಬಾಯಿ ಬಿಟ್ಟ ಆತ.

"ಪ್ರೀತಿ!! ಆ ಪ್ರೀತಿನೇ ಅವರನ್ನ ಇನ್ನೂ ಜಮೇದಾರ್ ಆಗೋದಕ್ಕೆ ಬಿಡ್ಲಿಲ್ಲ. ಸಬ್ಬನಿಸ್ಪೆಕ್ಟ್ರ ಚಾನ್ಸೂ ಇಲ್ಲ. ಮೂರು ವರ್ಷದ ಹಿಂದಿನ ಮಾತು. ರಾಮದುರ್ಗ, ಕರಡೀಹಳ್ಳಿ, ಸುಂಕದಕೆರೆ, ಅವರಾವತಿ, ನಾಗನಕೆರೆ, ನಂದಿಗುಡಿ, ಅಂಬಾವರ, ಕಾಗೇಹಳ್ಳಿ, ಈ ಗ್ರಾಮಗಳನ್ನ ಕಳ್ಳರ ಗುರು, ಖದೀಮರ ಅಪ್ಪ, ಕನ್ನೇಶ್ವರಿ ಭೀಮ, ಸೂರೇ ಹೊಡೆದು ನಡುಗಿಸಿದ್ದು ಗೊತ್ತಾ?" ಎಂದ ಫಕೀರಪ್ಪ.

ಕನ್ನೇಶ್ವರಿ ಭೀಮ ಎಂದೊಡನೆ ಎದೆ ಗುಂಡಿಗೆ ಒಡದೇ ಹೋಯ್ತು. ಅವನ ವಿಷಯ ಕೇಳಿ ಬಲ್ಲೆ. ಅವನ ಹೆಸರು ಇಡೀ ಊರನ್ನೇ ನಡುಗಿಸುತ್ತಿತ್ತು. ಎಂತಾ ಆಫೀಸರ ಕೈಗೂ ಅವ ಸಿಕ್ಕಿ ಬಿದ್ದಿರಲಿಲ್ಲ.

"ದೇರಣ್ಣೋರ ಪಕೋಡ ಪ್ರಿಯತೆಗೂ, ಆ ಕನ್ನೇಶ್ವರಿ ಭೀಮನಿಗೂ ಸಂಬಂಧವಿದೆಯೇ?" ಎಂದು ಕೆಣಕಿದೆ.



"ಸಂಬಂಧ! ಆ ಮಹರಾಯನೇ ಇವರ ಬಿರುದಿಗೆ ಕಾರಣ. ಕನ್ನೇಶ್ವರಿ , ಬಲೇ ನನ್ಮಗ ಅವನು. ಪೋಲಿಸ್ ನವರಿಗೆ ಆಟ ಆಡ್ಸೋದು ಅಂದ್ರೆಅವನಿಗೆ ಕಳ್ಳತನ ಮಾಡೋದಕ್ಕಿಂತ ಜಾಸ್ತಿ ಖುಷಿ. ದೇರಣ್ಣೋರ ಕೆಟ್ಟ ಅದೃಷ್ಟಾನೋ ಏನೋ, ಮಟ ಮಟ ಮಧ್ಯಾಹ್ನ ಹನ್ನೆರಡೂವರೆ, ತುಂಬನ ಹಳ್ಳಿ ಕೆರೆ ಏರಿ ಮೇಲೆ ಕುದುರೆ ನಿಲ್ಸಿ ನೀರು ಕುಡೀತಾ ಅವ್ನೆ ಕನ್ನೇಶ್ವರಿ ಭೀಮ,. ಇಂಥಾ ಚಾನ್ಸು ಸಿಗೋದುಂಟಾ.

ಸರ್ಕಾರದೋರು ಕನ್ನೇಶ್ವರಿನ ಹಿಡ್ಕೊಂಡು ಬಂದ್ರೆ ಐದು ಸಾವಿರ ಇನಾಂ ಅಂತ ಡಂಗುರ ಬೇರೆ ಹೊಡಸಿದ್ರು. "ಫಕೀರ ಪಕಡ್ರೆ ಕನ್ನೇಶ್ವರಿಕು" ಎಂದು ಐದು ಸಾವಿರ ಜೇಬಿಗೆ ಬಿದ್ದಂತೆ ಹೇಳಿದರು.ನನಗೆ ಕೈ ಕಾಲ ತಣ್ಣಗಾಯ್ತು. ಕನ್ನೇಶ್ವರಿನ ಪಕಡ್ರೆ ಅನ್ನೋದು ಸುಲಭ. ಹಿಡಿಯೋನು ಬೆಂಕಿ ಹಿಡಿಯೋಕೆ ಹೋದಂಗೆ ಹೋಗಬೇಕು.

ನಾವು ಹೆಜ್ಜೆ ಮೇಲೆ ಹೆಜ್ಜೆ ಇಡುತ್ತಾ ಕೆರೆ ದಂಡೆ ಮೇಲೆ ಬಂದೆವು. ನೀರು ಕುಡಿದು ಮೇಲಕ್ಕೆ ಆಗತಾನೆ ಬರ್ತಿದ್ದ ಶಾಂತಮೂರ್ತಿ ಕನ್ನೇಶ್ವರಿ. ನಮ್ಮನ್ನ ನೋಡ್ದ. ತನ್ನ ಹುರಿಮೀಸೆ ತಿರುಗಿಸಿ ಕಿರುನಗೆ ನಕ್ಕ. ದಫೇದಾರರ ಹತ್ತಿರ ಬಂದು, ತನ್ನ ಕೈ ಮುಂದೆ ಮಾಡಿ "ದಫೇದಾರ್ರೇ ಹಿಡೀರಿ ನನ್ನ" ಎಂದ. ಅದೇನು ಚಮಕ್ ಮೇಲೆ ದೇರಣ್ಣೋರಿಗೆ ದೇವರು ಬುದ್ಧಿಕೊಟ್ನೋ' ಲಪಕ್' ಅಂತ ಅವನ ಕೈ ಹಿಡಿದು ಎಳೆದು ಬೇಡಿ ಹಾಕೇ ಬಿಟ್ರು ಒಂದು ಕೈಗೆ. ನನ್ನ ಕಣ್ಣೇ ನಂಬಲಿಲ್ಲ. ತಲೆ ಗಿಮಿ ಗಿಮಿ ತಿರುಗಿತು. ದೇರಣ್ಣೋರು ಮೀಸೆ ತಿರುವುತ್ತಿದ್ದರು. ಈಗ ಕಿಲಾಡಿ ಕನ್ನೇಶ್ವರಿ ಏನು ಮಾಡಿದ ಗೊತ್ತೆ. ಮೆತ್ತಗೆ ಕುದುರೆ ಜೀನು ಪಕ್ಕಕ್ಕೆ ಕೈ ಹಾಕಿ ಒಂದು ಪೊಟ್ಣ ಎಳೆದ. ಘಮ ಘಮ ಹಸನ್ ಹಸುವಿನ ತುಪ್ಪದಲ್ಲಿ ಕರಿದ ಗೋಡಂಬಿ ಎದ್ದು ಕಾಣುತ್ತಿದ್ದ ಪಕೋಡ ಒಂದು ಸೇರು ಕೂತಿತ್ತು ಆ ಪೊಟ್ಣದಲ್ಲಿ. ಜುಳು ಜುಳು ನಲ್ಲೀಲಿ ಇಳಿದ ಹಾಗೆ ಸುರೀತು ನೀರು ದೇರಣ್ಣೋರ ಬಾಯಿಂದ.

"ಹ್ಹ ಹ್ಹ ಹ್ಹ ಚೆನ್ನಾಗಿದೆ. ಆಮೇಲೆ ?"

"ಬೇಡಿ ಇಲ್ಲದ ಕೈಯ್ಯಲ್ಲಿ, ಪಕೋಡದ ಪೊಟ್ಣ ಹಿಡಿದು ದೇರಣ್ಣೋರ ಮೂಗಿನ ಹತ್ರ ಅತ್ತಿಂದ ಇತ್ತ ನವಿರಾಗಿ ಆಡಿಸಿದ ಕನ್ನೇಶ್ವರಿ. ಪುಂಗಿ ನಾದಕ್ಕೆ ಹಾವು ಹೆಡೆ ಆಡಿಸೋ ಹಾಗೆ, ಆ ಪೊಟ್ಣದ ಗುಂಟಾ ತಲೆ ಆಡಿಸಿದರು ದೇರಣ್ಣೋರು. "ಬೇಡಿ ಬಿಚ್ಚಿದರೆ, ನೀನೇ ಪೊಟ್ಣ ಬಿಚ್ಚಬಹುದು" ಎಂದ ಕನ್ನೈಶ್ವರಿ. ಎಂಥ ಸಂಧಿಗ್ಧ ಪರಿಸ್ಥಿತಿ. ಒಂದು ಕಡೆ ಐದು ಸಾವಿರ. ಇನ್ನೊಂದು ಕಡೆ ಪಕೋಡದ ಪೊಟ್ಣ. ದೇರಣ್ಣೋರ ತಕ್ಕಡೀಲಿ ಪಕೋಡವೇ ತೂಕವಾಗಿತ್ತು. ಆ ಅರೆ ಕ್ಷಣದಲ್ಲಿ ಎಡಗೈಯ್ಯಲ್ಲಿ ಪೊಟ್ಣ ಇಸ್ಕೊಂಡು ಬಲಗೈಯ್ಯಲ್ಲಿ ಬೇಡಿ ಬಿಚ್ಚೇಬಿಟ್ಟರು.

"ಒಂದು ಕೈಗೆ ಬೇಡಿ ಹಾಕಿದ್ದರೆ ಕನ್ನೇಶ್ವರಿಗೆ ಯಾಕೆ ಭಯ. ಹಾಗೇ ಓಡಿಹೋಗಬಹುದಿತ್ತಲ್ಲ?"

"ಆಗಲೇ ಹೇಳ್ಲಿಲ್ವೇ ನಾನು. ಕನ್ನೇಶ್ವರಿಗೆ ಬೆಕ್ಕಿಗೆ ಇಲಿ ಜೊತೆ ಚೆಲ್ಲಾಟ ಆಡಿದ ಹಾಗೆ. ಪಕೋಡದ ಪೊಟ್ಣ ಹಿಡಿದು ತಲೆ ಬಗ್ಗಿಸಿ ತಿನ್ನತೊಡಗಿದಾಗ ದೇರಣ್ಣೋರಿಗೆ ನಮ್ಮ ಯಾರ ಪರಿವೆಯೂ ಇರಲಿಲ್ಲ."

**ಮರೆಗುಳಿಯ ಸ್ವಗತ**

ನೆನೆದ ದ್ರಾಕ್ಷಿನ ಬೆಳಗ್ಗೆ ಎದ್ದ ತಕ್ಷಣ ತಿಂದರೆ ನೆನಪಿನ ಶಕ್ತಿ ಹೆಚ್ಚಾಗುತ್ತೆ ಅಂದಿದ್ರು. ಆದರೆ ನೆನ್ನೆ ರಾತ್ರಿ ದ್ರಾಕ್ಷಿನ ಎಲ್ಲಿ ನೆನೆಸಿಟ್ಟಿದ್ದೆ ಅನ್ನೋದೇ ನೆನಪಾಗ್ತಾ ಇಲ್ವಲ್ಲಾ.....



# ಅರಿಚ್ಚಂದ್ರ, ಅಮರ !

ಪ್ರೊ.ಎಂ. ಕೃಷ್ಣೇಗೌಡ, ಮೈಸೂರು

"**ನಾ**ಗರಹಾವು ಅಂದ್ರೆ ಯಾಕಿಷ್ಟು ಹೆದಕ್ಕೊರ್ಂಡು ಸಾಯ್ತೀರಿ? ನಮಗಿಂತ ಹಾವುಗಳಿಗೇ ಭಯ ಜಾಸ್ತಿ. ಒಂದೂವರೆ ವರ್ಷದ ಹಿಂದೆ ನಮ್ಮ ಕೆಂಬಾರೆ ತೋಟದ ತಾವು ಹದಿನಾರಡಿ ಉದ್ದದ ಕರೀನಾಗರ ಹಾವನ್ನ ಬರೀ ಕೈಯಲ್ಲೇ ಹಿಡಿದು ಚೀಲಕ್ಕೆ ಹಾಕ್ಕೊಂಡು ಹೋಗಿ ಕಾಡಿಗೆ ಬಿಟ್ಟು ಬಂದೆ ನಾನು"

ಅಂದ ಅವನು. ಹದಿನಾರಡಿ ಹಾವು ಅಂದ್ರೆ ಹದಿನಾರು ಅಡಿ ಎಲ್ಲಿರುತ್ತೆ ಅದು! ಒಂದು ಮಾರು ಇರಬಹುದೋ ಏನೋ. ಅಷ್ಟಕ್ಕೂ ಹಾವಿನ ಉದ್ದ, ದಪ್ಪವನ್ನ ಇದ್ದಷ್ಟೇ ಹೇಳೋ ಸತ್ಯವಂತರು ಯಾರಿದ್ದಾರೆ ನಮ್ಮ ದೇಶದಲ್ಲಿ? ಇರಲಿ ಅಂತ ಕೇಳಿದೆ –

'ಯಾವ ಹಾವು? ಏನು ಕತೆ?' ಅಂದೆ. ಆಹಾ, ಆನಂದವಾಯಿತು ಅವನಿಗೆ. ಶುರುಮಾಡಿಕೊಂಡ.

'ಆಗ ಬಿರುಬೇಸಗೆ ಕಾಲ. ಬೆಳಬೆಳಗ್ಗೇನೆ ತೋಟದ ಕಡೆ ಹೋಗಿದ್ದೆ. ತೆವರಿನ ಮೇಲೆ ನಡಕೊಂಡು ಹೋಗುವಾಗ ಏನೋ ಮೊರ್ರ್ ರ್ರ್ ಅಂತ ಮೊರೆದಂಗಾಯ್ತು. ತಿರಿಕೊಂಡು ನೋಡ್ತೀನಿ.... ಮೂರುಮಾರುದ್ದಕ್ಕೆ ಮಲಗೈತೆ....ಇನ್ಯಾರಾದ್ರೂ ಆಗಿದ್ರೆ ನಿಂತ ಜಾಗದಲ್ಲೇ ಒಂದು ಎರಡು ಎಲ್ಲಾ ಆಗೋಗೋದು. ನಾನು ಮೆಲ್ಲಗೆ ಹೋಗಿ ಅದರ ಬಾಲ ಎಲ್ಲೈತೆ ಅಂತ ನೋಡಿ ಹೋಗಿ ಗಪ್ಪನೆ ಬಾಲಾ ಹಿಡ್ಕಂಡ್ ಬಿಟ್ಟೆ. ನಾನು ಬಾಲ ಮುಟ್ಟಿದ ತಕ್ಷಣ ಸರ್ರ್ ಅಂತ ಹೆಡೆ ಎತ್ಕೊಂಡು ನನ್ ಹತ್ರ ಬಂದೇ ಬಿಡ್ತು. ಏನು ಸಾಮಾನ್ಯವಾದ ಹೆಡೆಯಾ ಅದು? ಒಂದು ಮೊರದಗಲ ಐತೆ. ಇನ್ನೇನು ರಪ್ ಅಂತ ನನ್ನ ಕಾಲಿಗೆ ಹೊಡಿಬೇಕು, ಗಪ್ಪಂತ ಅದರ ಹೆಡೆ ಹಿಡ್ಕಂಬಿಟ್ಟೆ. ಹಂಗೇ ಎಳಕಂಡು ಬಂದು ಒಂದು ಗೋಣಿಚೀಲಕ್ಕೆ ಹಾಕ್ಕೊಂಡು ಹೋಗಿ ಕಾಡಿಗೆ ಬಿಟ್ಟುಬಂದೆ....' ನೀವೇನೇ ಹೇಳಿ, ಅವನು ಹೇಳಿದಷ್ಟು ಚೆನ್ನಾಗಿ ನನಗೆ ಕತೆ ಹೇಳೋಕೆ ಬರಲ್ಲ. ಅವನೆಷ್ಟು ಚೆನ್ನಾಗಿ, ರಂಜಕವಾಗಿ ಕತೆ ಹೇಳ್ತಾ ಇದ್ದ ಅಂದ್ರೆ ಇನ್ನೊಂದು ಹತ್ತಾರು ಜನ ಸೇರೇ ಬಿಟ್ರು.....ಜನ ತಲೆ ಅಲ್ಲಾಡಿಸಿದಷ್ಟೂ ಕತೆಗೆ ಇನ್ನಷ್ಟು, ಮತ್ತಷ್ಟು ರಂಗು ಬಂತು.

ಆಗ....

'ಕೇರೆ ಹಾವೂ....' ಅಂತ ಕಿರಿಚ್ಕಂಡ್ ಬಿಟ್ಟ ಅಲ್ಲೊಬ್ಬ ಹುಡುಗ. ಅವನು ಹಾಗೆ ಕಿರುಚಿದ್ದೇ ತಡ, ಈ ನಮ್ಮ ಹಾವು ಹಿಡಿದ ಸಾಹಸಿ ಕತೆಗಾರ, ಎದ್ದು, ಬಿದ್ದು, ಹಾರಿ, ನೆಗೆದು, ಬಿದ್ದಂಬೀಳ ಓಡಿ, ಸಿಕ್ಕಿದ ಒಂದು ಮನೆಗೆ ಹೊಕ್ಕಿ ಚಿಲಕ ಹಾಕಿಕೊಂಡುಬಿಟ್ಟ. ಒಳಗೆ ಹೋಗಿ ಕಿಟಕಿ ಬಾಗಿಲು ಸ್ವಲ್ಪವೇ ತೆಗೆದು 'ಯಾರೂ ಹೆದರಕೋಬೇಡಿ, ಗಲಾಟೆ ಮಾಡಬೇಡಿ, ಕೇರೆ ಹಾವು ಏನೂ ಮಾಡಲ್ಲ, ನೀವು ಸುಮ್ಮನೆ ಮನೆಗೆ ಹೋಗಿ, ಅದರ ಪಾಡಿಗೆ ಅದು ಹೊರಟೋಗುತ್ತೆ...' ಅಂತ ಕೂಗಾಡುತ್ತಿದ್ದ...



ಅಲ್ಲಿದ್ದವರೊಬ್ಬರು, 'ಥೂ ನನ್ನ್ ಮಗನೇ, ಕರೀ ನಾಗರಾವು ಹಿಡಿದ್ಬಿಟ್ಟೆ ಅಂತ ಕೊಚ್ಕೊತಾ ಇದ್ದೆ, ಕ್ಯಾರೇ ಹಾವ್ಗೇ ಬಾಯಿ ಬಡ್ಕೊಂಡು ಓಡೋದೇ.. ??'

ಅಂದ್ರೆ ಅವನು ಹೇಳಿದ್ದಿಷ್ಟೆ. 'ಅದೆಲ್ಲಾ ನಿನಗ್ ಗೊತ್ತಾಗಲ್ಲ ಬಿಡು, ಅದೇ ಬೇರೆ, ಇದೇ ಬೇರೆ...'

ಇವುನಿದ್ದಾನಲ್ಲ ಇವನು, ಇವನ ಹೆಸರು ಅರಿಚ್ಚಂದ್ರ  ಅಂತ. ಅದು ಅರಿಚ್ಚಂದ್ರ ಇರಲಾರದು, ಹರಿಶ್ಚಂದ್ರ ಇರಬಹುದು ಅಂತ ಕನ್ನಡ ವ್ಯಾಕರಣ ಗೀಕರಣ ಬಲ್ಲವರು ಅಂದುಕೊಂಡರೆ ಅದು ತಪ್ಪಲ್ಲ. ಆದರೆ ಅ – ಹ ಅಕ್ಷರಗಳ ಉಚ್ಚಾರ ಭೇದ ಗೊತ್ತಿಲ್ಲದ, ವಿಜಾತೀಯ ಸಂಯುಕ್ತಾಕ್ಷರಗಳಿಗೆ ನಾಲಿಗೆ ನುಲಿಯದ ನಮ್ಮ ಊರವರು ಅವನಿಗೆ ಅರಿಚ್ಚಂದ್ರ ಅಂತ ನಾಮಕರಣ ಮಾಡಿಕೊಂಡಿದ್ದರು. ಹರಿಶ್ಚಂದ್ರ ಅಂತ ಒಂದು ಸಲ ಹೇಳುವುದಕ್ಕೇ ಸಿಕ್ಕಾಪಟ್ಟೆ ಪ್ರಯಾಸವಾದರೆ ಇನ್ನು ಪದೇಪದೇ ಅವನ ಹೆಸರು ಹೇಳುವುದಕ್ಕೆ ಅದೆಷ್ಟು ಪ್ರಯಾಸವಾಗಬಹುದು! ಒಬ್ಬನ ಹೆಸರು ಕರೆಯುವುದಕ್ಕೇ ಅಷ್ಟೊಂದು ಉಸಿರು ಖರ್ಚಾದರೆ ಅವನ ಹೆಸರು ಹೇಳುವುದನ್ನೇ ಬಿಟ್ಟುಬಿಟ್ಟಾರು ನಮ್ಮೂರ ಜನತೆ. ಆದ್ದರಿಂದ ಅವನಿಗೆ ಅರಿಚ್ಚಂದ್ರ ಅನ್ನುವ ಹೆಸರನ್ನೇ ಫೈನಲ್ ಮಾಡಿಕೊಂಡಿದ್ದರು ನಮ್ಮವರು. ಅಷ್ಟಕ್ಕೂ ಹೆಸರು ಸರಿಯಾಗಿಯೇ ಕರೆಯಬೇಕೆಂಬ ನಿಯಮ ಎಲ್ಲಿದೆ? ನಮ್ಮ ಹಳ್ಳಿಯಲ್ಲಿ ಕುಯ್ಯ , ಚಿಟರ, ಬುರ್ರ, ಬುಸಿಯ, ಕುಂಗ, ಕುರುವ ಅಂತ ನವಚಿತ್ರದ ಹೆಸರುಗಳಿವೆ. ಅವುಗಳ ಮೂಲ ಏನು? ಅಂತ ನೀವು  ತಲೆ ಕೆರೆದುಕೊಂಡರೆ ನಿಮ್ಮ ತಲೆ ಕೂದಲು ಉದುರಬಹುದೇ ವಿನಾ ಬೇರಾವ ಪ್ರಯೋಜನವೂ ಆಗುವುದಿಲ್ಲ. ಅಷ್ಟಕ್ಕೂ ಕರೆಯೋದಕ್ಕೆ  ಯಾವುದೋ ಒಂದು ಹೆಸರಪ್ಪ ! ನೀವು ಕರೆದಾಗ ಅವನು ಓ ಅಂದರೆ ಸಾಕಲ್ಲವೆ? ಸರಿಯಾಗಿಯೇ ಹೆಸರಿಡಿಸಿಕೊಂಡವರು ಆಮೇಲೆ ಹೆಸರು ಕೆಡಿಸಿಕೊಂಡರೆ ಸರಿಯಾದ ಹೆಸರಿಟ್ಟುಕೊಂಡು ಪ್ರಯೋಜನವೇನಾಯಿತು ಹೇಳಿ.

ಥತ್ತೆರಿಕೆ! ಮಾತು ಎತ್ತೆತ್ತ ಕಡೆಗೋ ಹೋಯಿತು. ಸ್ಸಾರಿ!!

ಅಷ್ಟಕ್ಕೂ ಅರಿಚ್ಚಂದ್ರನ ಹುಟ್ಟು ಹೆಸರು ಅದಲ್ಲವೇ ಅಲ್ಲ. ನಿನ್ನ ಹುಟ್ಟು ಹೆಸರೇನು ಅಂತ ಅವನನ್ನೇ ಒಂದು ಸಲ ಕೇಳಿದೆ. ಪಾಪ, ಅವನಿಗೂ ಸರಿಯಾಗಿ ಜ್ಞಾಪಕವಿಲ್ಲ. ಯೋಗೇಸ ಅಂತಲೋ ನಾಗೇಸ ಅಂತಲೋ ಇರಬಹುದು ಅಂದ. 'ಅಲ್ಲ ಕಣೋ, ನಿನ್ನ ಹುಟ್ಟೆಸರು ಮುದ್ದೇಶ ಅಂತಿದ್ರಲ್ಲೋ ಯಾರೋ?' ಅಂದೆ. ಅದೇ ಇದ್ದರೂ ಇರಬೋದು' ಅಂದ. ಅಂತೂ ಸತ್ಯಕ್ಕೆ ಹೆಸರಾದ ಅರಿಚ್ಚಂದ್ರನ ಹೆಸರೇ ಸುಳ್ಳು!!

ನಿಜವನ್ನು ಸುಳ್ಳು ಮಾಡಿ ಸುಳ್ಳನ್ನು ನಿಜಮಾಡಿ ಹೇಳಬಲ್ಲ ಅವನ ಅಪೂರ್ವ ಪ್ರತಿಭಾ ವಿಶೇಷವನ್ನು ಕಂಡ ನಮ್ಮೂರ ಮಹಾಜನತೆ ಅವನಿಗೆ ಅರಿಚ್ಚಂದ್ರ ಅಂತ ಹೆಸರಿಟ್ಟಿದ್ದಾರೆಯೇ ಪರಂತು ಆ ಚಂದ್ರವಂಶದ ದೊರೆ, ಪುರಾಣ ಪುರುಷ, ಶ್ರೀರಾಮಚಂದ್ರನ ಪೂರ್ವ ಪಿತೃ ಹರಿಶ್ಚಂದ್ರ ಮಹಾರಾಜನಿಗೂ ಈ ಅವಿವೇಕಿ, ಅಯೋಗ್ಯ, ಅಪ್ರಯೋಜಕ ಅರಿಚ್ಚಂದ್ರನಿಗೂ ಸತ್ಯವಾಗಿಯೂ  ಏನೇನೇನೂ ಸಂಬಂಧವಿಲ್ಲ. ದಯವಿಟ್ಟು ನಂಬಿ. ನಾನು ಸತ್ಯವನ್ನೇ ಹೇಳಿದ್ದೇನೆ, ಸತ್ಯವನ್ನಲ್ಲದೆ ಬೇರೇನೂ ಹೇಳಿಲ್ಲ.



ಅರಿಚ್ಚಂದ್ರನ ಸುಳ್ಳು ಅಂದರೆ ಅದೇ ಬೇರೆ ವೆರೈಟಿಯದು.  ಇಂಗ್ಲಿಷ್‌ನಲ್ಲಿ build up ಅಂತ ಒಂದು ಶಬ್ದ ಇದೆ. ಅದಕ್ಕೆ ಕನ್ನಡದಲ್ಲಿ ಏನು ಹೇಳೋದು ಅಂತ ಗೋಚರವಿಲ್ಲದೆ ನಮ್ಮ ಕನ್ನಡಿಗರು ಅದನ್ನ ತರ್ಜುಮೆ ಮಾಡದೇ build up

ಅನ್ನೋ ವ್ಯಂಜನಾಂತ ಶಬ್ದವನ್ನ ಬಿಲ್ಡಪ್ಪು ಅಂತ ಸ್ವರಾಂತ ಮಾಡಿಕೊಂಡು ಹಾಗೇ ಬಳಸ್ತಾ ಇದ್ದಾರೆ. ತನ್ನ ಬಗ್ಗೆ ತಾನು ಬಿಲ್ಡಪ್ ಕೊಡೋದರಲ್ಲಿ ಇವನದು, ನಾನು ಮೊದಲೇ ಹೇಳಿದ್ನಲ್ಲ, ಅದ್ಭುತ ವಿಶೇಷ ಪ್ರತಿಭೆ.

ಅರಿಚ್ಚಂದ್ರ ನಮ್ಮೂರಿನವನು ಅಂತ ಹೇಳಿದೆ. ಹಾಗಂದ್ರೆ ಅವನು ನಿಮ್ಮೂರಿನವನಲ್ಲ ಅಂತಲ್ಲ. ನಿಮ್ಮೂರಲ್ಲೂ, ನಿಮ್ಮ ಆಸುಪಾಸಿನಲ್ಲೂ ಇಂಥಾ ಅರಿಚ್ಚಂದ್ರರು ಇದ್ದಾರೆ. ಅಲ್ಲಿ ಬೇರೆ ಹೆಸರಿನಲ್ಲಿದ್ದಾರೆ ಅಷ್ಟೆ.

ಇವನ ಬಿಲ್ಡಪ್ಪು ಯಾವ ಥರದ್ದು ಅಂತ ಕೆಲವು ಪ್ರಸಂಗಗಳನ್ನು ಹೇಳುತ್ತೇನೆ ಕೇಳಿ.

ಒಂದ್ಸಲ ಅರಿಚ್ಚಂದ್ರ ನಾನು ಕೂತಿರುವಲ್ಲಿಗೇ ಬಂದ. ಹಂಗೇ ಅವನು. ಶ್ರೋತೃಗಳನ್ನು ತಾನೇ ಹುಡುಕಿಕೊಂಡು ಹೋಗ್ತಾನೆ. ಆ ಶ್ರೋತೃ ಅವನು ಹೇಳಿದ್ದಕ್ಕೆಲ್ಲಾ ಓತಿ ಕ್ಯಾತನ ಹಾಗೆ ತಲೆಯಾಡಿಸುವವನಾಗಿದ್ದರೆ ಅವನಿಗೆ ಸಂತೋಷ. ಆಹಾ, ಹೌದಾ, ಹತ್ತರಿಕೆ, ಶಭಾಷ್ ಅಂತ ಮಧ್ಯೆ ಮಧ್ಯೆ ಉದ್ಗರಿಸುವವನಾದರಂತೂ ಮಹದಾನಂದ.

ಬಂದೆ.... ಬಂದೆ...ಎಲ್ಲಿದ್ದೆ ನಾನು? ಹ್ಞಾಂ.. ಗ್ಯಾಪಕ ಆಯ್ತು, ಅರಿಚ್ಚಂದ್ರ ನಾನು ಕೂತಲ್ಲಿಗೆ ಬಂದ.

"ಯಾಕಣ್ಣ, ಇಂಗಿದೀಯ? ಮೊಕಾ ಇಳೀ ಬುಟ್ಕಂಡು ಕೂತಿದ್ದೆಯಲ್ಲ, ಎನ್ ಸಮಾಚಾರ? " ಅಂದ.

'ಅಂಥಾದ್ದೇನಿಲ್ಲ  ಕಣೋ, ಬೆಳಗ್ಗಿಂದ ಯಾಕೋ ಸ್ವಲ್ಪ ಹೊಟ್ಟೆ ಉಬ್ಬರಣೆ ಅನ್ನಿಸ್ತಾ ಇದೆ, ಗ್ಯಾಸ್ಟ್ರೀಕ್ ಇರಬಹುದು, ಊಟ ಕೂಡ ಸೇರ್ತಾ ಇಲ್ಲ' ಅಂದೆ.

ಇಷ್ಟಕ್ಕೆ ಯಾಕ್ ಇಷ್ಟೊಂದ್ ಒದ್ದಾಡ್ತಾ ಇದ್ದೀರಿ? ಸುಮ್ಕೆ ನಾನ್ ಹೇಳ್ದಂಗ್ ಕೇಳಿ, ತಂಗಳನ್ನಕ್ಕೆ ಒಳ್ಳೆ ಮೊಸರು, ಮೇಲೊಂದಿಷ್ಟು ಹಾಲು ಹಾಕ್ಕೊಂಡು ಸ್ವಲ್ಪ ಅಂದ್ರೆ ಒಂದು ಚಮಚದಷ್ಟು ಕರಿಬೇವಿನಸೊಪ್ಪಿನ ರಸ ಬಿಟ್ಕೊಂಡು ಊಟ ಮಾಡಿನೋಡಿ, ನಿನ್ ಹೊಟ್ಟೆ ಗ್ಯಾಸೆಲ್ಲಾ ಹಂಗೆ ಇಳಿದೊಯ್ತದೆ, ಇದನ್ನ ನನಗೆ ಹೇಳ್ದೋರು ಎಸ್.ಎಂ.ಕೃಷ್ಣ !'

ನೀವು ಪ್ರಶ್ನೆ ಕೇಳಬಾರದು. ಎಸ್. ಎಂ.ಕೃಷ್ಣ ಅದ್ಯಾವಾಗ ತಂಗಳನ್ನಕ್ಕೆ ಹಾಲು ಮೊಸರು, ಕರಿಬೇವಿನ ರಸ ಹಾಕ್ಕೊಂಡು ಊಟ ಮಾಡ್ತಾ ಇದ್ದರು? ಇವುನ್ಯಾಕೆ ಅವರ ಮನೆಗೆ ಹೋಗಿದ್ದ? ಅವರ್ಯಾಕೆ ಅದನ್ನ ಈ ದೊಡ್ಡಮನುಷ್ಯನಿಗೆ ಹೇಳಿದ್ರು? ಏನೂ ಕೇಳಬಾರದು. ಎಸ್ ಎಂ ಕೃಷ್ಣ ನಿನಗೆಲ್ಲಿ ಸಿಕ್ಕಿದ್ರೋ? ಅಂತ ಕೇಳಿದ್ರಿ ಅಂತ ಇಟ್ಕೊಳ್ಳಿ, ಸೋನಿಯಾ ಗಾಂಧಿ ಅವರ ಸೋದರ ಮಾವನ ಮಗ ತಮಿಳ್ನಾಡಿನ ಡೆಂಕಣಿ ಕೋಟೆ ಹತ್ರ ಒಂದೂವರೆ ಸಾವಿರ ಎಕರೆ ಕಾಫಿ ತೋಟ ಮಾಡಿ ಆರು ಎಕರೆ ಅಗಲಕ್ಕೆ ಒಂದ್ ಮನೆ ಕಟ್ಟವನೆ, ಅಲ್ಲಿ ಸಿಕ್ಕಿದ್ರು 'ಅಂತಾನೆ. ಆತ ನಿನಗೆ ಹೆಂಗ್ ಪರಿಚಯ ಅಂತ ಕೇಳ್ ಬೇಡಿ. ಕೇಳಿದ್ರೆ,' ಅಮಿತಾಬ್ ಬಚ್ಚನ್ ಭಾಮೈದನ ತಂಗಿ ಮಗ ನನ್ ಫ್ರೆಂಡು, ಅವನ ಜೊತೆ ಹೋಗಿದ್ದೆ 'ಅಂತಾನೆ. ಇದೇ ಥರ ನೀವು ಪ್ರಶ್ನೆ ಕೇಳ್ತಾನೆ ಹೋದ್ರೆ ಅವನು ಉತ್ತರ ಹೇಳ್ತಾನೆ ಹೋಗ್ತಾನೆ ನಮ್ಮ ಅರಿಚ್ಚಂದ್ರ. ಪ್ರಶ್ನೆ ಕೇಳೋದು ನಿಮಗೆ ಬೇಕಾ ಹೇಳಿ.



ಅಲ್ಲೋ, ನಿನಗೆ ಎಸ್.ಎಂ.ಕೃಷ್ಣ ಗೊತ್ತಿತ್ತು, ಸೋನಿಯಾಗಾಂಧಿ

ಸೋದರಮಾವನ ಮಗ ಗೊತ್ತು, ಅಮಿತಾಬ್ ಬಚ್ಚನ್ ಬಾಮೈದನ ತಂಗಿ ಮಗ ಗೊತ್ತು. ಆದರೂ ಯಾಕಲೇ,

ಹಿಂಗೆ ಊರೂರು ಚೊಟ್ಟೆ ಎತ್ಕೊಂಡು ಓಡಾಡ್ತೀಯ? ಅಂದ್ರೆ, ಯಾವುದಕ್ಕೂ ನಸೀಬ್ ಇರಬೇಕಲ್ವ ಅಣ್ಣ,  ನಸೀಬ್ ಇದ್ದಿದ್ದಕ್ಕೆ ಬೊಂಬಾಯಿ ಗಲ್ಲಿಗಳಲ್ಲಿ ಗಿಲ್ಲಿ ದಾಂಡು ಆಡ್ಕೊಂಡಿದ್ದ ಹುಡುಗ ಸಚಿನ್ ತೆಂಡೂಲ್ಕರ್  ಕ್ರಿಕೆಟ್ ದೇವರು ಅಂತ ಆಗಿಬಿಟ್ಟ. ಯಾವುದಕ್ಕೂ ಬರುವಾಗಲೇ ಬಸ್ಕೊರ್ಂಡ್ ಬಂದಿರಬೇಕು. ನಾನೂ ಗಿಲ್ಲಿ ದಾಂಡು ಸಕ್ಕತ್ತಾಗಿ ಆಡ್ತಿದ್ದೆ. ಅವ್ನು ಹಂಗಾದ, ನಾನು ಹಿಂಗಾದೆ, ಏನ್ ಮಾಡಾಕಾಯ್ತದೆ?

ನಿನಗ್ ಗೊತ್ತಾ? ನಾನು ಮೂರು ವರ್ಷದವನಿದ್ದಾಗ ಆಗ ಮುಖ್ಯಮಂತ್ರಿ ಆಗಿದ್ದ ದೇವರಾಜ ಅರಸು ನಮ್ಮೂರ ಹಾಸಿ ಎಲ್ಲೋ ಹೋಗ್ತಾ ಇದ್ರಂತೆ. ನಾನು ರಸ್ತೇಲಿ ಆಟ ಆಡ್ತಾ ಇದ್ದೋನು ಅವರ ಕಾರಿಗೆ ಅಡ್ಡ ಬಂದು ಬುಟ್ನಂತೆ. ಆಗ ಅರಸ್ ನೋರು ಇದ್ಯಾವುದು ಮೊಗ, ಇಷ್ಟೊಂದು ಚೆನ್ನಾಗದಲ್ಲ, ಅಂತ ಕಾರಿಂದ ಇಳಿದು ನನ್ನ ಕಂಕುಳಿಗೆ ಎತ್ಕೊಂಡ್ರಂತೆ. ಅಷ್ಟರಲ್ಲಿ ನಮ್ಮವ್ವ ಬಂದ್ಲಂತೆ. ಆಗ ಅರಸ್ ನೋರು ನನ್ನ ಕೆನ್ನೆಗೆ ಮುತ್ತು ಕೊಟ್ಟು ನನ್ನ ಚೆಡ್ಡಿ ಜೋಬಿಗೆ ಒಂದ್ ಸಾವಿರ ರೂಪಾಯಿ ತುರುಕಿ ಈ ಹುಡುಗ ಸ್ಕೂಲ್ ಗೆ ಹೋಗೋ ಹೊತ್ತಿಗೆ ಬೆಂಗಳೂರಿಗೆ ಕರಕಂಡು ಬಾ ತಾಯಿ, ದೊಡ್ಡ ಸ್ಕೂಲಿಗೆ ಸೇರ್ಸಿ ನಾನೇ ಓದುಸ್ತೀನಿ ಅಂದ್ರಂತೆ. ಆದರೆ ನನ್ ನಸೀಬು ಚೆನ್ನಾಗಿರಲಿಲ್ಲ. ನಾನು ಸ್ಕೂಲ್‌ಗೆ ಹೋಗೋ ಹೊತ್ಗೆ ಅವರೇ ತೀಕೊರ್ಂಡ್ಬುಟ್ರು.'



ಅರಿಚ್ಚಂದ್ರ ಹೇಳಿದ್ದು ನಿಜವೋ ಸುಳ್ಳೋ ಅಂತ ಕೇಳೋಕೆ ಈಗ ಅವನ ಅಪ್ಪನೂ ಇಲ್ಲ, ದೇವರಾಜ ಅರಸರೂ ಇಲ್ಲ.

ಇಂಥ ಕತೆಗಳು ಅರಿಚ್ಚಂದ್ರನ ರೋಮ ರೋಮಕ್ಕೊಂದು ಇವೆ. ಕೇಳೋರು ಸಿಗಬೇಕು ಅಷ್ಟೇ.

ಇದೇ ಅರಿಚ್ಚಂದ್ರ ಈಚೆಗೆ ಒಂದ್ ದಿನ ನನಗೆ ಸಿಕ್ಕಿದ "ಅಣ್ಣ, ನೂರು ರೂಪಾಯಿ ಇದ್ರೆ ಕೊಡ್ತೀಯಾ?" ಅಂದ. "ಯಾಕೋ"ಅಂದೆ. "ಏನಿಲ್ಲ ಅಣ್ಣ, ನನ್ ತಾವೇ ಎರಡೂವರೆ ಲಕ್ಷ ಇತ್ತು. ಯಾವುದೋ ಬಡ ಹುಡುಗಿ, ಮೆಡಿಕಲ್ ಕಾಲೇಜ್‌ಗೆ ಸೀಟ್ ಸಿಕ್ಕಿತ್ತಂತೆ. ಫೀಸ್ ಕಟ್ಟೋಕೆ ದುಡ್ಡಿಲ್ಲ ಅಂತ ಅವರಪ್ಪ ಅತ್ಕೊಂಡು ನನ್ ಹತ್ರ ಬಂದ. ಎರಡೂವರೆ ಲಕ್ಷ ಇತ್ತಲ್ಲ, ಹಂಗೇ ಎತ್ತಿ ಕೊಟ್ಬುಟ್ಟೆ. ನನಗೆ ಬಡವರು ಬಗ್ಗರು ಅಂದ್ರೆ ಹಂಗೇ. ಇರೋದನ್ನ ಕೊಟ್ಟು ಕಳಿಸಿಬುಡ್ತೀನಿ . ಕಷ್ಟದಲ್ಲಿರೋರ್ಗೆ



ಸಹಾಯ ಮಾಡದೇ ಇದ್ರೆ ನಾವ್ಯಾಕಣ್ಣ ಮನಸಾ ಅಂತ ಭೂಮಿ ಮೇಲಿರಬೇಕು?" ಅಂದ. "ಹೌದಾ? ಯಾರೋ ಆ ಹುಡ್ಗಿ? ಯಾವೂರಂತೆ?" ಅಂತ ಕೇಳಿದೆ. "ಅದೆಲ್ಲ ಏನೂ ಕೇಳಲಿಲ್ಲ ಅಣ್ಣ, ದಾನ ಕೊಟ್ರೆ ಮೊಕ ಮೂತಿ ನೋಡದೆ ದಾನ ಮಾಡಬೇಕು, ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು ಅಂಗಂತ ನಮ್ಮಪ್ಪ ಹೇಳ್ತಿದ್ದ. ಅದಕ್ಕೆ ಕೊಟ್ಟುಬಿಟ್ಟೆ. "

"ಆಹಾ, ನಿಮ್ಮಪ್ಪನೂ ಹಿಂಗೇ ದಾನ ಧರ್ಮ ಮಾಡ್ತಾ ಇದ್ನಾ?" ಅಂತ ಕೇಳಿದೆ. "ಹಯ್ಯೋ, ಯಾಕ್ ಹೇಳೋದು ಬಿಡಿ, ಬಾಲಕೃಷ್ಣ ಅಭಿಮಾನ್ ಸ್ಟುಡಿಯೋ ಕಟ್ಟೋವಾಗ ನಮ್ಮಪ್ಪ ಹದಿನೈದು ಸಾವಿರ ಕೊಟ್ಟಿದ್ನಂತೆ" ಅಂದ.

ಪಾಪ, ಅಂಥಾ ದಾನವೀರ ಕರ್ಣನ ಮಗ, ಈವತ್ತು ನನ್ನ ಹತ್ರ ನೂರು ರೂಪಾಯಿಗೆ ಕೈ ಒಡ್ಡುತಾ ಅವನೆ. ಹಾಳಾಗಿ ಹೋಗಲಿ ಅಂತ ನೂರು ರೂಪಾಯಿ ಕೊಟ್ಟು ಸಾಗಹಾಕಿದೆ.

ಇದೇ ಅರಿಚ್ಚಂದ್ರ ಮೊನ್ನೆ ತೆಂಗಿನ ಮರದ ಮೇಲಿಂದ ಬಿದ್ದು ಕೈ ಕಾಲು ಸೊಂಟ ಎಲ್ಲಾ ಮುರಕೊಂಡು ಆಸ್ಪತ್ರೆ ಸೇರವ್ನೆ ಅಂತ ತಿಳೀತು. ನೋಡ್ಕೊಂಡು ಬರೋಣ ಅಂತ ಆಸ್ಪತ್ರೆಗೆ ಹೋದೆ. "ತೆಂಗಿನ ಮರ ಯಾಕೋ ಹತ್ತೊಕೋದೆ?" ಅಂತ ಗದರಿದೆ. ಕ್ಷೀಣ ಸ್ವರದಲ್ಲಿ ಹೇಳಿದ. ಮೊನ್ನೆ ಸಂಜೆ ತೋಟಕ್ಕೊಗಿದ್ನಾ? ಅದೆಲ್ಲಿತ್ತೋ, ಒಂದು ಚಿರತೆ ಅಟ್ಟಿಸಿಕೊಂಡು ಬಂದುಬಿಡ್ತು. ಓಡೋಗಿ ಗಾಬ್ರೀಲಿ ತೆಂಗಿನ ಮರ ಹತ್ಬುಟ್ಟೆ. ಚಿರತೆ ಮರದ ಕೆಳಗೆ ಬಂದು ಕಾಯ್ತಾ ನಿಂತಿತ್ತು. ಮೇಲೆ ಒಂದು ತೆಂಗಿನಗರಿ ಒಣಗೋಗಿತ್ತು. ಹಿಡ್ಕೊಂಡೆ. ಗರಿ ಕಳಚ್ಕೊಂಡು ಆ ಚಿರತೆ ಮೇಲೇ ಬಿದ್ದುಬಿಟ್ಟೆ. ಚಿರತೆ ಸತ್ನೋ ಕೆಟ್ನೋ ಅಂತ ಓಡಿಹೋಯಿತು. ನನಗೆ ಕೈಕಾಲು ಮುರಿದೋಯ್ತು" ಅಂದ. ಭೇಷ್ ಮಗನೇ, ಸಾವಿನಲ್ಲೂ ತನ್ನ ಸ್ವಂತಗುಣವನ್ನ ಬಿಡಲಿಲ್ಲವಲ್ಲ ಇವನು! ಅಂದ್ಕೊಂಡು ತಲೆದಿಂಬಿನ ಕೆಳಗೆ ಸಾವಿರ ರೂಪಾಯಿ ಇಟ್ಟು ಹೊರಬಂದೆ.

ಈ ಅರಿಚ್ಚಂದ್ರ ಬದುಕೋದು ಡೌಟು ಅಂದ್ರು ಡಾಕ್ಟ್ರು. ಆದರೆ ಅವನು ಸಾಯಲ್ಲ. ಬೇರೆ ಬೇರೆ ಹೆಸರಿನಲ್ಲಿ ಎಲ್ಲಾ ಊರಲ್ಲೂ ಇದ್ದೇ ಇರ್ತಾನೆ. ಈಗ ಸತ್ತರೂ ಮತ್ತೊಂದು ಹೆಸರಲ್ಲಿ ಕೂಡಲೇ ಹುಟ್ಟಿಬರ್ತಾನೆ.

ಅರಿಚ್ಚಂದ್ರ ಅಮರ !!

**ನಗಲೊಂದು ಕಾರಣ**

ಅಂದು ಮಧ್ಯಾಹ್ನ ಊಟವಾದ ಮೇಲೆ ಕೂದಲನ್ನು ಹಿಂದೆ ಸರಿಸಿಕೊಳ್ಳಲೆಂದು ಕೈಯ್ಯನ್ನು ಮುಖದ ಹತ್ತಿರ ತೆಗೆದುಕೊಂಡು ಹೋದ ಮಗಳಿಗೆ ಅಂದಿನ ಹುಳಿಯ (ಸಾಂಬಾರ್) ಘಮ ಮೂಗಿಗೆ ಬಡಿಯಿತು. ಅಮ್ಮಾ, ಕೈ ಇನ್ನೂ ಹುಳಿ ಸ್ಮೆಲ್ ಬರ್ತಾ ಇದೆ. ಎಷ್ಟ್ ಚೆನಾಗಿತ್ತು ಹುಳಿ ಎಂದವಳ ಮಾತಿಗೆ ಅಮ್ಮನೂ ತಮ್ಮ ಕೈಯ್ಯನ್ನು ಮೂಗಿನ ಬಳಿಗೆ ತೆಗೆದುಕೊಂಡು ಹೋದವರು ಥೋ, ಸಗ್ಣಿ ವಾಸ್ನೆ ಎಂದು ಕೈಯ್ಯನ್ನು ಹಿಂದೆಳೆದು ಕೊಂಡಾಗ ಅಮ್ಮ, ಮಗಳು ಇಬ್ಬರೂ ಮನಸಾರೆ ನಕ್ಕಿದ್ದರು. ಪಾಪ ಅಮ್ಮ, ಊಟವಾದ ಮೇಲೆ ನೆಲಕ್ಕೆ ಸಗಣಿಯಿಂದ ಗೋಮಯ ಬಳಿದಿದ್ದರು.

**–ಮಂಗಳ ಎಂ ನಾಡಿಗ್**




# ನಿಂಗೆಂತಾ ಗೊತ್ತಿದ್ದು ?

ಭಾಗೀರಥಿ ಹೆಗಡೆ

**"ಥೊ** ಥೊ ಥೊ, ನಿಂಗೆಂತಾ ಗೊತ್ತಿದ್ದು? ಆಂ ಹೇಳ್ತಿ ಕೇಳು" ಎದುರಿದ್ದವರು ಯಾರೇ ಆಗಿರಲಿ, ಸಂದರ್ಭ ಯಾವುದೇ ಆಗಿರಲಿ, ವಿಷಯ ಏನೇ ಇರಲಿ, ಇವಳೆದುರು ಬಂದವರು ಚಕಾರ ಶಬ್ದ ಹೇಳಲಿಕ್ಕಿಲ್ಲ, ಅರ್ಧಕ್ಕೇ ಅವರ ಬಾಯಿ ಬಡಿದು ತನ್ನ ಬೊಂಬಾಯಿ ಬಿಚ್ಚಿ ಕೂಗತೊಡಗಿದರೆ ಅವಳು ನೆರೆಮನೆ ಸುದ್ದಿ ಸೂರತ್ತಿಗೆಯೇ ಹೌದು. ಸುತ್ತಾ ಹತ್ತೂರಿನಲ್ಲಿ ಬ್ಯಾಟರಿ ಬಿಟ್ಟು ಹುಡುಕಿದ್ರೂ ಇಂಥಾ ಹೆಂಗ್ಸು ಸಿಗತಿಲ್ಲೆ. ಅನ್ನೋದು ನಮ್ಮಜ್ಜನ ಹೇಳಿಕೆ. ಯಾಕೆಂದರೆ ನಮ್ಮ ಮನೆ ಚಿಟ್ಟೆಯಲ್ಲಿ ಕೂತು ನಾವು ಏನೇ ಮಾತಾಡುತ್ತಿದ್ದರೂ ಅದನ್ನೇ ಕಾಯ್ತಾ ಇದ್ದವಳಂತೆ ಸರಕ್ಕನೆ ಕಡವಾರ ದಾಟಿ ಬಂದು ಹಾಜರಿ ಹಾಕುವವಳೇ. "ತುದಿ ಮನೆ ಎಮ್ಮೆ ಈಗೆರಡು ವಾರದ ಹಿಂದೆ ಕರ ಹಾಕಿತ್ತಲೆ, ಆ ಕರ ನಿನ್ನೆ ಇದ್ದಕಿದ್ದ ಹಂಗೆ ಸತ್ತೋತಡ. ಈಗ ಎಮ್ಮೆ ಕೆಚ್ಚಲಿಗೆ ಕೈ ಹಚ್ಚಲೇ ಕೊಡ್ತಿಲ್ಯಡ" ಅಜ್ಜ ಚಾಲಿ ಸುಲಿಯುತ್ತ ಅಜ್ಜಿ ಕೈಲಿ ಹೇಳುತ್ತಿದ್ದಂತೆ "ಥೊ ಥೊ ಥೊ, ನಿಂಗೆಂತಾ ಗುತ್ತಿದ್ದು? ಆಂ ಹೇಳ್ತಿ ಕೇಳು. ಆ ಕರಕ್ಕೆ ಮಾಸ್ತಿ ಕೊಡ್ಲಿನ ರಾವು ಬಡಿದಿದ್ದೇ ಖರೆ! ಇಲ್ಲಾಂದ್ರೆ ಸೊಕಾ ಸುಮ್ನೆ ಕೊಟ್ಗೆ ತುಂಬಾ ಓಡ್ಯಾಡ್ತಾ ಇದ್ದ ಕರ ಬೆಳಗಂಬ್ಹೊತಿಗೆ ನೆಗದು ಬಿತ್ತು ಅಂದ್ರೆ?...ಯಂತಾಂದರೂ ಊರವೆಲ್ಲಾ ಸೇರಿ ಮಾಸ್ತಿ ಕೊಡ್ಲಿಗೆ ಪೂಜೆ ಕೊಡದೇ ಸೈ. ಗೊತ್ತಾತನ" ಎಂದು ಆಜ್ಞಾಪಿಸಿ ನಾವ್ಯಾರೂ ಚಕಾರ ಶಬ್ದ ಮಾತಾಡದಿದ್ದರೂ ಅಲ್ಲೇ ಹತ್ತು ನಿಮಿಷ ಝುಂಡಾ ಊರಿ ಪೈಟಾಗಿ ಕವಳ ಹಾಕಿಕೊಂಡು ಆಚೆ ಹೋಗುವವಳು.

ಇನ್ನೊಮ್ಮೆ ಅಪ್ಪ ಪೇಟೆಯಿಂದ ಬಂದವನು ಚಪ್ಪಲಿ ಕಳಚುತ್ತ ಅಲ್ಲೇ ಇದ್ದ ಅಮ್ಮನೊಂದಿಗೆ "ಮಾರಾಯ್ತಿ, ಗೇರಳ್ಳಿ ಸೋಮು ಇವತ್ತು ಮಧ್ಯಾನ್ಹ ಎದೆ ನೋವು ಎದೆ ನೋವು ಹೇಳ್ತಾ ಇದ್ದವನು ಹೋಗಿಯೇ ಬಿಟ್ನಡೆ, ಎಂಥಾ ಕೆಟ್ಟ ಸುದ್ದಿ ನೋಡು. ಶಣ್ಣ ಶಣ್ಣ ಮಕ್ಕ, ಮುದಿ ಅಪ್ಪ, ಏನೇನೂ ಅರೀದ ಶಣ್ಣ ಪ್ರಾಯದ ಹೆಂಡ್ತಿ, ಇನ್ನವರ ಕತೆ ಎಲ್ಲ ಎಂಥದೊ ಏನೊ" ಅನ್ನುತ್ತಿದ್ದಂತೆಯೇ ಸೂರತ್ತಿಗೆ ಹಾಜರ್! ಬರು ಬರುತ್ತಲೇ "ಥೊ ಥೊ ಥೊ! ನಿಂಗೆಂತಾ ಗುತ್ತಿದ್ದು ಆಂ ಹೇಳ್ತಿ ಕೇಳು, ಸೋಮುಂಗೆ ಎಂಟಾನೆಂಟು ದಿನದಿಂದ ಜರ ಬತ್ತಿತ್ತಡ....ಯಂತಾ ಔಷಧಿ ಮಾಡಿದ್ರೂ ಕಡಮೆ ಆಗತಿತ್ತಿಲ್ಯಡ, ಗೊತ್ತಿದ್ದ?" "ಉಹುಂ, ಗೊತ್ತಿಲ್ಲೆ, ನಿನ್ನ ಪುರಾಣ ಗೊತ್ತಪ್ಪೂದ ಬ್ಯಾಡ. ಹೋಗತ್ಲಾಗಿ. ಅಲ್ಲಾ, ಬರೀ ಜ್ವರಕ್ಕೆಲ್ಲಾ ಯಾರಾದ್ರೂ ಸತ್ತೋಗ್ತವನೆ? ವಾರಗಟ್ಲೆ, ತಿಂಗಳಗಟ್ಲೆ ವಾಯದೆ ಜ್ವರ ಆಗಿ ಗುಣ ಆಗ್ತಿಲ್ಯನೆ? ಬ್ಯಾಡ, ನೀ ಎಂತಾ ಹೇಳದೂ ಬ್ಯಾಡ, ಆಂ ಕೇಳ್ತೂನ್ಇಲ್ಲೆ..."ಅಪ್ಪ ಉರಿಗಣ್ಣು ಬಿಟ್ಟು ಒಳ ಹೊಕ್ಕಾಗ ಸೂರತ್ತಿಗೆ ಒಳಬಾಯಲ್ಲೆ ಪಿಟಿ ಪಿಟಿ ಮಾಡ್ತ ಮನೆ ಚಿಟ್ಟೆ ಏರಿದಳು. ಅಲ್ಲೇ ಇದ್ದ ನಮಗೆ ಅಂದರೆ ನಾನು, ಕಮಲಿ, ಕುಸುಮಿ, ಜಲಜಿಯರ ಟೋಳಿಗೆ ದೊಡ್ಡವರ ಈ ಎಲ್ಲ ಮಾತಿನ ತಲೆ ಬುಡ ಅರ್ಥವಾಗದಿದ್ದರೂ ಬಾಯಿ ಬಿಟ್ಟುಕೊಂಡು ಏನೊ ಮಹಾ ಇರಬೇಕು ಎಂದು ಕೇಳುತ್ತಿರುವದೇ ಒಂದು ಮಹಾ ತಮಾಶೆ! ಇನ್ನು ಶಾಲೆಗೆ ಹೋಗುತ್ತಿರುವ ನಮ್ಮಂಥ ಹೆಣ್ಣು ಮಕ್ಕಳನ್ನಂತೂ ಒಂಥರಾ ವಾರೆಗಣ್ಣಲ್ಲೇ ನೋಡುವದು. ಹತ್ತಿರದಲ್ಲಿ ಯಾರೇ ಇದ್ದರೂ ಅವರೊಂದಿಗೆ ಪಿಸಿ ಪಿಸಿ ಗುಟ್ಟು ಮಾಡುವದು, ಇಲ್ಲದಿದ್ದರೆ "ಕೂಸುಗಳ್ರಾ ಸುಮ್ಮಂಗೆ ನೆಲ ನೋಡಿಕೆಂಡು ನಡಿರಿ. ಈ ನಮನಿ ಎದೆ ಮುಂದೆ ಮಾಡಿಕೆಂಡು ತಿರಗಾಡಿ ಗೊತ್ತಾತನು?" ಎಂದು ಕಣ್ಣು ಕೆಕ್ಕರಿಸುವದು, ಮೇಲಿಂದ ತಿಂಗಳಿಗೆ ಒಂದೆರಡು ಸಲವಾದರೂ "ಆ ಕೂಸು



ಇಂಥವನ ಹಿಂದೆ ಓಡಿ ಹೋತಡ. ಈ ಮಾಣಿ ಆ ಕೂಸಿಗೆ ಪತ್ರ ಬರದ್ನಡ, ನಿಂಗೊತ್ತಿದ್ದ? ನಿಂಗೊತ್ತಿದ್ದ?" ಎಂದು ಊರೆಲ್ಲಾ ತಿರುಗಿ ಡಂಗುರ ಸಾರುವದು. ಛೇ! ಒಂದೇ ಎರಡೆ? ಈ ಸೂರತ್ತಿಗೆಯ ಆರ್ಭಟ! ಆದರೂ ಕೆಲವೊಮ್ಮೆ ಹೌದಾಗಿರಬಹುದು, ಅವಳು ಹೇಳುವಂಥ ಮಾತುಗಳು ಅಮ್ಮ ಅಜ್ಜಿಯರಿಗೆ ಹಾಗಿರಲಿ, ಅಪ್ಪ ಅಜ್ಜಂದಿರಿಗೂ ಹೊಚ್ಚ ಹೊಸ ಸುದ್ದಿಯೇ ಅಗಿರುತ್ತಿತ್ತು. ಯಾಕೆಂದರೆ ಈ ಭೂಮಿ ಮ್ಯಾಲಿನ ಮನುಷ್ಯ ಮಾತ್ರರಿಗೆ ಅರ್ಥವಾಗದಂಥ ಯಾವುದೊ ಲೋಕದ ಸುದ್ದಿಯನ್ನು ಹೂಬೇ ಹೂಬು ಕಣ್ಣಲ್ಲಿ ಕಂಡವಳಂತೆ ವರ್ಣಿಸುತ್ತಿದ್ದರೆ, ಯಾರಿಗೆ ಅರ್ಥವಾಗುತ್ತದೆ? ಅಲ್ಲದೆ ಈ ನರ ಜನ್ಮದಲ್ಲಿ ಬಂದವರಿಗೆಲ್ಲ ಸಕಲ ಸುದ್ದಿಗಳೂ, ಶಾಸ್ತ್ರಂಗಳೂ ಗೊತ್ತಿರಲೇ ಬೇಕೆಂಬ ಕಾನೂನು ಎಲ್ಲಿದೆ? ಆ 'ಸರ್ವಜ್ಞ'ನಂಥ ಸರ್ವಜ್ಞನೇ "ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ, ಬಲ್ಲವರು ಇದ್ದು ಬಲವಿಲ್ಲ" ಎಂದು ಬರೆದಿಲ್ಲವೆ?...ಎಂದು ನಾವು ಹೇಳಿದರೆ ಸೂರತ್ತಿಗೆ ಕೇಳಿದರೆ ತಾನೆ?

"ಸೂರತ್ಗೆ, ಖರೆ ಹೌದನೆ? ಆ ದೇವ್ರು ಯಂಗೆರಡು ಕಿವಿ ಕೊಟ್ಟಿದ್ದ ಹೇಳಿ ಎಂತೆಂತದೊ ಕತೆ ಕಟ್ಟಿ ಹಲುಬಾಡ, ..."ಅನ್ನಲಿಕ್ಕಿಲ್ಲ, "ಥೊ ಥೊ ಥೊ, ನಿಂಗೆಂತಾ ಗುತ್ತಿದ್ದು? ಆಂ ಹೇಳ್ತಿ ಕೇಳು. ಸುಳ್ಳು ಸುಳ್ಳೇ ಕತೆ ಕಟ್ಟಿ ಹಲುಬಲೆ ಯಂಗೆಂತಾ ಮಳ್ಳನ ಮಾರಾಯ, ಆಂ ಹೇಳಿದ್ದು ಹೌದೊ ಅಲ್ದೊ ಹೇಳಿ ನಿಂಬೆ ಕೊಡ್ಲಿನ ಯಂಕತ್ತೆ ಕೇಳು ಬೇಕಾದ್ರೆ." ಹೇಳುತ್ತ ಕೈ ಕುಣಿಸುತ್ತ ದೊಡ್ಡ ಗಂಟಲಲ್ಲಿ ಕೂಗುವದೇ ಸೈ. 'ಈಗಲೊ ಆಗಲೊ ಅನ್ನುತ್ತಿರುವ ತೊಂಬತ್ತು ವರ್ಷದ ಆ ನಿಂಬೆ ಕೊಡ್ಲಿನ ಯಂಕತ್ತೆಯನ್ನು ಕೇಳಬೇಕಂತೆ, ಇವ್ಳ ಮುಸುಡಿಗೆ ಮಂಗಳಾರ್ತಿ ಎತ್ಲಿ,' ಎಂದು ಅಪ್ಪ ದಡಕ್ಕನೆ ಮೇಲೆದ್ದು ಕೊಟ್ಟಿಗೆಗೆ ಹೋದರೂ ಅವನ ಹಿಂದೆ ಹಿಂದೇ ಹೋಗುತ್ತ ಬಾಯೊಣಗಿ ದನಿ ಬೀಳುವವರೆಗೂ ಕೂಗೋದೊಂದೇ ಗೊತ್ತು. ಒಟ್ಟಿನಲ್ಲಿ ಸೂರತ್ತಿಗೆಯ ಸೆರಗು ಕಂಡರೂ ಸಾಕು, ಹೆಂಗಸರು ಗಂಡಸರೆನ್ನದೆ ಗಪ್ಪ ಚುಪ್ಪ ಅಡಗಿಕೊಳ್ಳುವದೇ ಆಗಿರುತ್ತಿತ್ತು.

ಇನ್ನಿವಳು ಹೇಳುವಂಥಾ ಹೊಸ ಹೊಸ ಸುದ್ದಿಯಾದ್ರೂ ಏನಪಾ ಅಂತಂದ್ರೆ 'ಈಗೈದಾರು ದಿನದ ಹಿಂದೆ ಮಧ್ಯರಾತ್ರೆಲ್ಲಿ ಎದ್ದು ಒಂದಕ್ಕೋಗಿದ್ದಿ ಮರಾಯ, ಯಂತಕ್ಕೊ ಮ್ಯಾಲೆ ಅಂಬಾರ ನೋಡಿದ್ರೆ ನಾಕು ಜನ ಗಂಡಸ್ರು ಯಾರಿದ್ದೊ ಹೆಣ ಹೊತ್ಕಂಡು ಹೋಗ್ತಾ ಇದ್ದ. ಅವ್ರ ಹಿಂದೆ ಒಬ್ಬಂವ ಸೂಡಿ ಹಿಡಕಂಡು ಬೀಸ್ತಾ ಇದ್ದ. ಸಂಗ್ತಿಗೊಂದು ಅಜ್ಜಿ ಮುದಕಿ 'ಅಯ್ಯಯ್ರೊ ಅಯ್ಯಯ್ರೊ' ಕೂಗ್ತಾ ಇದ್ದು. ಇವ್ರೆಲ್ಲ ನೆಲ ಬಿಟ್ಟು ಅಂಬಾರದಲ್ಲಿ ನೆಡೀತಾ ಇದ್ದಿದ್ದು ಕಂಡು ಆನಂತೂ ಹೆದರಿ ಹೆಮಾರಿ ಹೋದಿ ಬಲ್ಯ? ಹ್ಯಾಂಗ್ ಹ್ಯಾಂಗೊ ಮಾಡಿ ಒಳಗೆ ಬಂದು ಬಿದ್ಕಂಡಿ. ಆವತ್ನಿಂದ ದಿನಾಗ್ಲೂ ಇದೇ ಕತೆ. ಯಂಗೊಂದೇ ಅಲ್ಲ, ಯಂಕತ್ತಿಗೂ ಕಾಣ್ತಾ ಇದ್ದಡ. ತುದಿ ಮನೆ ಗೌರಿಗೂ ಕಂಡಿತ್ತಡ. ನೆಗ್ಯಾಡಾಡ, ಗೊತ್ತಾತ? ಈ ಕಣ್ಣಲ್ಲಿ ಮುಂದೆ ಎಂತೆಂತ ಕಾಣದಿದ್ದ ಏನೊ...'ಇದು ಇನ್ನೊಂದು ಸ್ಯಾಂಪಲ್ಲು. ಇಂಥದನ್ನೆಲ್ಲ ಇವಳು ಹೇಳುತ್ತಾಳೆಂದು ನಂಬಿಬಿಡುವಷ್ಟು ದಡ್ಡರೆ ನಮ್ಮೂರ ಜನ? ಬಾಯಿಗೆ ಬಾಯಿ ಹತ್ತಿ ಗಲಾಟೆ ಆಗಬಾರದೆಂಬುದಷ್ಟೇ ಇವರ ಕಾಳಜಿ. ಆದರೆ ವಾರಗಟ್ಲೆ ಸುತ್ತ ಮುತ್ತಲ ಗುಡ್ಡೆ ಹಳ್ಳಿ, ಜಾಜಿಗದ್ದೆ, ಮಾದಲ ಜಡ್ಡಿ ಮುಂತಾಗಿ ತಿರುಗಿ ತಿರುಗಿ ಕಂಡ ಕಂಡವ್ರಿಗೆಲ್ಲ ಅಂಬಾರದಲ್ಲಿ ಹೆಣ ಹೊರುವ ಸುದ್ದಿ ಮುಟ್ಸೋದೆ ಕೆಲ್ಸ ಅವ್ಳಿಗೆ. ಅದನ್ನು ಯಾರೆಷ್ಟು ನಂಬಲಿ ಬಿಡಲಿ, ಬೆನ್ನ ಹಿಂದೆ ಆಡಿಕೊಂಡು ನಗಲಿ ಕ್ಯಾರೇ ಇಲ್ಲ. ಹಾಗೆಂದು ಅವಳಿಗೇನು ಹೇಳಿ ಕೇಳುವವರು ಯಾರೂ ಇಲ್ಲವೆ? ಎಲ್ಲಾ ಹೆಂಗಸ್ರ ಹಾಂಗೆ ಹೊಟ್ಟೆ ಪಾಡಿನ ಕೆಲಸ ಇಲ್ಲವೆ? ಇಡೀ ದಿನ ಊರ ಮ್ಯಾಲೆ



ತಿರಗಿ ತಿರಗಿ ಕಾಲು ಸೋತು ಬರುವದಿಲ್ಲವೆ?... ಅಂದರೆ ಗಂಡ, ಮೂರು ಗಂಡು ಮೂರು ಹೆಣ್ಣು ಮಕ್ಕಳು, ಎಮ್ಮೆ ದನ, ತೋಟ ಗದ್ದೆ, ಜೊತೆಗೆ ಬಗ್ಗಿ ಬಿಲ್ಲಾದ ಬೆನ್ನಿನ ಅತ್ತೇರು ಮುದುಕಿ ಎಲ್ಲವೂ ಇವೆ. ಮನುಷ್ಯರ ಭಾಷೆ ತಿಳಿಯುವವರಿಗಾದರೆ ಹೇಳಿ ಕೇಳಿ ಮಾಡಬಹುದು. ನೀನು ಅಂದ್ರೆ ನಿನ್ನಪ್ಪ ಎಂದು ಜಗಳಕ್ಕೇ ನಿಂತು 'ಆನಿರಾದೇ ಹೀಂಗೆ. ಅದೇನ್ ಮಾಡ್ತಿ ಮಾಡಿ ನೋಡನ' ಎಂದು ಮಹಾಭಾರತದ ಚಂಡಿಯಂತೆ ಸಡ್ಡು ಹೊಡೆಯುವವಳಿಗೆ ಯಾರೇನು ಮಾಡಲು ಸಾಧ್ಯ? 'ಸತ್ಗಂಡ್ಹೋಗ್ಲಿ. ನಮ್ಮ ಪ್ರಾರಬ್ದ ಕರ್ಮ, ಅನುಭವಿಸವು' ಅಂದುಕೊಂಡು ಮೊದ ಮೊದಲು ಮುದುಕಿ ಕೂಳು ಬೇಯಿಸುತ್ತಿದ್ದಳಂತೆ. ನಂತರ ಹೆಣ್ಣುಮಕ್ಕಳು ನಾಲ್ಕೆತ್ತೆಗೇ ಶಾಲೆ ಬಿಟ್ಟವರು ಒಲೆ ಬುಡ ನೋಡ್ಕೊಂಡಿದ್ದು ಸೂರತ್ತಿಗೆ ನೆರುಂಬ್ಯಾಗಿ ಹೋತು. ಹೋದಲ್ಲಿ ಹೋದ, ಬಂದಲ್ಲಿ ಬಂದ. ಎಲ್ಲಿ ಮದುವೆ, ಯಾವೂರಲ್ಲಿ ಯಾರ ಮಗನ ಮುಂಜಿ, ಇನ್ನೆಲ್ಲಿ ಸಮಾರಾದ್ನೆ, ಮತ್ತ್ಯಾರ ಮನೆಯಲ್ಲಿ ಶ್ರಾದ್ಧ ಎಂದು ಯಾವುದೇ ಕಾಗೆ ಬಂದು ಕಾಕಾಗುಟ್ಟಿದರೂ ಸಾಕು ತನ್ನ ಹೋಪಲ್ಲಿ ಚೀಲ ಹೆಗಲಿಗೇರಿಸಿದ್ದೇ ಖರೆ! ಅಲ್ಲಿ ಹತ್ತಾರು ಹೆಂಗಸರ ಮಧ್ಯೆ ತನ್ನದೇ ಪುನಶ್ಲೋಕ ಊದುತ್ತ, ಯಾರೇನಂದರೂ 'ಥೊ ಥೊ ಥೊ ನಿಂಗೆಂತಾ ಗೊತ್ತಿದ್ದು? ಆಂ ಹೇಳ್ತಿ ಕೇಳು' ಎಂದು ಮಾತು ಮಾತಿಗೆ ಒದರುತ್ತ, ಗಿರಿ ಗಿರಿ ಕಣ್ಣು ತಿರುಗಿಸಿ, ಕೈ ಕುಣಿಸಿ ಬಯಲಾಟ ಶುರುಹಚ್ಚಿದರೆ ಕುಳಿತವರೆಲ್ಲ ತಮ್ಮ ತಮ್ಮಲ್ಲೇ ಕಣ್ಸನ್ನೆ ಮಾಡುತ್ತ ಜಾಗ ಖಾಲಿ ಮಾಡಿದರೂ ಮತ್ತೂ ಮತ್ತೂ ಒದರುತ್ತಲೇ ಇರುವದು ಸೂರತ್ತಿಗೆಯ ಸ್ಪೆಷಾಲಿಟಿ!

ಸೂರತ್ತಿಗೆ ಎಂಬುದು ಅವಳ ಖರೆ ಹೆಸರೆ? ಅಲ್ಲವೆಂದು ಊರು ವರಾಡಿ ಜನಕ್ಕೆಲ್ಲಾ ಗೊತ್ತು. ಅವಳೂ ಅದನ್ನೇ ಒಪ್ಪಿಕೊಂಡುಬಿಟ್ಟಿದ್ದಾಳೆ. ಮೂಕಾಂಬೆಯೊ, ಕಾವೇರಿಯೊ, ಮಾದೇವಿಯೊ ಯಾವುದು ತನ್ನಪ್ಪ ಅಬ್ಬೆ ಇಟ್ಟ ಹೆಸರು ಎಂಬುದು ಅವಳಿಗಾದರೂ ಎಲ್ಲಿ ನೆನಪಿದೆ? ನಮ್ಮೂರಿಗೆ ಸೊಸೆಯಾಗಿ ಬಂದ ಒಂದೆರಡು ವರ್ಷಕ್ಕೇ ಸುದ್ದಿ ಸೂರಕ್ಕ ಎಂಬ ಬಿರುದು ಗಳಿಸಿ, ಸೂರತ್ತಿಗೆಯಾಗಿ, ಸೂರತ್ತೆಯಾಗಿ, ಸೂರಜ್ಜಿಯಾಗುವ ಹಂತಕ್ಕೆ ಬಂದಿದ್ದರೂ ತನ್ನ ಚಾಳಿ ಮಾತ್ರ ಬಿಟ್ಟಿಲ್ಲ, ಅನ್ನುವದು ನಮಗೆಲ್ಲ ಕಿವಿ ನೆಟ್ಟಗಾಗುವ ಸುದ್ದಿ. ಯಾಕೆಂದರೆ ದಿನಕ್ಕೊಮ್ಮೆಯಾದರೂ ನಮ್ಮ ನಮ್ಮ ಮನೆಯಲ್ಲಿ ಊಟ ತಿಂಡಿಗೆ ಕೂತಾಗ ಸೂರತ್ತಿಗೆ ಇವತ್ತು ಹೀಂಗಂದ್ಲು, ನಿನ್ನೆ ಹಾಂಗಂದ್ಲು ಅನ್ನುತ್ತ ಅಪ್ಪ ಅಣ್ಣ ಅಮ್ಮ ಅಜ್ಜ, ಅಜ್ಜಿಯರು ಅಬ್ಬರಿಸಿ ನಗುತ್ತಿದ್ದರೆ ನಮಗೆ ನಮ್ಮ ವರ್ಗ ಪುಸ್ತಕವಾದ ಕಥಾರೂಪ ಇತಿಹಾಸಕ್ಕಿಂತ ಸೂರತ್ತಿಗೆಯ ವರ್ತಮಾನವೇ ಹೆಚ್ಚು ಖುಷಿ ಕೊಡುತ್ತಿತ್ತು.

ಒಂದು ದಿನ ಬೆಳಗಾ ಮುಂಚೆ ನಾವಿನ್ನೂ ದೋಸೆ ತಿನ್ನುತ್ತಿರುವಾಗಲೇ ಹಾಜರಾಗಿ ಸೀದಾ ಒಳಗೇ ನುಗ್ಗಿಬಿಟ್ಟಳು ಸೂರತ್ತಿಗೆ. ಬರು ಬರತ್ತಲೇ 'ಯಂಗೂ ಒಂದು ಬಾಳೆ ಹಾಕ್ರೇ ಸುಬ್ಬಕ್ಕ, ನಿಮ್ಮಲ್ಲೇ ಆಸ್ರಿ ಕುಡಿಯನ ಹೇಳೇ ಬಂದಿ' ಅನ್ನುತ್ತ ಪಟ್ಟಾಂಗ ಶುರು ಹಚ್ಚಿಬಿಟ್ಟಳು. "ಥೊ ಥೊ ಥೊ ನಿಂಗೊತ್ತಿಲ್ಲೆ ಸುಬ್ಬತ್ತಿಗೆ, ನಿನ್ನ ಸೊಂಟದ ಕಸಕ್ಕೆ ಒಂದು ಗನಾ ಔಷಧಿ ತಂದಿ ನೋಡು" ಅನ್ನುತ್ತ ಚೀಲ ಬಿಚ್ಚಿದಳು. ಹಳೇ ಗಾಜಿನ ಬಾಟಲಿಯಲ್ಲಿ ಏನೊ ಕೆಂಪು ನೀರು! ಚಾ ಕಣ್ಣು ಇದ್ದಾಂಗಿತ್ತು. ಅದರ ಮೆಲೆ ತೆಳ್ಳಗಿನ ಕೆನೆಯಂತದೂ ತೇಲುತ್ತಿತ್ತು. 'ಇಲ್ನೋಡಿ ಇದು ಮಾಯಾ ರೊಟ್ಟಿ! ದಿನಕ್ಕೆ ಮೂರ್ಸಲ ಇದರ ನೀರು ಕುಡದ್ರೆ ಮೈ ಕೈಯಲ್ಲಿ ಎಂಥಾ ನೋವಿದ್ರೂ ಕಡಮೆಯಾಗ್ತು. ಗಾಯಕ್ಕೆ ಹುಣ್ಣಿಗೆ ಈ ಔಷಧಿ ಹಚ್ಚಿದ್ರೆ ಆಗಿಂದಾಗ ಗುಣ ಆಗ್ತು. ಜ್ವರ ಜಾಪತ್ತು ಬಂದ್ರೆ ಒಂದ್ಸರ್ತಿ ಎರಡು ಕುಡ್ತೆ



ಕುಡದುಬಿಟ್ರೆ ಸಾಕು, ಇನ್ಯಾವತ್ತೂ ಜ್ವರ ಬರ್ತೇ ಇಲ್ಲೆ. ಮಕ್ಳಾಗದೇ ಇದ್ದವಕೂ ಇದರಿಂದ ಮಕ್ಕಳಾಗ್ತ ಗೊತ್ತಿದ್ದ? ದುಡ್ಡೂ ಕಡಮೆನೇಯ, ಬರೀ ನೂರು ರೂಪಾಯಿ ಅಷ್ಟೆ! ತಗಾ, ಎರಡು ದಿನದಲ್ಲಿ ಕಡಮೆ ಆಗದಿದ್ದರೆ ನಿನ್ನ ದುಡ್ಡು ನಿನಗೇ ವಾಪಸ್' ಅಂದವಳೇ ಆ ನೀರನ್ನು ಒಂದು ಲೋಟಕ್ಕೆ ಹಾಕಿಯೇ ಬಿಟ್ಟಳು.

"ಅಯ್ಯಯ್ಯೊ, ಸೂರಿ, ಯನಗೆ ಕಾಲು ನೋವು ಹೇಳಿ ನಿಂಗೆಂತಾ ಸ್ವಪ್ನ ಬಿದ್ದಿತ್ತನೆ? ಇಷ್ಟು ಗಟ್ಟಿಮುಟ್ಟಾಗಿ ಓಡ್ಯಾಡ್ತಾ ಇದ್ನಲೆ...ನಿನ್ನ ಕಣ್ಣಿಗೆ ಮೊದ್ಲು ಈ ಔಷಧಿ ಹಾಕ್ಯ...." ಅಜ್ಜಿಯ ಮಾತನ್ನು ಅರ್ಧದಲ್ಲೇ ತುಂಡರಿಸಿ ಮತ್ತೆ ತನ್ನ ಸೊಳೆರಾಗ ಶುರು ಹಚ್ಚಿದಳು ಸೂರತ್ತಿಗೆ. "ಥೊ ಥೊ ಥೊ, ನಿಂಗೆಂತಾ ಗುತ್ತಿದ್ದು? ಆಂ ಹೇಳ್ತಿ ಕೇಳು. ಕಾಲು ನೋವಿಲ್ದೇ ಇದ್ರೆ ಥಂಡಿ ಜ್ವರ ಬಂದಾಗಾದ್ರೂ ಬೇಕಾಗ್ತು ಇಕಾ, ಇಟ್ಟಗ. ಯಾರ್‍ಯಾರಿಗೆ ಎಂಥೆಂತಾ ರೋಗೆಲ್ಲಾ ಗುಣ ಆಜು ಗುತ್ತಿದ್ದ? ಅದೇ ಮತ್ತಿಕೊಡ್ಲಿನ ಪರಮೇಸ್ರಜ್ಜ, ಕ್ಯಾನ್ಸರ ಆಗಿ ಹುಲು ಸ್ವಾಸ ಒಂದೇ ಇತ್ತು . ಅಂಥಂವ ಒಂದೇ ಒಂದು ಕುಡ್ತೆ ಕುಡದ ಕೂಡ್ಲೇ ಎದ್ದು ಕುಂತಗಂಡು ಬಿಟ್ಟ.'...ಇನ್ನೂ ಎಷ್ಟು ಹೇಳುತ್ತಿದ್ದಳೊ, ಅಜ್ಜಿ ಅಮ್ಮ ಇಬ್ಬರೂ ಸರಕ್ಕನೆ ಎದ್ದು ಆಚೆ ಹೋದಾಗ ಸೂರತ್ತಿಗೆ ಏನೊ ಗೊಣ ಗೊಣ ಮಾಡುತ್ತ ಹೊರಬಿದ್ದಳು.

ಕ್ರಮೇಣ ನಮ್ಮೂರಲ್ಲೂ ರೇಡಿಯೊ ಬಂತು. ಮೊಟ್ಟ ಮೊದಲಿಗೆ ತಂದವನು ಊರ ಸಾವ್ಕಾರ ಮಾದೇವಣ್ಣ. ಅವನ ಮನೆಯಲ್ಲಿ ಮೊಳಗುತ್ತಿದ್ದ ಹಾಡು ಕೇಳಿ ನಮ್ಮ ಅಪ್ಪನೂ ಸೇರಿದಂತೆ ಮತ್ತೂ ನಾಲ್ಕಾರು ಮನೆಯವರೂ ತಂದರು. ಹಾಗೇ ಸೂರತ್ತಿಗೆ ಗಂಡ ಶಿವಣ್ಣ ತಾನಾಗಿ ತಂದನೊ, ಹೆಂಡತಿಯ ನಾಲಿಗೆಗೆ ಹೆದರಿ ತಂದನೊ ಅಂತೂ ಅವರ ಮನೆಯಲ್ಲೂ ರೇಡಿಯೊ ಬಂದು ಸೂರತ್ತಿಗೆಗೆ ' ಆಲ್ ಇಂಡಿಯಾ ರೇಡಿಯೊ' ಎಂಬ ಇನ್ನೊಂದು ಬಿರುದೂ ಸಿಕ್ಕಿತು. ಯಾಕೇಂದ್ರೆ ಈಗ ಅವಳ ಭಂಡಾರಕ್ಕೆ ಮತ್ತಷ್ಟು ಹೊಸ ಹೊಸ ಸುದ್ದಿಗಳು ಸೇರಿ ಅವುಗಳಿಗೂ ಮತ್ತೊಂದಷ್ಟು ಕಾಲು ಬಾಲ ಸೇರಿಸಿ "ನಿಂಗೊತ್ತಿದ್ದ? ನಿಂಗೊತ್ತಿದ್ದ?, ಪಾಕಿಸ್ತಾನದವು ನಮ್ಮ ದೇಶನೆಲ್ಲ ತಗತ್ತಾ ಇದ್ವಡ ಗೊತ್ತಾತ? ನಿನ್ನೆ ಬೆಳಿಗ್ಗೆ ರೇಡಿಯೊದಲ್ಲೇ ಬಂದಿತ್ತಲೆ?" ಎಂದು ಕೂಗುತ್ತಿದ್ದಳು. ಕೆಲವರು ಅವಳಿಂದ ಹೇಗೊ ತಪ್ಪಿಸಿಕೊಂಡರೆ ಇನ್ನು ಕೆಲವು ಪುಂಡು ಹುಡುಗರು "ಹೌದೇ ಸೂರತ್ತೆ, ನಾಳೆ ಅಂದ್ರೆ ನಾಳೆ ನಾವೆಲ್ಲ ಪೆಟ್ಗೆ ಕಟ್ಟಿ ಚಂದ್ರಲೋಕಕ್ಕೇ ಹೋಗಿ ಸುರಕ್ಷಿತವಾಗಿ ಇದ್ದು ಬಿಡನ ಆತ?" ಎಂದು ಚಾಳಿಸುತ್ತಿದ್ದರು.

ಒಂದು ದಿನ ಸೂರತ್ತಿಗೆ ಒಲೆ ಮ್ಯಾಲೆ ದೋಸೆ ಎರೆದವಳು ರೇಡಿಯೊ ವಾರ್ತೆ ಕೇಳಲು ಪಟಕ್ಕನೆ ಜಗಲಿಗೆ ಬಂದು ಕೂತಳಂತೆ. ಮತ್ತೈದು ನಿಮಿಷಕ್ಕೆ ಮೂಗು ಉದುರಿಬೀಳುವಂಥ ಕಮಟು ವಾಸನೆಗೆ ಹೆದರಿ ಮನೆ ಜನರೆಲ್ಲ ಒಳಗೆ ಹೋಗಿ ನೋಡಿದರೆ ದೋಸೆ ಹೊತ್ತಿ ಕರುಕಲಾಗಿದ್ದಷ್ಟೇ ಅಲ್ಲ, ಕಾವಲಿಯೂ ಉರಿಯುತ್ತಿತ್ತಂತೆ. ಇನ್ನೊಂದು ಒಲೆಯಲ್ಲಿಟ್ಟ ಹಾಲು ಪೂರ್ತಿ ಉಕ್ಕಿ ಚೆಲ್ಲಿ, ಪಾತ್ರೆಯೇ ಸುಟ್ಟು ಹೊಗೆ ಹಾಯುತ್ತಿತ್ತಂತೆ. ಆವಾಗ ಯಾರ್‍ಯಾರು ಎಷ್ಟೆಷ್ಟು ಬೈದರೊ, ಅದು ಮುಖ್ಯವಲ್ಲ, ಸೂರತ್ತಿಗೆಯ ಉತ್ತರ ಮಾತ್ರ ಅತ್ಯಂತ ಅಮೂಲ್ಯವಾದದ್ದು!! "ಆ ಸುಟ್ಟ ಮುದುಕಿ ಯಂತಕ್ಕೆ ಸತ್ತುಹೋಗಕಾಗಿತ್ತು? ಈ ಮಳ್ಳು ಕೂಸು ಇವತ್ತೇ ಯಂತಕ್ಕೆ ಮುಟ್ಟಾಗಕಾಗಿತ್ತು? ಮದುವ್ಯಾಗಿ ಹೋದವಂತೂ ಹೋದ, ಇದಕಾದ್ರೂ ಬುದ್ಧಿ ಬ್ಯಾಡದ? ಎಲ್ಲರೂ ಸೇರಿ ಯನಗೆ ಬೈಸವು ಹೇಳೇ ಹೀಂಗ್ ಮಾಡಿರೆ ಆಂ ಯಂತ ಸಾಯ್ಲಿ?..."ಇದೆಲ್ಲ ಕೇಳಿದ ನಾವು ನೆರೆಯವರು ಮೂರೂ ಮುಚ್ಚಿಕೊಂಡು ನಗುವದೊ? ಅಳುವದೊ? ನೀವೇ ಹೇಳಿ.



## ಹೂವೇ....ಹೂವೇ

**ನಳಿನಿ ಸೂರ್ಯಪ್ರಕಾಶ್**

ಇತ್ತೀಚೆಗೆ ಮುಗಿದ ಶ್ರಾವಣಮಾಸದ ವ್ರತಗಳನ್ನು ಯಥಾಶಕ್ತಿ ಆಚರಿಸಿ ಪುನೀತಳಾದೆ. ಪೂಜಾವಿಧಿಗಳಲ್ಲಿ ಪುಷ್ಪಾರ್ಚನೆ ಅಂತ ಒಂದು ಭಾಗ ಬರತ್ತೆ. ಗೌರಮ್ಮನ(ಸ್ವರ್ಣಗೌರಿ ವ್ರತದಲ್ಲಿ) ಒಂದೊಂದು ಹೆಸರಿಗೆ ಒಂದೊಂದು ಬಗೆಯ ಹೂವಿನಿಂದ ಮಾಡುವ ಅರ್ಚನೆಯದು. ಕರವೀರ, ಬಕುಳ, ಪುನ್ನಾಗ, ಜಾಜಿ, ಮಲ್ಲಿಕಾ, ಗಿರಿಕರ್ಣಿಕ, ಕೇತಕಿ, ಕಮಲ, ಚಂಪಕ, ಸೇವಂತಿ , ಪಾರಿಜಾತ ಹೀಗೆ ಒಂದೇ ಎರಡೆ? ಗಿರಿಕರ್ಣಿಕ, ಕೇತಕಿ, ಪಾರಿಜಾತ ಇವಾವ ಹೂವೂ ಇರದ ಕಾರಣ, ತಟ್ಟೆಯ ತುಂಬಿದ್ದ ಸೇವಂತಿಗೆ, ಗುಲಾಬಿ ಹೂಗಳಲ್ಲೇ ಅವುಗಳನ್ನು ಕಾಣ್ತಾ, "ಸ್ವಲ್ಪ ಅಡ್ಜಸ್ಟ್ ಮಾಡ್ಕೋ ಗೌರಮ್ಮ" ಅಂದ್ಕೊಳ್ತಾ ಕೈಮುಗಿದೆ. ಬಕುಳ, ಪುನ್ನಾಗಗಳನ್ನು ಕಂಡೇ ಇರದ ನಾನು ಬಿಡುವು ಸಿಕ್ಕಾಗಲೊಮ್ಮೆ ಗೂಗಲಿಸಿ ನೋಡಿದೆ. ಬಿಳಿ, ನಕ್ಷತ್ರಾಕಾರದ ಹೂವು ಬಕುಳವಾದರೆ, ಹಳದಿ ಕೇಸರಗಳುಳ್ಳ, ಬಿಳಿ ಪುನ್ನಾಗ ಹೂಗಳು ಗೊಂಚಲಾಗಿ ಬಿಡುತ್ತವೆ. ಎರಡೂ ಸುವಾಸನೆಯುಕ್ತ ಹೂಗಳೇ.

ಮೂರ್ತಿ ಪೂಜೆಯಲ್ಲಿ ವಿವಿಧ ಪುಷ್ಪಾಲಂಕಾರದ ಜೊತೆ ಧೂಪ, ದೀಪ, ನೈವೇದ್ಯ ಸಮರ್ಪಿಸಿ, ಭಕ್ತಿ ತೋರುವುದು ಸಾಮಾನ್ಯರಾದ ನಮ್ಮ ಪರಿ. ಆದರೆ ಕವಿಯ ಹೃದಯ ಹೂವಿಗಿಂತ ಮೃದು. ಹೂವನ್ನು ಗಿಡದಿಂದ ಬಿಡಿಸುವುದೇ ಅದರ ಕತ್ತನ್ನು ಕೊಯ್ಯುವಂಥ ಕ್ರೌರ್ಯದ ಕೆಲಸ, ಕವಿಯ ಪಾಲಿಗೆ. ಕುವೆಂಪು ತಮ್ಮ ಹೂವು–ದೇವರು ಕವಿತೆಯಲ್ಲಿ ಪೂಜಾರಿಯನ್ನು ಕುರಿತು ಹೇಳ್ತಾರೆ, "ಕೋಮಲ ಸುಮಗಳ ಕತ್ತನ್ನು ಕೊಯ್ದು, ಕಗ್ಗಲ್ಲಿನ ಕಗ್ಗತ್ತಲೆಗೊಯ್ದು, ಗುಡಿಯ ಕಲ್ಲಿಗೆ ಬಲಿಕೊಡದಿದ್ದರೆ, ಪರಮಾತ್ಮಗೆ ತೃಪ್ತಿಯೇ ಇಲ್ಲೇನು? ಬಿಡೋ ಅಲ್ಲಿರಲಿ (ಗಿಡದಲ್ಲೇ ಇರಲಿ) ಆ ಹೂವು, ನೀ ಸೃಷ್ಟಿಸಲಾರದ ಚೆಲುವಿಗೆ ನಿನ್ನಿಂದೇತಕೆ ಸಾವು".

ಈ ಹೂ ಬಿಡಿಸುವ, ನೋಯಿಸುವ ರಗಳೆಯೇ ಬೇಡವೆಂದು ಆ ಭಗವಂತ ಪಾರಿಜಾತದ ಮರವನ್ನು ಸೃಷ್ಟಿಸಿದನೇನೊ. ಕೆಂಪು ತೊಟ್ಟಿನ, ಬಿಳಿ ಪಕಳೆಗಳುಳ್ಳ ಚಿಕ್ಕ ಹೂ ಪಾರಿಜಾತ. ಇದರ ಸುಗಂಧ ದಿವ್ಯವಾದುದು. ಹೇಮಂತ, ಶಿಶಿರದ ಸಂಜೆಯ ಹೊತ್ತು ಹೂಗಳು ಮರದಲ್ಲರಳುತ್ತವೆ. ಸುತ್ತಲೂ ಘಮ್ಮೆನ್ನುವ ಪರಿಮಳ. ಮಂದಾನಿಲ ಬೀಸಿದರಂತೂ ಮತ್ತಷ್ಟು ಹರಡಿ ದೈವಿಕ ಅನುಭವವನ್ನುಂಟು ಮಾಡುತ್ತದೆ. ನಿಧಾನವಾಗಿ ಬೆಳಗಿನ ಹೊತ್ತಿಗೆ ಸಾಕಷ್ಟು ಹೂಗಳು ಮರದಿಂದ ತಾವೇ ತಾವಾಗಿ ಉದುರಿಬಿಡುತ್ತವೆ, ಬಹಳ ಸಹಜವೆಂಬಂತೆ. ಕೊಂಬೆಗಳನ್ನು ಸ್ವಲ್ಪ ಅಲುಗಾಡಿಸಿದರೆ ಸಾಕು, ಪಾರಿಜಾತದ ಹೂಮಳೆ ! ಹೂ ಬಿಡಿಸುವ ರಗಳೆಯೇ ಇಲ್ಲ. ಕೆಳಗೆ ಬಿದ್ದ ಹೂಗಳೇ ಪೂಜೆಗೆ ಸಲ್ಲುವುದಂತೆ. ಪುರಾಣದ ಪ್ರಕಾರ ಸಮುದ್ರ ಮಂಥನದ ಸಮಯದಲ್ಲಿ ಪಾರಿಜಾತ ವೃಕ್ಷವು ಹುಟ್ಟಿಬಂತಂತೆ. ದ್ವಾಪರಯುಗದಲ್ಲಿ ಶ್ರೀಕೃಷ್ಣ ಇಂದ್ರಲೋಕದಿಂದ ಈ ಪಾರಿಜಾತ ವೃಕ್ಷವನ್ನು ಭೂಮಿಗೆ ತಂದ ಕತೆ ಸ್ವಾರಸ್ಯಕರವಾಗಿದೆ. ಒಮ್ಮೆ ನಾರದರು ಇಂದ್ರಲೋಕದ ಪಾರಿಜಾತವನ್ನು ಶ್ರೀಕೃಷ್ಣನಿಗೆ ಕೊಟ್ಟು ಆಶೀರ್ವದಿಸಿದರಂತೆ. ದಿವ್ಯ ಸುಗಂಧದ ಪುಷ್ಪವನ್ನು ಶ್ರೀಕೃಷ್ಣ ಪ್ರೀತಿಯಿಂದ ರುಕ್ಮಿಣಿಯ ಮುಡಿಗೇರಿಸಿದನಂತೆ. ನಾರದಮುನಿಯಿದ್ದಲ್ಲಿ ಕಿತಾಪತಿಗೇನು ಕೊರತೆ! ನಡೆದದ್ದನ್ನು ಯಥಾವತ್ತಾಗಿ ಕೋಪಿಷ್ಟೆ ಸತ್ಯಭಾಮೆಯೆದುರು ವರ್ಣಿಸಿದರಂತೆ. ಹಠಮಾರಿ ಸತ್ಯಭಾಮೆ, ರುಕ್ಮಿಣಿಗೆ ಹೂ ಮುಡಿಸಿದರೆ, ತನಗೆ ಪಾರಿಜಾತ ವೃಕ್ಷವನ್ನೇ ತಂದುಕೊಡು ಎಂದು ಶ್ರೀಕೃಷ್ಣನಿಗೆ ದುಂಬಾಲು ಬಿದ್ದಳಂತೆ. ಪ್ರೀತಿಯ ಮಡದಿಯ ಹಠಕ್ಕೆ ಸೋತ ಶ್ರೀಕೃಷ್ಣ ಇಂದ್ರನ ಜೊತೆ ಯುದ್ಧ ಮಾಡಿ ಪಾರಿಜಾತದ ಮರವನ್ನು



ಸತ್ಯಭಾಮೆಯ ಅಂಗಳದಲ್ಲಿ ನೆಟ್ಟನಂತೆ. ಮರದ ಕೊಂಬೆಗಳು ಪಕ್ಕದಲ್ಲಿದ್ದ ರುಕ್ಮಿಣಿಯ ಅಂಗಳದ ಕಡೆಗೆ ಬಾಗಿದ್ದರಿಂದ ರುಕ್ಮಿಣಿಯ ಅಂಗಳದ ತುಂಬ ಆ ದಿವ್ಯ ಪುಷ್ಪದ ಮಳೆಯಾಗ್ತಿತ್ತಂತೆ ! ಮರವನ್ನು ಬಯಸಿದ ಸತ್ಯಭಾಮೆಗೆ ಸಿಕ್ಕಿದ್ದು ಮರವಷ್ಟೆ. ಪತಿ ಪ್ರೀತಿಯಿಂದ ಮುಡಿಸಿದೊಂದು ಪಾರಿಜಾತದಿಂದ ಸಂತೋಷಗೊಂಡ ರುಕ್ಮಿಣಿಗೆ ಹೂಮಳೆಯೇ ಸಿಕ್ಕಿತಂತೆ. ಎಲ್ಲವೂ ಅವರವರ ಭಾವಕ್ಕೆ ತಕ್ಕ ಹಾಗೆ ದಕ್ಕುವುದು. ಅಂತೂ ಸತ್ಯಭಾಮೆ ಹಠಮಾರಿ ಹೆಣ್ಣಾದರೆ, ಶ್ರೀಕೃಷ್ಣ ಕಿಲಾಡಿ ಗಂಡು !

ಒಮ್ಮೆ ಗೌತಮ ಬುದ್ಧ ಹೂವೊಂದನ್ನು ಹಿಡಿದು ಅದನ್ನೇ ತದೇಕಚಿತ್ತದಿಂದ ನೋಡುತ್ತಾ ತನ್ನ ಶಿಷ್ಯರಿಗೆ ಮೌನ ತತ್ವೋಪದೇಶವನ್ನು ನೀಡಿದನಂತೆ. ಬುದ್ಧನ ಮುಂದೆ ಕೂತಿದ್ದ ಯಾವ ಶಿಷ್ಯನಿಗೂ ಏನೊಂದೂ ಅರ್ಥವಾಗಲಿಲ್ಲವಂತೆ. ಸ್ವಲ್ಪ ಸಮಯದ ನಂತರ ಅವರಲ್ಲಿ ಮಹಾಕಶ್ಯಪನೆಂಬ ಶಿಷ್ಯನಿಗೆ ಬುದ್ಧನ ಉಪದೇಶವು ಅರ್ಥವಾಗಿ ಆತನ ಮುಖದಲ್ಲಿ ಮಂದಹಾಸವೊಂದು ಮೂಡಿತಂತೆ. ಆ ಮಂದಹಾಸ ರೂಪದ ಜ್ಞಾನೋದಯವನ್ನು ಮುಂದೆ ಅನುಕ್ರಮವಾಗಿ ಇಪ್ಪತ್ತೆಂಟು ಬೌದ್ಧ ಭಿಕ್ಷುಗಳಿಗೆ ಉಪದೇಶಿಸಲ್ಪಟ್ಟು, ಝೆನ್ ತತ್ವಜ್ಞಾನದ ಹುಟ್ಟಿಗೆ ಕಾರಣವಾಯಿತಂತೆ ! ಬುದ್ಧ ಹೂವನ್ನು ಕೇವಲ ತದೇಕಚಿತ್ತವಾಗಿ ನೋಡಲಿಲ್ಲವಷ್ಟೆ. ಬದಲಾಗಿ ಅದನ್ನು ಧ್ಯಾನಿಸಿದನಲ್ಲವೆ? ಮೌನ, ಧ್ಯಾನ, ನಿಶ್ಚಲತೆ, ಜಾಗೃತಿ ಇವೆಲ್ಲ ಝೆನ್ ತತ್ವಜ್ಞಾನದ ಸ್ತಂಭಗಳು. ಯಾವ ಯಾವುದೋ ಸಂಶೋಧನೆಗಳ ಪ್ರಕಾರ ನಮ್ಮ ಮೆದುಳಿನಲ್ಲಿ ಎಚ್ಚರ ಸ್ಥಿತಿಯಲ್ಲಿ ದಿನಕ್ಕೆ ಆರು ಸಾವಿರದಿಂದ ಅರವತ್ತು ಸಾವಿರದಷ್ಟು ಯೋಚನಾ ಲಹರಿಗಳು ಉತ್ಪತ್ತಿಯಾಗ್ತವಂತೆ. ಸದಾ ಏನಾದರೊಂದು ಯೋಚನೆ ಮಾಡುವ ಮನಸ್ಸಿನಲ್ಲಿ ನಿಶ್ಚಲತೆ ಎಲ್ಲಿಂದ ಬರಬೇಕು? ಬೀದಿಯಲ್ಲಿ ತಲೆಕೆದರಿದೊಂಡು ಎಲ್ಲರಿಗೂ ಕೇಳಿಸುವ ಹಾಗೆ ಯೋಚಿಸುವವನಿಗೆ ಹುಚ್ಚ ಅಂತೀವಿ, ಮನಸ್ಸಿನಲ್ಲೇ ಯೋಚಿಸಿಕೊಂಡು ಓಡಾಡುವ ನಾವು ನಾರ್ಮಲ್ ಅಂತೀವಿ ! ನಿರಂತರ ತಲೆಯಲ್ಲಿ ವಟಗುಟ್ಟುವ ಆ ದನಿ ಕ್ಷಣಕಾಲವಾದರೂ ತೆಪ್ಪಗಾಗದಿದ್ದರೆ, ಹೂವಿನ ಚೆಲುವನ್ನು ಕಣ್ತುಂಬಿಕೊಂಡರೂ, ಅದು ನಮ್ಮ ಅಂತಃಕರಣವನ್ನು ತಲುಪದೆ, ಹೂವಿನ ಸತ್ವದ ಅರಿವಾಗಲಾರದು, ಆನಂದದ ಅನುಭಾವ ದಕ್ಕಲಾರದು. "ವಾವ್ ! ಸೋ ಬ್ಯೂಟಿಫುಲ್ ! ಎಷ್ಟು ಚೆನ್ನಾಗಿದೆ !" ಎಂಬ ಶುಷ್ಕ ಉದ್ಗಾರಗಳಷ್ಟೇ ನಮ್ಮಿಂದ ಹೊಮ್ಮೀತು.

ನಮ್ಮ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ತಮ್ಮ "ಮಲ್ಲಿಗೆ" ಎಂಬ ಕವನದಲ್ಲಿ, ಏಳು ಸುತ್ತಿನ ಮಲ್ಲಿಗೆಯೊಂದನ್ನು ನೋಡಿ, ಮುಗ್ಧ ಅಚ್ಚರಿಯಿಂದ ಪ್ರಾರಂಭಿಸ್ತಾರೆ, "ಇಷ್ಟು ಹಚ್ಚನೆ ಹಸುರ ಗಿಡದಿಂದೆಂತು ಮೂಡಿತೋ ಬೆಳ್ಳಗೆ !" ಅಲ್ಲಿ ಹೂವೊಂದನ್ನು ಹಿಡಿದು, ಅದನ್ನೆ ಧ್ಯಾನಿಸಿ, ಅಲೌಕಿಕ ಆನಂದವನ್ನು ಪಡೆದ ಬುದ್ಧ. ಇಲ್ಲಿ, ತಮ್ಮ ಕವನದಲ್ಲಿ ಆ ಸತ್ವಶೀಲನ ಧ್ಯಾನ ಮೌನವನ್ನೆ ಹೂವಲ್ಲಿ ಕಾಣುವ ಕವಿ. "ಸತ್ವಶೀಲನ ಧ್ಯಾನ ಮೌನವೆ ಅರಳಿ ಬಂದೊಲು ತೋರಿದೆ !" ಎನ್ನುತ್ತಾರೆ. ಏಳು ಸುತ್ತಿನ ಮಲ್ಲಿಗೆಯ ಚೆಲುವದು, ಕವಿಯ ಮನವನ್ನು ಸಂಪೂರ್ಣವಾಗಿ ಆವರಿಸಿ, ನಿರಂತರ ಹರಿವ ಯೋಚನಾಲಹರಿಯನ್ನು ನಿಶ್ಚಲಗೊಳಿಸಿದೆ. ಎಲ್ಲವನು ಮರೆಸಿ ತನ್ನಲ್ಲೆ ಲೀನವಾಗಿಸಿಕೊಂಡು ಆನಂದದ ರಸಾನುಭಾವವನ್ನು ತಂದುಕೊಟ್ಟಿದೆ. ಅಚ್ಚರಿಯಿಂದ ಪ್ರಾರಂಭವಾಗುವ ಕವಿತೆ ಅಚ್ಚರಿಯಿಂದಲೇ ಹೀಗೆ ಕೊನೆಗೊಳ್ಳುತ್ತದೆ, "ಹರಿವ ಮನವನು ಹಿಡಿದು ಒಂದೆಡೆ, ನಿಲಿಸಿ ತೊಳೆದಿದೆ ಹೂವಿದು, ಚೆಲುವು ಬಾಳನು ಹಸನುಗೊಳಿಸುವ ಅಚ್ಚರಿಯ ಪರಿ ಎಂಥದು." ತಮ್ಮ "ಎ ನ್ಯೂ ಅರ್ಥ್" ಎಂಬ ಪುಸ್ತಕದಲ್ಲಿ ಆಧ್ಯಾತ್ಮ ಗುರು ಎಕಾರ್ಟ್ ಟೋಲೆ, "ಹೂಗಳು ಲೌಕಿಕ, ಅಲೌಕಿಕಗಳ ನಡುವಿನ ಸೇತುವೆಯಾಗಿವೆ" ಎನ್ನುವ ಮಾತು ಎಷ್ಟು ಅರ್ಥಗರ್ಭಿತ.



# ಜಾಲತಾಣ ಜಾಣತನ

**ಅಣಕು ರಾಮನಾಥ್**

**ಬೆ**ರಳೆತ್ತ ಓಡುತಿದೆ; ಕೀ ಬೋರ್ಡ ಕಡೆಗೆ, ಕಣ್ಣೆತ್ತ ಸಾಗುತಿದೆ; ಸ್ಕ್ರೀನಿನ ಕಡೆಗೆ ಇದು ಇಂದಿನ ಕಾಲ; ಖುಷಿ ಮನಗಳ ಕಾಲ. ಆ ಕಾಲದಲ್ಲಿ ಮಕ್ಕಳನ್ನು ಮನೆಯ ಬೆಳಕು ಎನ್ನುತ್ತಿದ್ದರು. ಆದರೆ ಅದು ಈಗಲೇ ಅಂದಿಗಿಂತ ಪ್ರಸ್ತುತ. ಅವರಿರುವ ಕಡೆ ಟಿವಿ ಸ್ಕ್ರೀನ್, ಮೊಬೈಲ್ ಸ್ಕ್ರೀನ್, ಐಪಾಡ್ ಸ್ಕ್ರೀನ್ ಅಥವಾ ಇನ್ನಾವುದೋ ಪಾಡುಗಳ ಸ್ಕ್ರೀನ್ ಬೆಳಗುತ್ತಲೇ ಇರುವುದರಿಂದ ಮಕ್ಕಳು ಕೈನೆಟಿಕ್ ಟಾರ್ಚುಗಳು ಮತ್ತು ತತ್ಕಾರಣ ಮನೆಯ ಬೆಳಕು!

ಈ ಎಲ್ಲ ಬೆಳಕಿಗೆ ಹಿನ್ನೆಲೆಯೇ ಜಾಲತಾಣ. ಆಹಾ! ಇದನ್ನೆಂತು ಬಣ್ಣಿಪುದೋ!

ವೈಫೈ ವೇವು ಸೋಂಕಿದೊಡಂ; ಬಫರಿಂಗು ನಿಲ್ದೊಡಂ; ಸೊಂಪಿನ ಲೈಫೇ ಅಂಗುಲಿಯೆಡ್ಜೊಳು ನಿಲುವುಂತಾಡೊಂ; ಸ್ಪಿರಿಚುಯಾಲಿಟಿಯಿಂ ಹೈಫೈ ಸ್ಪಿರಿಟ್ ಇನ್ ಕೇಟಿನ ಲೈಫಿನ ತನಕದ ವಿಂಡೋ ಓಪನಾದೊಡಂ; ಗ್ಲೋ ರಿಫೈಯಿಸಲು ಸೆಲ್ಫಿನು ಸೈಟುಗೊಳಿರ್ದೊಡಂ ಆರ್ ಪಾಸ್ ವರ್ಡನೆ ನೀಡ್ದೊಡಂ ವೈಫೈಯನೇರುತಂ ನೆನೆವುದೆನ್ನ ಮನಂ ಇಂಟರ್ನೆಟ್ ಸೈಟ್ಗಳಂ ॥

ಎಂದು ಪಂಪನು ಇಂದೇನಾದರೂ ಇದ್ದಿದ್ದರೆ ಒರೆಯುತ್ತಿರ್ದನೆಂಬುದು ನಿಶ್ಚಿತ. "ವೈಫೇ ಇಲ್ಲದಿದ್ದರೂ ಆರಾಮದಿಂದಿರಬಲ್ಲೆ' ವೈಫೈ ಇಲ್ಲದಿರೆ ಕೈಕಾಲಾಡದು ಮರ್ಮಜ್ಞ" ಎಂದು ಇಂದಿನವರು ನುಡಿಯುವುದರಲ್ಲಿ ಅಚ್ಚರಿಯೇನಿಲ್ಲ.

ಆದೊಡೇಂ! "ಜಾಲಂ ಜಾಲಿ ಪಲ್ಲವಿ" ಎಂದು ಹಾಡುತ್ತಾ ಮೈಮರೆತು ಬ್ಲೂ ಕಲರ್ನಲ್ಲಿ ರಾರಾಜಿಸುವ ಲಿಂಕೊಂದನ್ನು ಒತ್ತಿಬಿಟ್ಟರೆ ಬ್ಯಾಂಕಿನ ಬ್ಯಾಲೆನ್ಸೆಲ್ಲ ನಮ್ಮಿಂದ ಇನಿತೇ ಕ್ಷಣಗಳಲ್ಲಿ ಡಿಲಿಂಕ್ ಆಗಿಬಿಡುತ್ತದೆ. ಅಂದೊಮ್ಮೆ ನಾನು ಕಾಯುತ್ತಿದ್ದ ಪಾರ್ಸಲ್ಲೊಂದು ನಾನಿರದ ಸಮಯವನ್ನಾರಿಸಿಕೊಂಡು ಆಗಮಿಸಿ ನಿರ್ಗಮಿಸಿತು. "ಬಾಗ್ಲಿಗ್ ಬಂದಿದ್ ಪೋಸ್ಟು ಬ್ಯಾಗಿಗ್ ಬರ್ಲಿಲ್ಲ" ಎಂದೆ. "ಅದ್ನ ಬ್ಯಾಗ್ ತೊಗೊಂಬಾ" ಎಂದು ಆದೇಶಿಸಿದ ಸೀನು.

"ನೈಟೋ; ನೈನ್ ಬಡ್ಡಿದೆ. ನಿಶಾಚರಗಳು ನೆಟ್ಟೇರೋ ಸಮಯ" ಎಂದೆ.

"ನಿಶಾ ಏನೋ ಸರಿ, ಚರ ಇಲ್ಲ ಕಣೋ; ನಿಶೋಪವಿಶರು ಅನ್ನು" ಎಂದು ತಿದ್ದಿದ ಸೀನು. ಉಪವಿಶ ಎಂದರೆ ಕುಳಿತುಕೊ ಎಂದರ್ಥ.

"ಒಂದು ವಿಧದಲ್ಲಿ ಈ ಗಣಕಿಗಳೂ ಗಣಪನ ತರಹವೇ. ಅವನು ಕುಳಿತಲ್ಲೇ ಮೂರು ಸುತ್ತು ಬಂದು ಪ್ರಪಂಚ ಸುತ್ತಿದೆ ಎಂದ. ಇವರು ಕುಳಿತೆಡೆಯೇ ವರ್ಚುಯಲ್ ಟೂರ್ ಮಾಡಿ ಪ್ರಪಂಚ ಸುತ್ತಿದೆ ಎನ್ನುತ್ತಾರೆ" ಎಂದ ಸೀನು, "ಆ ಪಾರ್ಸೆಲ್ ಬಾಬ್ತಿಗೆ ಕೊರಿಯರ್ ಕಂಪನಿಯ ಕಸ್ಟಮರ್ ಕೇರ್ಗೆ ಫೋನ್ ಮಾಡು" ಎಂದ.



ಹಾಗೆ ಫೋನ್ ಘುಮಾಯಿಸಿದಾಗ ಅದು "ಕಸ್ಟಮರ್ ಸ್ಕೇರ್ ಸೆಂಟರ್" ಎಂದು ತಿಳಿದಿರಲಿಲ್ಲ.

ಬೆಂಗಳೂರಿನಿಂದ ಬೆಂಗಳೂರಿನ ಕಷ್ಟ ಮರೆ ಸೆಂಟರ್ಗೆ ಫೋನ್ ಮಾಡಿದರೆ

ಫೋನ್ ರಿಸೀವಿಸುವವರು ಆಂಗ್ಲರೋ, ಹಿಂದಿಗರೋ, ತಮಿಳರೋ ಆಗಿರುತ್ತಾರೆಯೇ ವಿನಹ ಕನ್ನಡಿಗರು ದೊರಕರು. ಅತ್ತಲಿಂದ ಫೋನ್ ಎತ್ತಿದ ವ್ಯಕ್ತಿಯು "ಪಾರ್ಸಲ್ ಆಯಾ ಥಾ ಕ್ಯಾ?" ಎಂದ.

"ಎಸ್."

ಮಿಕ್ಕ ನನ್ನ ಅವನ "ಹಿಂದಿ–ಇಂಗ್ಲಿಷ್–ಕನ್ನಡ ಚೌಚೌ ಬಾತ್" ನ ಸೆಮಿಕನ್ನಡದ ಅವತರಣಿಕೆ ಇಂತಿದೆ:

"ಬಂದ್ಪಾರ್ಸಲ್ ಹೋಯ್ತು" ಎಂದಿತು ಹಿಂದಿ ಪ್ರಾಣಿ.

ಜಾನೆ ಕಹಾ ಮೇರಾ ಪಾರ್ಸಲ್ಲು ಗಯಾ ಜೀ

ಅಭೀ ಅಭೀ ಇಧರ್ ಥೀ ಕಿಧರ್ ಗಯಾ ಜೀ

ಎಂದು ಅವನನ್ನು ಕೇಳುವ ಸಾಹಸ ಮಾಡದೆ "ಹೋದದ್ದು ಬರುವುದು ಹೇಗೆ?" ಎಂದೆ.

"ಎನಿ ಡೆಸ್ಕ್ ರಿಮೋಟ್ ಅನ್ನುವ ಆಪನ್ನು ಡೌನ್ಲೋಡಿಸಿ" ಎಂದ.

ಇಳಿಜಾರಿನಲ್ಲಿ ಎಂತಹ ಲಡಕಾಸಿ ಸೈಕಲ್ಲೂ ಸ್ಪೀಡಾಗಿ ಹೋಗುತ್ತದೆ. ನನ್ನ ಮನಸ್ಸು ಆಗ ಲಡಕಾಸಿ ಸೈಕಲ್ಲಿನಂತೆಯೇ ಕಾರ್ಯವೆಸಗಿತು. ಮೊಬೈಲ್ ಸ್ಕ್ರೀನಿನ ವಿವಿಧ ಅಲಂಕಾರಗಳ ಮಧ್ಯೆ ಎನಿ ಡೆಸ್ಕ್ ರಿಮೋಟೂ ಕುಳಿತುಕೊಂಡಿತು.

"ಈಗ ಅದನ್ನು ಓಪನ್ ಮಾಡಿ."

ಅಲ್ಲೇ ಇದ್ದ ಮಗಳು, "ಲೇಡಿ ಮಾತಾಡ್ತಿರೋದೇನಪ್ಪ?" ಎಂದು ಕೇಳಿದಳು.

"ಅಲ್ಲ."

"ಹೆಂಗಸರ ಮಾತನ್ನ ನೀನು ಚಾಚೂ ತಪ್ಪದೆ ಕೇಳ್ತೀಯ ಅನ್ನೋದು ಗೊತ್ತಿರೋದೇ. ಇದೇನಿವತ್ತು ಗಂಡಸಿನ ಮಾತಿಗೂ ಬೆಲೆ?"

ಹೌದಲ್ಲವೇ ಎಂದು ಮೂಗಿನ ಮೇಲೆ ಬೆರಳಿರಿಸಿಕೊಂಡೆ. ಅಲ್ಲಿ ಆಗಷ್ಟೇ ಒಡೆದಿದ್ದ ದುರ್ಯೋಧನನ (ಮೂಗಿನ ತುದಿಯಲ್ಲಿ ಕುರು ಎದ್ದಿತ್ತು. ದೊಡ್ಡ ಕುರುವನ್ನು ನಾನು ದುರ್ಯೋಧನ ಎನ್ನುತ್ತೇನೆ. ಹಿರಿಯ ಕುರುವಂಶಜನಲ್ಲವೆ!) ಕೈಗೆ ಮೆತ್ತಿಕೊಂಡ. ಕೈ ತೊಳೆದುಕೊಳ್ಳಲು ಮೇಲೆದ್ದು ಮೊಬೈಲನ್ನು ಮಗಳ ಕೈಗಿತ್ತೆ.

"ತುಮ್ಹಾರ ನಾಮ್ ಕ್ಯಾ ಹೈ?"

ನಾಮ ಹಾಕುವುದಕ್ಕೆಂದೇ ಕುಳಿತಿರುವವನು ನಿಜ ನಾಮ ಹೇಳುತ್ತಾನೆಯೇ? ಏನೋ ಹೇಳಿದ.

"ಕೊರಿಯರ್ ಕಂಪನಿಯ ಅಡ್ರೆಸ್ ಹೇಳು" ಎಂದಳು ಮಗಳು.

"ಬೇಕಾದಷ್ಟಿವೆ."

"ನಮಗೆ ಯಾವ ಔಟ್ಲೆಟ್ಟಿಂದ ಬಂದಿತೋ ಅದರ ಅಡ್ರೆಸ್ ಹೇಳು."

ಹೇಳಿದ.

ಅದಾವುದೋ ದೂರದ ಏರಿಯಾದ ಅಡ್ರೆಸ್.



"ದೇವನೊಬ್ಬ ನಾಮ ಹಲವು ಅನ್ನೋಹಾಗೆ ಕೊರಿಯರ್ ಒಂದು ಅಡ್ರೆಸ್ ಹಲವು" ಎಂದು ಮಗಳಿಗೆ ಹೇಳಿದೆ.

"ಕಾಲ್ ಒಂದೇ, ಕಳ್ಳರು ಹಲವು" ದನಿಗೂಡಿಸಿದಳು ಮಗಳು.

ಅತ್ತಲಿಂದ ಹಿಂದಿಗ ಕ್ಯಾ ಹೋ ರಹಾಹೈಯಿಸಿದ.

"ಟೆಲ್ ಮಿ ವಾಟ್ ಟು ಡೂ" ಎಂದಳು ಮಗಳು.

"ಓಪನ್ ದ ಆಪ್" ಎಂದನವ.

"ಮಾಡಿದ್ದೇನೆ" ಎಂದಳು ಮಗಳು. ಸತ್ಯಹರಿಶ್ಚಂದ್ರನೇನಾದರೂ ಅಲ್ಲಿದ್ದಿದ್ದರೆ ಮಗಳ ಕಾರ್ಯ–ನುಡಿ ವಿಚ್ಛೇದವನ್ನು ಕಂಡು ಖುದ್ದುಪಿಷಿಗೆಂದು ಹಗ್ಗದಂಗಡಿಯ ಅಡ್ರೆಸ್ ಕೇಳುತ್ತಿದ್ದ.

"ನಿಮ್ಮ ಅಕೌಂಟಲ್ಲಿ ಬ್ಯಾಲೆನ್ಸ್ ಎಷ್ಟಿದೆ?" ಕೇಳಿದ ಹಿಂದಿಗ.

ನನ್ನ ಮಗಳ ಸುಭಾಷೆಯ, ಸುವಿನಯದ ಬ್ಯಾಲೆನ್ಸ್ ಪೂರ್ಣ ತಪ್ಪಿತು. ಅವಳ ನಿಂದಾನುಡಿಸಂಗ್ರಹಕ್ಕೆ ಬೆಕ್ಕಸಬೆರಗಾದೆ. ಆ ಕೆಲವು ನಿಮಿಷಗಳಲ್ಲಿ ಹಿಂದಿಗನಿಗೆ ಕನಿಷ್ಠ ಹತ್ತಾದರೂ ಹೊಸ ಬೈಗುಳಗಳ ಪರಿಚಯವಾಗಿದ್ದೀತು.

ಮಗಳು ಎನಿ ಟೈಮ್ ರಿಮೋಟನ್ನು ಡಿಲೀಟಿಸಿದಳು. ಹಿಂದಿಗ ತನ್ನ ಮಾತೃಭಾಷೆಯ ನೆರವು ಪಡೆದು ನಮ್ಮಿಬ್ಬರ ಜನ್ಮವನ್ನು ಜಾಲಾಡಿದ.

"ಅನ್ನಿದಾನಿಕು ಒಕ ರಾಗಮುಂದಿ, ಒಕ ತಾಳಮುಂದಿ ಅಂತ ಶಂಕರಾಭರಣದ ಶಂಕರಶಾಸ್ತ್ರಿ ಹೇಳಿದ್ದಾರಲ್ಲಪ್ಪ" ಎಂದಳು ಪುತ್ರಿ.

"ನಿಜ. ಅದಕ್ಕೂ ಇದಕ್ಕೂ..?"

"ಪ್ರತಿಯೊಂದಕ್ಕೂ ಒಂದೊಂದು ಪಾಸ್ವರ್ಡ್ ಇರತ್ತೆ. ಅದನ್ನ ಇನ್ನೊಬ್ಬರಿಗೆ ಕೊಟ್ಟರೆ ನೀನು ಫೇಲ್ ಆಗ್ತೀಯ!"

ನಾನು ಕುಳಿತಿದ್ದ ಬೆಂಚೇ ನನಗೆ ವೃಕ್ಷತಳವಾಯಿತು, ಮೇಲಿದ್ದ ಟ್ಯೂಬ್ಲೈಟೇ ಬೋಧಿವೃಕ್ಷವಾಯಿತು. ಮಗಳೇ ಗುರುವಾದಳು.

"ಇನ್ನುಮುಂದೆ ನಿನ್ನನ್ನು ಕಂಟ್ರೋಲ್ ಮಾಡುವ ಏಕೈಕ ರಿಮೋಟ್ ಅಂದರೆ ಅಮ್ಮ ಒಬ್ಬಳೇ. ಯಾವುದೂ ರಿಮೋಟ್ ಆಪ್ ಡೌನ್ಲೋಡ್ ಮಾಡಬಾರದು." ಕಿರಿಯಳ ಹಿರಿಯಾಜ್ಞೆಗೆ ಆಮೆನ್ ಅಂದೆ.

ಇದಾದ ನಂತರ ಅನೇಕ ಎಚ್ಚರಿಕೆಗಳನ್ನು ತೆಗೆದುಕೊಂಡೆ. ಬೀಚಿಯ ತಿಂಮ "ಮನಸ್ಸು ಏನನ್ನೂ ಕೇಳುವುದಿಲ್ಲ. ಆದರೆ ಏನನ್ನಾದರೂ ಕೊಟ್ಟರೆ ಅದನ್ನೇ ಮತ್ತೆ ಮತ್ತೆ ಕೇಳುತ್ತದೆ" ಎಂದಿದ್ದ. ಜಾಲತಾಣವೂ ಮನಸ್ಸಿನಂತೆಯೇ. ಅಂದೊಮ್ಮೆ ಸುಂದರಿಯೊಬ್ಬಳ ಸುಂದರ ಪೋಸೊಂದನ್ನು ಹಲವಾರು ಸೆಕೆಂಡುಗಳ ಕಾಲ ವೀಕ್ಷಿಸಿದೆ. ಮರುದಿನದಿಂದ "ಎಲ್ಲೆಲ್ಲಿ ನೋಡಲಿ; ಬ್ಯೂಟಿಗಳೇ ಕಾಣುವೆ; ಫೇಸ್ಬುಕ್ಕು, ಇನ್ಸ್ಟಾಗ್ರಾಮ್; ಎಕ್ಸಲು ಮನ ಕಾಡಿ ಆಡುವೆ" ಎಂಬ ಸ್ಥಿತಿ ಬಂದಿತು. ಅಂದೇ ಮನೆಗೆ ಒಕ್ಕರಿಸಿದ ಮಾವನವರು ಫೇಸ್ಬುಕ್ಕಿನಲ್ಲಿ ಇಣುಕಿ, ನನ್ನ ಮಡದಿಯನ್ನು ಕರೆದು, "ಅಳಿಯಂದಿರು ಕೊಂಚ ಹಾದಿ ತಪ್ಪುತ್ತಿದ್ದಾರೆ ನೋಡಮ್ಮ" ಎಂದು ಪಟಾಕಿಗೆ ಕಿಡಿ ಹಚ್ಚಿ ತೆರಳಿದರು.



ಅಂದಿನಿಂದ ಏನೇ ನೋಡಿದರೂ ಯಾರಾದರೂ ಮೊಬೈಲ್ಗೆ ಕೈ ಹಚ್ಚುವವರೋ, ಜಾಲತಾಣವನ್ನು ನನ್ನ ಪಕ್ಕದಲ್ಲೇ ಕುಳಿತು ನೋಡುವವರೋ ಬರುವ ಸೂಚನೆ ಕಂಡ ನಂತರದ ಎರಡು ಗಂಟೆಗಳು ವಿಷ್ಣು, ರಾಮ, ಕೃಷ್ಣರ ಚಿತ್ರಗಳನ್ನು ಪದೇ ಪದೇ ವೀಕ್ಷಿಸುತ್ತೇನೆ. ಬಂದವರು ಅವುಗಳನ್ನು ನೋಡಿ “ಎಂಥ ಸಾತ್ವಿಕ ಇವನು!” ಎಂದು ಕೊಂಡಾಡುತ್ತಾರೆ.

ಇತ್ತೀಚೆಗೆ ಸೀನು “ನೀನು ಫೇಸ್ಬುಕ್ ಮೊದಲಾದ ಜಾಲತಾಣಗಳ ವಿಷಯದಲ್ಲಿ ರಾಮನೋ, ಕೃಷ್ಣನೋ?” ಎಂದ.

“ಹಾಗೆಂದರೇನು?”

“ಏಕ ಪಾಸ್ವರ್ಡ್ ವ್ರತಸ್ಥನೋ, ವಿವಿಧ ಪಾಸ್ವರ್ಡ್ ವ್ರತಸ್ಥನೋ?”

“ನೆನಪಿನಲ್ಲಿ ಉಳಿಯಲು ಸುಲಭವಾಗುವುದರಿಂದ ರಾಮನೇ” ಎಂದೆ.

“ಕೆಟ್ಟೆ ನೀನು. ಜೀವನದಲ್ಲಿ ರಾಮನಾಗಿರು, ಜಾಲತಾಣದಲ್ಲಿ ಕೃಷ್ಣನಾಗಿರು. ನಿನ್ನ ಕಾಲೇಜ್ ಕಾಲದ ಹುಡುಗಿಯರು, ನಿನಗೆ ಇಷ್ಟವಾಗಿದ್ದ ಹೀರೋಯಿನ್ಗಳು, ನಿನಗೆ ನಿದ್ರೆ ಕೆಡಿಸಿದ ಸುಂದರಿಯರು ಇವರ ಹೆಸರುಗಳನ್ನು ನೀನು ಹೇಗೂ ಮರೆಯುವುದಿಲ್ಲ. ಕೃಷ್ಣನ ಮನದಲ್ಲಿನ ಹದಿನಾರು ಸಾವಿರ ಗೋಪಿಕಾ ಸ್ತ್ರೀಯರಂತೆ ಇವರುಗಳು ನಿನ್ನ ನೆನಪಿನಿಂದ ಜಾರದ ಕಾರಣ ಒಂದೊಂದಕ್ಕೆ ಒಬ್ಬೊಬ್ಬರ ಹೆಸರನ್ನು ಪಾಸ್ವರ್ಡ್ ಆಗಿಸಿಕೊ. ಹೆಂಡತಿಯೊಡನೆ ಷೇರ್ ಮಾಡಿಕೊಳ್ಳುವ ಜಾಲತಾಣಗಳಿಗೆ ಮಾತ್ರ ಸತಿಯದೋ, ಅವರಮ್ಮನದೋ, ನಿನ್ನ ಮಕ್ಕಳದೋ ಪಾಸ್ವರ್ಡ್ ಆಗಿಸು. ಇದುವೇ ಜಾಲತಾಣ ಜಾಣತನ” ಎಂದನವ.

ನೀವೇನಂತೀರಿ?



## ಪ್ರೊ. ಎಸ್.ಎಲ್ ಭೈರಪ್ಪ

ಕನ್ನಡ ಸಾಹಿತ್ಯಲೋಕದ ಹಿರಿಯರಾಗಿ, ಅನೇಕ ಉತ್ಕೃಷ್ಟ ಕಾದಂಬರಿಗಳ ಸೃಷ್ಟಿಕರ್ತರಾಗಿದ್ದ, ಪದ್ಮ ಭೂಷಣ, ಸರಸ್ವತಿ ಸಮ್ಮಾನ್ ಪುರಸ್ಕೃತ ಸಾಹಿತಿ, ನಮ್ಮೆಲ್ಲರ ಮೆಚ್ಚಿನ ಭೈರಪ್ಪನವರು ಇನ್ನಿಲ್ಲ. ಕನ್ನಡ ಸಾರಸ್ವತ ಲೋಕದ ಹಿರಿಮೆಯನ್ನು ಹೆಚ್ಚಿಸುವುದರಲ್ಲಿ ಅವರದ್ದು ಅವಿಸ್ಮರಣೀಯ ಕೊಡುಗೆ. ಅಪರಂಜಿ ಬಳಗದ ಎಲ್ಲರ ಪರವಾಗಿ ಅಗಲಿದ ಹಿರಿಯರಿಗೆ ಭಾವಪೂರ್ಣ ಶ್ರದ್ಧಾಂಜಲಿ.

# ಕರಭಾರಾಸುರ ಪ್ರಸಂಗ

**ವತ್ಸನ**

ತನ್ನ ಮೊಮ್ಮಗು ಸುಧೀರನ ಹುಟ್ಟಿದ ಹಬ್ಬದ ಪಾರ್ಟಿಗೆ ಇಬ್ಬರೂ ಬಂದು ಮಗೂಗೆ ಆಶೀರ್ವಾದ ಮಾಡಿ ಹೋಗಿ ಅಂತ ನಮ್ಮ ಪಕ್ಕದ ಫ್ಲಾಟಿನ ಶೀಲು ಆಂಟಿ ಬಹಳ ಬಲವಂತಮಾಡಿದ್ರು.. ಮೊದಲು ಶರಲೇಖ "ನನಗಾಗುಲ್ಲ. ನೀನೊಬ್ನೇ ಹೋಗಿ ಬಾ" ಅಂತ ತಪ್ಪಿಸಿಕೊಳ್ಳಲು ನೋಡಿದ್ದ.. "ಶೀಲು ಆಂಟಿ ನುಚ್ಚಿನುಂಡೆ ಮಾಡ್ದಾಗ್ಲೆಲ್ಲಾ ಒಂದು ಸ್ಟೈಯಿನ್‌ಲೆಸ್ ಸ್ಟೀಲ್ ಡಬ್ಬಿಲಿ ನಮಗೆ ಅದನ್ನ ಕಳಿಸ್ತಾರೆ ಅನ್ನೋದನ್ನ ಮರೀಬೇಡ. ವೃಥಾ ಅವರೊಂದಿಗೆ ಮನಸ್ತಾಪ ಯಾಕೆ ?" ಅಂತ ಅವನಿಗೆ ವಿವೇಕ ಹೇಳಿದ ಮೇಲೆ ಅವನೂ ನನ್ನ ಜೊತೆ ಬಂದ. ಬರೋದಕ್ಕೆ ಅಷ್ಟು ತಕರಾರು ಮಾಡಿದರೂ, ಪಾರ್ಟಿಲಿ ಮಾತ್ರ ಶರಲೇಖ ಸೂಪರ್ ಹಿಟ್. ಮಕ್ಕಳಿಗೆಲ್ಲಾ ಮ್ಯಾಜಿಕ್ ಟ್ರಿಕ್ ಗಳನ್ನ ತೋರಿಸೋದ್ರಿಂದ ಹಿಡಿದು, ಟೆನ್ನಿಸ್ ಬಾಲ್‌ನ ಬಚ್ಚಿಟ್ಟು, ಆಮೇಲೆ ಕ್ಲೂಗಳನ್ನ ಆಧರಿಸಿ ಅದನ್ನ ಹುಡುಕೋದನ್ನ ಹೇಳಿಕೊಡೋವರೆಗೂ ಚಿಣ್ಣರಿಗೆಲ್ಲಾ ಚೆನ್ನಾಗೇ ಮನರಂಜನೆ ಮಾಡ್ದ. ನಾವು ಪಾರ್ಟಿಲಿದ್ದಾಗಲೇ ಸರೋಜಮ್ಮ ಬಾಗಿಲ ಬಳಿ ಬಂದು ಶರಲೇಖನನ್ನ ಕರೆದರು. ನಿಮಗೆ ತಿಳಿದಿರೋ ಹಾಗೆ ಸರೋಜಮ್ಮ ನಮ್ಮ ಮನೆ ಅಡುಗೆಯಾಕೆ. ನಂಬಿಕಸ್ಥೆ. ಹಾಗಾಗಿ ದಿನಕ್ರಮೇಣ ಮನೆ ವಹಿವಾಟುಗಳನ್ನೆಲ್ಲಾ ಆಕೇನೇ ನೋಡಿಕೊಳ್ಳೋದು. ವಿಚಾರ ಏನೂ ಅಂತ ತಿಳಿಯೋಕ್ಕೆ ನಾನೂ ಬಾಗಿಲ ಬಳಿ ಹೋದೆ.

"ಯಾರೋ ನಿಮ್ಮನ್ನ ಹುಡೀಕ್ಕೊಂಡು ಬಂದಿದಾರೆ. ನೋಡುಕ್ಕೆ ನಾಟಕದೋರ ತರಹ ಕಾಣುತ್ತೆ. ಏನೋ ಅರ್ಜೆಂಟ್ ಇರಬೇಕು" ಅಂದರು ಸರೋಜಮ್ಮ.

"ಅರ್ಜೆಂಟ್ ಅಂತ ಹೇಗೆ ಹೇಳ್ತೀರಾ?" ಶರಲೇಖನಿಂದ ಇಂತಹ ಪಾಟೀಸವಾಲು ಸರೋಜಮ್ಮನವರಿಗೆ ಮಾಮೂಲು.

"ಯಾಕೇಂದ್ರೆ ಆತ ನಾಟಕದ ಡ್ರೆಸ್‌ನಲ್ಲೇ ಬಂದ್ಬಿಟ್ಟಿದ್ದಾರೆ. ಅರ್ಜೆಂಟ್ ಇಲ್ದೇ ಇದ್ರೆ ಬಟ್ಟೇನಾದ್ರೂ ಬದಲಾಯಿಸ್ಕೊಂಡು ಬಂದಿರೋರು."

"ಪರವಾಗಿಲ್ಲಾ ಸರೋಜಮ್ಮಾ, ನೀವು ಖಂಡಿತ ಒಳ್ಳೇ ಪತ್ತೇದಾರಿಣಿ ಆಗೋ ಲಕ್ಷಣ ತೋರಿಸ್ತಾ ಇದ್ದೀರ" ಎಂದ ಶರಲೇಖ. ಶೀಲಮ್ಮನವರ ಅಪ್ಪಣೆ ಪಡೆದು ನಾವಿಬ್ಬರೂ ನಮ್ಮ ಫ್ಲಾಟಿಗೆ ಹೋದೆವು.

ನಮ್ಮ ಗಿರಾಕಿ ಡೈನಿಂಗ್ ಹಾಲಿನಲ್ಲಿ ಸೋಫಾದ ಮೇಲೆ ಕುಳಿತಿದ್ದ...ಸರೋಜಮ್ಮ ನಿಜವನ್ನೇ ಹೇಳಿದ್ದರು. ಯಾವ್ದಾದರೂ ಪೌರಾಣಿಕ ನಾಟಕದಲ್ಲೋ ಸಿನಿಮಾದಲ್ಲೋ ಶ್ರೀಮನ್ಮಹಾವಿಷ್ಣುವಿನ ಪಾತ್ರಾನ ನೀವು ನೋಡಿರ್ಬಹುದಲ್ವೇ. ಹಳದಿ ಬಣ್ಣದ ಜರತಾರಿ ಅಂಚಿನ ಪಂಚೆ, ಅದೇ ಬಣ್ಣದ ಉತ್ತರೀಯ, ಮಿರಮಿರನೆ ಹೊಳೆಯುತ್ತಿರುವ ಕಿರೀಟ, ತೋಳಿಗೆ ಭುಜಕೀರ್ತಿ. ಕೈಯ್ಯಲ್ಲಿ ಸಿಗರೇಟ್‌ಬೆಳ್ಳಿಯ ವಜ್ರಾಯುಧ ಇವನ್ನೆಲ್ಲಾ ಧರಿಸಿದ್ದ ಆ ಆಸಾಮಿಯ ಮುಖ ಮಾತ್ರಾ ಶಾಂತವಾಗಿ ಮೆಲುನಗೆಯಿಂದ ಕೂಡಿತ್ತು. ಶರಲೇಖನಿಗೆ ಇದು ಹೊಸದು. ಈ ವಿಚಿತ್ರ ವೇಷ ಭೂಷಣದ ಬಗ್ಗೆ ನಾನು ಹೇಳ್ತಾ ಇಲ್ಲ. ಸಾಮಾನ್ಯವಾಗಿ ಶರಲೇಖನನ್ನ ನೋಡಲು ಬರೋ ಗಿರಾಕಿಗಳೆಲ್ಲಾ



ಆತಂಕದ ಮುಖ ಹೊತ್ಕೊಂಡು ಬಂದಿರ್ತಾರ್ಯೇ ಹೊರ್ತು ಈತನ ತರಹ ಶಾಂತ ಮುಖಮುದ್ರೆ, ಮೆಲುನಗೆ ಖಂಡಿತ ಹೊಂದಿರೋದಿಲ್ಲ. ಅವನ ನಗುಮುಖ ನೋಡಿ ಶರಲೇಖನಿಗೆ ಸ್ವಲ್ಪ ರೇಗಿತೇನೋ ಅನ್ನಿಸಿತು.

"ನಾನು ಶರಲೇಖ. ಖ್ಯಾತ ಪತ್ತೇದಾರ ಅಲ್ಲದಿದ್ದರೂ, ಜೀವನೋಪಾಯಕ್ಕಾಗಿ ಏನೋ ಒಂದಿಷ್ಟು ಕೆಲಸ ಹಚ್ಚಿಕೊಂಡಿದ್ದೇನೆ. ನಿಮಗೆ ಏನಾದರೂ ಸಮಸ್ಯೆಯಿದ್ದರೆ ಸಹಾಯ ನೀಡುವುದು ನನ್ನ ಕರ್ತವ್ಯ. ಆದರೆ ನಿಮ್ಮ ಮುಖಚರ್ಯೆ ನೋಡಿದರೆ ನಿಮಗೇನೂ ತೊಂದರೆ ಇರೋಹಾಗೆ ಕಾಣೋದಿಲ್ಲ. ತೊಂದರೆ ಇಲ್ದೇ ಇರೋರ ಹತ್ರ ಹರಟೋದಕ್ಕೆ, ಕ್ಷಮಿಸಿ, ನನಗೆ ವ್ಯವಧಾನ ಇಲ್ಲ." ಅಂತ ಸ್ವಲ್ಪ ಖಾರವಾಗಿಯೇ ಹೇಳಿದ.

ಬಂದ ಆಗಂತುಕ ಇದರಿಂದ ವಿಚಲಿತನಾಗಲಿಲ್ಲ. "ನೀವು ಖ್ಯಾತ ಪತ್ತೇದಾರರು ಎನ್ನುವುದು ಜಗತ್ತಿಗೇ ತಿಳಿದಿದೆ. ಸಮಸ್ಯೆ ಇರುವುದರಿಂದಲೇ ನಿಮ್ಮ ನೆರವನ್ನು ಬೇಡಿ ಬಂದಿದ್ದೇನೆ. ಸಮಸ್ಯೆಯನ್ನು ಬಾಯಲ್ಲಿ ಹೇಳಿದರೆ ಸಾಲದೇ. ಮುಖದಲ್ಲೂ ಅದನ್ನ ತೋರಿಸಬೇಕೇಕೆ?"

ಹೊಗಳಿಕೆ ಒಂದು ಬಲವಾದ ಅಸ್ತ್ರ. ಶರಲೇಖ ಪ್ರಸನ್ನನಾದ.

"ಅಯಿತು...ಮೊದಲಿಗೆ ನಿಮ್ಮ ಹೆಸರು.?"

"ಪುರಂದರ"

"ಇನಿಷಿಯಲ್ಸ್?"

"ಇನಿಷಿಯಲ್ಸ್? ಅರ್ಥವಾಗಲಿಲ್ಲ."

"ಹಾಗೆಂದರೆ ನಿಮ್ಮ ತಂದೆಯ ಹೆಸರಿನ ಮೊದಲಕ್ಷರ, ಅಥವಾ ನಿಮ್ಮ ಊರಿನ ಹೆಸರಿನ ಮೊದಲಕ್ಷರ"

"ಹಾಗಾದರೆ ಕೆ. ಅಂತ ಬರೆದುಕೊಳ್ಳಿ.. ನಮ್ಮ ತಂದೆ ಕಾಶ್ಯಪ ಮುನಿ"

ಶರಲೇಖ ನನ್ನ ಮುಖ ನೋಡಿದ. "ಇದು ನಿನ್ನ ಗಿರಾಕಿ ಇರಬಹುದೇ ?" ಎನ್ನುವಹಾಗಿತ್ತು ಅವನ ಪ್ರಶ್ನಾರ್ಥಕ ದೃಷ್ಟಿ.

ಪ್ರಶ್ನೆ ಮುಂದುವರಿಯಿತು

"ಊರು?"

"ಇಂದ್ರಲೋಕ"

"ಓಹೋ, ಇಂದ್ರಲೋಕ, ನಿಮ್ಮ ರಾಜ ದೇವೇಂದ್ರ ಕ್ಷೇಮವಾಗಿದ್ದಾರೆ ತಾನೆ?" ಪ್ರಶ್ನೆಯ ವ್ಯಂಗ್ಯ ಆಗಂತುಕನನ್ನು ತಾಗಿದಂತೆ ಕಾಣಲಿಲ್ಲ.

"ನಾನೇ ದೇವೇಂದ್ರ"



"ಮತ್ತೆ ಈಗತಾನೇ ಪುರಂದರ ಅಂತ ಹೇಳಿದ್ರಿ"

"ಇಂದ್ರ, ದೇವೇಂದ್ರ ಅನ್ನೋದೆಲ್ಲಾ ಆ ಅಧಿಕಾರದ ಹೆಸರು. ನೀವು ಮುಖ್ಯಮಂತ್ರಿ, ಪ್ರಧಾನಿ ಅನ್ನೋಲ್ಲವೇ, ಹಾಗೆ. ನನ್ನ ಹೆಸರು ಪುರಂದರ, ಕಾಶ್ಯಪ ಮುನಿ ನನ್ನ ತಂದೆ, ಅದಿತಿ ದೇವಿ ನನ್ನ ತಾಯಿ. ನನ್ನ ಪತ್ನಿ ಶಚೀದೇವಿ. ಈಗ

ನನ್ನ ಸಮಸ್ಯೆ ಬಗ್ಗೆ ಪ್ರಸ್ತಾಪಿಸಬಹುದೇ ?"

ನನಗೆ ಶರಲೇಖನ ಬಗ್ಗೆ ಯಾವಾಗಲೂ ಮೆಚ್ಚುಗೆ ಏಕೆಂದರೆ, ಆತ ಯಾವುದೇ ಪರಿಸ್ಥಿತಿಯಲ್ಲೂ ತನ್ನ ಫೋಕಸ್ ತಪ್ಪೋದಿಲ್ಲ. ಆಗಂತುಕನ ಈ ಮಾತುಗಳನ್ನು ಕೇಳಿ ಶರಲೇಖ ನೇರವಾಗಿ ಮುಂಬಾಗಿಲಿಗೆ ಹೋಗಿ ಬಾಗಿಲನ್ನು ಮುಚ್ಚಿ ಬೀಗ ಹಾಕಿದ. ಆಮೇಲೆ ಆಗಂತುಕನನ್ನು ಕುರಿತು,

"ನಿಮ್ಮ ಸಮಸ್ಯೆ ಬಗ್ಗೆ ನಾನು ಕೇಳಿಸಿಕೊಳ್ಳುವುದಕ್ಕೆ ಮುಂಚೆ ನೀವು ಯಾರು ಅನ್ನೋದು ನನಗೆ ಖಾತರಿ ಆಗಬೇಕು. ನೀವು ದೇವಲೋಕದಿಂದ ಬಂದ ದೇವತೆಯೇ ಆಗಿದ್ದರೆ ನೀವು ಕೂತಿರೋ ಸೋಫಾದಿಂದ ಅಂತರ್ಧಾನರಾಗಿ ಬಾಗಿಲಿನ ಹೊರಗೆ ಮತ್ತೆ ಪ್ರತ್ಯಕ್ಷರಾಗಿ ಕರೆಗಂಟೆ ಒತ್ತಿ. ಹಾಗೆ ಮಾಡಲು ನಿಮಗೆ ಸಾಧ್ಯವಾದರೆ ನನ್ನ ಕೈಲಾದಷ್ಟು ಮಟ್ಟಿಗೆ ನಿಮ್ಮ ನೆರವಿಗೆ ಬರುತ್ತೇನೆ. ಹಾಗಾಗದಿದ್ದರೆ, ನಿಮ್ಮನ್ನು ಯಾವುದಾದರೂ ಮನೋವೈದ್ಯರ................"

ಶರಲೇಖ ತನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆಯೇ ಆಗಂತುಕ ಮಾಯವಾಗಿದ್ದ. ಬಾಗಿಲ ಕರೆಗಂಟೆ ಮತ್ತೆ ಕಿಚುಗುಟ್ಟಿತು. ನಾನೇ ಹೋಗಿ ಬಾಗಿಲು ತೆಗೆದೆ. ಹೊರಗೆ ಇಂದ್ರದೇವ ನಿಂತಿದ್ದ. ಅವನ ಜೊತೆಯಲ್ಲಿ ಒಬ್ಬ ಸೆಕ್ಯೂರಿಟಿ ಗಾರ್ಡಿನಂತೆ ಕಾಣುತ್ತಿದ್ದ ಕರಾಳ ಮೀಸೆಯ ಧಡೂತಿ ವ್ಯಕ್ತಿ ಬೇರೆ!. ಇಬ್ಬರೂ ಒಳಕ್ಕೆ ಬಂದು ಕುಳಿತರು. ದೇವೇಂದ್ರನೇ ಪ್ರಾರಂಭಿಸಿದ.

"ನೋಡಿ ಶರಲೇಖ ಮತ್ತು ವತ್ಸನ ಅವರೇ, ನಾನು ಅಧಿಪತಿಯಾಗಿರುವ ದೇವಲೋಕದಂತೆ ಒಂದು ದಾನವಲೋಕವೂ ಇದೆ. ಇವರು ಆ ಲೋಕದ ಮುಖ್ಯಮಂತ್ರಿ. ಸುವರ್ಣಾಕ್ಷ ಇವರ ಹೆಸರು. ಇವರಿಗೆ ಒಂದು ದೊಡ್ಡ ಸಮಸ್ಯೆ ಉಂಟಾಗಿದೆ. ನೀವೇ ಇದನ್ನ ಪರಿಹರಿಸಬಲ್ಲಿರಿ ಎಂಬ ದೃಢ ವಿಶ್ವಾಸದಿಂದ ಇವರನ್ನು ಇಲ್ಲಿಗೆ ಕರೆತಂದಿದ್ದೇನೆ. ಇವರು ರಾಕ್ಷಸಕುಲದವರಾದ್ದರಿಂದ ಮಾತುಕತೆಯಲ್ಲಿ ನಯಗಾರಿಕೆ ಕಾಣಿಸದಿರಬಹುದು. ಆದರೆ ವ್ಯಕ್ತಿ ನಿಜಕ್ಕೂ ಅಪರಂಜಿ. ದಯವಿಟ್ಟು ಅವರ ಸಮಸ್ಯೆ ಪರಿಹರಿಸಿರೆಂದು ವಿನಂತಿಸುವೆ" ಎಂದು ಹೇಳಿ ಉತ್ತರಕ್ಕೂ ಕಾಯದೆ ದೇವೇಂದ್ರ ಅಂತರ್ಧಾನನಾದ.

"ಈ ದೇವಲೋಕದವರೇ ಹೀಗೆ! ನನಗೆ ನಯಗಾರಿಕೆ ಇಲ್ಲವಂತೆ. ಬಿರುಗಾಳಿಯಂತೆ ಭರ್ರನೆ ಬಂದು ನಿಮ್ಮ ಉತ್ತರಕ್ಕೂ ಕಾಯದೇ ಬಡಬಡನೆ ನಾಲ್ಕು ಮಾತನಾಡಿ ಓಡಿಹೋದ ಅವನಿಗೆ ಇದೆಯಲ್ಲವೇ ಬಹಳ ನಯಗಾರಿಕೆ !" ಎಂದಿತು ಆ ಧಡೂತಿ ವ್ಯಕ್ತಿ. ಬಂದವನೇ ಮಾತು ಮುಂದುವರಿಸಲೆಂದು ಶರಲೇಖ ಏನೂ ಪ್ರತಿಕ್ರಿಯಿಸದೇ ಸುಮ್ಮನಿದ್ದ. ಸುವರ್ಣಾಕ್ಷನೇ ಮುಂದುವರಿಸಿದ.

"ಕ್ಷಮಿಸಿ ಶರಲೇಖ ಅವರೇ, ದೇವದಾನವರ ಪರಸ್ಪರ ದ್ವೇಷ ಎಂದಿಗೂ ಇದ್ದದ್ದೇ. ಹಾಗಾಗಿ ಬದಲಾಗಿರುವ ಈ ಕಾಲದಲ್ಲೂ ಹಳೆಯ ಪ್ರವೃತ್ತಿಗಳು ಹೆಡೆಯೆತ್ತುತ್ತವೆ. ನನಗೆ ಒದಗಿರುವ ಕಷ್ಟಕ್ಕೆ ಸಹಾಯಹಸ್ತ ನೀಡಿದವನೇ ಈ ಪುರಂದರ. ಈಗ ನನ್ನ ಸಮಸ್ಯೆಯನ್ನು ನಿಮ್ಮ ಮುಂದಿಡಬಹುದೇ?" ಎಂದು ಸುವರ್ಣಾಕ್ಷ ಕೇಳಿದ.

ಶರಲೇಖ ತಲೆದೂಗಿ ಸಮ್ಮತಿ ಸೂಚಿಸಿದ ನಂತರ ಸುವರ್ಣಆಕ್ಷ ಪ್ರಾರಂಭಿಸಿದ.

"ಈಗ ನನ್ನ ಸಮಸ್ಯೆಯನ್ನು ನಿಮ್ಮ ಮುಂದಿಡುವೆ. ಬಹು ಬೇಗ ನಾವು



ಕಾರ್ಯೋನ್ಮುಖರಾಗದಿದ್ದರೆ ಸರ್ವನಾಶವಾಗುತ್ತದೆ. ನಮ್ಮ ದಾನವ ಲೋಕದಲ್ಲಿಯೂ ಸಹ ಭೂಲೋಕದಂತೆಯೇ ಸರ್ಕಾರ ಮಂತ್ರಿ ಮಂಡಲ ಎಲ್ಲವೂ ಇರುತ್ತವೆ. ಹಿಂದೆ ಲಂಕಾಧಿಪತಿಗಳಾಗಿದ್ದ ರಾವಣೇಶ್ವರರು ಈಗ ನಮ್ಮ ಅಧ್ಯಕ್ಷರು. ಅವರ ಮಂತ್ರಿಮಂಡಲವನ್ನು ನಾನು ನಿರ್ವಹಿಸುತ್ತಿದ್ದೇನೆ. ನಮ್ಮ ವಿತ್ತ ಮಂತ್ರಿ ನರಕಾಸುರ. ಪುರಾಣದ ನರಕಾಸುರನ ಮೊಮ್ಮಗ. ಬಹು ಪ್ರತಿಭಾವಂತ.ನಮ್ಮ ಲೋಕದ ಹಣಕಾಸಿನ ವ್ಯವಹಾರವನ್ನೆಲ್ಲಾ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದ. ಒಂದು ವರ್ಷದ ಹಿಂದೆ ಸರ್ಕಾರದ ಹಣವನ್ನೆಲ್ಲಾ ತನ್ನ ಖಾಸಗೀ ಖಾತೆಗೆ ವರ್ಗಾಯಿಸುವ ಪ್ರಕರಣದಲ್ಲಿ ಸಿಕ್ಕಿಬಿದ್ದ. ನಮ್ಮ ಅಧ್ಯಕ್ಷರು ಅವನನ್ನು ದೇವಲೋಕಕ್ಕೆ ಗಡೀಪಾರು ಮಾಡುವ ಆಜ್ಞೆ ಹೊರಡಿಸಿದರು....."

"ಒಂದ್ನಿಮಿಷ, ದೇವಲೋಕಕ್ಕೆ ಗಡೀಪಾರು ? ಅದೆಂತಹ ಶಿಕ್ಷೆ ?" ಶರಲೇಖ ಸುವರ್ಣಾಕ್ಷನನ್ನು ಪ್ರಶ್ನಿಸಿದ.

"ದೇವಲೋಕದಲ್ಲಿ ಬೃಹಸ್ಪತ್ಯಾಚಾರ್ಯರು, ದಾನವ ಪರಿವರ್ತನಾ ಗುರುಕುಲವೊಂದನ್ನು ಇಂಥವರಿಗಾಗಿಯೇ ಸ್ಥಾಪಿಸಿದ್ದಾರೆ. ಅಲ್ಲಿ ಬೆಳಗಿನಿಂದ ಸಂಜೆಯವರೆಗೂ ಯೋಗ, ಪ್ರಾಣಾಯಾಮ, ವೇದಗಳ ಪಠಣವೇ ಮೊದಲಾದ ಸಾತ್ವಿಕ ಸಾಧನೆಗಳನ್ನು ಬೋಧಿಸುವರು. ದಾನವ ಸಂಸ್ಕಾರದಲ್ಲಿ ಮುಳುಗಿದವರಿಗೆ ಈ ಗುರುಕುಲ ಅದೆಷ್ಟು ಹಿಂಸೆ ಎಂಬುದನ್ನು ನೀವೇ ಊಹಿಸಬಹುದು. ಆಜ್ಞೆ ಹೊರಡಿಸಿದ ತಕ್ಷಣ ನರಕಾಸುರ ಭೂಲೋಕಕ್ಕೆ ತಪ್ಪಿಸಿಕೊಂಡು ಬಂದುಬಿಟ್ಟಿದ್ದಾನೆ. ಅವನು ಪರಕಾಯ ಪ್ರವೇಶ ಪ್ರವೀಣ. ಇಲ್ಲಿ ಯಾವುದಾದರೊಂದು ಪ್ರಶಸ್ತ ದೇಹವನ್ನು ಹುಡುಕಿ ಅದನ್ನು ಪ್ರವೇಶಿಸಿ ಬಿಟ್ಟರೆ ಸಾಕು, ಭೂಲೋಕದಲ್ಲೆಲ್ಲಾ ರಾದ್ಧಾಂತವಾಗಿ ಬಿಟ್ಟೀತು. ಭೂಲೋಕದ ಯೋಗಕ್ಷೇಮವು ಇಂದ್ರದೇವನ ಜವಾಬುದಾರಿ. ಹಾಗಾಗಿ ಅವನ ಪರವಾಗಿ ನಾನು ಇಲ್ಲಿಗೆ ಬಂದಿರುವೆ. ನರಕಾಸುರನನ್ನು ಹುಡುಕಿ ಪುನಃ ನಾನು ಅವನನ್ನು ದಾನವಲೋಕಕ್ಕೆ ಹಿಂದಕ್ಕೆ ಕರೆದೊಯ್ಯಬೇಕು. ನಿಮ್ಮ ಲೋಕದ ಸಂಗತಿ ಏನೂ ತಿಳಿಯದ್ದರಿಂದ ನಿಮ್ಮ ಸಹಾಯ ನನಗೆ ಬೇಕಾಗಿದೆ. ನಮ್ಮ ನರಕಾಸುರನನ್ನು ಪತ್ತೆ ಹಚ್ಚಲು ನಿಮ್ಮಂತಹ ಖ್ಯಾತ ಪತ್ತೇದಾರರಿಗೆ ತಾನೇ ಸಾಧ್ಯ?"

ಶರಲೇಖ ಒಂದು ಕ್ಷಣ ಸುಮ್ಮನಿದ್ದು ಅನಂತರ ನಿಧಾನವಾಗಿ ಪ್ರಾರಂಭಿಸಿದ

"ಏಳುನೂರು ಕೋಟಿ ಭೂಲೋಕದ ಜನಸಂಖ್ಯೆಯಲ್ಲಿ ನಿಮ್ಮ ನರಕಾಸುರನನ್ನು ಹುಡುಕುವುದು ಹುಲ್ಲಿನ ಮೆದೆಯಲ್ಲಿ ಸೂಜಿಯನ್ನು ಹುಡುಕಿದಂತೆ. ಆದರೂ ನೀವು ಸ್ವಲ್ಪ ಮಾಹಿತಿಯನ್ನು ನೀಡಿದರೆ ಪ್ರಯತ್ನಿಸಬಹುದು. ಒಂದು ವರ್ಷದ ಹಿಂದೆ ಆತ ಇಲ್ಲಿಗೆ ಬಂದಿದ್ದರೆ ಈಗಾಗಲೇ ಇಲ್ಲಿರುವ ವ್ಯಕ್ತಿಯೊಬ್ಬನನ್ನು ಪ್ರವೇಶಿಸಿ ಅವನ ಮೂಲಕ ತನ್ನ ಇಚ್ಛೆಯನ್ನು ಪೂರ್ಣಗೊಳಿಸುವ ಯತ್ನವನ್ನು ಆತ ಮಾಡಿರಬಹುದು. ಹಾಗೆ ಮಾನವನೊಬ್ಬನ ಪರಕಾಯ ಪ್ರವೇಶ ಮಾಡಿದ್ದರೆ ಆ ಮಾನವನ ನಡವಳಿಕೆ, ಮಾತುಕತೆ ಇವೆಲ್ಲಾ ನಿಮ್ಮ ನರಕಾಸುರನನ್ನೇ ಹೋಲಬೇಕಾಗುತ್ತದೆ. ಆ ಬಗ್ಗೆ ಸ್ವಲ್ಪ ವಿವರ ನೀಡುವಿರಾ?"

"ನಮ್ಮ ರಾಕ್ಷಸ ಭಾಷೆಯಲ್ಲಿ ವಾಕ್ಯಗಳು ತೀರಾ ಚಿಕ್ಕವು. ಅವನ ವಾಕ್ಯಗಳಲ್ಲಿ ಮೂರಕ್ಕಿಂತ ಹೆಚ್ಚು ಪದಗಳಿರುವುದಿಲ್ಲ. ಸಹಜವಾಗಿ ರಾಕ್ಷಸನೆಂದಮೇಲೆ ಕೆಟ್ಟ ಮಾತುಗಳೇ ಜಾಸ್ತಿ. ಅವನ ಅಹಂಕಾರ ಯಾವಾಗಲೂ ಮಿತಿ ಮೀರಿರುತ್ತದೆ.

ಅವನಿಗೆ ತನ್ನನ್ನು ಬಿಟ್ಟರಿಲ್ಲ ಎಂಬ ಸೊಕ್ಕು. ಹೆಣ್ಣೆಂದರೆ ಅವನಿಗೆ ಎಲ್ಲಿಲ್ಲದ ಮೋಹ. ಅವನು ಏನೇ ಮಾತಾಡಲಿ,  ಪ್ರತಿಯೊಂದು ಮಾತಿಗೂ ಸಾವಿರ ಹೊಗಳು ಭಟ್ಟರು ಹುಟ್ಟಿಕೊಳ್ಳುತ್ತಾರೆ. ಅವನಿಗೆ ಭೂಲೋಕವನ್ನು ಆಳಬೇಕೆಂಬ ಮಹದಾಶೆ. ಆ ಗುರಿಯನ್ನು ಮುಟ್ಟಲು ಎಷ್ಟು ಬೇಕಾದರೂ ಸುಳ್ಳನ್ನು ಹೇಳಬಲ್ಲ. ಒಟ್ಟಿನಲ್ಲಿ ಅವನ ದೇಹ ಮನಸ್ಸುಗಳ ಕಣಕಣಗಳಿಂದಲೂ ರಾಕ್ಷಸೀ ಪ್ರವೃತ್ತಿ ಹೊರಹೊಮ್ಮುತ್ತಿರುತ್ತದೆ "

"ಮತ್ತಿನ್ನೇನಾದರೂ ಲಕ್ಷಣಗಳನ್ನು ಹೇಳಬಲ್ಲಿರಾ?"

"ಹ್ಞಾ, ಅವನು ವಿತ್ತ ಮಂತ್ರಿಯಾಗಿದ್ದಾಗ ನಮ್ಮ ಲೋಕಕ್ಕೆ ಆಮದಾಗುತ್ತಿದ್ದ ಸಕಲ ವಸ್ತುಗಳ ಮೇಲೂ ಮುಖ ಮೂತಿ ನೋಡದೆ ತೆರಿಗೆ ವಿಧಿಸಿ ಬಿಡುತ್ತಿದ್ದ. ಅವನಿಗೆ ಅದೊಂದು ವಿಚಿತ್ರಗೀಳಾಗಿಬಿಟ್ಟಿತ್ತು. ಅದರಿಂದಾಗಿ ನಮ್ಮ ಲೋಕದ ವ್ಯಾಪಾರಿಗಳೆಲ್ಲಾ ಬಹುವಾಗಿ ಸಂಕಟಕ್ಕೀಡಾಗಿದ್ದಾರೆ. ಗುಟ್ಟಾಗಿ ಅವನನ್ನು ಕರಭಾರಾಸುರ ಅಂತ ಗೇಲಿಮಾಡುವುದುಂಟು."

ಶರಲೇಖನಿಗೆ ಯಾವುದೋ ಸುಳಿವು ಸಿಕ್ಕಂತೆ ಕಂಡಿತು. ಅವನ ಮುಖದಲ್ಲಿ ಮಂದಹಾಸವೊಂದು ಹಾದುಹೋಯಿತು.

ಶರಲೇಖ ಮಾತನಾಡಲು ಪ್ರಾರಂಭಿಸಿದ. "ಇವೆಲ್ಲಾ ಬಹು ಉಪಯುಕ್ತ ಸುಳಿವುಗಳು. ಅವನು ನೋಡಲು ಹೇಗಿದ್ದಾನೆಂಬುದಕ್ಕೆ ಏನಾದರೂ ಪುರಾವೆಗಳಿವೆಯೇ? ನಮ್ಮ ಲೋಕದಲ್ಲಿರುವಂತೆ ಫೋಟೋಗಳು ನಿಮ್ಮ ಲೋಕದಲ್ಲಿರಲು ಸಾಧ್ಯವಿಲ್ಲವೆಂದು ನನ್ನ ಭಾವನೆ"

ಸುವರ್ಣಾಕ್ಷ ಉತ್ತರಿಸಲು ಶುರುಮಾಡಿದ." ನಿಮ್ಮ ಭಾವನೆ ಸರಿ. ಆದರೆ ನಮಗೆ ಮಾಯಾಶಕ್ತಿ ಇರುವುದು ನಿಮಗೆ ತಿಳಿದಿರಬಹುದು. ಹಾಗಾಗಿ ನಮ್ಮ ಗಿರಾಕಿ ಈಗ ಧರಿಸಿರುವ ದೇಹದ ಚಿತ್ರಣ ನನಗೆ ಕಾಣಿಸುತ್ತಿದೆ. ನನ್ನ ಮಾಯಾ ಶಕ್ತಿಯಿಂದ ನಾನು ಒಂದು ಕ್ಷಣದ ಮಟ್ಟಿಗೆ ಅದೇ ರೂಪವನ್ನು ಧರಿಸಬಲ್ಲೆ. ಆಗ ನಿಮಗೆ ಅವನ ಈಗಿನ ರೂಪದ ಪರಿಚಯವಾಗುತ್ತದೆ." ಎಂದು ಹೇಳಿ ಎದ್ದು ನಿಂತು, ಒಂದು ಕ್ಷಣ ಕಣ್ಣು ಮುಚ್ಚಿದ. ತಕ್ಷಣ ನಮ್ಮ ಕಣ್ಣಮುಂದೆ ಕೆಂಚುಕೂದಲಿನ ಬಹು ಪರಿಚಿತ ವ್ಯಕ್ತಿ ನಿಂತಿದ್ದ. ಫೋಟೋ ತೆಗೆಯುವ ಅಗತ್ಯವೇ ಇರಲಿಲ್ಲ. ಸುವರ್ಣಾಕ್ಷ ಪುನಃ ತನ್ನ ಮೂಲರೂಪಕ್ಕೆ ಬಂದಾಗ ಶರಲೇಖ ಹೇಳಿದ.

"ನಿಮ್ಮ ಕರಭಾರಿ ಎಲ್ಲಿದ್ದಾನೆ, ಹೇಗಿದ್ದಾನೆ ಎಲ್ಲವೂ ನನಗೆ ತಿಳಿದಿದೆ. ಆದರೆ ಆ ಜಾಗ ಇಲ್ಲಿಂದ ಸಾವಿರಾರು ಮೈಲಿಗಳು. ಅಲ್ಲಿಗೆ ಹೋಗುವ ಬಗೆ ಹೇಗೆ? ಹೋದರೂ ಅವನನ್ನು ಭೇಟಿಮಾಡುವುದು ಅಸಾಧ್ಯ. ಅವನ ರಕ್ಷಣೆಗೆ ಸರ್ಪಕಾವಲು ಇರುತ್ತದೆ"

ಸುವರ್ಣಾಕ್ಷ ಮೆಲುನಗೆ ನಕ್ಕ.

"ದಾನವರಾದ ನಾವು ಮಾಯಾವಿಗಳು ಶರಲೇಖ ಅವರೇ. ನಮ್ಮ ವಂಶದ ಮೂಲಪುರುಷನಾದ ಬಾಹುಬಲಿಯ ಉಚ್ಛೈಶ್ರವಸ್ ಎಂಬ ಮಾಯಾ ಕುದುರೆ ಈಗ ನಮ್ಮ ಅಧ್ಯಕ್ಷರದ್ದು. ನಾನು ಇಲ್ಲಿಗೆ ಅದರ ಸವಾರಿಯಲ್ಲೇ ಬಂದದ್ದು. ನಮ್ಮೆಲ್ಲರನ್ನೂ ಕರೆದುಕೊಂಡು ಅದು ಕ್ಷಣಾರ್ಧದಲ್ಲಿ ಭೂಲೋಕದ ಯಾವ ಮೂಲೆಗಾದರೂ ತೆರಳಬಲ್ಲುದು. ಅಲ್ಲಿ ಹೋದನಂತರ ನೀವು ಅವನಿರುವ  ಜಾಗ



ತೋರಿದರೆ ಸಾಕು. ನಮ್ಮ ನರಕಾಸುರನನ್ನು ನಮ್ಮ ಲೋಕಕ್ಕೆ ಕರೆದೊಯ್ಯುವ ವಿಧಾನ ನಾನು ಬಲ್ಲೆ. ನೀವುಗಳು ಸಿದ್ಧರಾಗಿದ್ದರೆ ಈಗಲೇ ಹೊರಡಬಹುದು" ಎಂದ ಸುವರ್ಣಾಕ್ಷ.

ಫ್ಲಾಟಿನಿಂದ ನಾವು ಮೂವರೂ ಹೊರಕ್ಕೆ ಬಂದು ರಸ್ತೆಯ ಬದಿಯಲ್ಲಿ ನಿಂತೆವು. ರಸ್ತೆಯ ಬದಿಯಲ್ಲಿ ನಿಂತಿದ್ದ ಆಟೋರಿಕ್ಷಾದ ಪಕ್ಕದ ಮೈದಾನದಲ್ಲಿ ಒಂದು ಬಿಳಿಯ ಕುದುರೆಯೊಂದು ದಾರಿಬದಿಯ ಹುಲ್ಲನ್ನು ಮೆಲ್ಲುತ್ತಾ ನಿಂತಿತ್ತು. ದಾರಿಯಲ್ಲಿ ಜನಗಳೆಲ್ಲಾ ಓಡಾಡುತ್ತಿದ್ದರು. ನನ್ನ ಜೀವನದಲ್ಲೇ ಕುದುರೆ ಏರಿಲ್ಲದ ನಾನು ಈಗ ಎಲ್ಲರ ಮುಂದೆ ಹೀಗೆ....... ಎಂದು ಚಿಂತಿಸುತ್ತಿರುವಾಗಲೇ .ಸುವರ್ಣಾಕ್ಷ ನನ್ನ ಮನಸ್ಸನ್ನು ಓದಿದನೆಂದು ಕಾಣುತ್ತದೆ. ತಕ್ಷಣ ಒಂದು ದಟ್ಟವಾದ ಮಂಜು ನಮ್ಮೆಲ್ಲರನ್ನೂ ಮಸಗಿತು. ಯಾರೋ ನನ್ನ ಸೊಂಟಕ್ಕೆ ಕೈಹಾಕಿ ಅನಾಮತ್ತಾಗಿ ನನ್ನನ್ನು ಎತ್ತಿ ಕುದುರೆಯ ಮೇಲೆ ಕೂರಿಸಿದರು, ನನ್ನ ಹಿಂದೆ ಶರಲೇಖ ಕೂತಿದ್ದ ಮುಂದೆ ಸುವರ್ಣಾಕ್ಷ. ಇಂತಹ ಸ್ಟ್ರೆಸ್‌ಫುಲ್ ಕ್ಷಣಗಳಲ್ಲಿ ಗಾಯತ್ರಿ ಮಂತ್ರ ಹೇಳುವುದು ನನ್ನ ವಾಡಿಕೆ. ತಕ್ಷಣ ಸುವರ್ಣಾಕ್ಷನ ಮೊಳಕೈ ನನ್ನನ್ನು ತಿವಿಯಿತು. "ಆ ದೇವತೆಗಳ ಮಂತ್ರವನ್ನು ಮಾತ್ರ ಹೇಳಬೇಡಿ. ಈ ದಾನವ ಕುದುರೆಗೆ ಅದು ಆಗದು " ಎಂದ ಸುವರ್ಣಾಕ್ಷ. ಮುಂದಿನ ಕ್ಷಣದಲ್ಲಿ ನಾವು ಮನ್ಹಟ್ಟನ್ನಿನ ಟವರಿನ ಮೇಲಿನ ಹೆಲಿಪ್ಯಾಡಿನಲ್ಲಿ ಇಳಿದಿದ್ದೆವು.



ಮಾಯಾವಿಗಳು ಎಂದರೆ ಏನು ಎಂಬುದು ಆ ಕ್ಷಣಗಳಲ್ಲಿ ಬಹು ಸ್ಪಷ್ಟವಾಗಿ ತಿಳಿಯಿತು. ಸುವರ್ಣಾಕ್ಷನಿಗೆ ಅವನ ವಿತ್ತಮಂತ್ರಿಯ ಸುಳಿವು ಬೇಕಾಗಿತ್ತು ಅಷ್ಟೇ. ಈಗ ನಾವು ಅವನು ಹೇಳಿದ ಹಾಗೆ ಕೇಳಬೇಕಾಯಿತು. ಮುಂದಿನ ಕಾರ್ಯಕ್ರಮವನ್ನು ಅವನೇ ನಮಗೆ ತಿಳಿಯಹೇಳಿದ.

"ನಮ್ಮ ಕರಭಾರಿ ಮಾನವರೂಪವನ್ನು ತಳೆದಿರವುರಿಂದ ಅವನಿಗೆ ತನ್ನ ಪೂರ್ವಜನ್ಮದ ಸ್ಮರಣೆ ಇರದು. ಇಲ್ಲಿನ ಮಾಯೆ ಹರಿದು ಅಲ್ಲಿನ ಮಾಯೆ ಮೂಡಬೇಕಾದರೆ ಅವನ ಮುಂದಲೆಯ ಸ್ವಲ್ಪ ಕೂದಲನ್ನು ಕತ್ತರಿಸಿದರೆ ಮಾತ್ರ ಸಾಧ್ಯ ಎಂದು ನಾನು ಹೊರಡುವ ಮುಂಚೆ ಶುಕ್ರಾಚಾರ್ಯರು ಅಪ್ಪಣೆ ಕೊಡಿಸಿದ್ದರು. ಇನ್ನು ಮುಂದಿನ ಕಾರ್ಯಕ್ರಮವನ್ನೆಲ್ಲಾ ನನಗೆ ಬಿಡಿ. ಈಗ ಮತ್ತೆ ಕುದುರೆಯ ಮೇಲೆ ಕೂಡೋಣ." ಎಂದು ಸುವರ್ಣಾಕ್ಷ ಹೇಳಿದ ನಂತರ ನಾವು ಕುದುರೆ ಏರಿದೆವು.

ಧವಳ ಭವನದ ಗುಲಾಬಿ ತೋಟದಲ್ಲಿ ಕುದುರೆ ಇಳಿಯಿತು. ಸುವರ್ಣಾಕ್ಷನ ಹಿಂದೆ ನಡೆಯುತ್ತಾ ಭವನದ ಒಳಹೊಕ್ಕೆವು. ಅವನ ಮಾಯೆಯ ಬಲದಿಂದ ನೇರವಾಗಿ ಓವೆಲ್ ಕಛೇರಿ ಸೇರುವುದು ಸಾಧ್ಯವಾಯಿತು. ಕರಭಾರಾಸುರ ತನ್ನ ಮಾನವಾವತಾರದಲ್ಲಿ ದರ್ಪದಿಂದ ಕುಳಿತಿದ್ದ. ಕ್ಷಣಾರ್ಧದಲ್ಲಿ ಸುವರ್ಣಾಕ್ಷ ತನ್ನ ಜೇಬಿನಿಂದ ಪುಟ್ಟ ಕತ್ತರಿಯೊಂದನ್ನು ತೆಗೆದು ಕರಭಾರಿಯ ಕೆಂಚು ಮುಂದಲೆಯನ್ನು "ಕಚಕ್" ಎಂದು ಕತ್ತರಿಸಿಬಿಟ್ಟ. ಮಾಯೆ ಹರಿಯಿತು. ಕರಭಾರಾಸುರ ಹಾಗೂ ಸುವರ್ಣಾಕ್ಷ ಪರಸ್ಪರ ಗುರುತು ಹಿಡಿದರು. ಇಬ್ಬರೂ ರಾಕ್ಷಸ ಭಾಷೆಯಲ್ಲಿ ಏನೇನೋ ಮಾತನಾಡಲು ಪ್ರಾರಂಭಿಸಿದರು. ನಮಗೆ ಏನೇನೂ ಅರ್ಥವಾಗದಿದ್ದರೂ ಅವರಿಬ್ಬರ ಬಾಡಿ ಲಾಂಗ್ವೇಜ್ ನೋಡಿದಾಗ ಕರಭಾರಾಸುರನೇ ಮೇಲುಗೈ ಪಡೆದಂತಿತ್ತು. ಹತ್ತು ನಿಮಿಷಗಳ ಮಾತುಕತೆಯ ನಂತರ ಇಬ್ಬರ ಮುಖಗಳಲ್ಲೂ ಸಂತಸದ ಮೆಲುನಗೆ ಕಂಡುಬಂತು. ಅನಂತರ ಕರಭಾರಿ ನಮ್ಮ ಕಡೆ ತಿರುಗಿದ.

"ಧವಳ ಭವನಕ್ಕೆ ಸುಸ್ವಾಗತ. ನನ್ನ ಹಳೆಯ ಗೆಳೆಯನನ್ನು ಇಲ್ಲಿಗೆ ಕರೆತಂದದ್ದಕ್ಕೆ ನಾನು ನಿಮಗೆ ಆಭಾರಿ. ನೀವೆಲ್ಲಾ ಪಕ್ಕದ ಕೋಣೆಯಲ್ಲಿ ವಿಶ್ರಾಂತಿ ತೆಗೆದುಕೊಂಡು ನಿಮ್ಮ ಊರಿಗೆ ಹಿಂತಿರುಗಬಹುದು. ನಿಮ್ಮ ಪ್ರಧಾನಿಗೆ ನನ್ನ ಭ್ರಾತೃಪ್ರೇಮ ಸಂದೇಶವನ್ನು ದಯವಿಟ್ಟು ತಲುಪಿಸಿ" ಎಂದು ಹೇಳಿ ಆತ ನಮ್ಮನ್ನು ಬೀಳ್ಕೊಟ್ಟ.

ಪಕ್ಕದ ಕೋಣೆಗೆ ಹೋದಾಗ ಸುವರ್ಣಾಕ್ಷ ನಮ್ಮನ್ನು ಕುರಿತು, "ನಿಮ್ಮಿಬ್ಬರಿಗೆ ತೊಂದರೆ ಕೊಟ್ಟದ್ದಕ್ಕೆ ನನ್ನ ಕ್ಷಮಾಪಣೆಗಳು. ಕರಭಾರಾಸುರನನ್ನು ಹಿಡಿದು ಇಲ್ಲಿಂದ ದಾನವ ಲೋಕಕ್ಕೆ ಕರೆದುಕೊಂಡು ಹೋಗುವ ಉದ್ದೇಶದಿಂದ ಇಲ್ಲಿಗೆ ಬಂದದ್ದು ನಿಜ. ಆದರೆ ಇಲ್ಲಿನ ವೈಭವ, ಅವಕಾಶಗಳನ್ನು ಅವನ ಬಾಯಿಂದ ಕೇಳಿದ ಮೇಲೆ, ದೇವ ದಾವನ ಲೋಕಗಳು ಇದಕ್ಕೆ ಸಾಟಿಯೇ ಇಲ್ಲ ಎಂದು ಮನವರಿಕೆಯಾಯಿತು. ನಾನು ಈ ಭೂಲೋಕದಲ್ಲೇ ನೆಲಸಲು ನಿರ್ಧರಿಸಿರುವೆ. ನೀವುಗಳು ಆ ಗುಲಾಬಿ ತೋಟದಲ್ಲಿ ಕಾಯುತ್ತಿರುವ ಉಚ್ಚೈಶ್ರವಸ್ ಮೇಲೆ ಕುಳಿತು ಬೆಂಗಳೂರಿಗೆ ಹಿಂತಿರುಗಬಹುದು. ಶುಭ ಪ್ರಯಾಣ" ಎಂದು ಆತ ನಮ್ಮನ್ನು ಬೀಳ್ಕೊಟ್ಟ. ಅಷ್ಟು ಹೊತ್ತಿಗೆ ಸರಿಯಾಗಿ, ಒಬ್ಬ ಚೆಂದುಳ್ಳಿ ಚೆಲುವೆ ಒಳಗೆ ಪ್ರವೇಶಿಸಿ ಮೆಲುನಗೆ ಬೀರುತ್ತಾ ಸುವರ್ಣಾಕ್ಷನನ್ನು ಕರೆದೊಯ್ದಳು.

ಗುಲಾಬಿ ತೋಟಕ್ಕೆ ನಡೆದು ಹೋಗುತ್ತಿದ್ದಾಗ, ನಾನು ಶರಲೇಖನನ್ನು ಕುರಿತು, "ಏನಂತೀ ಶರಲೇಖ ?" ಎಂದು ಪ್ರಶ್ನಿಸಿದೆ.

"ಬಂದ ದಾರಿಗೆ ಸುಂಕವಿಲ್ಲ ಅಂದ ಶರಲೇಖ"

**ಮಹಿಳಾ ಮಣಿ ಉವಾಚ**

ಕೆಟ್ಟ ಗಂಡ, ಒಳ್ಳೆ ಗಂಡ ಅಂತ ಇರೋಲ್ಲ, ಸಿಕ್ಕಿದ್ದನ್ನೇ ಹೊಡೆದೂ ಬಡಿದೂ ನಾವೇ ಸರಿಮಾಡ್ಕೊಬೇಕು



# ಸೋಮು ಆಫೀಸ್ ನಾಟಕ

**ಬೇಲೂರು ರಾಮಮೂರ್ತಿ**

**ಆ**ಫೀಸಿನ ದಿನಾಚರಣೆ ಇಷ್ಟು ವರ್ಷ ಹಾಗೋ ಹೀಗೋ ಕಳೆದುಹೋಗುತ್ತಿತ್ತು. ಹಿಂದೆ ಇದ್ದ ಬಾಸ್‌ಗೆ ಕಲೆ, ಸಾಹಿತ್ಯ, ಸಂಸ್ಕೃತಿ ಇವುಗಳ ಬಗೆಗೆ ಅಷ್ಟು ಆಸಕ್ತಿ ಇರಲಿಲ್ಲ. ಆದರೆ ಅವರು ಹೋಗಿ ಶ್ರೀರಾಮ್ ಬಾಸ್ ಆಗಿ ಬಂದ ಮೇಲೆ ಆಫೀಸಿನ ಕಳೆಯೇ ಬದಲಾಯಿತು. ಆಫೀಸಿನ ಒಳಗೆ ಬರುವಾಗಲೇ ಅಲ್ಲೊಂದು ಬೋರ್ಡು, ಅದರಲ್ಲಿ ದಿನಕ್ಕೊಂದು ಸುಭಾಷಿತ. ಅವತ್ತಿನ ವಿಶೇಷ ಇರುತ್ತಿತ್ತು. ಅದನ್ನು ಓದಿಕೊಂಡೇ ಒಳಗೆ ಬರಬೇಕು. ಇಲ್ಲದಿದ್ದರೆ ಯಾವುದೋ ಕೆಲಸದ ನಡುವೆ ಶ್ರೀರಾಮ್ ರೀ ಇವತ್ತಿನ ಸುಭಾಷಿತ ಏನು ಹೇಳಿ ಅನ್ನೋರು. ಬೆ ಬ್ಬೆ ಬ್ಬೆ ಅಂದ್ರೆ ಹೋಗಿ ಓದ್ಕೊಂಡು ಬನ್ನಿ ಅಂತಿದ್ದರು. ಅಲ್ಲಿಂದ ಮುಂದೆ ಎಲ್ಲಾ ಸಹೋದ್ಯೋಗಿಗಳೂ ದಿನಕ್ಕೊಂದು ಸುಭಾಷಿತ ಬರೆದುಕೊಂಡು ಬರಬೇಕು ಅಂದರು. ಅದು ಬಹಳ ಚನ್ನಾಗಿ ನಡೆಯುತ್ತಿದೆ. ಈ ಸುಭಾಷಿತಗಳನ್ನು ನೀಟಾಗಿ ಜೋಡಿಸಿ ಹಿಂದಿನ ದಿನ ಮನೆಗೆ ಹೋಗುವ ಮೊದಲು, ಆಫೀಸಿನ ಬಾಗಿಲು ಹಾಕುವ ಮೊದಲು ನಾಳಿನ ಸುಭಾಷಿತವನ್ನು ಸೋಮುನೇ ಬರೆದು ಹೋಗಬೇಕು. ಇದು ಅವನ ನಿತ್ಯದ ಕೆಲಸ. ಆದರೆ ಇದರಲ್ಲಿ ತಾಪತ್ರಯ ಏನಪ್ಪಾ ಅಂದರೆ ಒಂದು ವೇಳೆ ಬಾಸ್ ಮೀಟಿಂಗಿನಲ್ಲಿದ್ದರೆ ಅವರು ಮನೆಗೆ ಹೋಗುವವರೆಗೂ ಕಾಯಬೇಕು. ಒಂದು ದಿನ ಯಾರು ಹೀಗೆ ಕಾಯುತ್ತಾರೆ ಅಂತ ಸುಭಾಷಿತ ಬರೆದು ಬೋರ್ಡನ್ನು ಬಾಗಿಲಿನ ಬಳಿ ಇಟ್ಟು ಹೋಗುತ್ತಿದ್ದ.

ಇದರ ಜೊತೆಗೆ ಪ್ರತಿ ಶುಕ್ರವಾರ ಸಂಜೆ ಆಫೀಸಿನಲ್ಲಿ ಪೂಜೆ ಆಗಬೇಕು. ತೆಂಗಿನ ಕಾಯಿ ಬಾಳೆ ಹಣ್ಣು, ಸಿಹಿ, ಪುರಿ ಇವುಗಳೆಲ್ಲಾ ಒಂದೊಂದು ವಾರ ಒಬ್ಬೊಬ್ಬರದು ಖರ್ಚು. ಒಂದು ದಿನ ಪೂಜೆ ಆದ ನಂತರ ಬಾಸ್ ರಾಗಿಣಿ ಕಡೆ ತಿರುಗಿ ರೀ ರಾಗಿಣಿ ಒಂದು ಹಾಡು ಹೇಳ್ರೀ ಅಂದ್ರು. ತಕ್ಷಣ ಸೋಮು ರಾಗಿಣಿ ಅವರಿಗೆ ಹಾಡು ಹೇಳೋಕೆ ಬರಲ್ಲ ಸರ್ ಅಂದುಬಿಟ್ಟ. ಬಾಸ್ ಸೋಮುಗೆ ರೀ ನೀವು ರಾಗಿಣಿನೇನ್ರೀ. ದಿನಕ್ಕೆ ನೂರು ಸಲ ಅವರ ಕಡೆನೇ ನೋಡ್ತಿರೋ ಗಿಣಿ ಎನ್ನೋದು ನನಗೆ ಗೊತ್ತು ಅಂದಾಗ ಎಲ್ಲರೂ ನಕ್ಕರೆ ರಾಗಿಣಿ ನಾಚಿದಳು. ನಂತರ ಅವಳೇ ಸರ್ ನಿಜವಾಗಿಯೂ ನನಗೆ ಹಾಡು ಹೇಳೋಕೆ ಬರಲ್ಲ ಸರ್ ಅಂದಳು. ನಂತರ ಬಾಸ್ ರೀ ಹೆಣ್ಣು ಮಕ್ಕಳು ಅಂದ್ರೆ ಹಾಡು ಹೇಳಬೇಕು, ರಂಗೋಲಿ ಇಡಬೇಕು, ರುಚಿರುಚಿಯಾಗಿ ಅಡುಗೆ ಮಾಡಬೇಕು, ಮನೆಯನ್ನು ಚೊಕ್ಕಟವಾಗಿಟ್ಟುಕೊಂಡಿರಬೇಕು, ಅದೇ ನಮ್ಮ ಸಂಸ್ಕೃತಿ ಕಣ್ರೀ. ಆದಷ್ಟು ಬೇಗ ಹಾಡೋದನ್ನು ಕಲಿತುಕೊಳ್ಳಿ ಅಂದಿದ್ದರು.

ಒಂದು ದಿನ ಸೋಮು ಜೊತೆ ಕೆಲವು ಪ್ರಾಜೆಕ್ಟ್ ಚರ್ಚೆ ಆದ ಮೇಲೆ ಬಾಸ್ ಇನ್ನೇನ್ರೀ ಸೋಮು ಸಮಾಚಾರ ಅಂತ ಕೇಳಿದರು. ಸೋಮು ಅದೇ ಸರ್ ಮುಂದಿನ ತಿಂಗಳು ಎಲ್ಲರಿಗೂ ಬೋನಸ್ ಕೊಡಬೇಕು. ಅದರ ಸ್ಟೇಟ್‌ಮೆಂಟ್ ಆಗಲೇ ನಿಮಗೆ ಕೊಟ್ಟಿದ್ದೀನಿ ಅಂದ. ಅದು ನನಗೆ ಗೊತ್ತು ಕಣ್ರೀ ಮುಂದಿನ ತಿಂಗಳಿಗೆ ನಮ್ಮ ಕಂಪನಿಗೆ ಮೂವತ್ತು ವರ್ಷ ಆಗುತ್ತೆ, ಈ ಕಛೇರಿಗೆ ಹತ್ತು ವರ್ಷ ಆಗುತ್ತೆ. ಅದರ ನೆನಪಿಗೆ ಏನಾದರೂ ಮಾಡಬೇಕಲ್ರೀ ಅಂದರು. ಸರ್. ನಮ್ಮ



ಕಛೇರೀಲೇ ಒಂದು ಸಣ್ಣ ಸಮಾರಂಭ ಮಾಡೋಣ ಸರ್. ಅವತ್ತು ಯಾರ್‍ಯಾರು ಏನೇನು ಸಾಂಸ್ಕೃತಿಕ ಚಟುವಟಿಕೆ ಮಾಡ್ತೀರ ಅಂತ ಸಲಹೆ ಕೇಳೋಣ. ನನಗನಿಸೋ ಪ್ರಕಾರ ಒಂದಿಬ್ಬರು ಹಾಡು ಹೇಳ್ಲಿ, ಒಂದು ರಸಪ್ರಶ್ನೆ ಕಾರ್ಯಕ್ರಮ ಮಾಡೋಣ, ಒಂದು ಸಣ್ಣ ತಮಾಷೆ ಸ್ಕಿಟ್ ಮಾಡೋಣ ಅಂದ. ಬಾಸ್ ಎದ್ದು ಸೋಮು ಬೆನ್ನು ತಟ್ಟಿ ಎಷ್ಟೊಂದು ಐಡಿಯಾ ಕೊಟ್ಟುಬಿಟ್ರಲ್ರಿ, ಬೇರೆ ಶಾಖೆಗಳಿಗೂ ಈ ಸಲಹೆ ಕೊಡಬಹುದು ಅಂದರು.

ಮುಂದಿನ ವಾರವೇ ಬಾಸ್ ಎಲ್ಲರನ್ನೂ ಕರೆದು ಈ ವಿಚಾರವನ್ನು ಚರ್ಚಿಸಿದಾಗ ಇಡೀ ಆಫೀಸ್ ಬಹಳ ಖುಷಿಯಿಂದ ನೆಗೆಯಿತು. ರಾಗಿಣಿ ಅಂತೂ ಸರ್ ನಾನು ಅವತ್ತು ನಿಜವಾಗಿಯೂ ಹಾಡ್ತೀನಿ ಅಂದಳು. ಒಬ್ಬೊಬ್ಬರು ಒಂದೊಂದು ಜವಾಬ್ದಾರಿ ತಗೋತೀನಿ ಅಂದರು. ಸರ್. ಅವತ್ತು ನಮ್ಮ ನಮ್ಮ ಕುಟುಂಬದವರೂ ಬಂದು ಭಾಗವಹಿಸಬೇಕು. ಕಡೆಯಲ್ಲಿ ಭರ್ಜರಿ ಊಟ ಇರಬೇಕು ಅಂದರು. ಎಲ್ಲಕ್ಕೂ ಬಾಸ್ ಓಕೆ ಅಂದರು.



ಸೋಮು ಈ ವಿಚಾರವನ್ನು ಮನೆ–ಯಲ್ಲಿ ಹೇಳಿದಾಗ ಸೋಮಿ ನೀವೇನು ಮಾಡ್ತೀರ ಅಂತ ಕೇಳಿದಳು. ಇನ್ನೂ ಗೊತ್ತಿಲ್ವೇ, ನೀನು ಒಂದೊಂದು ಸಾರಿ ಹಾಡ್ತಿರ್ತೀಯಲ್ಲ, ಅವತ್ತು ಬಂದು ನೀನೂ ಹಾಡು ಅಂದ. ಸೋಮಿ ಖುಷಿಯಿಂದ ಅದಕ್ಕೇನು ಖಂಡಿತಾ ಹಾಡ್ತೀನಿ. ಆದರೆ ನೀವು ಆ ಕಾಗೆನ ಸುಮ್ಮನಿರು ಅಂತ ಕೇಳಬೇಕು ಅಂದಳು. ಸೋಮು ಅಚ್ಚರಿಯಿಂದ ಯಾವುದೇ ಅದು ಕಾಗೆ ಅಂತ ಕೇಳಿದರೆ, ಇನ್ಯಾರು ನಿಮ್ಮ ಪಕ್ಕದಲ್ಲೇ ಕುಕ್ಕರಬಡಿದಿರುತ್ತಲ್ಲ ಬಿಳಿ ಕಾಗೆ ರಾಗಿಣಿ ಅಂದಳು. ಸೋಮು ಕಣ್ಣು ಅಗಲಿಸಿ ಲೇ ಸೋಮಿ ಅವತ್ತು ಅವಳೂ ಹಾಡ್ತೀನಿ ಅಂದಿದಾಳೆ ಕಣೆ. ಹಾಗಾದರೆ ನಿನಗೂ ಅವಳಿಗೂ ಒಂದು ಸ್ಪರ್ಧೆ ನಡೆಸೋಣ ಅಂದ. ಸೋಮಿ ಭುಜ ಕೊಂಕಿಸಿ ಸ್ಪರ್ಧೆ ಗಿರ್ಧೆ ಅವೆಲ್ಲಾ ಏನೂ ಬೇಡ, ನನ್ನ ಪಾಡಿಗೆ ನಾನು ಹಾಡ್ತೀನಿ, ಅವಳ ಪಾಡಿಗೆ ಅವಳು ಹಾಡ್ಲಿ, ಹೇಗಿದ್ರೂ ನೀವು ಓಟು ಕೊಡೋದು ಅವಳಿಗೇನೇ ಅಂದಳು. ಸೋಮು ಕಿಸಕ್ಕನೆ ನಕ್ಕು ಹೊಟ್ಟೆ ಕಿಚ್ಚಿನ ಮೊಟ್ಟೆ ಕೋಳಿ, ನಾನು ಅವಳಿಗೆ ಓಟು ಕೊಟ್ಟರೆ ನನಗೆ ಏಟು ಕೊಡೋಳು ನೀನೇ ತಾನೇ ಅಂದ.

ಮರುದಿನ ಬಾಸ್ ಸೋಮುನ ಕರೆದು ಒಂದೆರಡು ಹಾಳೆ ಕೊಟ್ಟು ಇದು ಓದಿ ನೋಡ್ರೀ ಹೇಗಿದೆ ಅಂದರು. ಏನ್ಸಾರ್ ಇದು ಅಂತ ಸೋಮು ಕೇಳಿದ. ಇದು

ಒಂದು ಸಣ್ಣ ಸ್ಕಿಟ್ ಕಣ್ರೀ ಬಹಳ ತಮಾಷೆ ಆಗಿದೆ. ಎಲ್ಲರ ಮನೆಯ ಸಂಸಾರದಲ್ಲೂ ನಡೆಯುವಂಥದೇ, ಬರೀ ಎರಡೇ ಪಾತ್ರ ಒಂದು ಗಂಡ ಇನ್ನೊಂದು ಹೆಂಡತಿ, ಕೇವಲ ಹದಿನೈದು ನಿಮಿಷದಲ್ಲಿ ನಡೆಯುತ್ತೆ. ಓದೋಕೆ ಬಹಳ ಮಜವಾಗಿದೆ. ನಿಧಾನವಾಗಿ ಓದಿ ಅಂದರು. ಸೋಮು ಹಾಳೆಗಳನ್ನು ಕೈಲಿ ಹಿಡಿದು ಸರ್ ಇದನ್ನು ಯಾರು ಮಾಡ್ತಾರೆ ಅಂತ ಕೇಳಿದ. ಇನ್ಯಾರು ನೀವೇ ರೀ ಅಂದರು ಬಾಸ್. ಸರ್ ಹೆಂಡ್ತಿ ಪಾತ್ರ ಅಂತ ಕೇಳಿದ್ದಕ್ಕೆ ಬಾಸ್ ಇನ್ಯಾರು ರಾಗಿಣಿ ಕಣ್ರೀ ಅಂದರು. ಸೋಮು ಹುಬ್ಬು ರೂಫ್‌ಗೆ ತಗುಲಿತು. ಬಾಸ್ ನಕ್ಕು ಈ ಸ್ಕಿಟ್ ತಂದಿದ್ದು ರಾಗಿಣಿನೇ. ಅವರ ಮನೇಲಿ ಯಾವುದೋ ಪುಸ್ತಕದಲ್ಲಿ ಇತ್ತಂತೆ. ಅವರು ಹಿಂದೆಂದೋ ಓದಿದ್ರಂತೆ. ನಮ್ಮ ಆಫೀಸ್ ಕಾರ್ಯಕ್ರಮಕ್ಕೆ ಚನ್ನಾಗಿರುತ್ತೆ ಅಂತ ಅವರಿಗೆ ಅನಿಸಿತಂತೆ. ಅದಕ್ಕೆ ತಂದು ನನಗೆ ಕೊಟ್ಟು ಸರ್ ಇದನ್ನು ಮಾಡೋಣ. ನಾನು ಹೆಂಡ್ತಿ ಪಾತ್ರ ಮಾಡ್ತೀನಿ ಸೋಮು ನನ್ನ ಗಂಡನ ಪಾತ್ರ ಮಾಡ್ಲಿ ಅಂದರು. ನನಗೂ ಓಕೆ ಅನಿಸಿತು. ಹೋಗಿ ನೀವಿಬ್ರೂ ರಿಹರ್ಸಲ್ ಮಾಡ್ಕೊಳಿ ಅಂದರು.

ಸೋಮುಗೆ ಒಳಗೊಳಗೇ ಆನಂದ, ಖುಷಿಯಿಂದ ಹೊರಬಂದ. ಅವನು ಹೊರಬರುವುದನ್ನೇ ಕಾಯುತ್ತಿದ್ದ ರಾಗಿಣಿ ಸರ್ ಬಾಸ್ ಏನಂದ್ರು. ಅಂತ ಕೇಳಿದ್ದಕ್ಕೆ ಸೋಮು ನಾವಿಬ್ರೂ ಗಂಡ ಹೆಂಡ್ತಿ ಆಗೋಕೆ ಅವರು ಒಪ್ಕೊಂಡಿದಾರೆ ಅಂದ. ಏನ್ಸಾರ್ ಅಂದ ಹುಬ್ಬೇರಿಸಿದಳು. ಅದೇ ರೀ, ನಮ್ಮ ಆಫೀಸಿನ ಸಮಾರಂಭದಲ್ಲಿ ನೀವು ಕೊಟ್ಟ ಸ್ಕಿಟ್ ನಾವಿಬ್ಬರೂ ಅಭಿನಯಿಸೋಕೆ ಅವರು ಒಪ್ಪಿದ್ದಾರೆ ಅಂದ. ಊಟದ ಹೊತ್ತಿಗೆ ಸೋಮು ಸ್ಕಿಟ್ಟನ್ನು ಮೂರ್‍ನಾಲ್ಕು ಸಾರಿ ಓದಿಕೊಂಡಿದ್ದ. ಅವನಿಗೂ ಇದು ಚಿಕ್ಕದಾಗಿ ಚೊಕ್ಕದಾಗಿದೆ ಅನಿಸಿತು. ಊಟ ಮಾಡುವಾಗ ರಾಗಿಣಿ ಸರ್ ನೀವು ನಿಮ್ಮ ಸಂಭಾಷಣೆಗಳನ್ನು ಚನ್ನಾಗಿ ಬಾಯಿಪಾಠ ಮಾಡಿಕೊಂಡುಬಿಡಿ, ನನ್ನದನ್ನು ನಾನು ಬಾಯಿಪಾಠ ಮಾಡಿಕೊಂಡುಬಿಡ್ತೀನಿ ಆಮೇಲೆ ಅಭಿನಯಿಸೋದು ಸುಲಭ ಅಂದಳು. ಸೋಮು ಆದರೂ ಒಂದೆರಡು ರಿಹರ್ಸಲ್ ಮಾಡಿದ್ದರೆ ಒಳ್ಳೇದು ಅಂದ. ಖಂಡಿತಾ ಮಾಡೋಣ, ಬೇಕಾದ್ರೆ ಬಾಸ್ ಎದುರಿಗೇ ಮಾಡೋಣ ಅಂದಳು. ಅದು ಇಬ್ಬರಿಗೂ ಒಪ್ಪಿಗೆಯಾಯಿತು. ಒಂದು ವಾರದ ನಂತರ ಒಂದು ದಿನ ಸಂಜೆ ಬಾಸ್ ಕೋಣೆಯಲ್ಲೇ ಅವರಿಬ್ಬರ ರಿಹರ್ಸಲ್ ನಡೆಯಿತು.

ಒಂದೆರಡು ರಿಹರ್ಸಲ್ ಆದ ಮೇಲೆ ಬಾಸ್ ರೀ ಸೋಮು ನೀವು ಬರೀ ಸಂಭಾಷಣೆ ಒಪ್ಪಿಸೋದ್ರಲ್ಲಿ ಗಮನ ಹರಿಸ್ತಿದೀರ. ನೀವು ರಾಗಿಣಿಯವರನ್ನು ರಾಗಿಣಿ ತರಹಾನೇ ನೋಡ್ತಿದೀರ. ಅವರನ್ನು ನಿಮ್ಮ ಹೆಂಡ್ತಿ ಅಂದ್ಕೊಬೇಕ್ರೀ. ಅವರ ಕಣ್ಣೀರು ಒರೆಸುವಾಗ ಬಹಳ ದೂರದಿಂದ ಒರೆಸ್ತಿದೀರ. ಹತ್ತಿರ ಹೋಗಿ ಎಡಗೈ ಅವರ ಭುಜದ ಮೇಲಿಟ್ಟು ಬಲಗೈಯಿಂದ ಅವರ ಕಣ್ಣೀರು ಒರೆಸಬೇಕು. ಇದೆಲ್ಲಾ ನಾನು ನಿಮಗೆ ಹೇಳಿಕೊಡಬೇಕೇನ್ರೀ ಅಂದರು. ರಾಗಿಣಿ ಸೋಮು ಕಿವಿಯಲ್ಲಿ ಬಾಸ್ ಹೇಳಿದ ಹಾಗೆ ಮಾಡಿ ಸೋಮು ಬಹಳ ಮಜ ಇರುತ್ತೆ ಅಂದಳು. ಇನ್ನೊಂದು ವಾರದಲ್ಲಿ ರಿಹರ್ಸಲ್ ಇನ್ನಷ್ಟು ಚನ್ನಾಗಿ ಬಂತು.



ಮುಂದಿನ ಶನಿವಾರ ಮತ್ತೊಂದು ರಿಹರ್ಸಲ್. ರಿಹರ್ಸಲ್ ಇರೋ ದಿನ ಸೋಮು ಮನೆಗೆ ತಡವಾಗಿ ಹೋಗ್ತಿದ್ದ. ಎಲ್ಲ ಮುಗಿದ ಮೇಲೆ ಸರ್ ನನ್ನ ಟ್ರೀಟು ಬನ್ನಿ ಅಂದು ರಾಗಿಣಿ ರಸಗುಲ್ಲ, ಮಸಾಲೆ ದೋಸೆ ಕೊಡಿಸುತ್ತಿದ್ದಳು, ಮತ್ತೊಂದು

ದಿನ ಸೋಮು ಕೊಡಿಸುತ್ತಿದ್ದ. ಆದರೆ ಮನೆಯಲ್ಲಿ ರಿಹರ್ಸಲ್ ಬಗೆಗಾಗಲೀ ತಿಂಡಿ ಬಗೆಗಾಗಲೀ ಹೇಳ್ತಿರಲಿಲ್ಲ. ಇದು ಸೋಮಿಗೆ ಅಚ್ಚರಿ ತರಲಿ ಎನ್ನುವುದು ಸೋಮು ಆಸೆಯಾಗಿತ್ತು.

ಮುಂದಿನ ವಾರದ ರಿಹರ್ಸಲ್‌ನಲ್ಲಿ ಮತ್ತೊಂದು ಅಚ್ಚರಿ ಕಾದಿತ್ತು. ಆ ದಿನ ಸ್ಕಿಟ್ ಮಾತ್ರ ಬಹಳ ಚನ್ನಾಗಿ ಬಂತು ಅಂತ ಎಲ್ಲರೂ ಅಂದರು. ಕೆಲವರಂತೂ ಸೋಮು ಸರ್ ನೀವೂ ರಾಗಿಣಿ ಥೇಟ್ ಗಂಡ ಹೆಂಡ್ತಿ. ನಮಗೆ ಇದು ಪ್ರಹಸನ ಅಂತ ಅನಿಸಲೇ ಇಲ್ಲ ಅಂದರು. ಸೋಮು ಉಬ್ಬಿಹೋದ. ಎಂದಿನಂತೆ ಆಫೀಸಿನವರೆಲ್ಲಾ ಹೋದ ಮೇಲೆ ಸರ್ ಅಂತ ರಾಗಿಣಿ ಎನ್ನುವಾಗ ಇಲ್ಲ ಇವತ್ತು ನನ್ನದು ಟ್ರೀಟ್, ಕ್ಯಾರೆಟ್ ಹಲ್ವಾ ತರಕಾರಿ ಮಸಾಲೆ ದೋಸೆ ಬನ್ನಿ ಅಂದು ರಾಗಿಣಿನ ಕೈ ಹಿಡಿದು ಕರೆದುಕೊಂಡು ಹೋದ.

ಫ್ಯಾಮಿಲಿ ರೂಮಲ್ಲಿ ಕೂತು ಇನ್ನೇನು ತಿಂಡಿಗೆ ಆರ್ಡರ್ ಮಾಡಬೇಕು ಎನ್ನುವಾಗ ನನಗೂ ಒಂದು ಕ್ಯಾರೆಟ್ ಹಲ್ವಾ ತರಕಾರಿ ಮಸಾಲೆ ದೋಸೆ ಆರ್ಡರ್ ಮಾಡಿ ಅಂದಿದ್ದು ಕೇಳಿ ಬೆನ್ನ ಹಿಂದೆ ನಿಂತಿರೋರು ಯಾರು ಅಂತ ನೋಡುವಾಗ ಬೆಚ್ಚಿಬಿದ್ದ. ಸೋಮಿ ನಿಂತಿದ್ದಳು. ರಾಗಿಣಿ ಬನ್ನಿ ಮೇಡಂ ಕೂತ್ಕೊಳ್ಳಿ ಅಂದಳು. ಅರೇ ಸೋಮಿ ಬಾ, ಕೂತ್ಕೊ ಈಗ ತಾನೇ ರಿಹರ್ಸಲ್ ಮುಗೀತು. ಯಾಕೋ ಇವತ್ತು ಹಸಿವು ಜಾಸ್ತಿಯಾಗಿತ್ತು. ಅದಕ್ಕೆ ಬಂದೆವು. ನೀನೂ ಬಾ ಅಂದ. ಸೋಮಿ ಏನೂ ಮಾತಾಡದೇ ಬಂದು ಸೋಮು ಪಕ್ಕ ಕೂತಳು. ಆದರೂ ಸೋಮುಗೂ ರಾಗಿಣಿಗೂ ಒಂದು ರೀತಿ ಮುಜುಗರ ಆಯಿತು. ಅಂತೂ ಇಂತೂ ತಿಂಡಿ ಮುಗೀತು. ಮನೆಗೆ ಹೊರಟಾಗ ಸೋಮಿನೇ ರಾಗಿಣಿಗೆ ಬನ್ನಿ ಮೂವರೂ ಆಟೋದಲ್ಲಿ ಹೋಗೋಣ. ನಿಮ್ಮನ್ನು ಮನೆಗೆ ಬಿಟ್ಟು ಹೋಗ್ತೀವಿ ಅಂದಿದ್ದಕ್ಕೆ ರಾಗಿಣಿ ಬೇಡ ಅನ್ನಲಿಲ್ಲ.

ಮನೆಗೆ ಬಂದ ಮೇಲೆ ಅರೇ ಸೋಮಿ, ನೀನು ಅಲ್ಲಿಗೆ ಯಾವಾಗ ಬಂದೆ ನೀನು ನಮ್ಮ ನಾಟಕದ ರಿಹರ್ಸಲ್ ನೋಡಿದ್ಯಾ ಅಂತ ಕೇಳಿದ. ಸೋಮಿ ಕುತ್ತಿಗೆ ಕೊಂಕಿಸಿ ನಾನು ಏನೇನು ನೋಡಬೇಕು ಅಂತ ಬಂದಿದ್ನೋ ಅದನ್ನೆಲ್ಲಾ ನೋಡ್ದೆ ಅಂದಳು. ಸೋಮು ಗಪ್‌ಚುಪ್. ಅವತ್ತಿಂದ ಸೋಮಿ ಹೆಚ್ಚು ಮಾತಾಡುತ್ತಿರಲಿಲ್ಲ.

ಕಛೇರಿಯ ಸಮಾರಂಭಕ್ಕೆ ಬಹಳ ಅದ್ದೂರಿಯ ತಯಾರಿ ನಡೆಯುತ್ತಿತ್ತು. ಎಲ್ಲರೂ ಇದು ನಮ್ಮ ಮನೆಯ ಸಮಾರಂಭ ಎನ್ನುವಂತೆ ತೊಡಗಿಸಿಕೊಂಡಿದ್ದರು. ಅವತ್ತು ಬೆಳಗ್ಗೆಯಿಂದಲೇ ಚಟುವಟಿಕೆಗಳು ಪ್ರಾರಂಭವಾದವು. ಬಾಸ್ ಅವತ್ತು ಬೆಳಗ್ಗೆನೇ ಎಲ್ಲರನ್ನೂ ಕರೆದು ನೋಡಿ ಕಾರ್ಯಕ್ರಮದಲ್ಲಿ ಸಂತೋಷದಿಂದ ಭಾಗವಹಿಸೋದು ಮುಖ್ಯ, ನೀವು ಮಾಡುವ ಯಾವುದೇ ಕೆಲಸದಲ್ಲಿ ಸ್ವಲ್ಪ ಹೆಚ್ಚು ಕಮ್ಮಿ ಅದರೆ ಬೇಜಾರು ಮಾಡ್ಕೊಬೇಡಿ, ಹೇಗೂ ಇನ್ನೊಂದು ಅವಕಾಶ ಇದ್ದೇ ಇರುತ್ತೆ ಅಂದು ಎಲ್ಲರಿಗೂ ಧೈರ್ಯ ಹೇಳಿದ್ದರು. ಎಲ್ಲ ಚಟುವಟಿಕೆಗಳಲ್ಲಿ ಯಾವುದು ಬಹಳ ಚನ್ನಾಗಿರುತ್ತೆ ಅಂದರೆ ಅದು ಸೋಮು ರಾಗಿಣಿ ಸ್ಕಿಟ್ ಅಂತ ಎಲ್ಲರ ಅಭಿಪ್ರಾಯವಾಗಿತ್ತು.



ಅವತ್ತು ಸಭಾಂಗಣ ಕಿಕ್ಕಿರಿದು ತುಂಬಿತ್ತು. ಸೋಮು ಸೋಮಿನೂ ಕರ್ಕೊಂಡು ಬಂದಿದ್ದ. ನೋಡು ನಾವು ಸ್ಕಿಟ್ ಮಾಡುವಾಗ ನೀನು ಜೋರಾಗಿ ಚಪ್ಪಾಳೆ

ತಟ್ಟಬೇಕು ಅಂದಿದ್ದ. ಒಂದೊಂದು ಚಟುವಟಿಕೆ ಪ್ರಾರಂಭವಾಯಿತು. ಎಲ್ಲ ಕುಟುಂಬದವರೂ ಬಹಳ ಉತ್ತೇಜನ ಕೊಡುತ್ತಿದ್ದರು. ಎಲ್ಲರೂ ಬಹಳ ಖುಷಿಯಾಗಿದ್ದರೂ ಸೋಮಿ ಮಾತ್ರ ಮುಖ ದಪ್ಪಗೆ ಮಾಡ್ಕೊಂಡು ಕೂತಿದ್ದಳು. ಯಾಕೆ ಅಂತ ಸೋಮುಗೂ ಅರ್ಥ ಆಗಲಿಲ್ಲ. ಆದರೆ ಅವನು ಪದೇ ಪದೇ ಸೋಮಿ ಮುಖ ನೋಡೋದನ್ನು ಮರೆಯಲಿಲ್ಲ.

ಊಟದ ನಂತರದ ಕಾರ್ಯಕ್ರಮವೇ ಸೋಮು ಸ್ಕಿಟ್. ಊಟದ ನಂತರ ಸೋಮಿ ಈಗ ನಮ್ಮ ಸ್ಕಿಟ್ ಇರುತ್ತೆ ನೀನು ನನಗೆ ಉತ್ತೇಜನ ಕೊಡಬೇಕು ಅಂದ. ಸೋಮಿ ಮಾತಾಡಲಿಲ್ಲ. ಸರಿ ಸ್ಕಿಟ್ ಷುರುವಾಯಿತು. ಸೋಮು ನಿಧಾನವಾಗಿ ಸೋಮಿ ಕಡೆ ನೋಡಿದ. ಅದ್ಯಾಕೋ ರೌದ್ರಾವತಾರ ಕಾಣಿಸಿತು. ಅವನ ಸಂಭಾಷಣೆ ಮರೆತ. ರಾಗಿಣಿಯನ್ನು ತಬ್ಬಿ ಅವಳ ಕಣ್ಣೀರು ಒರೆಸೋದನ್ನು ಮರೆತ. ಸರ್ ಈಗ ನಿಮ್ಮ ಮಾತು ಅಂದು ರಾಗಿಣಿ ನೆನಪಿಸಿದರೂ ಅವನಿಗೆ ನೆನಪಾಗಲಿಲ್ಲ. ಅವನ ದೃಷ್ಟಿ ಎಲ್ಲ ಸೋಮಿ ಕಡೆಗೇ ಇತ್ತು. ಎಲ್ಲ ಸಹೋದ್ಯೋಗಿಗಳೂ ಸೋಮು ಕಮಾನ್ ಕಮಾನ್ ಅಂತ ಕಿರುಚುತ್ತಿದ್ದರೂ ಸೋಮುಗೆ ಷುರುವಾಗಿದ್ದ ಕೈ ಕಾಲು ನಡುಕ ನಿಲ್ಲಲಿಲ್ಲ. ತಕ್ಷಣ ಅಲ್ಲಿದ್ದವರು ಬುದ್ಧಿ ಉಪಯೋಗಿಸಿ ರಂಗಸ್ಥಳದ ದೀಪ ಆರಿಸಿ ಈಗ ಒಂದು ಚಲನಚಿತ್ರಗೀತೆ ಅಂತ ಘೋಷಿಸಿಬಿಟ್ಟರು ಕತ್ತಲೆಯಲ್ಲಿ ಸೋಮುನೂ ರಾಗಿಣೀನೂ ಒಳಕ್ಕೆ ಎಳೆದುಕೊಂಡರು. ಎಲ್ಲರೂ ಬಂದು ಸೋಮುಗೆ ಏನಾಯ್ತೋ ನಿನಗೆ ಅಂತ ತಗುಲಿಕೊಂಡರು. ಕಡೆಗೆ ಯಾವುದೇ ಗಂಡಸಿಗೆ ಇಂಥಾ ಸ್ಥಿತಿ ಬರಬೇಕು ಅಂದರೆ ಅದು ಅವರ ಹೆಂಡತಿಯಿಂದ ಮಾತ್ರ ಅಂತ ಅರಿತಿದ್ದ ಬಾಸ್ ಸೋಮಿ ಹತ್ತಿರ ಬಂದು ಮೇಡಂ ನೀವು ಒಂದು ಬಹಮಾನ ಕೊಡಬೇಕು. ವೇದಿಕೆಗೆ ಬನ್ನಿ ಅಂತ ಕರೆದರು. ಸೋಮಿ ಖುಷಿಯಿಂದ ಎದ್ದು ಹೋದಳು. ಅಲ್ಲಿ ಅವರು ಸೋಮಿನ ಗ್ರೀನ್ ರೂಮಿನಲ್ಲಿ ಕೂರಿಸಿ ಇನ್ನೊಬ್ಬರಿಗೆ ಇವರಿಗೆ ಪ್ರಶಸ್ತಿ ವಿಚಾರ ವಿವರಿಸಿ ಅಂತ ಹೇಳಿ ಮತ್ತೆ ಆಚೆ ಕಡೆ ಬಂದು ಈಗ ಮತ್ತೆ ಸೋಮು ರಾಗಿಣಿ ಸ್ಕಿಟ್ ಪ್ರಾರಂಭಿಸಿ ಅಂದು ಸೋಮು ಹತ್ತಿರ ಬಂದು ಸೋಮು ಈಗ ನಿಮ್ಮ ಮಿಸೆಸ್ ಮುಂದೆ ಕೂತಿಲ್ಲ. ಸ್ಕಿಟ್ ಸಖತ್ತಾಗಿ ಅಭಿನಯಿಸಿ ಅಂದರು.

ಇತ್ತ ತಾನು ಬಹುಮಾನ ಕೊಡಬೇಕಾದ ವಿವರಗಳನ್ನು ಸೋಮಿ ನೋಡುತ್ತಿರುವಾಗ ಸೋಮು ರಾಗಿಣಿ ಸ್ಕಿಟ್ ಸಖತ್ತಾಗಿ ಅಭಿನಯಿಸಿದರು. ರಾಗಿಣಿಯನ್ನು ತುಸು ಬಿಗಿಯಾಗಿಯೇ ತಬ್ಬಿ ಅವಳ ಕಣ್ಣೀರು ಒರೆಸುವಾಗ ಅವಳಿಗೆ ಬಹಳ ಹತ್ತಿರವಾಗಿ ಅವಳ ಉಸಿರಿನ ವೇಗ ಸೋಮುಗೆ ಅರಿವಾಗುತ್ತಿತ್ತು. ರಾಗಿಣಿ ಕೂಡಾ ಬಹಳ ಸಹಜವಾಗಿ ಅಭಿನಯಿಸಿ ಕಡೆಯ ದೃಶ್ಯದಲ್ಲಿ ಅವರಿಬ್ಬರೂ ತಬ್ಬಿ ನಿಂತಿರೋದು ಅವರ ಮೇಲೆ ಹೂಮಳೆ ಬೀಳೋದು ಬಹಳ ಸಹಜವಾಗಿತ್ತು. ಇಡೀ ರಂಗಮಂದಿರ ಎದ್ದುನಿಂತು ಚಪ್ಪಾಳೆ ತಟ್ಟಿದರು. ಸೋಮು ಅಬ್ಬಾ ಸೋಮಿ ಎಫೆಕ್ಟ್ ಇಲ್ಲದಿದ್ದಕ್ಕೇ ಈ ಸ್ಕಿಟ್ ಇಷ್ಟು ಚೆನ್ನಾಗಿ ಬಂದಿದ್ದು ಅಂತ ಖುಷಿಯಾದ. ಗ್ರೀನ್ ರೂಮಲ್ಲಿ ಕೂತಿದ್ದ ಸೋಮಿಗೆ ಈ ಸ್ಕಿಟ್ ನೋಡೋ ಅವಕಾಶವೂ ಇರಲಿಲ್ಲ. ಹೊರಗೆ ಏನಾಗ್ತಿದೆ ಎನ್ನೋದೂ ತಿಳಿಯಲಿಲ್ಲ.



ನಂತರ ಬಾಸ್ ಸೋಮಿ ಕೈಯಿಂದಲೇ ಸೋಮುಗೂ ರಾಗಿಣಿಗೂ ಬಹುಮಾನ ಕೊಡಿಸಿದರು. ಫೋಟೋಗೆ ಮಾತ್ರ ಸೋಮಿ ಅವರಿಬ್ಬರ ನಡುವೆ ನಿಂತಿದ್ದಳು.

ರಾಗಿಣಿ ಹೊರಟಾಗ ಸೋಮು ಸೋಮಿಗೆ ತಿಳಿಯದಂತೆ ರಾಗಿಣಿಯ ಜಡೆ ಎಳೆದು ಗುಡ್ ನೈಟ್ ಅಂದ. ಸೋಮುಗೂ ರಾಗಿಣಿಗೂ ಯಾಕೆ ಬಹುಮಾನ ಕೊಟ್ಟರು ಎನ್ನುವುದು ಸೋಮಿಗೆ ತಿಳಿಯಲಿಲ್ಲ. ಅವರಿಬ್ಬರೂ ಸಂಭಾಷಣೆ ಮರೆತರು, ಪೆದ್ದಾಗಿ ನಿಂತಿದ್ದರು, ಜನ ಕೂಗುತ್ತಿದ್ದರು. ಆದರೂ ಬಹುಮಾನ ಹೇಗೆ ಅಂತ ಅಚ್ಚರಿಯಾಗಿ ಸೋಮುನ ಕೇಳಿದಾಗ ಏನೂ ತಿಳಿಯದವನಂತೆ ನಂಗೊತ್ತಿಲ್ಲಪ್ಪ ಅಂದ. ಆದರೆ ಮನೆಗೆ ಹೊರಟ ಪ್ರತಿಯೊಬ್ಬರೂ ಸರ್ ಬಹಳ ಚನ್ನಾಗಿ ಅಭಿನಯ ಮಾಡಿದಿರಿ, ನೀವು ರಾಗಿಣಿ ಮೇಡ್ ಫಾರ್ ಈಚ್ ಅದರ್ ಅನ್ನೋ ತರ ಅಭಿನಯ ಮಾಡಿದ್ರಿ, ಕೀಪ್ ಇಟ್ ಅಪ್ ಅಂತ ಹೇಳಿ ಹೋಗುವಾಗ ಸೋಮಿಗೆ ಮಾತ್ರ ಬಹಳ ಅಚ್ಚರಿ. ಸೋಮಿ ಮತ್ತೆ ಮತ್ತೆ ಸೋಮುನ ಪ್ರೆಶ್ನಿಸಿದಾಗ ಏನು ಮಾಡೋಕಾಗುತ್ತೆ ಸೋಮಿ, ಕೆಲವರು ನಾವೇ ಬುದ್ಧಿವಂತರು ಅಂದ್ಕೊಂಡಿರ್ತಾರೆ, ಆದರೆ ಅವರಿಗಿಂತ ಬುದ್ಧಿವಂತರೂ ಇರ್ತಾರಲ್ವಾ, ಯಾಕೇಂದ್ರೆ ಒಬ್ಬರು ಸೇರು ಆದರೆ ಇನ್ನೊಬ್ಬರು ಸವಾಸೇರು ಎನ್ನುವ ಮಾತೇ ಇದೆಯಲ್ಲ ಅಂದಾಗ ಸೋಮಿಗೆ ಇನ್ನಷ್ಟು ಗೊಂದಲವಾಯಿತು. ಕೆಲವೇ ಕ್ಷಣಗಳಲ್ಲಿ ಫೇಸ್ ಬುಕ್ ಪುಟಗಳಲ್ಲಿ ಸೋಮು ರಾಗಿಣಿ ಸ್ಕಿಟ್ ತೆರೆದುಕೊಂಡಿತು. ಸೋಮಿ ಅದನ್ನು ಕಣ್ಣರಳಿಸಿ ನೋಡಿ ರೀ ನೀವು ಈ ಸ್ಕಿಟ್ ಮಾಡುವಾಗ ನಾನು ಎಲ್ಲಿದ್ದೆ ಅಂತ ಕೇಳಿದಳು. ಅದಕ್ಕೆ ಸೋಮು ನನಗೊತ್ತಿಲ್ಲಪ್ಪ ನಾನು ಫುಲ್ ಸ್ಕಿಟ್ ಮೇಲೇ ಗಮನ ಹರಿಸಿದ್ದೆ ಅಂದ. ಎಲ್ಲೋ ಏನೋ ಎಡವಟ್ಟಾಯ್ತಲ್ಲ ಅಂತ ಸೋಮಿ ಫೇಸ್‌ಬುಕ್ ಪುಟವನ್ನೇ ನೋಡುವಾಗ ಅವಳಿಗೆ ಪದೇ ಪದೇ ಸೋಮು ರಾಗಿಣಿ ದೃಶ್ಯಗಳೇ ಕಂಡು ಯಾಕೋ ಹೊಟ್ಟೆ ತೊಳೆಸಿದಂತಾಗಿ ಯಾರೋ ಸೇರಿಗೆ ಸವಾಸೇರು ಎನ್ನುವಂತೆ ಮಾಡಿದ್ದಾರೆ ಅನ್ನೋದು ಸ್ವಷ್ಟವಾಯಿತು. ಅಲ್ಲಿಂದ ಮುಂದೆ ಸುಮಾರು ಒಂದು ತಿಂಗಳು ಸೋಮು ಸಖತ್ ಮೂಡಲ್ಲಿದ್ದ. ಒಂದು ದಿನ ರೀ ರಾಗಿಣಿ ನಾವು ಇನ್ನೊಂದು ಸ್ಕಿಟ್ ಮಾಡೋದು ಯಾವಾಗ ರೀ ಅಂತ ಕೇಳಿದ್ದಕ್ಕೆ ರಾಗಿಣಿ ನಾಚಿ ನೀವು ಯಾವತ್ತು ಹೇಳ್ತೀರೋ ಅವತ್ತೇ ಅಂದಳು.



# ದಾರಿ ಕಾಣದಾಗಿದೆ ರಾಘವೇಂದ್ರನೇ......!

**ಲತಾ ಹೆಗಡೆ – ಹುಬ್ಬಳ್ಳಿ**

**ರಾ**ಯರ ಈ ಸುಪ್ರಸಿದ್ಧ ಹಾಡು ನಮ್ಮ ಕಲ್ಲೇಶ್ವರಿಯ ದಿನನಿತ್ಯದ ಹಾಡಾಗಿ ಪಾಡಾಗಿದೆಯೆಂದರೆ ಓದುಗ ಮಿತ್ರರಾದ ನಿಮಗ್ಯಾರಿಗೂ ತಲೆಬುಡ ಅರ್ಥವಾಗಲಾರದು. ಅವಳಿಷ್ಟದ ದೇವರ ಹಾಡನ್ನು ನಿತ್ಯವೂ ಹಾಡಿಕೊಂಡರೆ ಪಾಡು ಹೇಗಾದೀತೆಂಬ ಪ್ರಶ್ನೆ ಖಂಡಿತಾ ನಿಮ್ಮಲ್ಲಿ ಉದ್ಭವಿಸಿರುತ್ತದೆ ಮತ್ತದು ತರ್ಕಬದ್ಧವೂ ಹೌದು. ಅಷ್ಟೇ ಅಲ್ಲ ಕಣ್ರೀ, ಸಂದರ್ಭಕ್ಕೆ ತಕ್ಕಂತೆ ಮೂಲ ಸಾಹಿತ್ಯ ಬದಲಿಸಿ ಹಾಡಿಕೊಳ್ಳುವುದನ್ನು ಕಲ್ಲಿ ಕರಗತ ಮಾಡಿಕೊಂಡಿದ್ದಾಳೆ ಎಂದರೆ ನಂಬುವಿರಾ? ಅಂತಹ ಕೊಳ್ಳೆ ಹೋಗುವ ಸಂದರ್ಭವೇನಿದ್ದೀತು, 'ದೀಪಾ' ಚಲನಚಿತ್ರದಲ್ಲಿ ನಟಿ ಮಂಜುಳಾಗಾದರೆ ಆಕಾಶವೇ ಕಳಚಿಬಿದ್ದಂತಹ ಸಮಸ್ಯೆಯಿದ್ದದ್ದಕ್ಕೆ ಆರ್ತಳಾಗಿ ಮನದ ತುಮುಲವನ್ನು ರಾಯರ ಮುಂದೆ ತೆರೆದಿಡುತ್ತಾಳೆ, ಸರಿಯೇ ಸರಿ. ಅಂತಹದ್ದೇನಾಗಿದೆ ನಿಮ್ಮ ಕಥಾನಾಯಕಿ ಕಲ್ಲೇಶ್ವರಿಗೆ? ಸದಾ ಗೊಂದಲದ ಗೂಡಾಗಿ ನಿವೃತ್ತನಾದ ಮೇಲಂತೂ ಪೂರ್ತಿ ಮೂಕನಾಗಿ ತಾನಾಯ್ತು, ತನ್ನ ಪಾಡಾಯ್ತು ಎಂಬ ಗೋವಿನಂತಹ ಪತಿ ಕಲ್ಲೇಶ ಬಿಟ್ಟರೆ ಮತ್ತೊಂದು ಮನುಷ್ಯಪ್ರಾಣಿ ಮನೆಯಲ್ಲಿಲ್ಲ. ಮತ್ತ್ಯಾಕೆ ಆ ಮೊರೆ ಹೋಗುವ ಹಾಡಿಗೆ ನಿಮ್ಮ ಈ ಕಲ್ಲೇಶ್ವರಿ ಮೊರೆ ಹೋದದ್ದು? ಸಾಲದ್ದಕ್ಕೆ ಸಾಹಿತ್ಯ ಬದಲಿಸಿ ಹಾಡುವ ದರ್ದೇಕೆ ಅಂತಿದ್ದೀರಾ? ತಾಳಿ, ತಾಳಿ ನೀವುಗಳೂ 'ದಾರಿಕಾಣದಾಗಿದೆ ರಾಘವೇಂದ್ರನೇ...' ಶುರು ಹಚ್ಕೋಬೇಡಿ. ಅಲಕ್ಷೇಶ್ವರ ಕಲ್ಲೇಶನೊಡನೆ ದಿನದಿನದ ಸಮಸ್ಯೆ ಏನೆಂಬುದರ ವಿವರ ಇಲ್ಲಿದೆ, ಓದಿ ನೀವೇ ನಿರ್ಧರಿಸಿ.

ಎಂದಿನಂತೆ ಅಂದೂ ಕೂಡ ಬೆಳಗಿನ ಕೆಲಸದ ನಂತರ ದಿನಪತ್ರಿಕೆಯಲ್ಲೊಮ್ಮೆ ಕಣ್ಣಾಡಿಸಿದ ಕಲ್ಲಿ ಸ್ನಾನಕ್ಕೆ ಹೋದವಳು ಬಚ್ಚಲು ಸ್ವಚ್ಚಗೊಳಿಸಲೆಂದು ಸಿಂಕು, ಕಮೋಡಿಗೆ ಹಾರ್ಪಿಕ್ಕು ಸುರಿದಳು. ನಂತರ ಬ್ರಶ್ಶಿಂದ ನೆಲ ತಿಕ್ಕುತ್ತಿರುವಾಗ ಬಕೀಟಿಗೆ ಬೀಳುತ್ತಿದ್ದ ನೀರು ನಿಂತಿತ್ತು! ಸಂಪಿಂದ ಓವರ್ ಹೆಡ್ ಟ್ಯಾಂಕಿಗೆ ನೀರು ಏರಿಸಿಲ್ಲವೆಂದು ನೆನಪಾದದ್ದು ಆಗಲೇ. ಹೊರ ಬರುವ ಸ್ಥಿತಿಯಲ್ಲಂತೂ ಅವಳಿರಲಿಲ್ಲ. ಬಾಗಿಲನ್ನು ಸ್ವಲ್ಪವೇ ತೆರೆದು ಇಣುಕುತ್ತಾ 'ರೀ... ಏನ್ರೀ!... ಏನೂಂದ್ರೆ ಎಲ್ಲಿದ್ದೀರಿ?' ಗಂಟಲಿನ ವಾಲ್ಯೂಮು ಮಧ್ಯಗತಿಯಿಂದ ತಾರಕಕ್ಕೇರಿಸಿದರೂ ಅಲಕ್ಷ್ಯ ಸ್ವಭಾವದ ಕಲ್ಲೇಶನಿಗೋ ಕೇಳುವ ಮಾತೇ ಇಲ್ಲ. ತಾನಾಯಿತು ತನ್ನ ಜಗತ್ತಾಯಿತು, ಮೊಬೈಲಲ್ಲೇನಾದರೂ ಹೊಕ್ಕನೆಂದರೆ ಸುತ್ತಲಿನ ಪರಿವೆಯೇ ಇರುವುದಿಲ್ಲ. ಪಡಸಾಲೆಯ ಸುಖಾಸನದಲ್ಲೇ ಕುಳಿತಿದ್ದರೂ ಹಾರು ಹೊಡೆದ ಬಾಗಿಲಿಂದ ಹೊಕ್ಕ ಕಳ್ಳ ಮನೆಯನ್ನು ಗುಡಿಸಿ ಗುಂಡಾಂತರ ಮಾಡಿದರೂ ತಿಳಿಯದಷ್ಟು ತಲ್ಲೀನತೆ. ಇನ್ನು ಮಹಡಿಯ ರೂಮೆಂಬ ಗುಹೆ ಹೊಕ್ಕು ಮೊಬೈಲಲ್ಲಿ ಹರಟೆ ಅಥವಾ ನ್ಯೂಸ್ ಚಾನಲ್ಲಲ್ಲಿ ಮುಳುಗಿದರಂತೂ ಪರಿಸ್ಥಿತಿಯಿನ್ನೂ ಅಧ್ವಾನ. ಡೋಲು ಬಜಾಯಿಸಿದರೂ ಕೇಳದು. ಹಾಗಿದ್ದಾಗ ಇವಳ ಯಕಃಶ್ಚಿತ್ ಕೂಗು? ಚಾನ್ಸೇ ಇಲ್ಲ.



ಮೋಟರು ಆನ್ ಮಾಡದೇ ನೀರಿಲ್ಲ, ನೀರಿಲ್ಲದಿರೆ? ಮತ್ತೆ ಮತ್ತೆ ರೀಕಾರ ಹಾಕಿದ್ದು ವ್ಯರ್ಥವಾಗಿ ಕಲ್ಲಿ ನಖಶಿಖಾಂತ ಉರಿದಿದ್ದಳು. ಮತ್ತೂ ಏರುಧ್ವನಿ ಮಾಡುವಂತಿಲ್ಲ 'ಆತನೇನು ಚಿಕ್ಕ ಹುಡುಗನೇ ಹಾಗೆ ಕೂಗ್ತಾಳಲ್ಲಾ, ಸ್ವಲ್ಪಾನೂ

ಮ್ಯಾನರ್ಸೇ ಇಲ್ಲ. ಗಂಡಸ್ರಿಗೆ ನೂರೆಂಟು ತಾಪತ್ರಯ ಇರುತ್ವೆ....' ಅಕ್ಕಪಕ್ಕದವರು ಆಡಿಕೊಂಡಾರೆಂಬ ಭಯ. ಜೋರುಧ್ವನಿಯಲ್ಲಿ ಅ ರೀತಿ ಕೂಗಿಸಿಕೊಳ್ಳಲು ಪತಿರಾಯಂಗೇನೂ ಅಭ್ಯಂತರವಿಲ್ಲ ಆದರೆ ಮರ್ಯಾದೆ ಆಕೆಗೇ! ಥಟ್ಟನೆ ಚರವಾಣಿಯ ನೆನಪಾಗಿ ಬಚ್ಚಲಿನ ಕಿಟಕಿಯೆಡೆ ನೋಡಿದಳು, ಅದಲ್ಲಿರಲಿಲ್ಲ. ಬಚ್ಚಲು ತೊಳೆಯುವಾಗ ಅದನ್ನವಳು ಒಳಗೆ ತರುತ್ತಿರಲಿಲ್ಲ. ಮತ್ತೊಮ್ಮೆ ಬಾಗಿಲನ್ನು ಓರೆಯಾಗಿಸಿ ಹಣಕಿದಳು, ಅಲ್ಲಿತ್ತದು! ಅದಿಲ್ಲದೇ ಕೆಲಸವಾಗದೆಂದು ಸುತ್ತಲೂ ಗಮನಿಸಿ ಅಧ್ವಾನ ಸ್ಥಿತಿಯಲ್ಲೇ ಹೊರಬಂದು ಚರವಾಣಿಯ ಸಮೇತ ಶರವೇಗದಲ್ಲಿ ಬಚ್ಚಲು ಸೇರಿಕೊಂಡು ಫೋನಾಯಿಸಿದಳು. 'ಯಾರೇ ಕೂಗಾಡಲಿ.... ಊರೇ ಹೋರಾಡಲಿ, ನಿನ್ನ ನೆಮ್ಮದಿಗೆ ಭಂಗವಿಲ್ಲ, ಎಮ್ಮೆ ನಿನಗೆ ಸಾಟಿಯಿಲ್ಲ....' ಆಹಾ! ಆವಯ್ಯಂಗೆ ತಕ್ಕನಾದ ರಿಂಗ್ ಟೋನು. ಸಧ್ಯ! ಯಾರೊಂದಿಗೂ ಪಂಟು ಹಚ್ಚಿಲ್ಲ ಅನ್ನೋದೇ ಸಮಾಧಾನ. ಅಂತೂ ರಿಂಗ್ ಟೋನು ನಿಂತು 'ಹಲೋ....ಏನೇ ನಿಂದು?' ನಿಧಾನಗತಿಯ ರಾಗಕ್ಕೆ ರೊಯ್ಯನೇರಿದ ಪಿತ್ತ ನೆತ್ತಿ



ದಾಟಿದರೂ ಗಂಟಲ ಟೋನನ್ನು ಹತೋಟಿಯಲ್ಲಿಟ್ಟುಕೊಂಡೇ 'ರೀ! ಸ್ವಲ್ಪ ಕೆಳಗೆ ಬಂದು ಮೋಟರು ಆನ್ಮಾಡ್ತೀರಾ, ನೀರು ಖಾಲಿಯಾಗಿದೆ' ಎಂದಳು. "ಅಲ್ವೇ....ನೀನೇ ಆ ಕೆಲ್ಸ ಮಾಡ್ಬಾರ್ದಾ? ರಾತ್ರಿ ನಿದ್ರೆ ಆಗದ್ದಕ್ಕೆ ತಲೆ ಭಾರವಾಗಿತ್ತು. ಭಾರ ಇಳಿಸೋಕೆ ಮಲಗಿದ್ದೆ ಕಣೇ, ಸುಮ್ಸುಮ್ನೇ ಕಿರುಚಿ ಎಬ್ಬಿಸಿಬಿಟ್ಯಲ್ಲೇ...." ಗೊಣಗಾಟ ಕೇಳುತ್ತಲೂ "ರೀ! ಬಚ್ಚಲಲ್ಲಿದ್ದೀನ್ರೀ.... ಬೇಗ ಬನ್ನೀಂದ್ರೆ...."

ಅಂತೂ ಮಂಚ ಬಿಟ್ಟೆದ್ದ ಕಲ್ಲೇಶ ಧಾವಂತ ಮಾಡಿಕೊಳ್ಳದೆ ಮೆಲ್ಲನೆ ಸೋಪಾನದಿಂದಿಳಿದು ಬೋರ್ಡನ್ನು ಸಮೀಪಿಸಿ ಪುಡಾರಿ ಟೇಪು ಕತ್ತರಿಸಿ ಉದ್ಘಾಟಿಸುವಂತೆ ಗಾಂಭೀರ್ಯದಿಂದ ಮೋಟಾರಿನ ಸ್ವಿಚ್ಚು ಒತ್ತಿದ. ಇಷ್ಟೆಲ್ಲಾ ಆಗಿ ನೀರು ಮೂವತ್ತಡಿ ಏರಿ ಮತ್ತೆ ಇಪ್ಪತ್ತೈದಡಿ ಕೆಳಗಿಳಿದು ನಳದಲ್ಲಿ ಬರಲು ಹತ್ತು ನಿಮಿಷವಾದರೂ ಬೇಕು! ಅಲ್ಲಿಯವರೆಗೂ ದುರವಸ್ಥೆ ಮರೆಯಲು ಗುನುಗತೊಡಗಿದ್ದಳು 'ದಾರಿ ಕಾಣದಾಗಿದೆ ರಾಘವೇಂದ್ರನೇ....ನಳದಿ ನೀರು ಕರುಣಿಸು ಯೋಗಿವರ್ಯನೇ....' ಸಾಹಿತ್ಯವನ್ನು ಸಂದರ್ಭಕ್ಕೆ ತಕ್ಕಂತೆ ತಿರುಚಿ ಹಾಡುವುದು ಕಲ್ಲೇಶ್ವರಿಗೆ ಸಿದ್ಧಿಸಿತ್ತು ಅಲ್ಲದೇ ಫ್ರಸ್ಟ್ರೇಷನ್ನಿಂದ ಹೊರಬರಲು ಕಂಡುಕೊಂಡ ಉಪಾಯವೂ ಆಗಿತ್ತು. ಈಗದು ಲಯ ತಪ್ಪದ ಬಚ್ಚಲ ಸಾಹಿತ್ಯವಾಗಿ ಮಾರ್ಪಟ್ಟಿತ್ತು. ಸಿಂಟೆಕ್ಸಿನ ತಳದ ಮಣ್ಣು ಕರಡಿ ರಾಡಿ ನೀರು ನಳದಲ್ಲಿಳಿದು ಕಾಯುವಿಕೆ ಹೆಚ್ಚಿ ಕೊನೆಗೂ ಸ್ವಚ್ಛತಾ ಕಾರ್ಯಕ್ರಮ ಮುಗಿಸಿ ತಲೆಸ್ನಾನದಲ್ಲಿ ತೊಡಗಿದ್ದಾಗ ನೀರು ಓವರ್ ಫ್ಲೋ ಆಗಿದ್ದು ಕೇಳಿಸಿತು. ಮುಖದ ಸೋಪನ್ನು ಒರೆಸಿಕೊಳ್ಳುತ್ತಾ ಮತ್ತೆ

'ರೀ' ಮೀಟಿದಳು. ಆರು ದಿನಕ್ಕೊಮ್ಮೆಯಷ್ಟೇ ನೀರು ಬರೋದು, ಹೀಗೆ ಶೇಖರಿಸಿಟ್ಟ ನೀರು ಪೋಲಾದ್ರೆ ಎರಡು ದಿನಕ್ಕೂ ಸಾಕಾಗಲ್ಲ.... ಇವ್ರ ಜೊತೆ ಏಗಿ ಸಾಕಾಯ್ತು. ಎಲ್ಲವನ್ನೂ ನೆನಪಿಸ್ತಾ ಇರೋದೇ ಆಗೋಯ್ತು....ಯಾವಾಗ್ಲೂ ಹೇಳ್ತಿರೋಕೆ ನಂಗಂತೂ ಬೇಸ್ರ, ಹೇಳಿಸ್ಕೊಳ್ಳೋಕೆ ಅವ್ರಿಗಾದ್ರೂ ಬೇಸರ ಆಗಲ್ವೇ. ದಾರಾವಾಹಿಗಳಲ್ಲಿ ತೋರಿಸುವಂತೆ ಸ್ವಗತ ಶುರುಹಚ್ಚಿಕೊಂಡಳು. ಮತ್ತೆ 'ರೀ!' ಎನ್ನುತ್ತಲೇ ಕೈಯೊರೆಸಿಕೊಂಡು ಫೋನಾಯಿಸಿದಳು.

'ಮತ್ತೇನೇ ನಿಂದ್ರಗಳೆ?' ಕಲ್ಲೇಶಿಯ ಸಿಡುಕಿಗೆ "ಎಲ್ಲಿದ್ದೀರಾ? ಆಗ್ಲೇ ಮೇಲಿನ್ರೂಮು ಸೇರ್ಕೊಂಡ್ರಾ? ನೀರು ಓವರ ಫ್ಲೋ ಆಗಿ ವೇಸ್ಟ್ ಆಗ್ತಿರೋದು ಗೊತ್ತಾಗ್ತಿಲ್ವಾ? ಬೇಗ ಬಂದು ಬಂದ್ ಮಾಡೀಂದ್ರೆ" ನೆಮ್ಮದಿಯಿಂದ ಸ್ನಾನವನ್ನೂ ಮಾಡುವಂತಿಲ್ಲ, ಹೊರಬಂದವಳು ಧುಮುಗುಡುತ್ತಿದ್ದಳು. "ಅಲ್ರೀ, ನೀರು ಏರಿಸೋಕಂತ ಸ್ವಿಚ್ಚು ಹಾಕಿದವ್ರು ತುಂಬಿದ ಮೇಲೆ ಬಂದ್ ಮಾಡಬೇಕು ಅನ್ನೋದು ಗೊತ್ತಿಲ್ವಾ, ಅದೂ ಹೇಳ್ಬೇಕಾ.... ಕಾಮನ್ ಸೆನ್ಸು ರೀ. ಅಷ್ಟಕ್ಕೂ ರೂಮು ಸೇರ್ಕೊಳ್ಳೋ ಅವುಸ್ರ ಏನಿತ್ತು? ಎಲ್ಲಾದಕ್ಕೂ ನಾನೇ ಸಾಯ್ಬೇಕು" ಕೂಗಿಗಾಗಲಿ, ರೇಗಿಗಾಗಲಿ ಪ್ರತಿಕ್ರಯಿಸದಿದ್ದಾಗ ಕೋಪ ಮತ್ತಷ್ಟು ಹೆಚ್ಚಿತ್ತು.

"ಈಗೇನು? ಬಂದ್ ಮಾಡಿದ್ನಲ್ಲಾ...." ತಣ್ಣನೆ ನುಡಿದ.

"ಕೆಲಸದಲ್ಲಿದ್ದಾಗ ನೂರೆಂಟು ಚಿಂತೆ, ಟೆನ್ಶನ್ನು ಸಹಜ; ಅದಕ್ಕೇ ಅಲಕ್ಷ್ಯ, ಮರೆವು ಅನ್ನೋ ನೆಪ ಆಯ್ತು. ಈಗ್ನೋಡಿದ್ರೆ ರಿಟೈರ್ಡ್ ಆದ್ಮೇಲೂ ಅದೇ ವರಸೆ ಮುಂದ್ವರ್ಸಿದ್ದೀರಲ್ಲಾ, ಕೊನೇಪಕ್ಷ ದಿನನಿತ್ಯದ ಕೆಲಸಕ್ಕಾದ್ರೂ ಗಮನ ಕೊಡೀಪ್ಪಾ. ನಂಗೂ ವಯಸ್ಸಾಗ್ತಿಲ್ವೇ? ನೀವಾಗೇ ತೋಚ್ಕೊಂಡು ಮಾಡ್ತೀರಿ ಅಂದ್ರೆ ಊಹೂಂ! ಹೋಗ್ಲಿ, ನಾ ಹೇಳಿದಾಗಾದ್ರೂ ಮಾಡ್ತೀರಾ.... ಅದೂ ಇಲ್ಲ. ಎಷ್ಟು ಸಲ ಕೂಗಿದ್ರೂ ಹ್ಞಾನೂ ಇಲ್ಲಾ, ಹ್ಞೂನೂ ಇಲ್ಲ. ಕೆಲವೊಮ್ಮೆ ನಾ ಕರೆಯೋದು ಎಷ್ಟು ಜೋರಾಗಿರುತ್ತೆ ಅಂದ್ರೆ ಅಕ್ಕಪಕ್ಕದ ಮನೆಯ 'ರೀ' ಗಳಿಗೆಲ್ಲಾ ಕೇಳ್ಸಿ ಬಂದ್ಬಿಡ್ತಾರೇನೋ ಅನ್ಸುತ್ತೆ...." ಸಿಟ್ಟಿಂದ ವ್ಯಂಗ್ಯವಾಡಿದರೂ ಪರಿಣಾಮ ದೊಡ್ಡ ಕುಂಬಳಕಾಯಿ! ತನಗಲ್ಲವೆಂಬಂತೆ ಕಲ್ಲೇಶಿ ಮೋಬೈಲಲ್ಲಿ ಮುಳುಗಿ ಮಹಡಿಯ ಗುಹೆ ಹೊಕ್ಕಾಗಿತ್ತು. ಅಷ್ಟು ಕೂಗಾಡಿದ ನಂತರ ಕಲ್ಲಿಯ ಕೋಪ ಇಳಿದಂತಾಗಿ ಅಡುಗೆಯ ಕೆಲಸದಲ್ಲಿ ತೊಡಗಿದಳು. ಇಂತಹ ಪಾಡು ದಿನಕ್ಕೊಂದಾವರ್ತಿಯಂತೂ ಇದ್ದದ್ದೇ.

ಮರೆಗುಳಿ ಕಲ್ಲೇಶಿಯ ಸ್ವಭಾವ ನಗುವೂ ತರಿಸುತ್ತಿತ್ತು, ರೇಗುವಂತೆಯೂ ಮಾಡುತ್ತಿತ್ತು. ಮೇಲ್ನೋಟಕ್ಕವ ಶಾಂತಮೂರ್ತಿಯಂತೆ ಕಂಡರೂ ಚಿಕ್ಕ ವಿಷಯಕ್ಕೂ ಬೇಗನೆ ಆತಂಕಿತನಾಗುತ್ತಿದ್ದ. ಆದರಷ್ಟೇ ಬೇಗ ಕಲ್ಲಿಗೆ ಸಮಸ್ಯೆ ರವಾನಿಸಿ ನಿಶ್ಚಿಂತನೂ ಆಗುತ್ತಿದ್ದ. ಇದೀಗ ಹೊಸ ಸಮಸ್ಯೆಯೊಂದು ಉದ್ಭವಿಸಿತ್ತು.

"ಲೇ.... ಕಲ್ಲೇಶ್ವರೀ! ನನ್ನ ಪಚ್ಚೆ ಉಂಗ್ರ ಕಾಣ್ತಿಲ್ವಲ್ಲೇ ಅರವತ್ತಾವ್ರದ್ದು ಕಣೆ, ನೀನೇನಾದ್ರೂ ನೋಡದ್ಯಾ?"



"ರಾಮ್ರಾಮಾ! ಎಲ್ಲಿಟ್ಟಿದ್ರೀ? ನೆನಪಿಸ್ಕೊಳ್ಳಿ. ಟೆನ್ಶನ್ ಮಾಡ್ಕೋಬೇಡಿ, ಸರ್ಯಾಗಿ ಹುಡುಕಿ ಸಿಗುತ್ತೆ. ಅದನ್ಯಾಕೆ ತೆಗದ್ರೀ?"

"ಶಲ್ಯ ಹಿಂಡ್ತಾಕ್ತಿದ್ದೆ.... ಅದಕ್ಕೇ ತೆಗೆದಿಟ್ಟಿದ್ದೆ...."

"ಸರಿಹೋಯ್ತು! ಮೈತುಂಬಾ ಕೆಲಸ ಸಾಲ್ದಂತ ಹುಡುಕಾಟಾನೂ ಮಾಡ್ಬೇಕಾ?

ಎಲ್ಲಿ ಹಿಂಡಿದ್ದು? ಅಲ್ಲೇ ಇಟ್ಟಿರ್ಬೇಕು ನೋಡಿ, ಗಾಬರಿಯಾಗ್ಬೇಡಿ...."

"ನೋಡ್ದೆ ಕಣೆ, ಕಾಣ್ತಿಲ್ಲ...." ಬಾಲ ಸುಟ್ಟ ಬೆಕ್ಕಂತೆ ಠಳಾಯಿಸತೊಡಗಿದ, ನಗು ಬಂದಂತಾದರೂ ಕಲ್ಲೇಶನ ಟೆನ್ಶನ್ನು ಅವಳನ್ನಾಗಲೇ ಆವರಿಸಿತ್ತು. ಸಮಸ್ಯೆಯ ಜಾಡು ಹಿಡಿದು ಬಗೆಹರಿಸುವುದು ಕಲ್ಲಿಯ ಜಾಯಮಾನ. ಮಹಡಿಯ ಕೋಣೆ, ಮಂಚದ ಮೇಲೆ ಕೆಳಗೆ, ಕಿಟಕಿ, ಬಚ್ಚಲು, ಹಿತ್ತಲು, ಟೇಬಲ್ಲು, ಶೆಲ್ಫು, ಸೋಫಾ ಸಂದಿಯಲ್ಲೆಲ್ಲಾ ಜಾಲಾಡಿದರೂ ಸಿಗಲಿಲ್ಲ. ನಿಧಾನವಾಗಿ ಹುಡುಕೋಣವೆಂದು ಅಡುಗೆ ಕೆಲಸದಲ್ಲಿ ತೊಡಗಿದಳು. ಕೆಲಸದ ಹುಡುಗಿ ಬಂದು ಹೋಗಿದ್ದಳು. ಅವಳನ್ನು ಸಂಶಯಿಸುವಂತಿಲ್ಲವಾದರೂ ಬಿಡುವಂತೆಯೂ ಇಲ್ಲ. ಸಮಸ್ಯೆ ದಾಟಿಸಿದ ಕಲ್ಲೇಶನೀಗ ನಿರಾಳ, ಸ್ನಾನಕ್ಕೆಂದು ಹೋದವ ಹೊರಬಂದು ಅಡುಗೆ ಮಾಡುತ್ತಿದ್ದ ಕಲ್ಲಿಗೆ ಹೇಳಿದ. "ಲೇ ಇವಳೇ! ಶಲ್ಯ ನೆನಸಿಟ್ಟ ಸೋಪು ನೀರನ್ನ ಕಮೋಡಿಗೆ ಸುರಿದೆ 'ಠಣ್ಣ್!' ಅಂತು ಕಣೆ.... ನಾನಾಗ್ಲೇ ಅಂದ್ಕೊಂಡೆ ಉಂಗ್ರ ಬಕೀಟಲ್ಲಿ ಬಿದ್ದಿರಬಹುದು ಅಂತ"

"ಹೂಂ ಅಂದ್ಕೋತೀರಾ, ಮತ್ತೆ ಅಲ್ಲಿಟ್ಟೆ ಇಲ್ಲಿಟ್ಟೆ ಅಂದಿದ್ಯಾಕೆ, ನೀರು ಕಮೋಡಿಗೆ ಸುರ್ದಿದ್ಯಾಕೆ? ಫ್ಲಶ್ ಮಾಡಿಲ್ಲ ತಾನೇ...ಇರಿ, ನಾ ನೋಡ್ತೇನೆ..." ಅಂದ್ಲು.

"ನಿನ್ನ ಸ್ನಾನ ಆಗಿದ್ಯಲ್ಲೇ... ನಾನೇ ನೋಡಲಾ?"

"ಸಧ್ಯ, ಈಗಾಗಿರೋದೇ ಸಾಕು. ಗ್ರಹಗತೀನ ಸರೀ ಪಡಿಸ್ಕೊಳ್ಳೋಕಂತ಼್ಲೇ ದುಡ್ಡು ಸುರ್ದು ಪಚ್ಚೆ ಉಂಗ್ರ ಮಾಡಿಸ್ಕೊಂಡದ್ದಲ್ವೇ, ಇನ್ನೇನೋ ಎಡವಟ್ಟು ಮಾಡಿ ಪೇಚಾಡೋದು ಬೇಡ. ನಾನೇ ನೋಡ್ತೀನಿ ಬಿಡಿ..."

ಪೂರ್ತಿ ನಿರಾಳನಾದವ ದೂರದರ್ಶನದ ವೀಕ್ಷಣೆಯಲ್ಲಿ ಮುಳುಗಿದ. ದೇವ್ರೇ, ಉಂಗುರ ಸಿಗಲಪ್ಪಾ ಅಂತ ಪ್ರಾರ್ಥಿಸುತ್ತಾ ಕಮೋಡಿಗೆ ಕೈ ಹಾಕಿದಾಗ ಅದಲ್ಲಿತ್ತು! ಡೆಟಾಲ್ ನೀರಲ್ಲಿ ಮುಳುಗಿಸಿಟ್ಟು ತಲೆಸ್ನಾನ ಮಾಡಿ ಹೊರಬಂದವಳು 'ಸಿಕ್ತು ರೀ ನಿಮ್ಮುಂಗ್ರ' ಅಂದಳು. ಗೊತ್ತಿತ್ತು ಎಂಬಂತೆ ಕಲ್ಲೇಶಿ ಹೊರಟ. ಎಲ್ಲಿಗೆಂದು ಕೇಳಿದಾಗ 'ಗೌಳಿ ಚಂದ್ರು ಕಡೆ ಕಣೆ, ಗೋಮೂತ್ರ ಇಸ್ಕೊಂಡು ಬರ್ತೀನಿ... ಉಂಗ್ರ ಶುದ್ಧ ಮಾಡ್ಬೇಕು' ಉತ್ತರಿಸಿದ. ಉಂಗುರದ ಪ್ರಕರಣಕ್ಕೆ ಬರೋಬ್ಬರಿ ಮೂರು ತಾಸು ವೇಸ್ಟಾದರೂ ಸಮಾಧಾನವಂತೂ ಇತ್ತು. ಇನ್ನು ಕಲ್ಲೇಶಿ ಹಿಂದಿರುಗುವುದು ಕನಿಷ್ಟ ತಾಸಿನ ನಂತರವೇ ಎಂದುಕೊಳ್ಳುತ್ತಿದ್ದವಳಿಗೆ ಗೇಟು ತೆರೆದ ಶಬ್ದ ಕೇಳಿಸಿತು. ನೋಡಲು ಕಲ್ಲೇಶಿ!

"ಏನ್ರೀ, ಇಷ್ಟು ಬೇಗ ಬಂದ್ರೀ?"

"ದನಗೋಳೆಲ್ಲಾ ಮೇಯೋಕೆ ಹೋಗಿವೆಯಂತೆ, ಬೆಳಗ್ಗೆ ಬರೋಕೆ ಹೇಳ್ದ..."

"ರೀ, ಶುದ್ಧ ಆಗ್ಲೀ ಅಂತಲೇ ನಾನೂ ಡೆಟಾಲು ನೀರಲ್ಲಿ ಹಾಕಿಟ್ಟಿರೋದು. ನಿಮ್ಮ ಉಂಗ್ರಕ್ಕೆ ಡಬಲ್ ಶುದ್ಧ ಆಗೋ ಮಹಾಯೋಗ. ಹೋಗ್ಲಿ ಬಿಡಿ, ಈಗಲಾದ್ರೂ ಸ್ನಾನ ಮಾಡ್ಕೊಳಿ" ಅಂತೂ ಕಲ್ಲೇಶಿಯನ್ನು ಬಚ್ಚಲಿಗೆ ಅಟ್ಟಿದ್ದಾಯಿತು. ಅರ್ಧ ಗಂಟೆಯ ನಿರಾತಂಕ ಸ್ನಾನ ಮುಗಿಸಿ ಹಬೆಯಾಡುತ್ತಾ ಹೊರಬಂದವ ಮೊದಲು ಅಪರಾಹ್ನದ ಸಂಧ್ಯಾವಂದನೆಯಲ್ಲಿ ತೊಡಗಿದ. ಏರುಸ್ವರದಲ್ಲಿ ಸ್ತೋತ್ರ ಪಠಣ, ಗಂಟೆಯ ಗಣಗಣ ಅವಿರತವಾಗಿ ಸಾಗತೊಡಗಿತು. ಅಡುಗೆ ಮನೆಯಲ್ಲಿರುವ



ರೇಡಿಯೋದಲ್ಲಿನ ನಾಟಕ ಕೇಳಿಸಿಕೊಳ್ಳುತ್ತಾ ಅಡುಗೆಯಲ್ಲಿ ತೊಡಗಿದ್ದವಳಿಗೆ ಆತನ ಏರುಧ್ವನಿ, ಗಂಟೆಯ ತೂಗುವಿಕೆಗೆ ಕೇಳದಂತಾಗಿ ರಸಭಂಗವಾಯಿತು.

"ರೀ, ಸ್ವಲ್ಪ ನಿಧಾನಕ್ಕೆ ಹೇಳ್ಕೋಬಾರ್ದೇ? ಬೆಳ್ಬೆಳಗ್ಗೆ ಪೂಜೆ ಮಾಡಿಸ್ಕೊಂಡು ಮಲಗಿರೋ ಅಕ್ಕಪಕ್ಕದ ಮನೆಯ ದೇವ್ರುಗಳಿಗೆ ಮಂತ್ರ ಕೇಳ್ಸಿ ಬೆಳಗಾಯ್ತೇನೋ ಅಂತ ಕನ್ಫ್ಯೂಸ್ ಆಗಿ ಎದ್ಬಿಟ್ಟಾರು. ಆ ಮನೆಯವ್ರೆಲ್ಲಾ ಬೆಳಗ್ಗೆಯೇ ಪೂಜೆ ಮುಗ್ಸಿ ಗಂಟೆ ತೂಗಿ ದೇವ್ರುಗಳನ್ನ ಮಲಗ್ಸಿರ್ತಾರೇಂದ್ರೆ...." ಕಲ್ಲಿಯ ಮೊನಚು ವ್ಯಂಗ್ಯಕ್ಕೆ ಕಲ್ಲೇಶನದ್ದು ಎಂದಿನ ಉಭಶುಭ ನಾಸ್ತಿ ಧೋರಣೆ. ರೇಡಿಯೊ ಕೇಳದಂತಾದಾಗ ಅದರ ಕಿವಿ ತಿರುಪಿದಳು.

ನಮ್ಮ ಕಲ್ಲೇಶಿಯ ಅವಾಂತರ ಒಂದೆರಡೇ, ಯಾವುದೇ ಕೆಲಸಕ್ಕೂ ಧಾವಂತ, ನಿಗದಿತ ಸಮಯವಿಲ್ಲ. ಬೆಳಗಿನ ವ್ಯಾಯಾಮ, ತಿಂಡಿ, ಸ್ನಾನ, ಪೂಜೆ, ಊಟ, ನಿದ್ರೆ ಎಲ್ಲವೂ ಅಸ್ತವ್ಯಸ್ತ. ಬ್ಯಾಂಕು, ಬಿಲ್ಲು, ಪೋಸ್ಟಾಫೀಸು ಮುಂತಾದ ಕೆಲಸಕ್ಕೆ ಸವಡಾಗುತ್ತಿದ್ದದ್ದೇ ಮಧ್ಯಾಹ್ನ ಒಂದರ ನಂತರ. ಒಮ್ಮೆ ಬಿಸಿಲಾದರೆ, ಮತ್ತೊಮ್ಮೆ ಮಳೆ, ಮಗದೊಮ್ಮೆ ಊಟದ ನೆಪ ಹೂಡಿ ನಂತರ ರೆಸ್ಟೆಂದು ಕೆಲಸ ಮುಂದೂಡುತ್ತಿದ್ದ. ಬೆಳಗ್ಗೆ ಬೇಗ ಪೂಜೆ ಮುಗಿಸಿ ಹೊರ ಹೋಗಿರೆಂಬ ಕಲ್ಲಿಯ ಸಲಹೆಯನ್ನು ಸರ್ವಥಾ ಪಾಲಿಸುತ್ತಿರಲಿಲ್ಲ. ಬಿಲ್ ಕಟ್ಟಲು ಕೊನೇ ದಿನಾಂಕ ಸಮೀಪಿಸುವವರೆಗೂ ಸುಮ್ಮನಿದ್ದು ನೆನಪಿಸಿದ ನಂತರವೇ ಕಾರ್ಯೋನ್ಮುಖನಾಗುತ್ತಿದ್ದ. ಮಟಮಟ ಮಧ್ಯಾಹ್ನದ ನಂತರವೇ ಹೊರಟು ಹಿಂದಿರುಗುವಷ್ಟರಲ್ಲಿ ದೇಹದಲ್ಲಿನ ನೀರು, ಸಿಹಿ, ಉಪ್ಪೆಲ್ಲವೂ ತಳ ಕಚ್ಚಿ ನಿತ್ರಾಣನಾಗಿರುತ್ತಿದ್ದ. ಅವ ಮನೆಗೆ ಬರುವವರೆಗೂ 'ದಾರಿ ಕಾಣದಾಗಿದೆ ರಾಘವೇಂದ್ರನೇ... ಸುರಳೀತ ಮನೆಯ ತಲುಪಿಸು ಯೋಗಿವರ್ಯನೇ...' ಸಂದರ್ಭಕ್ಕೆ ತಕ್ಕ ಬೇಡಿಕೆಯಿಡುತ್ತಿದ್ದಳು. ಈಗಲಾದರೂ ತಿಳಿಯಿತೇ ರಾಯರ ಈ ಹಾಡು ಪಾಡಾದದ್ದು; ಕಲ್ಲಿಯ ಸ್ಟ್ರೆಸ್ ಬಸ್ಟರ್ರೂ ಹೌದೆಂಬುದು?






# ಮನೆ ಬದಲಾಯಿಸಿ ನೋಡು !

ಸುಚಿತ್ರಾ ಹೆಗಡೆ, ಮೈಸೂರು

ಪ್ರತಿಯೊಬ್ಬರ ಬದುಕಿನಲ್ಲೂ ಒಂದಲ್ಲ ಒಂದು ದಿನ ಇಂತದ್ದೊಂದು ನಿರ್ಣಾಯಕವಾದ, ಬಲು ಗಂಭೀರವಾದ, ಬುಡವನ್ನೇ ಅಲ್ಲಾಡಿಸುವಂತಹ ಸನ್ನಿವೇಶ ಬಂದೇ ಬರುತ್ತೆ. ಮದುವೆಯಾಗೋದಾ? ಅಲ್ಲ, ಮಗು ಪ್ಲಾನ್ ಮಾಡೋದಾ? ಅಲ್ಲಲ್ಲ. ಸೈನ್ಯ ಸೇರುವುದಾ? ಉಹ್ದೂಂ. ನಾಳೆ ತಿಂಡಿಗೆ ಏನ್ಮಾಡೋದು ಅಂತನಾ? ಅದೂ ಅಲ್ಲ. ಅವೆಲ್ಲಕ್ಕಿಂತ ತುಂಬ ಕಷ್ಟಕರ, ಪ್ರಯಾಸಕರ ಮತ್ತು ತೀವ್ರ ಭಾವನಾತ್ಮಕವಾದ ವಿಷಯ ಇನ್ನೊಂದಿದೆ. ಮನೆ ಬದಲಾವಣೆ ಮಾರ್ರೆ.

'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಎಂದು ಒಂದು ಕಾಲದಲ್ಲಿ ಕಷ್ಟಗಳಿಗೆ ಅಳೆತೆಗೋಲಾಗಿದ್ದ ಗಾದೆ ಈಗ ಹಳೆಯದಾಯ್ತು. ಮದುವೆ ಮಾಡಿ ನೋಡುವಷ್ಟರಲ್ಲಿ ವಿಚ್ಛೇದನವಾಗಿ ಸಂಗಾತಿಯೇ ಬದಲಾವಣೆಯಾಗುವ ಈಗಿನ ಕಾಲದಲ್ಲಿ 'ಮೊಬೈಲ್ ಬಿಟ್ಟು ನೋಡು, ಮನೆ ಬದಲಾಯಿಸಿ ನೋಡು' ಅನ್ನುವಂತಹ ಗಾದೆಗಳು ಸೂಕ್ತ.

ಸಾಮಾನ್ಯವಾಗಿ ಮನೆ ಬದಲಾವಣೆ ಶುರುವಾಗುವುದು ಸಂಭ್ರಮದಿಂದಲೇ. ತುಂಬ ಮಧುರವಾದ ಕನಸುಗಳು, ಗಟ್ಟಿ ನಿರ್ಧಾರಗಳು, ಹಿಂದಿನ ಸಲದ ತಪ್ಪುಗಳಿಗೆ ಸೊಪ್ಪು ಹಾಕದಿರುವ ಛಲ, ಮತ್ತೆ ಹೊಸದಾಗಿ ಎಲ್ಲವನ್ನೂ ಆರಂಭಿಸುವ ಹುಮ್ಮಸ್ಸಿನಿಂದ ತುಂಬಿ ತುಳುಕುತ್ತದೆ. ಈ ಸಲ ಬಾಲ್ಕನಿಯಲ್ಲಿ ಒಂದು ಕ್ಯೂಟ್ ಕಾರ್ನರ್ ಸಜ್ಜುಗೊಳಿಸಿ ಬಿಸಿ ಕಾಫಿ ಕುಡಿಯುವ ಹೊಂಗನಸು ಕಂಡವರು ಕೊನೆಯಲ್ಲಿ ವಿವಿಧ ಲೇಬಲ್ಲುಗಳಿಂದ ಅಲಂಕೃತಗೊಂಡ ರಟ್ಟಿನ ಪೆಟ್ಟಿಗೆಗಳ ರಾಶಿಯ ಮಧ್ಯೆ ಮುಕ್ಕಾದ ಮಗ್ಗಿನಲ್ಲಿ ಸಕ್ಕರೆ ಕಾಣದ ಚಹಾ ಗುಟುಕರಿಸುವಾಗ ಮಂತ್ರಿಯಾಗಲು ಕನಸು ಕಾಣುತ್ತಿದ್ದವರು ಠೇವಣಿ ಕಳೆದುಕೊಂಡಾಗಿನ ಫೀಲಿಂಗು!

ಮನೆ ಬದಲಾಯಿಸುವ ಪ್ರಕ್ರಿಯೆ ಪ್ರಾರಂಭವಾಗುವುದು ಪ್ಯಾಕಿಂಗ್ ಎಂಬ ಮಹತ್ವಾಕಾಂಕ್ಷೆಯ ಯೋಜನೆಯೊಂದಿಗೆ. ಇದರ ಇನ್ನೊಂದು ಹೆಸರೇ ಮಹಾ ಐಡೆಂಟಿಟಿ ಕ್ರೈಸಿಸ್. ಉದ್ದನೆಯ ಲಿಸ್ಟುಗಳು, ವಿವಿಧ ಬಣ್ಣಗಳ ಸಂಯೋಜನೆಯ ಲೇಬಲ್ಲುಗಳು, ಬೇಡದಿರುವ ಸಾಮಾನುಗಳ ಪಟ್ಟಿಗಳು, ಬಟ್ಟೆಯ ವರ್ಗೀಕರಣ ಹೀಗೆ ಸುವ್ಯವಸ್ಥಿತವಾಗಿ ಶುರುವಾಗುವ ಕೆಲಸ ಮುಂದಿನ ಹತ್ತು ಹದಿನೈದು ನಿಮಿಷಗಳಲ್ಲಿ ಮಕ್ಕಳ ಮೊದಲನೆಯ ಬರ್ತಡೇಯ ದಿರಿಸು, ಬರೆಯದ ಪೆನ್ನುಗಳ ರಾಶಿ, ಯಾವಾಗಲೋ ತಂದು ಉಪಯೋಗಿಸದೇ ಇಟ್ಟ ಬೌಲು ಸೆಟ್ಟು, ಅಪ್ಪಚ್ಚಿಯಾಗಿರುವ ಟೆಡ್ಡಿ ಬೇರುಗಳನ್ನು ಕಂಡು ರಸ್ತೆಯನ್ನು ಅಗೆದಾದ ಮೇಲೆ ನಿಂತು ಹೋಗುವ ರಿಪೇರಿಯಂತೆ ಕಾಣುತ್ತದೆ. ಆದರೂ ಒಂದು ಮಾತನ್ನು ಮರೆಯುವಂತಿಲ್ಲ. ಅಗತ್ಯದ ಸಾಮಾನುಗಳಿಗಿಂತ ಅನಗತ್ಯ ತ್ಯಾಜ್ಯವೇ ಮನೆಯಲ್ಲಿರುವ ದಿವ್ಯ ಸಾಕ್ಷಾತ್ಕಾರವಾಗುವುದೇ ಪ್ಯಾಕಿಂಗಿನ ರಟ್ಟಿನೊಳಗೆ. 'ಮಿಸಲೇನಿಯಸ್' ಪದದ ಸೀಮಾತೀತ ವೈಶಾಲ್ಯತೆಯಲ್ಲಿ ಸಿಕ್ಕು ಸಿಕ್ಕಾದ ವೈರಿನ ರಾಶಿ, ನಿಗೂಢವಾದ ರಿಮೋಟುಗಳು, ಅಡುಗೆ ಮನೆಯ ಉಪಕರಣಗಳು, ಬ್ಯಾಂಕುಗಳಿಂದ ಬರುವ ಓದಿಯೇ ಇರದ ದಪ್ಪನೆಯ ಲಕೋಟೆಗಳು, ಬಿಚ್ಚಿಟ್ಟ ಪ್ಲಾಸ್ಟಿಕ್ಕಿನ ಕೊಳಾಯಿ, ಹಳೆ



ಮನೆಯಲ್ಲಿದ್ದ ಆಕ್ವಾಗಾರ್ಡಿನ ಫಿಲ್ಟರು ಕೂಡ ಸೇರಬಹುದು ಎನ್ನುವ ಜ್ಞಾನೋದಯವೂ ಜೊತೆಗೆ ಸೇರುತ್ತದೆ.

ಅಷ್ಟರಲ್ಲಿ ಇಟ್ಟ ಆಣೆ, ಕೊಟ್ಟ ವಚನಗಳೆಲ್ಲ ಚುನಾವಣೆಯ ನಂತರದ ದೀರ್ಘ ಧ್ಯಾನಕ್ಕೆ ತೆರಳಿರುತ್ತವೆ. ಸಿಕ್ಕಿದ್ದನ್ನೆಲ್ಲ ಯಾವುದಾದರೂ ಒಂದು ಬಾಕ್ಸಿನಲ್ಲಿ ಹಾಕುವ ಹಂತಕ್ಕೆ ಬಂದಾಗಿರುತ್ತದೆ. ಅಧಿಕಾರದ ಲಾಲಸೆಯಿಂದ ಪರಸ್ಪರ ವಿರುದ್ಧವಾದ ಪಕ್ಷಗಳು ಎಗ್ಗಿಲ್ಲದೇ ಒಂದುಗೂಡುವಂತೆ ಪಿಂಗಾಣಿ ಪಾತ್ರೆಗಳ ಜೊತೆಗೆ ಕುಟ್ಟಾಣಿ ಸೇರುತ್ತದೆ. ಬಕೆಟ್ಟಿನೊಳಗೆ ಬಟ್ಟೆ ನುಸುಳುತ್ತದೆ. ಹಳೆಯ ಸೂಟುಕೇಸುಗಳಂತೂ ಸೀರೆ, ಎಣ್ಣೆ ಬಾಟಲಿ, ಶ್ಯಾಂಪೂ ಮತ್ತು ಭಾವನಾತ್ಮಕವಾದ ಒತ್ತಡಗಳಿಂದ ಹೊಯ್ದಾಡಿ ಯಾವುದೇ ಕ್ಷಣದಲ್ಲೂ ಜಿಪ್ಪು ಬಿರಿದು ಹೊರಗೆ ಧುಮ್ಮಿಕ್ಕಲು ತಹತಹಿಸಿರುತ್ತವೆ.

ಅಂತೂ ಇಂತೂ ವಸ್ತುಗಳೆಲ್ಲ ಅತೃಪ್ತ ಶಾಸಕರಂತೆ ಪೆಟ್ಟಿಗೆಯ ಮರೆಯಲ್ಲಿ ಧುಮುಗುಟ್ಟುತ್ತಿರುವಾಗ ತೆರೆಯ ಮೇಲೆ ಸುದ್ದಿಯ ಬೈಟು ಕೊಡಲು ಬರುವವರು ಸರಕು ಸಾಗಿಸುವವರು. ಇವರಲ್ಲಿರುವುದು ಎರಡೇ ಬಗೆ. ಒಂದೋ ಮನೆಯಲ್ಲಿರುವುದನ್ನೆಲ್ಲ ಓಬೀರಾಯನ ಕಾಲದ ಸಾಮಾನುಗಳಂತೆ ಭಾವಿಸುವವರು. ಇನ್ನೊಂದು ಫ್ರಿಡ್ಜು, ವಾಷಿಂಗ್ ಮಶಿನ್ನುಗಳನ್ನು ಅಡ್ಡಲಾಗಿ ಹೊತ್ತೊಯ್ದು ತಲೆ ಕೆಳಗಾಗಿ ನಿಲ್ಲಿಸುವವರು. ಅದೆಷ್ಟೋ ಕಷ್ಟಪಟ್ಟು ಕೊಂಡು ಕೊಂಡ ಅಮೂಲ್ಯ ವಸ್ತುಗಳನ್ನು ಓಟು ಹಾಕಿದ



ಮತದಾರರಂತೆ ಭಾವಿಸಿ ಕಸಕ್ಕಿಂತ ಕಡೆಯಾಗಿ ಟ್ರಕ್ಕಿನಲ್ಲಿ ಎಸೆಯುವುದನ್ನು ನೋಡುತ್ತಿರುವಾಗ ಕಣ್ಣು ತುಂಬಿ ಬಂದರೆ ಅದು ಖಾಲಿ ಮನೆಯಲ್ಲಿ ಹಾರಾಡುವ ಧೂಳಿನಿಂದಲೇ. ಆಗ ಅತ್ಯಂತ ಮಹತ್ವದ ರಟ್ಟಿನ ಪೆಟ್ಟಿಗೆಯೊಂದು ಸಾಗಣೆಯಾಗದೇ ಮನೆಯಲ್ಲಿಯೇ ಉಳಿದುಕೊಂಡಿದ್ದು ಕಾಣಿಸುವುದೇ ಇಲ್ಲ. ಹೊಸ ಮನೆಗೆ ಹೋದ ತಕ್ಷಣ ಬೇಕಾಗುವುದೆಂದು ಜೊತೆಯಲ್ಲಿ ಇಟ್ಟುಕೊಂಡ ಚೀಲವೊಂದು ನಾಪತ್ತೆಯಾಗಿರುವುದು ಮಾತ್ರ ಮೊಬೈಲ್ ಚಾರ್ಜರ್ ಹುಡುಕುವಾಗ ಗೊತ್ತಾಗುತ್ತದೆ. ಜೊತೆಗೆ ಹಲ್ಲುಜ್ಜುವ ಬ್ರಶ್ಶು, ಪೇಸ್ಟು, ಒಳ ಉಡುಪುಗಳು, ಹಾಲುಕ್ಕಿಸಲು ಇಟ್ಟಿದ್ದ ಇಂಡಕ್ಷನ್ ಒಲೆ, ಪಾತ್ರೆ ಎಲ್ಲವೂ ಬರ್ಮುಡಾ ಟ್ರೈಯಾಂಗಲ್ಲಿನಲ್ಲಿ ಕಣ್ಮರೆಯಾಗಿರುವುದು ಖಚಿತವಾಗುತ್ತದೆ.

ಅಂತೂ ಇಂತೂ ಸಾಮಾನುಗಳೆಲ್ಲ ಹೊಸಮನೆಯೊಳಗೆ ಕತ್ತು ಬಗ್ಗಿಸಿಕೊಂಡು ಬಂದರೂ ಸಿಗ್ಗಿಲ್ಲದೇ ಸೇರಕ್ಕಿ ಒದ್ದು ಇಡೀ ಮನೆಯನ್ನು ಚೆಲ್ಲಾಪಿಲ್ಲಿಯಾಗಿಸುತ್ತವೆ. ಯಾವ ಸಾಮಾನನ್ನು ಎಲ್ಲಿಡುವುದೆಂದು ಮಾಡಿದ ಖಚಿತವಾದ ಪಟ್ಟಿಯ ಪರಿಸ್ಥಿತಿ

ಮನೆಯ ತುಂಬ ಎಲ್ಲೆಂದರಲ್ಲಿ ಬಿದ್ದ ಬಾಕ್ಸುಗಳ ಮೇಲಿನ ಲೇಬಲ್ಲುಗಳಂತೆ ತಲೆಕೆಳಗಾಗಿರುತ್ತದೆ. ಮುಂದಿನದು 'ಅದೆಲ್ಲಿ ಇದೆಲ್ಲಿ' ಎಂಬ ರಣಾಕ್ರಂದನ ಅಷ್ಟೆ. ಅರವತ್ತಾರು ಸ್ವಿಚ್ಚುಗಳಿರುವ ಮನೆಯಲ್ಲಿ ಲೈಟು ಉರಿಯುವ ಎರಡೇ ಬಲ್ಬುಗಳು, ಒಂದೇ ಪ್ಲಗ್ಗು, ಕಟ್ಟಿಕೊಂಡ ಸಿಂಕು, ಮುರಿದ ಹ್ಯಾಂಡಲ್ಲಿನ ಡ್ರಾವರು, ತೆರೆಯದ ಬಾಗಿಲಿನ ಕಪಾಟುಗಳೊಂದಿಗೆ ಮನೆ ಸಾಮಾನು ಜೋಡಿಸುವ ಯುದ್ಧ ಶುರುವಾಗುತ್ತದೆ.

ಮೂರು ದಿನಗಳಿಂದ ಸತತವಾಗಿ ನಡೆದ ಸ್ವಿಗ್ಗೀ, ಝೊಮ್ಯಾಟೊಗಳ ಊಟ, ಧೂಳಿನಿಂದ ಬಂದ ಅಲರ್ಜಿಯ ಸೀನುಗಳು, ನೆಮ್ಮದಿಯಿಂದ ಮಾಡಲಾಗದ ಶೌಚಗಳ ಹೊರತಾಗಿ ಮೈ ಕೈ ನೋವು, ದಣಿವುಗಳ ಚಕಮಕಿ ಮುಗಿದು ತಾತ್ಕಾಲಿಕ ಯುದ್ಧವಿರಾಮ ಘೋಷಣೆಯಾಗುತ್ತದೆ. ಅಷ್ಟರಲ್ಲಿ ವಿಳಾಸ ಬದಲಾವಣೆಯೆಂಬ ಮಹಾ ಸಂಗ್ರಾಮಕ್ಕೆ ಸನ್ನದ್ಧವಾಗುವ ಕಾಲ ಸಮೀಪಿಸಿ ತ್ವೇಷಮಯ ಪರಿಸ್ಥಿತಿ ಮುಂದುವರಿಯುವುದು.

ಬ್ಯಾಂಕು, ಫೋನು, ಕೇಬಲ್ಲು, ವಿದ್ಯುತ್ತು, ಗ್ಯಾಸು, ವೈ ಫೈ ಗಳ ಜೊತೆಗೆ ನೆಂಟರಿಷ್ಟರ, ಮಿತ್ರರ, ಹೊಸ ನೆರೆಕೆರೆಯವರ ಅಭಿಪ್ರಾಯಗಳೂ ಅಪ್ಡೇಟಾಗುವ ಸಂಧಿಕಾಲವಿದು. ಸರಕಾರಿ ಕಛೇರಿಯ ಉದ್ದನೆಯ ಸರತಿ ಸಾಲಿನಲ್ಲಿ ನಿಂತು ಆಧಾರ್ ಕಾರ್ಡು, ಫೋಟೋ, ಜೆರಾಕ್ಸು ಮುಂತಾದ ಕಾಗದ ಪತ್ರಗಳು ಮತ್ತು ಅಸ್ತಿತ್ವದೊಂದಿಗೆ ನಡೆಸುವ ಹೋರಾಟದ ಕ್ಷಣ., ಹಾಲು, ಪೇಪರು, ಮನೆಗೆಲಸದ ಸಹಾಯಕರು, ಹತ್ತಿರದ ಪಾರ್ಕು ಅಂತ ಹೊಸ ಹುಡುಕಾಟದ ಪರ್ವ. ಮನೆ ಬದಲಿಸುವ ಅಗತ್ಯ ಬೀಳದ, ಇದ್ದಲ್ಲೇ ಇರುವ ಜನರನ್ನು ನೋಡಿ ಉರಿದುಕೊಳ್ಳುವ ಸಮಯವೂ ಹೌದು.

ಕೊನೆಗೊಮ್ಮೆ ತಟ್ಟೆಯಲ್ಲಿ ಊಟ, ಕಪ್ಪಿನಲ್ಲಿ ಕಾಫಿ, ತಲೆಗೊಂದು ದಿಂಬು, ಹಲ್ಲುಜ್ಜುವ ಬ್ರಶ್ಶು ದೊರಕಿ, ಆಯಾ ವಸ್ತುಗಳು ಅವುಗಳ ಜಾಗಗಳಿಗೆ ಬಂದ ಭಾವನೆ ಮೂಡುತ್ತದೆ. ಅಲ್ಲಲ್ಲಿ ಚದುರಿದಂತೆ ಮಳೆಯಾಗುವ ರೀತಿಯಲ್ಲಿ ಬೇಕಾದ ವಸ್ತುಗಳು ಸಿಗದಂತಾದರೂ ಮನೆ ಬದಲಾವಣೆಯ ಪ್ರಕ್ರಿಯೆಯ ನಂತರವೂ ಬದುಕುಳಿದ ಸಾರ್ಥಕತೆ ಮೈ ಮನ(ನೆ)ಯನ್ನು ಆವರಿಸುತ್ತದೆ.

ಈಗೀಗ ಮನೆ ಬದಲಾವಣೆಯ ಸಂಪೂರ್ಣ ಹೊಣೆ ಹೊರುವ ಮೂವರ್ಸ್ ಆ್ಯಂಡ್ ಪ್ಯಾಕರ್ಸ್ ಏಜೆನ್ಸಿಗಳು ತಲೆ ಎತ್ತಿವೆಯಾದರೂ ಕೆಲವೊಮ್ಮೆ ಅವು ವಿಧಿಸುವ ದುಬಾರಿ ಶುಲ್ಕದಲ್ಲಿ ಹೊಸ ಮನೆಯನ್ನೇ ಕೊಂಡುಕೊಳ್ಳುವ ಯೋಚನೆ ಮೂಡುತ್ತದೆ. ಇನ್ನು ಅಲ್ಲಿಯೂ ಎಡವಟ್ಟುಗಳಿಗೇನೂ ಬರವಿಲ್ಲ. ಅವಘಡ ಕಣ್ಣ ಮುಂದೆ ಜರುಗಿದರೂ, ಬೆನ್ನ ಹಿಂದೆ ನಡೆದರೂ ಮನ ಮರುಗುವ ರೀತಿ ಒಂದೇ ಅಲ್ಲವೇ?

ಹಾಗೆ ನೋಡಿದರೆ ಮನೆ ಬದಲಾಯಿಸುವುದು ಕೆಟ್ಟ ಬ್ರೇಕಪ್ಪಿನಂತೆ, ಹಳಸಿದ ಸಂಬಂಧದಂತೆ ಅನಿಸುತ್ತದೆ. ಅದು ಕಷ್ಟಗಳ ಪರಂಪರೆಯನ್ನು ತರುತ್ತದೆ. ಸಹನೆಯನ್ನು ಪರೀಕ್ಷಿಸುತ್ತದೆ. ಕಂಫರ್ಟ್ ಝೋನಿಂದ ಆಚೆಗಟ್ಟುತ್ತದೆ. ಸ್ವತಃ ತೆಗೆದುಕೊಂಡ ನಿರ್ಧಾರಗಳನ್ನೇ ಪ್ರಶ್ನಿಸುವಂತಾಗುತ್ತದೆ. ಆದರೆ ಕಾಲಕ್ರಮದಲ್ಲಿ ನಗು ಮರಳುತ್ತದೆ. ನೆಲದ ಮೇಲೆ ಕೂತರೂ ಮಂದಹಾಸ ಮೂಡುತ್ತದೆ. ಯಾಕೆಂದರೆ ಸೋಫಾದ ಕುಶನ್ನುಗಳು ಇನ್ನೂ ಸಿಕ್ಕಿಲ್ಲ!



# ಡೋಕ್ಲಾ ಇನ್ನೊಂದ್ ಹಾಕ್ಲಾ

✍ಎಂ.ಎಸ್.ನರಸಿಂಹಮೂರ್ತಿ

ಮನೆಯಲ್ಲಿ ಲ್ಯಾಂಡ್‌ಲೈನ್ ಶಬ್ದವಾದಾಗ ವಿಶ್ವ ರಿಸೀವ್ ಮಾಡಿದ,

"ಹಲೋ ಯಾರು ?" ಎಂದಾಗ ಕಿಲಕಿಲ ಕೋಮಲ ದನಿ, ಮಹಿಳಾ ಸಂಘದ ಉಪಾಧ್ಯಕ್ಷೆ ಮಿಟುಕಲಾಡಿ ಮೀನ ಆ ಕಡೆಯಿಂದ ಮಾತಾಡಿದಳು,

"ಓ ವಿಶ್ವ ಅವ್ರಾ ?"

"ಅರೇ ಮೀನಾ ನನ್ನ ಧ್ವನಿ ಗುರುತು ಸಿಕ್ತಾ ?"

"ಒಂದು ಸಲ ನಿಮ್ಮ ಜೊತೆ ಮಾತಾಡಿದ ಮೇಲೆ, ನಿಮ್ಮನ್ನಾಗ್ಲಿ, ನಿಮ್ಮ ಧ್ವನಿಯನ್ನಾಗ್ಲಿ ಮರೆಯೋದುಂಟಾ ? ಹ್ಯಾಗಿದ್ದೀರಾ ?"

"ನಾನ್ ಚೆನ್ನಾಗಿದ್ದೀನಿ ಮೀನಾ, ನೀವು ಹ್ಯಾಗಿದ್ದೀರಾ ? ಲಾಸ್ಟ್ ಟೈಮ್ ಮೀಟಿಂಗ್‌ನಲ್ಲಿ ನೋಡಿದಾಗ ನೀವು ಹೆಚ್ಚು ಸ್ಮಾರ್ಟ್ ಆಗಿದ್ರಿ, ಸ್ಲಿಮ್ ಆಗಿದ್ರಿ, ಏನು ನಿಮ್ಮ ಯೌವನದ ಗುಟ್ಟು ?"

ಆ ವೇಳೆಗೆ ವಿಶಾಲು ಅಲ್ಲಿಗೆ ಬಂದು,

"ಮೀನಾ ಫೋನಾ ? ನಿಮಗೇನಿದೆ ಕೆಲಸ ಅವಳ ಹತ್ರ, ಕೊಡ್ರಿ ಇಲ್ಲಿ" ಎಂದು ಫೋನ್ ಗಂಡನಿಂದ ಕಿತ್ತುಕೊಂಡಳು,

"ಹಲೋ ಹೇಳಿ ಮೀನಾ, ನಾನು ವಿಶಾಲು ಮಾತಾಡೋದು"

ಮಹಿಳಾ ಸಂಘದಲ್ಲಿ ವ್ಯವಸ್ಥೆ ಆಗಿರುವ ಕುಕ್ಕಿಂಗ್ ಸ್ಪರ್ಧೆ ಬಗ್ಗೆ ಮೀನಾ ವಿವರಿಸಿ ಹೇಳಿದಳು.

"ಕುಕ್ಕಿಂಗ್ ಮಾಡೋಕೆ ಸಬ್ಜೆಕ್ಟ್ ಕೊಡ್ತಾ ಇದ್ದೀವಿ ಅದನ್ನ ಮನೇಲಿ ಮಾಡಿ ನೀವು ತರಬೇಕು, ಮೊದಲನೇ ಬಹುಮಾನ 10 ಸಾವಿರ ರೂಪಾಯಿ, ಎರಡನೇ ಬಹುಮಾನ 5 ಸಾವಿರ ರುಪಾಯಿ, ಸಮಾಧಾನಕರ ಬಹುಮಾನ ಮೂರು ಇವೆ, ಒಂದು ಒಂದು ಸಾವಿರ ರೂಪಾಯಿ" ಎಂದಳು. ವಿಶಾಲುಗೆ ಖುಷಿ ಆಯ್ತು.

"ಏನ್ ತಿಂಡಿ ಮಾಡಬೇಕಾಗುತ್ತೆ ನಾನು ?" ಕೇಳಿದಳು ವಿಶಾಲು.

"ಡೋಕ್ಲಾ ಮಾಡ್ಕೊಂಡ್ ತನ್ನಿ" ಎಂದಳು.

ಡೋಕ್ಲಾ ರುಚಿ ಆಗಿರುತ್ತದೆ, ವಿಶಾಲುಗೆ ತಿನ್ನೋದು ಗೊತ್ತು, ಆದರೆ ಮಾಡೋದು ಗೊತ್ತಿರಲಿಲ್ಲ.



"ರೀ ವಿಶಾಲು, ನಾನು ರೆಸಿಪಿ ಹೇಳ್ತೀನಿ ಬರ್ಕೊಳಿ" ಎಂದು ಮೀನಾ ಫೋನ್‌ನಲ್ಲಿ ಡೋಕ್ಲಾಗೆ ಬೇಕಾದ ಐಟಂಗಳನ್ನ ಹೇಳಿದಳು.

"ಮುಖ್ಯವಾಗಿ ಒಂದು ಕಪ್ ಕಡ್ಲೆಹಿಟ್ಟು"

ಕೂಡಲೇ ವಿಶಾಲು ಗಂಡನನ್ನು ಗಾಬರಿಯಲ್ಲಿ ಕರೆದಳು,

"ರೀ, ಬನ್ರೀ ಬೇಗ, ಪೇಪರ್ರು ಪೆನ್ನು ತಗೊಂಡ್ ಬನ್ನಿ, ಬರ್ಕೊಳಿ, ಕಡಲೇಹಿಟ್ಟು" ಎಂದಳು,

"ಕಡಲೇಹಿಟ್ಟು" ಎಂದು ವಿಶ್ವ ಬರೆದು, "ಬೋಂಡ ಮಾಡೋಕಾ ?" ಎಂದ.

"ತೆಪ್ಪಗಿರಿ, ಅಯ್ಯೋ ನಿಮಗಲ್ಲ ಮೀನಾ, ಇಲ್ಲಿ ನಮ್ಮ ಯಜಮಾನ್ರಿಗೆ, ಹೇಳಿ ಆಮೇಲೆ ?"



"ಅದಕ್ಕೆ ಉಪ್ಪು ಸಕ್ಕರೆ ಮೊಸರು ಹಾಕಿ ದೋಸೆ ಹಿಟ್ಟಿನ ಹದಕ್ಕೆ ಕಲೆಸಬೇಕು"

"ಮೊಸರು ಅನ್ನನಾ ? ಒಗ್ಗರಣೆ ಹಾಕಿದ್ರೆ ಚೆನ್ನಾಗಿರುತ್ತೆ" ಎಂದು ವಿಶ್ವ ಹೇಳಿದ.

"ರೀ, ತೆಪ್ಪಗೆ ಬರ್ಕೊಳಿ" ಎಂದು ವಿಶಾಲು ಗಂಡನಿಗೆ ಸನ್ನೆ ಮಾಡಿ ಬೈದಳು.

"25 ನಿಮಿಷ ನೆನೆಯಲು ಬಿಡಬೇಕು, ಆಮೇಲೆ ಈನೋ ಒಂದು ಸ್ಯಾಚೆಟ್ಟು ಹಾಕಿ ಕಲೆಸಿ, ಇಡ್ಲಿ ಥರ ಬೇಯ್ಸೋಕೆ ಪಾತ್ರೆ ರೆಡಿ ಮಾಡ್ಕೋಬೇಕು,"

"ಹೊಟ್ಟೆ ಕೆಟ್ಟಿದ್ಯೇನೇ ? ಈನೋ, ನಿನಗೋ, ಮೀನಾಗೋ ? ಕೊಡಿಲ್ಲಿ ಫೋನು ಅವರನ್ನೇ ಕೇಳ್ತೀನಿ"

"ಹೇಳಿದ್ದು ಬರ್ಕೊಳ್ರೀ, ಈನೋ ಆಯ್ತು"

"ಅದನ್ನ ಇಡ್ಲಿ ಥರ ಕುಕ್ಕರ್ನಲ್ಲಿ ಇಟ್ಟು ಬೇಯಿಸಬೇಕು, ವೇಯ್ಟ್ ಹಾಕಬಾರದು, ಬೆಂದು, ಪೂರ್ತಿ ತಣ್ಣಗಾದ ಮೇಲೆ ಆಚೆ ತೆಗೆದಿಟ್ಟುಕೊಂಡು, ಸಾಸಿವೆ ಒಗ್ಗರಣೆ ಹಾಕಿ ಅದಕ್ಕೆ ಒಂದು ಲೋಟ ಸಕ್ಕರೆ ನೀರು, ಒಂದು ನಿಂಬೇಹಣ್ಣಿನ ರಸ ಮಿಕ್ಸ್ ಮಾಡಿ ಸುರೀಬೇಕು, ಡೋಕ್ಲಾ ಹೀರಿಕೊಳ್ಳುತ್ತೆ, ಒಂದು ರೀತಿ ಕೇಕ್ ಥರ ಇರುತ್ತೆ" ಎಂದಾಗ ವಿಶಾಲುಗೆ ಖುಷಿ ಆಯ್ತು.

"ಓಹೋ ಕೇಕ್ ಅಂದ್ರೆ ನನಗೆ ಬಹಳನೇ ಇಷ್ಟ" ಎಂದಳು ವಿಶಾಲು.

"ಮೀನಾ ಬರ್ತಡೆ ಕೇಕಾ ವಿಶಾಲು ? ಹ್ಯಾಪಿ ಬರ್ತಡೇ ಮೀನಾ ಅಂತ ಈಗ್ಲೇ ಹೇಳ್ತೀನಿ ಕೊಡು ಫೋನು" ಎಂದ ವಿಶ್ವ.

"ಬರ್ತಡೇ ಕೇಕ್ ಅಲ್ಲ !" ಎಂದಳು ವಿಶಾಲು. ಮೀನಾ ವಿವರಿಸಿದಳು.



"ಹೌದು, ಕೇಕ್ ಥರನೇ ಇರುತ್ತೆ, ಸಾಫ್ಟ್ ಆಗಿರುತ್ತೆ, ತುಂಬಾ ಚೆನ್ನಾಗಿರುತ್ತೆ, ಸ್ಪಾಂಜಿಯಾಗಿರುತ್ತೆ, ಇದನ್ನ ನೀವು ಮಾಡಿ ತನ್ನಿ, ಬಹುಮಾನಗಳು ಇರುತ್ತೆ,

ನಿಮಗೂ ಒಂದು ಬಹುಮಾನ ಸಿಗಬಹುದು. ನಿಮ್ಮ ಹಬ್ಬೀನ್ನೂ ಕರ್ಕೊಂಡ್ ಬನ್ನಿ" ಎಂದು ಮೀನಾ ಫೋನ್ ಕಟ್ ಮಾಡಿದಾಗ ವಿಶ್ವ ಆನಂದ ಪಟ್ಟ. ರೆಸಿಪಿ ವಿಶಾಲು ಕೈಯಲ್ಲಿಟ್ಟು,

"ನೀನು ಹೇಳಿದ್ದೆಲ್ಲ ಬರ್ಕೊಂಡಿದ್ದೀನಮ್ಮ" ಎಂದ.

"ಮಧ್ಯೆ ಮಧ್ಯೆ ಏನ್ರೀ ನಿಮ್ ತರಲೆ ಪ್ರಶ್ನೆ ?"

"ಬರ್ಕೊಳೋಕ್ ಮುಂಚೆ ಪ್ರಶ್ನೆ ಮಾಡಬೇಕು, ಅಂತ ದೊಡ್ಡವರು ಹೇಳಿದ್ದಾರೆ"

"ಯಾರು ಹೇಳಿದ್ದು ?"

"ಡಾ॥ ಹೆಚ್.ನರಸಿಂಹಯ್ಯನವರು ಹೇಳಿದ್ದಾರೆ, ತಿಳ್ಕೊಂಡ್ ಬರ್ಕೋ, ವಿಚಾರ್ಸಿ ಬರ್ಕೋ, ಪ್ರಶ್ನೆ ಮಾಡಿ ಬರ್ಕೋ, ಅಂತ ಅವರು ಹೇಳಿದ್ದಾರೆ, ಏನ್ ತಿಂಡಿ ಮಾಡ್ತಾ ಇದ್ದೀಯಾ ? ಚಿತ್ರಾನ್ನನಾ ? ಅಥವಾ ಇಡ್ಲಿನಾ ?" ಎಂದ.

"ಎರಡೂ ಅಲ್ಲ, ಮಹಿಳಾ ಸಂಘದಲ್ಲಿ ಅಡಿಗೆ ಸ್ಪರ್ಧೆ ಇದೆ ಅದಕ್ಕೆ ನಾನು ಡೋಕ್ಲಾ ಮಾಡ್ಕೊಂಡ್ ಹೋಗಬೇಕು" ಎಂದಳು. ವಿಶ್ವನಿಗೆ ಗಾಬರಿ ಆಯ್ತು,

"ಲೇ, ಯಾವತ್ತೂ ಮಾಡಿಲ್ಲ, ಹೆಂಗೇ ಮಾಡ್ತೀಯಾ ?"

"ನಿಮಗ್ಯಾಕ್ರೀ ಸುಮ್ನಿರಿ, ಎಲ್ಲಾ ಐಟಂಸ್ ಮನೇಲಿದೆ, ನಾನು ಮಧ್ಯಾಹ್ನದ ಮೇಲೆ ಮಾಡ್ತೀನಿ, ಸ್ಯಾಂಪಲ್ ನೋಡಿ, ಚೆನ್ನಾಗಿದ್ರೆ ಸ್ಪರ್ಧೆಗೆ ತಗೊಂಡ್ಹೋಗೋಣ" ಎಂದಳು. ಮಧ್ಯಾಹ್ನ ವಿಶ್ವ ಅಡಿಗೆ ಮನೇಲಿ ನಿಂತು ಪ್ರಿಪರೇಷನ್ಸ್‌ನ ಗಮನಿಸು–ತ್ತಿದ್ದಾಗ ವಿಶಾಲುಗೆ ಸಿಟ್ಟಾಯ್ತು.

"ರೀ, ನೀವು ಇಲ್ಲಿ ನೋಡ್ತಾ ನಿಂತ್ಕೋಬೇಡಿ, ಆಚೆಕಡೆ ಇರಿ, ನಾನು ಮಾಡಿ ಕರೀತೀನಿ" ಎಂದಳು. ಮೀನಾ ಹೇಳಿದಂತೆ ಡೋಕ್ಲಾ ಮಾಡಿದಳು ಅದೇನ್ ವ್ಯತ್ಯಾಸ ಆಗಿತ್ತೋ ಗೊತ್ತಿಲ್ಲ, ಕುಕ್ಕರ್ ಪಾತ್ರೆಯಲ್ಲಿದ್ದ ಡೋಕ್ಲಾ ಎಷ್ಟು ಬೇಡಿದರೂ, ಬಡಿದರೂ ಆಚೆಗೆ ಬರಲೇ ಇಲ್ಲ, ಒಂದು ರೀತಿ ದಪ್ಪನೆಯ ತಂದೂರಿ ರೊಟ್ಟಿ ಥರ ಕಾಣುತ್ತಿತ್ತು.

"ಏನಮ್ಮ ಇದು, ತಂದೂರಿ ರೊಟ್ಟಿ ಮಾಡಿದ್ದೀಯಾ ? ಅದೂ ಕಡಲೆಹಿಟ್ಟಲ್ಲಿ!" ಎಂದು ವಿಶ್ವ ರೇಗಿಸಿದ.

"ಸ್ವಲ್ಪ ಕೆಟ್ಹೋಯ್ತು ರೀ ಪಾಕ, ಈಗೇನ್ ಮಾಡೋದೋ ಗೊತ್ತಿಲ್ಲ, ಇವತ್ತು ಸಂಜೆ ಕುಕ್ಕಿಂಗ್ ಎಗ್ಸಿಬಿಷನ್ ಇದೆ, ಡೋಕ್ಲಾ ತಗೊಂಡ್ ಹೋಗಿ ಕೊಡಬೇಕಲ್ಲ" ಎಂದು ಪೇಚಾಡಿದಳು.

"ಆ ಪಾತ್ರೆಯಿಂದ ಮೊದಲು ತೆಗಿ ನೋಡೋಣ ಹೆಂಗ್ ಇದ್ಯೋ !" ಎಂದ. ಕುಕ್ಕರ್ನಿಂದ ಬಹಳ ಕಷ್ಟಪಟ್ಟು ಚೂರುಗಳನ್ನಾಗಿ ಮಾಡಿ ಹೊರ ತೆಗೆದರು, ಅದು ಮನುಷ್ಯ ತಿನ್ನುವ ಸ್ಥಿತಿಯಲ್ಲಿ ಇರ್ಲಿಲ್ಲ, ನಾಯಿಗೆ ಹಾಕಿದರೂ ಕಚ್ಚಿಸಿಕೊಳ್ಳುವ ಅಪಾಯ ಇತ್ತು,



"ಇನ್ನು ಅದಕ್ಕೆ ಒಗ್ಗರಣೆ ಹಾಕಿ ವೇಸ್ಟ್ ಮಾಡಬೇಡ ಸುಮ್ನಿರು" ಎಂದ ವಿಶ್ವ.

"ರೀ ಇದು ನನ್ನ ಪ್ರೆಸ್ಟೀಜ್ ಪ್ರಶ್ನೆ, ಬಹುಮಾನ ಇಟ್ಟಿದ್ದಾರೆ, ನಾನು ಗೆಲ್ಲಲೇಬೇಕು,

ನೀವು ಐಡಿಯಾ ಮಾಡಿ ನಂಗೆ ಸಹಾಯ ಮಾಡಿ ಪ್ಲೀಸ್" ಎಂದು ವಿಶ್ವನನ್ನು ಬೇಡಿದಳು,

"ನೀನು ತೆಪ್ಪಗಿದ್ರೆ ನಾನು ವ್ಯವಸ್ಥೆ ಮಾಡ್ತೀನಿ, ನಿನಗೇ ಬಹುಮಾನ ಬರುವ ಹಾಗೇ ಮಾಡ್ತೀನಿ" ಎಂದ. ಅದೇ ರೀತಿ ವಿಶ್ವ ವ್ಯವಸ್ಥೆ ಮಾಡಿದ. ಡೋಕ್ಲವನ್ನ ಎಕ್ಸಿಬಿಷನ್‌ನಲ್ಲಿ ಪ್ರದರ್ಶಿಸಲಾಯ್ತು. ಬಂದಿದ್ದ ತೀರ್ಪುಗಾರರು ರುಚಿ ನೋಡಿ ಖುಷಿ ಆದರು, ಡೋಕ್ಲಾ ಇನ್ನೊಂದು ಹಾಕ್ಲಾ ಎಂದು ವಿಶಾಲು ಅವರಿಗೆ ಬಡಿಸಿದಳು ಆಶ್ಚರ್ಯವೆಂದರೆ ವಿಶಾಲುಗೆ ಹತ್ತು ಸಾವಿರ ರೂಪಾಯಿ ನಗದು ಬಹುಮಾನ ಬಂತು, ಡೋಕ್ಲಾ ತುಂಬಾ ಸಾಫ್ಟ್ ಆಗಿ ಸ್ಪಾಂಜಿ ಆಗಿ ಟೇಸ್ಟಿ ಆಗಿತ್ತು,

"ತುಂಬಾ ಚೆನ್ನಾಗಿ ಮಾಡಿದ್ದೀರ ಡೋಕ್ಲನಾ" ಎಂದು ಮೀನಾ ಸಭೆಯಲ್ಲಿ ಹೇಳಿದಾಗ ವಿಶಾಲು ಬೀಗಿದಳು.

ಅದೊಂದು ಫ್ಯಾಮಿಲಿ ಗೆಟ್ ಟುಗೆದರ್ ಆಗಿತ್ತು, ಬಹುಮಾನ ಸ್ವೀಕರಿಸಿ ವಾಪಸ್ ಹೋಗುತ್ತ, ವಿಶಾಲು ಗಂಡನಿಗೆ, ಥ್ಯಾಂಕ್ಸ್ ಹೇಳಿದಳು.

"ಅಷ್ಟೂ ಕ್ರೆಡಿಟ್ ನಿಮಗೇ ಕಣ್ರೀ" ಎಂದಳು.

"ಕ್ರೆಡಿಟ್ ನನಗಲ್ಲ, ಥ್ಯಾಂಕ್ಸ್ ಹೇಳಬೇಕಾಗಿರೋದು ಗುಜರಾತಿ ಅಜ್ಜಿಗೆ, ಅವರು ಮಾಡ್ಕೊಟ್ಟಿದ್ದು ಇದು, ಅವರು ಇಂಥಾದ್ರಲ್ಲಿ ಎಕ್ಸ್‌ಪರ್ಟ್ಸ್, ಅವರಿಂದ ನಾನು ಕೊಂಡು ತಂದೆ"

"ನೀವು ನನ್ನ ಮಾನ ಕಾಪಾಡಿದ್ರಿ, ಬಹುಮಾನ ಕೊಡಿಸಿದ್ರಿ" ಎಂದು ವಿಶ್ವನನ್ನು ತಾರೀಫ್ ಮಾಡಿದಳು.

"10 ಸಾವಿರ ಬಹುಮಾನದಲ್ಲಿ ನನಗೆಷ್ಟು ಕೊಡ್ತೀಯಾ ?" ವಿಶ್ವ ಆಸೆಯಿಂದ ಕೇಳಿದ.

"10 ಸಾವಿರಕ್ಕೆ ಸೀರೆ ತಗೋತೀನಿ, ರವಿಕೆ ಹೊಲಿಸೋಕೆ ನೀವು ಎರಡು ಸಾವಿರ ಕೊಡಿ" ಎಂದಾಗ ವಿಶ್ವ ಶಾಕ್ ಆದ.

------------ ಕಟ್ -----------



**ಅಪರಂಜಿ ತನ್ನ ಯಾತ್ರೆಯಲ್ಲಿ ಸತತವಾಗಿ 42 ವರ್ಷಗಳನ್ನು ಪೂರೈಸಿ 43ನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿದೆ. ಈ ಸಂತೋಷದ ಸಂದರ್ಭದಲ್ಲಿ ಅಪರಂಜಿ ಬಳಗ ತನ್ನ ಎಲ್ಲಾ ಚಂದಾದಾರರಿಗೂ ಬರಹಗಾರರಿಗೂ, ಓದುಗರಿಗೂ, ಜಾಹೀರಾತುದಾರರಿಗೂ, ಆಗಾಗ ಅಪರಂಜಿಗೆ ತಮ್ಮ ಸಹಾಯ ಹಸ್ತ ನೀಡಿದ ಎಲ್ಲಾ ಕೊಡುಗೈ ದಾನಿಗಳಿಗೂ ತನ್ನ ಹೃದಯಾಂತರಾಳದಿಂದ ಧನ್ಯವಾದಗಳನ್ನು ಅರ್ಪಿಸುತ್ತದೆ. ಎಲ್ಲರಿಗೂ ದಸರಾ ದೀಪಾವಳಿ ಹಬ್ಬದ ಶುಭಾಶಯಗಳು.**



# ಕ್ರಶ್......!

**ಚಿತ್ರಾ ರಾಮಚಂದ್ರನ್**

"**ನೋ**ಡಿ ನೋಡಿ! ನನ್ನ ಕಾಲೇಜು ಬಂತು! ಅಲ್ಲಿ ಕಾಣ್ಸತಲ್ಲಾ ದೊಡ್ಡ ಮರ! ಅದರ ನೆರಳಲ್ಲೇ ಕೂತು ನಾವು ಸ್ನೇಹಿತೆಯರೆಲ್ಲ ಬುತ್ತಿ ಬಿಚ್ಚಿ ಊಟ ಹಂಚ್ಕೊಳ್ತಿದ್ವಿ!"

"ಹೂಂ! ನಿನ್ನ ಮೊಸರನ್ನ ಮಿಡಿ ಮಾವಿನಕಾಯಿ ಎಲ್ಲವನ್ನೂ ನಿನ್ನ ಸ್ನೇಹಿತೆಯರೇ ಸ್ವಾಹಾ ಮಾಡ್ತಿದ್ರು. ಹಾಗಾಗಿ ನೀನು ಎರಡೆರಡು ಡಬ್ಬಿಗಳಲ್ಲಿ ಮೊಸರನ್ನ ತಗೊಂಡು ಹೋಗಕ್ಕೆ ಶುರು ಮಾಡಿದೆ! ಅಯ್ಯೋ ಅಜ್ಜಿ ! ಮೈಸೂರಿಗೆ ಹೋಗೋವಾಗಲೆಲ್ಲ ಇದೇ ಕಥೆ ಕೇಳಿ ಕೇಳಿ ಸಾಕಾಗಿದೆ! ಬರಿ ತಿನ್ನೋ ಅನುಭವ ಬಿಟ್ಟು, ಹೇಳೋದಕ್ಕೆ ಬೇರೆ ಯಾವ ಕಾಲೇಜ್ ಅನುಭವಾನೂ ಇಲ್ವೇ ನಿನಗೆ?"

ಮೈಸೂರನ್ನು ಪ್ರವೇಶಿಸಿದ ಕೂಡಲೇ ಎದುರಾಗುವ ನನ್ನ ಕಾಲೇಜನ್ನು ತೋರಿಸಿ, ಹಳೆಯ ನೆನಪುಗಳನ್ನು ನನ್ನ ಮೊಮ್ಮಕ್ಕಳೊಂದಿಗೆ ಹಂಚಿಕೊಳ್ಳುವುದರಲ್ಲಿ ಅದೇನೋ ಹೆಮ್ಮೆ ! ಅದೇನೋ ಸಂತೋಷ ! ಆದರೆ ಈ ಬಾರಿ ನನ್ನ ಮೊಮ್ಮಕ್ಕಳು ಸಾವಿರ ಸರ್ತಿ ಕೇಳಿದ್ದ ಅದೇ ಕಥೆಯನ್ನು ಕೇಳಲು ತಯಾರಿಲ್ಲ ! ಬೇರೆ ಹೊಸ ಕಾಲೇಜು ನೆನಪುಗಳೇ ಇಲ್ಲವೇ ನಿನಗೆ ಎಂದು ನನ್ನನ್ನು ಸತಾಯಿಸಿದವು !

ಇಲ್ಲದೇ ಏನು? ಬಹಳಷ್ಟು ನೆನಪುಗಳಿದ್ದವು ! ಮೊಮ್ಮಕ್ಕಳ ಮುಂದೆ ಹೇಳಬಾರದ ನೆನಪುಗಳು ! ಕೌಮಾರಾವಸ್ಥೆ ದಾಟಿ ಅದಾಗತಾನೆ ಯವ್ವನದ ಹೊಸ್ತಿಲು ಮೆಟ್ಟಿದ್ದ ಸಮಯವದು ! ಹೊಸ ವಾತಾವರಣ ! ಎಲ್ಲೆಲ್ಲೂ ಹೊಸತನ ! ನೋಡಿದ್ದೆಲ್ಲವೂ ಆಕರ್ಷಕ ! ಸುಂದರ ! ಪಂಜರದಿಂದ ಹೊರಬಂದ ಗಿಳಿಗಳಂತೆ ರೆಕ್ಕೆ ಬಡಿಯುವ ಹೃದಯ ! ಕಾರಣ ಇರಲಿ ಬಿಡಲಿ ಜಲಪಾತದಂತೆ ಹೊಮ್ಮುವ ಕಿಸಿಕಿಸಿ ನಗು ! 'ಮೀಟೋದು' , 'ಈಟೋದು', 'ಕುಡುಮೋದು' ಮಾತ್ರವೇ ಜೀವನ ಎಂದುಕೊಂಡಿದ್ದ ನಮಗೆ, ಪ್ರಪಂಚದಲ್ಲಿ ಅವಕ್ಕೂ ಹೊರತಾದ ಬೇರೆ ಸ್ವಾರಸ್ಯಕರ ವಿಷಯಗಳಿವೆ ಎಂಬುದು ಕಾಲೇಜಿಗೆ ಸೇರಿದಮೇಲೆ ಅರಿವಾಯಿತು !

ಕಾಲೇಜಿನ ವಿಶಾಲವಾದ ಕಾರಿಡಾರಲ್ಲಿ ಗುಂಪು ಕಟ್ಟಿಕೊಂಡು ಓಡಾಡಿದ್ದು ! ಕೋಟು ಬೂಟು ತೊಟ್ಟು ಫುಲ್ ಸೂಟಲ್ಲಿ ರೂಪದರ್ಶಿಗಳಂತೆ ಓಡಾಡುತ್ತಿದ್ದ ಪ್ರೊಫೆಸರ್ಗಳನ್ನು ಬೆರಗಿನಿಂದ ನೋಡಿದ್ದು ! ಪಕ್ಕಕ್ಕೆ ಸರಿದು ಅವರುಗಳಿಗೆ ದಾರಿ ಬಿಟ್ಟು ನಿಂತು ಗೋಷ್ಠಿಯಾಗಿ 'ಗುಡ್ ಮಾರ್ನಿಂಗ್ ಸಾರ್' ಎಂದಿದ್ದು. ಅವರುಗಳು ಶಾಸ್ತ್ರಕ್ಕೆ ತಲೆಯಾಡಿಸಿ, (ಲೇಡೀಸ್ ಕಾಲೇಜ್ ಶಿಸ್ತು !) ದೆವ್ವಗಳನ್ನು ಕಂಡವರಂತೆ ಅಲ್ಲಿಂದ ಬಿರಬಿರನೆ ಪಾರಾದಾಗ ನಾವು ಗುಟ್ಟಾಗಿ ಕಿಸಿಕಿಸಿ ನಕ್ಕಿದ್ದು ! ಹಿರಿಯ ಪ್ರೊಫೆಸರ್ಗಳು 'ಶುಭ ಮುಂಜಾನೆ ಯಂಗ್ ಲೇಡೀಸ್' ಎಂದಾಗ ಮತ್ತದೇ ಕಿಸಿಕಿಸಿ ನಗು ! ಇವರುಗಳ ಪೈಕೆ ಅತ್ಯಂತ ಸ್ಪುರದ್ರೂಪಿ ಯಾರು? ಯಾವ ಸರ್ರು ಯಾವ ಸಿನೆಮಾ ಹೀರೋವನ್ನು ಹೋಲುತ್ತಿದ್ದರು? ಇವೆಲ್ಲ ವಿರಾಮದ ವೇಳೆಯ ಚರ್ಚಾ ವಿಷಯಗಳಾಗಿದ್ದವು !



ನಮಗಿಂತ ಕೆಲವೇ ವರ್ಷಗಳು ಹಿರಿಯರಾಗಿದ್ದ ಮಿಸ್ಗಳೊಂದಿಗೆ ನಾವು ಬೆಳೆಸಿಕೊಂಡಿದ್ದ ಸಲುಗೆ ! ಅವರುಗಳಲ್ಲಿ ಕೆಲವರು ಬ್ಯೂಟಿ ಕ್ವೀನ್ಗಳಂತೆ ಅಲಂಕರಿಸಿಕೊಡು ಬರುತ್ತಿದ್ದರು. ಇನ್ನೂ ಕೆಲವರು ಕಣಕಾಲು ಕಾಣುವಂತೆ ಮೇಲಕ್ಕೆ ಎತ್ತಿ ಕಟ್ಟಿದ ಸೀರೆಯೊಂದಿಗೆ ಕಾಲೇಜಿಗೆ ಹಾಜರ್ ಆಗಿಬಿಡುತ್ತಿದ್ದರು. ಇವರುಗಳನ್ನು

'ಫ್ಲಡ್ ಲೆವೆಲ್' 'ಫ್ಲಡ್ ಲೆವೆಲ್' ಎನ್ನುತ್ತ ಛೇಡಿಸುತ್ತಿದ್ದ ಸೀನಿಯರ್ ಹುಡುಗಿಯರ ಧೈರ್ಯ ಕಂಡು ನಾವು ಕಣ್ಣು ಬಾಯಿ ಬಿಟ್ಟುಕೊಂಡು ನೋಡುತ್ತಿದ್ದೆವು .

ಸಂಸ್ಕೃತವನ್ನು ಎರಡನೇ ಭಾಷೆಯಾಗಿ ಆಯ್ದುಕೊಂಡಿದ್ದ ಎಲ್ಲ ಸೆಕ್ಷನ್ ಹುಡುಗಿಯರಿಗೂ ನಡು ವಯಸ್ಸಿನ ಸೀತಮ್ಮಾ ಮೇಡಮ್ ಪಾಠ ಮಾಡುತ್ತಿದ್ದರು. ಸ್ನೇಹದಿಂದ ಎಲ್ಲರೂ ಒಬ್ಬರಿಗೊಬ್ಬರು ಹಲೋ ಹೇಳಿಕೊಂಡರೂ, ನಮ್ಮ ಗ್ಯಾಂಗ್ ಮಾತ್ರ ಒಂದೇ ಬೆಂಚಿನಲ್ಲಿ ಒಟ್ಟಿಗೆ ಕುಳಿತುಕೊಳ್ಳುವುದನ್ನೇ ಇಷ್ಟಪಟ್ಟಿತು. ಸ್ವಲ್ಪ ಇಕಟ್ಟಾಗಿದ್ದರೂ ಹೇಗೋ ಅಡ್ಜಸ್ಟ್ ಮಾಡಿಕೊಂಡು ಎಲ್ಲರೂ ಒಟ್ಟಿಗೆ ಕೂರಲು ಒಂದು ಹೊಸ ಟೆಕ್ನಿಕನ್ನು ಅಳವಡಿಸಿಕೊಂಡೆವು. ಕಾಲಮೇಲೆ ಕಾಲು ಹಾಕಿ ಕುಳಿತರೆ ಆರಾಮವಾಗಿ ಕುಳಿತುಕೊಳ್ಳಲು ಬೇಕಾಗುವ ಜಾಗದಲ್ಲಿ ಅರ್ಧದಷ್ಟು ಜಾಗವಿದ್ದರೆ ಸಾಕಾಗುತ್ತದೆ ಅಲ್ಲವೇ? ಹಾಗಾಗಿ 'ಒಂದೇ ಕಾಲಲ್ಲಿ' ಕೂರುವ ಆ ಟೆಕ್ನಿಕನ್ನು ನಮ್ಮ ಗ್ಯಾಂಗ್ ಹುಟ್ಟುಹಾಕಿತ್ತು !



ಒಮ್ಮೆ ಕಾಳಿದಾಸನ 'ವಿಕ್ರಮೋರ್ವಶೀಯಮ್' ಪಾಠ ಮಾಡುತ್ತಿದ್ದ ಮೇಡಮ್ ನಡುನಡುವೆ ಪಾಠ ನಿಲ್ಲಿಸಿ ತನ್ನಷ್ಟಕ್ಕೆ ತಾನೇ ನಗುತ್ತಿದ್ದರು. ಎರಡೆರಡು ಸಾಲುಗಳನ್ನು ಓದಿ ವಿವರಿಸುತ್ತಿದ್ದವರು ಉಕ್ಕಿ ಬರುತ್ತಿದ್ದ ನಗುವನ್ನು ತಡೆಯಲಾರದೆ ಮುಖವನ್ನು ಕೆಂಪು ಕೆಂಪು ಮಾಡಿಕೊಂಡು ಪದೇ ಪದೇ ನಗ ತೊಡಗಿದರು. 'ಮನೆಯಲ್ಲಿ ಅವರ ಸಾರ್ ಏನಾದರೂ ಕಾಳಿದಾಸ ಹೇಳಿರುವಂತಹ ಲವ್ ಸೀನ್ ಹಾಕಿದ್ದರೋ ಏನೋ' ಎಂದು ಯಾರೋ ಪಿಸುಗುಟ್ಟಿದರು ! ನಾವೆಲ್ಲಾ ಗೊಳ್ಳೆಂದು ನಕ್ಕೆವು ! ಮೇಡಮ್ ಅವರ ನಗುವಿಗೆ ಕಾರಣ ನಮಗೆ ತಿಳಿಯಲಿಲ್ಲ ! ನಮ್ಮ ನಗುವಿಗೆ ಕಾರಣ ಅವರಿಗೆ ಅರಿವಾಗಲಿಲ್ಲ ! ಒಟ್ಟಲ್ಲಿ ಅಂದಿನ ಪಾಠ ಅಷ್ಟಕ್ಕೇ ನಿಂತಿತು !

ಸಿನೆಮಾ ಹುಚ್ಚು ಸ್ವಲ್ಪ ಹೆಚ್ಚಾಗಿಯೇ ಇದ್ದ ವಯಸ್ಸು ಅದು ! ಬಣ್ಣ ಬಣ್ಣದ ಹಿಂದಿ ಸಿನೆಮಾ ಎಂದರೆ ಹುಚ್ಚು ಸ್ವಲ್ಪ ತೀವ್ರವಾಗಿಯೇ ಇತ್ತು. ನಮ್ಮ ಪಟಾಲಂನಲ್ಲಿ ಕೆಲವರಿಗೆ ರಾಜೇಂದ್ರ ಕುಮಾರ್ ಮೇಲೆ 'ಕ್ರಶ್'. ಕೆಲವರು ಶಮ್ಮಿ ಕಪೂರ್ ಭಕ್ತರು. ಇನ್ನು ಕೆಲವರು ಜಾಯ್ ಮುಖರ್ಜಿ ಅಭಿಮಾನಿಗಳು ! ಮೈಸೂರಿನ ಸುತ್ತಮುತ್ತ, ಮುಖ್ಯವಾಗಿ ಬೃಂದಾವನ್ ಗಾರ್ಡನ್ನಲ್ಲಿ ಅನೇಕ ಸಿನೆಮಾಗಳ ಶೂಟಿಂಗ್ ನಡೆಯುತ್ತಿತ್ತು. ಶೂಟಿಂಗಿಗೆ ಬರುವ ಸಿನೆಮಾ ತಾರೆಯರು ನಮ್ಮ ಕಾಲೇಜ್ ಸಮೀಪವಿದ್ದ ಐಷಾರಾಮಿ ಹೋಟೆಲಿನಲ್ಲಿ ತಂಗುತ್ತಿದ್ದರು. ಅವರುಗಳನ್ನು ನೋಡುವ ತವಕದಲ್ಲಿ ನಮ್ಮ ಸೀನಿಯರ್ಗಳು ಕ್ಲಾಸ್ ಕಟ್ ಮಾಡಿ ಹೋಟೆಲಿನ ಸುತ್ತಮುತ್ತ ಠಳಾಯಿಸುತ್ತಿದ್ದರು.

ನಮ್ಮಲ್ಲಿ ಯಾರೇ ಯಾವ ಸಿನೆಮಾ ನೋಡಿದ್ದರೂ, ಆ ಸಿನೆಮಾ ಕಥೆಯನ್ನು ಉಳಿದವರಿಗೆ ಹೇಳುವುದು ವಾಡಿಕೆ. ಅದರಲ್ಲೂ M.G. ಕಥೆ ಹೇಳುವ ಸ್ಟೈಲ್

ನೋಡಲು ನೂರು ಕಣ್ಣು ಸಾಲದು ! ನಾಯಕ ನಾಯಕಿಯರೆಡೆ ನಡೆಯುವ ಪ್ರೇಮ ಸಂಭಾಷಣೆಯನ್ನು ಭಾವನಾತ್ಮಕವಾಗಿ ಹೇಳುತ್ತ ಆ ದೃಶ್ಯವನ್ನು ಅವಳು ನಟಿಸಿ ತೋರಿಸುವಾಗ ನಾವೆಲ್ಲಾ ನಿಬ್ಬೆರಗಾಗಿ ನೋಡಿ ನಗುತ್ತಿದ್ದೆವು !

ನಮ್ಮ ಪಾಠಕ್ಕೆ ಸಂಭಂದಿಸಿದ ಪುಸ್ತಕ ಒಂದನ್ನು ಲೈಬ್ರರಿಯಿಂದ ತಂದು, ಇಂತಿಂತ ಪುಟಗಳಲ್ಲಿ ತಾನು ಮಾರ್ಕ್ ಮಾಡಿರುವ ಕೆಲವು ಮಾಹಿತಿಗಳನ್ನು ಬರೆದುಕೊಂಡು, ಮರುದಿನದ ಕ್ಲಾಸಿಗೆ ಓದಿಕೊಂಡೂ ಬರಬೇಕೆಂದು ಆದೇಶಿಸಿದ್ದರು ಮಿಸ್. S.A. ಅವರು. ಲೈಬ್ರೆರಿಗೆ ಹೋಗಿ ಆ ಪುಸ್ತಕವನ್ನು ತರಲು A. S. B. ಯನ್ನು ಕಳಿಸಿ ಉಳಿದವರೆಲ್ಲ ಹೆಮ್ಮರದ ನೆರಳಲ್ಲಿ ಕಾದು ಕುಳಿತೆವು. ಪುಸ್ತಕವನ್ನು ತೆಗೆದುಕೊಂಡು ಬರುತ್ತಿದ್ದವಳು ಭಯದಿಂದ ಚಡಪಡಿಸುತ್ತಿದಂತೆ ಕಂಡಿತು .

ಏದುಸಿರು ಬಿಡುತ್ತ ಪುಸ್ತಕದಿಂದ ಜಾರಿಬಿದ್ದ ಒಂದು ಕಾಗದವನ್ನು ನಮ್ಮ ಮುಂದೆ ಹಿಡಿಳು A. S. B. ಎಲ್ಲರೂ ಕುತೂಹಲದಿಂದ ಅವಳ ಸುತ್ತ ಮೆತ್ತಿಕೊಂಡು ಆ ಕಾಗದವನ್ನು ಇಣುಕಿ ನೋಡಿದೆವು.

ಕಾಗದವನ್ನು ಕಸಿದುಕೊಂಡು ಅದರ ಮೇಲೆ ಕಣ್ಣಾಡಿಸಿದ M. G. ಯ ಮೊಗದಲ್ಲಿ ತುಂಟ ನಗೆ ತಾಂಡವವಾಡುತ್ತಿತ್ತು.

'ಪ್ರೇಮ ಪತ್ರ ಕಂಡ್ರೆ ! ತನ್ನ ಸುಂದರ ಕೈ ಬರಹದಲ್ಲಿ ಪ್ರಭಾಕರನೆಂಬ ಅವರ ಪ್ರಿಯತಮನಿಗೆ ಮಿಸ್. S. A. ಅವರು ಬರೆದಿರೋ ಪ್ರೇಮಪತ್ರ ...'

'ಅಯ್ಯಯೋ ! ಮೊದಲು ಅದನ್ನ ಪುಸ್ತಕದಲ್ಲಿಟ್ಟು ಲೈಬ್ರರಿಗೆ ಸೇರಿಸಿಬಿಡೋಣ ಕಂಡ್ರೆ.' ಎಂದಳು ವಾರ್ಡನ್.

ನಮ್ಮ ಮಂಗಾಟ ಹದ್ದು ಮೀರಿದಾಗ ಎಲ್ಲರನ್ನೂ ಎಚ್ಚರಿಸಿ ಹಿಂದಕ್ಕೆ ಎಳೆಯುತ್ತಿದ್ದಳು A. S. B. ಆ ಕಾರಣ ಅವಳಿಗೆ 'ವಾರ್ಡನ್' ಎಂದು ನಾಮಕರಣವಾಗಿತ್ತು !

'ಏ ವಾರ್ಡನ್! ಸ್ವಲ್ಪ ತಾಳೆ ! ಪೂರಾ ಓದಿಬಿಡೋಣ ! ಆಮೇಲೆ ಏನ್ಮಾಡೋದು ನೋಡೋಣ.'

ಬೆಚ್ಚಿಬಿದ್ದ ನಾವೆಲ್ಲ 'ವಾರ್ಡನ್' ಪರ ವಹಿಸಿಕೊಂಡು 'ಈ ಆಟ ಬೇಡಕಣೆ!' ಎಂದು ಅಂಗಲಾಚಿದೆವು.

ಯಾರ ಮಾತನ್ನೂ ಲೆಕ್ಕಿಸದೆ ಪತ್ರವನ್ನು ಗಟ್ಟಿಯಾಗಿ ಓದ ತೊಡಗಿದಳು M.G.!

'ಡಿಯರೆಸ್ಟ್ ಪ್ರಭಾ...' ಎಂದು ಪ್ರಾರಂಭವಾಗಿದ್ದ ಪತ್ರದಲ್ಲಿ, ತನ್ನ ಮನಸ್ಸಿನ ಭಾವನೆಗಳನ್ನೆಲ್ಲ ಹೊರಹಾಕಿದ್ದರು S. A. ಪ್ರತಿಯೊಂದು ಸಾಲನ್ನೂ ಡಿಯರೆಸ್ಟ್ ಪ್ರಭಾ ಎಂದು ಮುಗಿಸಿದ್ದರು. ಸಿನೆಮಾ ಡೈಲಾಗನ್ನೇ ಭಾವನಾತ್ಮಕವಾಗಿ ಹೇಳುವ M.G. ಈ ಅಸಲೀ ಪ್ರೇಮಪತ್ರವನ್ನು ಮನಮುಟ್ಟುವಂತೆ ಓದದೇ ಬಿಡುವಳೇ?

ಅವಳು ಓದಿ ಮುಗಿಸಿದ ಮೇಲೆ ಈಗೇನು ಮಾಡುವುದು ಎಂಬ ಪ್ರಶ್ನೆ ಎಲ್ಲರ ಮನದಲ್ಲಿ ಅಂಕುರಿಸಿತು.



ನಮ್ಮ ಪಾಠಕ್ಕೆ ಸಂಬಂಧಿಸಿದ್ದ ಪುಟಗಳನ್ನು ಮಾರ್ಕ್ ಮಾಡುವಾಗ ಪತ್ರವನ್ನು ಅದರಲ್ಲಿಟ್ಟು ಅವರು ಮರೆತಿರಬೇಕು. ಎಲ್ಲೆಡೆ ಹುಡುಕಿ, ಈಗ ಲೈಬ್ರರಿಯಲ್ಲೂ ಸಹ ಹುಡುಕುತ್ತಿರಬಹುದು. ಲೈಬ್ರರಿ ರೆಜಿಸ್ಟರಲ್ಲಿ ಪುಸ್ತಕವನ್ನು ನಾವು ತಂದಿದ್ದು ದಾಖಲೆಯಾಗಿರುತ್ತದೆ. ಪತ್ರ ನಮ್ಮ ಕೈಸೇರಿರಬಹುದು ಎಂಬ ಅನುಮಾನ ಅವರಿಗೆ

ಏರ್ಪಡಬಹುದು. ನಾವು ಸಿಕ್ಕಿಬಿದ್ದರೆ ನಮ್ಮ ಗತಿಯೇನು ?

'ಅಯ್ಯಯೋ ! ಈಗ ಏನ್ರೇ  ಮಾಡೋದು?'

'ಮಾಡೋದೇನು ? ಪತ್ರವನ್ನ ಡಿಸ್ಟ್ರಾಯ್ ಮಾಡ್ಬೇಕಷ್ಟೆ. 'ಸಾವಕಾಶವಾಗಿ ಹೇಳಿದಳು M. G.

ಮರುದಿನ ಮಿಸ್. S. A. ಅವರಿಗಾಗಿ ಕ್ಲಾಸಲ್ಲಿ ಕಾದು ಕುಳಿತಿದ್ದಾಗ M.G. ಸಿನೆಮಾ ಹಾಡೊಂದನ್ನು ಹಾಡ ತೊಡಗಿದಳು.

'ಎ ಮೇರಾ ಪ್ರೇಮಪತ್ರ್ ಪಡಕರ್ ಕೆ ತುಮ್ ನರಾಜ್ ನಾ ಹೋನಾ ಕೆ ತುಮ್ ಮೇರಿ ಜಿಂದಗೀ ಹೋ, ಕಿ ತುಮ್ ಮೆರಿ ಬಂದಗಿ ಹೋ'

ನಾವೆಲ್ಲಾ ಭಯದಿಂದ ಅವಡುಗಚ್ಚಿ ಕುಳಿತಿದ್ದರೆ, ಮಿಸ್ ಒಳಗೆ ಬಂದದ್ದನ್ನು ಗಮನಿಸದವಳಂತೆ ಹಾಡುತ್ತಲೇ ಇದ್ದಳು M.G.

'ಪಾಠ ಶುರು ಮಾಡಲೋ ಇಲ್ಲ ಹಾಡು ಹೇಳುತ್ತಲೇ ಇರುವೆಯೋ?' ಗಡುಸಾಗಿ ಕೇಳಿದ ಮಿಸ್. S.A. ಅವರ ಮೊಗ ಕಳೆಗುಂದಿದಂತಿತ್ತು.

'ಹೊಸ ಸಿನೆಮಾದ ಹೊಸ ಹಾಡು ಮಿಸ್. ಪ್ರೇಮ ಕಥೆಯಂತೆ ಮಿಸ್. ಹಾಡು ತುಂಬಾ ಚೆನ್ನಾಗಿದೆ ಅಲ್ವೇ ಮಿಸ್ ?'

ಲೈಬ್ರರಿ ಪುಸ್ತದ ಬಗ್ಗೆ ಯಾರೂ ಮಾತೇ ಎತ್ತಲಿಲ್ಲ. ಬಚ್ಚಿಟ್ಟುಗೊಂಡ ಕಳ್ಳನನ್ನು ಚೇಳು ಕುಟುಕಿದರೆ ಸಹಿಸಲೂ ಆಗದೆ, ಕೂಗಾಡಲೂ ಆಗದೆ ಪೇಚಾಡುವ ಕಳ್ಳನ ಸ್ಥಿತಿಯಲ್ಲಿದ್ದರು ಮಿಸ್. S.A. ಅವರು !

ಆಟ ಪಾಠ ಮಂಗಾಟಗಳೊಂದಿಗೆ ನಾವು ಕಾಲೇಜಿನ ಅಂತಿಮ ತರಗತಿಗೆ ಕಾಲಿಟ್ಟಾಗಿತ್ತು. ನಮ್ಮ ಚಟುವಟಿಕೆಗಳಲ್ಲಿ ಒಂದು ಚೂರಾ ಪ್ರಭುದ್ಧತೆ, ಒಂದು ಚೂರಾ ಗಾಂಭೀರ್ಯ ಸಹ ಕೂಡಿಕೊಂಡು ಜೀವನದ ಮುಂದಿನ ಅಧ್ಯಾಯವನ್ನು ಎದುರಿಸಲು ತಯಾರಾಗುತ್ತಿದ್ದೆವು.

ಡಿಗ್ರಿ ಮುಗಿಸಿದ ನಂತರ ಉನ್ನತ ಶಿಕ್ಷಣಕ್ಕಾಗಿ ಬೇರೆಬೇರೆ ವಿಶ್ವವಿದ್ಯಾಲಯಗಳಿಗೆ ಸೇರಿಕೊಂಡರು ಕೆಲವು ಗೆಳೆತಿಯರು. ಉಳಿದವರು ಮನೆ ಹಿರಿಯರು ಹುಡುಕಿ ತಂದ ವರನನ್ನೋ, ರೆಡಿಯಾಗಿದ್ದ ಅತ್ತೆಯ ಮಗ ಇಲ್ಲವೇ ಮಾವನ ಮಗನನ್ನೋ ಮದುವೆಯಾಗಿ ಕುಟುಂಬ ಜೀವನವನ್ನು ಪ್ರಾರಂಭಿಸಿದೆವು. ಚಿಕ್ಕಂದಿನಿಂದ ನೋಡುತ್ತಿದ್ದ ನೆರೆಮನೆಯ ಹುಡುಗನಮೇಲಿದ್ದ  ಆಕರ್ಷಣೆ (ಕ್ರಶ್) ಕಾಲಕ್ರಮೇಣ ಗಾಢ ಪ್ರೀತಿಯಾಗಿ  (ಲವ್) ಪರಿವರ್ತಿಸಿ, ಹಿರಿಯರ ಆಶೀರ್ವಾದದೊಂದಿಗೆ ಅವನನ್ನೇ ಮದುವೆಯಾದಳು V.L.

ಮಿಸ್ S. A. ಅವರ  ಪ್ರೇಮಪತ್ರವನ್ನು ಓದುವಾಗ 'ಪ್ರಭಾ ಪ್ರಭಾ' ಎಂದು ಭಾವಪರವಶದೊಂದಿಗೆ ಅವಳು ಉಚ್ಚರಿಸಿದ್ದನ್ನು ಕೇಳಿಸಿಕೊಂಡಿದ್ದ ಬ್ರಹ್ಮಾಂಡ 'ತಥಾಸ್ತು' ಎಂದಿತ್ತೋ ಏನೋ ! M.G ಯ ತಂದೆಯವರು ಅವಳಿಗಾಗಿ ಗೊತ್ತುಮಾಡಿದ್ದ ವರನ ಹೆಸರು ಪ್ರಭಾಕರ ಆಗಿತ್ತು !

ಅಜ್ಜಿಯಾದವಳು ಮೊಮ್ಮಕ್ಕಳಿಗೆ ರಾಮಾಯಣ, ಪಂಚತಂತ್ರ, ಕೃಷ್ಣ ಲೀಲೆ ಮುಂತಾದ ಕಥೆಗಳನ್ನು ಹೇಳುವುದು ಬಿಟ್ಟು ಇಂತಹ ಕಾಲೇಜ್ ಅನುಭವಗಳನ್ನೆಲ್ಲ ಹೇಳುವುದೂ ಉಂಟೆ ?

ಊಹುಂ ! ನೆವರ್ !



# ಇಂದಿನ ಕಾಲದ ನಾಯಕರು

ಎಚ್.ಡುಂಡಿರಾಜ್

**(ಅಣಕವಾಡು)**

ಇಂದಿನ ಕಾಲದ ನಾಯಕನಿವನು
ನಡೆ ನುಡಿಯಲ್ಲಿ ನಯವಿಲ್ಲ
ಮಾಧ್ಯಮದೆದುರು ಉಡಾಫೆ ಮಾತು
ವೈರಲ್ ಆದರೂ ಭಯವಿಲ್ಲ

ನೀರಲಿ ಬಂಡೆ ತೇಲುವುದೆಂದರೂ
ಹೌದೆನ್ನುವ ಹಿಂಬಾಲಕರು
ಈತನ ಮಾತಿಗೆ ಸಿಳ್ಳೆ ಹೊಡೆಯಲು
ಬಾಡಿಗೆ ಬಂಟರು ಕಾದಿಹರು

ಸಮಾಜವಾದ, ದಲಿತೋದ್ಧಾರ
ಗಾಂಧಿ ವಾದಿ ಅನ್ನುವವ
ವಿದೇಶಿ ವಿಸ್ಕಿ, ಸ್ಕಾಚನು ಕುಡಿದು
ಹಂದಿ, ಕೋಳಿ ತಿನ್ನುವವ

ಹಗರಣ ಧೀರ, ಭ್ರಷ್ಟಾಚಾರದ
ಕೂಪದ ಒಳಗೇ ಇರುವವನು
ನುಂಗಲು ಸುಲಭ ಆಗಲಿ ಎಂದು
ಹೊಸ ಕಾನೂನು ತರುವವನು

ಹಿಂದುಳಿದವರ ನಾಯಕನೆಂದು
ಬಿಂಬಿಸಿಕೊಂಡು ಬಂದಿರುವ
ಹಿಂದುಳಿದವರನು ಅಲ್ಲೇ ಉಳಿಸಿ
ತಾನು ಮಾತ್ರವೆ ಮುಂದಿರುವ

ಇಂದಿನ ಕಾಲದ ನಾಯಕ ಇವನು
ದೀನ ದಲಿತರ ನೇತಾರ
ಅವರ ಹೆಸರಲ್ಲಿ ಮಾಡುವ ತನ್ನ
ಬಂಧು ಬಳಗದ ಉದ್ಧಾರ



(ಪ್ರೇರಣೆ: ಕೆ ಎಸ್ ನರಸಿಂಹಸ್ವಾಮಿಯವರ ಹಿಂದಿನ ಸಾಲಿನ ಹುಡುಗರು)

**ದಂಸಆ**

- ✓ ಕೋಪ: ಇನ್ನೊಬ್ಬರು ಮಾಡಿದ ತಪ್ಪಿಗೆ ನಿಮಗೆ ನೀವೇ ಕೊಟ್ಟುಕೊಳ್ಳುವ ಶಿಕ್ಷೆ.
- ✓ ಲಾಂಗ್ವೇಜ್ ಈಸ್ ದಿ ಡ್ರೆಸ್ ಆಫ್ ಥಾಟ್.
- ✓ ನಾಲಿಗೆಗೆ ಮಾತು ಕಲಿಯಲು ಮೂರು ವರ್ಷ ಬೇಕು. ಆದರೆ ಆ ಮಾತನ್ನು ಎಲ್ಲಿ ಯಾವಾಗ ಹೇಗೆ ಆಡಬೇಕೆಂಬುದನ್ನು ಜೀವನವಿಡೀ ಕಲಿಯಬೇಕು.
- ✓ ಕೊಬ್ಬು ಜಿಮ್‌ನಲ್ಲಿ ಮಾತ್ರ ಅಲ್ಲ ಜೇಬಿನಲ್ಲಿ ದುಡ್ಡಿಲ್ಲದಿದ್ದಾಗಲೂ ಕರಗುತ್ತದೆ.
- ✓ ಪಾಲಿಟಿಕ್ಸ್ ಈಸ್ ದಿ ಓನ್ಲಿ ಪ್ರೊಫೆಷನ್ ವೇರ್ ಯು ಕೆನ್ ಲೈ, ಚೀಟ್ ಅಂಡ್ ಸ್ಟೀಲ್ ಅಂಡ್ ಸ್ಟಿಲ್ ಬಿ ರೆಸಪೆಕ್ಟೆಡ್.
- ✓ ಸಿಹಿ ಮಾತನಾಡುವವರು ಹಾಗಲಕಾಯಿಯನ್ನೂ ಮಾರುತ್ತಾರೆ. ಕಹಿ ಮಾತನಾಡುವವರ ಜೇನು ತುಪ್ಪವೂ ಮಾರಾಟವಾಗಲಾರದು.
- ✓ ಕೊಡಲಿ ಮರೆಯಬಹುದು ಆದರೆ ಮರ ಮರೆಯುವುದೆ?
- ✓ ಎ ಕೀ ದಟ್ ಓಪನ್ಸ್ ಮೆನಿ ಲಾಕ್ಸ್ ಈಸ್ ವಾಲ್ಯುಯಬಲ್ ಬಟ್ ಎ ಲಾಕ್ ಓಪನ್ಡ್ ಬೈ ಮೆನಿ ಕೀಸ್ ಈಸ್ ವರ್ತ್‌ಲೆಸ್.
- ✓ ಚಟಕ್ಕೆ ಒತ್ತು ಕೊಟ್ಟರೆ ಚಟ್ಟ ಆಗುತ್ತದೆ.
- ✓ ಇಮ್ಮರ್ಸ್ ಯುವರ್‌ಸೆಲ್ಫ್ ಇನ್ ಲೈಫ್ ಅಂಡ್ ನಾಟ್ ಬಿಲಾಂಗಿಂಗ್ಸ್ ಅಂಡ್ ಯು ವಿಲ್ ಬಿ ರಿಚ್.
- ✓ ಹಣ: ನಿಮ್ಮ ಬಳಿ ಕಡಿಮೆ ಇದ್ದರೆ ದಿನವಿಡೀ ಚಿಂತಿಸುತ್ತೀರಿ. ಜಾಸ್ತಿ ಇದ್ದರೆ ರಾತ್ರಿಇಡೀ ಚಿಂತಿಸುತ್ತೀರಿ.
- ✓ ಮರವಾಗಲು ಸಾಧ್ಯವಾಗದಿದ್ದರೆ ಪೊದೆಯಾದರೂ ಆಗಿ. ರಾಜಮಾರ್ಗ ಆಗಲು ಸಾಧ್ಯವಾಗದೆ ಹೋದರೆ ಕಾಲುದಾರಿಯಾದರೂ ಆಗಿ. ಸೂರ್ಯನಾಗಲು ಸಾಧ್ಯವಿಲ್ಲವೆ? ನಕ್ಷತ್ರ ಆಗಬಹುದಲ್ಲ? ಗಾತ್ರದಿಂದ ನಿಮ್ಮ ಸೋಲು ಗೆಲುವುಗಳನ್ನು ಅಳೆಯಲಾಗದು. ಏನು ಮಾಡುತ್ತೀರೊ ಅದು ಅತ್ಯುತ್ತಮವಾಗಿರಲಿ.
- ✓ ದಿ ಡಿಫರೆನ್ಸ್ ಬಿಟ್ವೀನ್ ಎ ಡ್ರೀಮ್ ಅಂಡ್ ಎ ಗೋಲ್ ಈಸ್ ಎ ಡೆಡ್‌ಲೈನ್.
- ✓ ಜನ ಎಲ್ಲೆಡೆ ಹೋಗಲು ತಯಾರಿದ್ದಾರೆ ತಮ್ಮೊಳಗೆ ಬಿಟ್ಟು..
- ✓ ಪೀಪಲ್ ಕೆನಾಟ್ ಡ್ರೈವ್ ಯು ಕ್ರೇಜಿ ಇಫ್ ಯು ಡೋಂಟ್ ಗಿವ್ ದೆಮ್ ದಿ ಕೀಸ್.
- ✓ ಹಣವನ್ನು ಭೇಟಿ ಮಾಡಿದಾಗ ಅದಕ್ಕೆ ಹೇಳಿದೆ: ನೀನು ಯಃಕಶ್ಚಿತ್ ಒಂದು ಕಾಗದದ ತುಂಡು. ಅದು ನಗುತ್ತಾ ಉತ್ತರಿಸಿತು: ನಿಜ, ನಾನೊಂದು ಕಾಗದದ ತುಂಡು. ಆದರೆ ಇದುವರೆಗೂ ನಾನು ಕಸದ ಬುಟ್ಟಿಯಲ್ಲಿ ಬಿದ್ದೇ ಇಲ್ಲ!



# ಅಥ್ಲೀಟ್ ಆಗೋದೇನ್ಮಹಾ !?

**ಜಯಶ್ರೀ ದೇಶಪಾಂಡೆ**

**ಚಿ**ರತೆ ಓಡಿದಂತೆ ಓಡಿ, ಮೀನು ಕೂಡ ನಾಚುವ ಹಾಗೆ ಈಜಿ, ಹನುಮನಂತೆ ಎತ್ತರೆತ್ತರ ನೆಗೆದು,ಹರ್ಡಲ್ಸ್ ಹಾರಿ ಸ್ಪರ್ಧೆಯಲ್ಲಿ ಗೆದ್ದು 1, 2, 3 ಬರೆದುಕೊಂಡ ವಿನ್ನರ್ಸ್ ಸ್ಟ್ಯಾಂಡ್ ಮೇಲೆ ನಿಂತು ಪ್ರೈಜ್ ತೊಗೊಂಡು ಪುಷ್ಕಳವಾಗಿ ನಗುವ ಕ್ರೀಡಾಪಟುಗಳನ್ನು  ಕಂಡಾಗಲೆಲ್ಲ ನನ್ನ ಹೃದಯ ತುಂಬಿ ಬರ್ತಾ ಇತ್ತು. ಹೀಗೆ ಪದಕ ತೂಗಿಸಿಕೊಂಡು ನಗುವ  ನನ್ನ ಚಿತ್ರವೂ ಎಲ್ಲ ಕಡೆ ಯಾಕೆ ಮಿಂಚಬಾರದು ಎಂಬ ಹಂಬಲ ಹೆಮ್ಮರವಾಗಿ ಚಿಗಿತಾಗ ಕೊನೆಗೂ ನಾನು ಅಥ್ಲೀಟ್ ಆಗಿಯೇ ಬಿಡಬೇಕೆಂಬ ಭೀಷ್ಮ ಪ್ರತಿಜ್ಞೆಗೈದೇ ಬಿಟ್ಟೆ.

ನಾನು ಆಗ  ಹೈಸ್ಕೂಲಿನಲ್ಲಿ ಎಂಟನೆಯ ತರಗತಿಯಲ್ಲಿದ್ದೆ, ಆಗೀಗ ಒಂದಿಷ್ಟು ಓಡಿ, ಜಿಗಿದು ಮಾಡ್ತಾ ಇದ್ದೆನಲ್ಲ ಅದೇ ಆಧಾರದ ಆತ್ಮವಿಶ್ವಾಸದಲ್ಲಿ ನಮ್ಮ  ಪಿ ಟಿ ಸರ್ ಬಳಿ ಹೋಗಿ "ಸರ್ ಈ ಬಾರಿಯ ಇಂಟರ್ ಸ್ಕೂಲ್ ಸ್ಪೋರ್ಟ್ಸ್‌ನಲ್ಲಿ ನನ್ನ ಹೆಸರೂ ಹಾಕಿಬಿಡಿ" ಎಂದೆ. ನನ್ನ ನಲವತ್ತೆರಡು ಕೇಜಿಯ ವಜ್ರಕಾಯವನ್ನೊಮ್ಮೆ ನಖಶಿಖಾಂತ  ನೋಡಿ ಅವರು "ನಿನಗೆಲ್ಲಿ ಬರುತ್ತೆ ರನ್ನಿಂಗ್ ಜಂಪಿಂಗ್!" ಎಂದರು ತಾತ್ಸಾರದಿಂದ.

ಸಿಟ್ಟೇ ಬಂತು ನನಗೆ. ಹೀಗೆನ್ನುವುದಾ ಮೇಷ್ಟ್ರು ನನಗೆ?

ನನ್ನ ತಾತನನ್ನು ಮೀರಿಸುವ ಓಟಗಾರರು ಸುತ್ತ ಹತ್ತೂರಿನಲ್ಲೇ  ಯಾರೂ ಇರಲಿಲ್ಲವೆಂದು ನನ್ನ ಅಜ್ಜಿ ಸದಾ ಹೇಳ್ತಾ ಇದ್ದಳು.ಅಷ್ಟೇ ಅಲ್ಲ ಮಣಗಟ್ಲೆ ತೂಕದ ಕಲ್ಲು ಗುಂಡೆತ್ತುವುದು,ಹಗ್ಗ ಕಟ್ಟಿ ಬಂಡಿ ಎಳೆಯುವುದು, ಇಂಥದೆಲ್ಲವನ್ನೂ ಮಾಡ್ತಿದ್ದವರ ಮೊಮ್ಮಗಳಾದ ನನ್ನ  ರಕ್ತದಲ್ಲೂ ಕ್ರೀಡಾಪಟುವಿನ ಕಣಗಳು ಇರಲಾರವೇ? ಈ ಜೀನ್ಸ್, ವಂಶವಾಹಿ ಇದೆಲ್ಲಾ ಸುಳ್ಳೇ? ಕ್ರೀಡೆಗಳು ನನಗೆ ಬರದಿದ್ದರೆ ಇನ್ನಾರಿಗೆ ಬರಬೇಕು?

ನನ್ನಣ್ಣಂದಿರು ಮಾತ್ರ ಮರಕೋತಿ, ಲಗೋರಿ,ಇಂಥಾದ್ದು ಬಿಟ್ಟರೆ ಬೇರಾವ ಕ್ರೀಡೆಗೂ ಕೈ(ಕಾಲು) ಹಚ್ಚಿದ್ದಿಲ್ಲ ಎನ್ನುವುದನ್ನು ಮರೆತುಬಿಟ್ಟಿದ್ದೆ...ಅದೆಲ್ಲ ಯಾಕೆ? ನಾನು ಕ್ರೀಡಾಳುವಾಗುವುದು ಮಹತ್ವದ್ದಲ್ಲವೆ?

"ಇಲ್ಲ ಸರ್ ನನಗೆ ಎಲ್ಲಾ ಬರುತ್ತೆ ತುಂಬ ದಿನಗಳಿಂದ ಮನೆಯಲ್ಲಿ ಪ್ರಾಕ್ಟೀಸ್ ಮಾಡ್ತಾನೇ ಇದ್ದೀನಿ" ಎಂದ ಗಟ್ಟಿಯಾಗಿ ಹೇಳೇಬಿಟ್ಟೆ!

ಅವರಿಗೇನನಿಸಿತೋ ಏನೋ?

"ಸರಿ ನೋಡೋಣ ಇನ್ನೂ ಚೆನ್ನಾಗಿ ಪ್ರಾಕ್ಟೀಸ್ ಮಾಡು, ಸ್ಕೂಲ್ ಟ್ರಯಲ್ಸ್ ನಲ್ಲಿ ನೋಡೋಣ" ಎಂದರು.

ಆಹ್! ಆಟಗಾರರ ಪಟ್ಟಿಯಲ್ಲಿ ನನ್ನ ಹೆಸರೂ ಸೇರಿ ನಾನು ಇಂಟರ್ ಸ್ಕೂಲ್ ಸ್ಪರ್ಧೆಗಳೆಲ್ಲ ಗೆದ್ದು ರಾಜ್ಯ, ರಾಷ್ಟ್ರಮಟ್ಟದಲ್ಲೂ ಪದಕಗಳನ್ನು ಬಾಚಿ ಗುಡ್ಡೆ ಹಾಕಿ ಒಲಿಂಪಿಕ್ಸ್ ಆಡಲೂ ಹಾರಿ ಹೋದ ಸುಮಧುರ ಕನಸು ನನಗೆ!



ಓಟಗಾರರು ನಸುಕಿನಲ್ಲೇ ಎದ್ದು ನಾಲ್ಕಾರು ಮೈಲಿಗೂ ಹೆಚ್ಚು ಓಡ್ತಾರೆ, ರನಿಂಗ್ ಜಾಗಿಂಗ್ ಮಾಡುವವರು ಹಾಕೋ ಟ್ರ್ಯಾಕ್ ಸೂಟೆಂದರೆ ನನಗೆ ತುಂಬ ಇಷ್ಟ. ಹಾಗೆ ನನ್ನಂತೇ ಸೂರ್ಯವಂಶಿಗಳಾದ ನನ್ನ ಅಣ್ಣಂದಿರು ಎಂದಾದರೂ

ಟ್ರ್ಯಾಕ್ ಸೂಟುಗೀಟು ಹಾಕಿ ಓಡುವಂಥ ಪಾಪ ಮಾಡಿದವರೇ ಅಲ್ಲ! ಈಗ ಎಲ್ಲಿಂದ ತರಲಿ? ಸದ್ಯಕ್ಕೆ ಅಣ್ಣನ ಪ್ಯಾಂಟೇ ಸಾಕು. ನಾಳೆ ನಾ ಅಥ್ಲೀಟ್ ಆಗಿಬಿಟ್ಟೆನಾದರೆ ಹತ್ತು ಟ್ರಾಕ್ ಸೂಟು ಕೊಳ್ಳೋದೇನ್ಮಹಾ? ಅನಿಸಿತು.

ನಮ್ಮೂರಲ್ಲೊಮ್ಮೆ ಅಂತರ ಕಾಲೇಜು ಕ್ರೀಡಾಕೂಟ ನಡೆದಿತ್ತು ಅದರಲ್ಲಿ ಭಾಗವಹಿಸಲಿಕ್ಕೆ ಧಾರವಾಡದ ಕಾಲೇಜೊಂದರಿಂದ ಚೆಲುವೆಯೊಬ್ಬಳು ಬಂದಿದ್ದಳು.ಬಿಳಿ ಬಿಳೀ ಬಣ್ಣದ, ದುಂಡುಮುಖದ ಆಕೆ ಕಪ್ಪು ಬಣ್ಣದ ಟ್ರ್ಯಾಕ್ ಸೂಟ್ ಧರಿಸಿ ಸ್ಪರ್ಧೆ ಶುರುವಾಗುವ ಮೊದಲು ಗ್ರೌಂಡಿನಲ್ಲಿ ಓಡೋದು, ನೆಗೆಯೋದು ಮಾಡುತ್ತಿದ್ದ ಚಂದವನ್ನು ಕಂಡು ಹಿಗ್ಗಿ 'ಅಯ್ಯೋ ನಾನೇ ಅವಳಾಗಬಾರದಿತ್ತೇ' ಎಂದು ನೂರಾರು ಸಲ ಅಂದುಕೊಂಡಿದ್ದೆ. ಪ್ರತಿ ಸ್ಪರ್ಧೆಯಲ್ಲೂ ಅವಳಿಗೆ ಫಸ್ಟ್ ಪ್ರೈಜ್ ಕಟ್ಟಿಟ್ಟದ್ದು. ಹಾಗೆ 'ಆಕೆ ದಿನಾಲೂ ಕುದುರೆಯ ಜೊತೆ ಯಾ ನಾಯಿಯ ಜೊತೆ ರನ್ನಿಂಗ್ ಅಭ್ಯಾಸ ಮಾಡ್ತಾಳೆ ಅಂಥಾ ಗಟ್ಟಿಗಿತ್ತಿ' ಎಂದೆಲ್ಲ ಗೊತ್ತಿದ್ದವರು ಹೇಳಿದ್ದು ಕೇಳಿ ಓಹೋ ಕುದುರೆ, ನಾಯಿ ಜೊತೆ ಓಡಿದರೆ ನಾನೂ ಫಸ್ಟ್ ಬರಬಹುದು ಅದರಲ್ಲೇನು ಮಹಾ ಅಲ್ವಾ? ಎಂದುಕೊಂಡೆ.

ಆದರೇನು..ಕುದುರೆಯಂತೂ ನಮ್ಮಲ್ಲಿರಲಿಲ್ಲ. ನಾಯಿ ಒಂದಿತ್ತು ಆದರೆ ಅದಕ್ಯಾಕೋ ಓಡುವುದೆಂದರೇನೇ ಅಲರ್ಜಿ! ಸದಾ ಬಾಲ ಮುದುರಿ ಬಿದ್ದುಕೊಂಡಿರ್ತಿತ್ತು. ಅದನ್ನು ಓಡಿಸಬೇಕಿದ್ರೆ ಅದಕ್ಕೆ ಹಗ್ಗ ಕಟ್ಟಿ ಎಳೀಬೇಕಷ್ಟೇ... ದರಿದ್ರ ನಾಯಿ ಇದು ದಂಡಪಿಂಡ ಎಂದು ಬೈದುಕೊಂಡೆ.


ಇನ್ನುಳಿದದ್ದೆಂದರೆ ತಂದೆಯವರ ಜೀಪು! ಅಬ್ಬ ಜೀಪಿನ ಹಿಂದೆ ಓಡುವುದಾದೀತೇ? ನೆನೆದರೇ ದಿಗಿಲು...ಛೆಛೆ.. ಇಷ್ಟೆಲ್ಲ ಗಾಬರಿ ಬೀಳೋದ್ಯಾಕೆ? ಓಡಲು ಬರೋದು ಮುಖ್ಯ ಅದು ಹೇಗೆ ಬಂತು ಎನ್ನೋದಲ್ಲ ಅನಿಸಿ ನನ್ನನ್ನೇ ಸಮಾಧಾನ ಮಾಡಿಕೊಂಡೆ. ಒಂದೊಮ್ಮೆ ನಾನು ಕ್ರೀಡಾಪಟುವಾಗಿ ಸಕ್ಸೆಸ್ ಫುಲ್ ಆಗಿಬಿಟ್ಟರಾಯ್ತಲ್ಲ. ಆಗ ಎಲ್ಲರೂ ನನ್ನ ಕೇಳುತ್ತಾರೆ. "ನಿಮ್ಮಯಶಸ್ಸಿನ ಗುಟ್ಟನ್ನು ನಮ್ಮೊಂದಿಗೆ ಹಂಚಿಕೊಳ್ಳಿ" ಅಂತಾರೆ. "ನನ್ನ ಛಲವೇ ನನ್ನ ಗುಟ್ಟು..." ಎಂದಷ್ಟೇ ಮುಗುಮ್ಮಾಗಿ ಹೇಳಿಬಿಡ್ತೀನಿ. ಎಂದು ಮನದಲ್ಲೇ ಗುಣುಗುಣಿಸಿದೆ.

* * *

"ಎದ್ದೇಳೇ ಓಡ್ಲಿಕ್ಕೆ ಹೋಗ್ತೀನಿ ಅಂದಿದ್ದೆ ಮತ್ತೆ?" ಅಕ್ಕ ನಸುಕಿನ ಐದಕ್ಕೇ ನನ್ನ ಮುಸುಕೆಳೆದು ತಟ್ಟಿದಾಗ ಕಾಲು ಝಾಡಿಸಿ ದೂಡಿ ಅವಳನ್ನೇ ಬೈಯುವ ಮನಸ್ಸಾದರೂ ನನ್ನ ಗುರಿ, ಛಲ ಹಿಂದಿನ ದಿನ ನಾನೇ ಅವಳಲ್ಲಿ ನನ್ನನ್ನು ಎಬ್ಬಿಸುವಂತೆ ಗೋಗರೆದಿದ್ದು ಪಟ್ಟನೆ ನೆನಪಾಗಿ ತಟ್ಟನೆ ಎದ್ದೆ.

ಅಣ್ಣನ ಕಬರ್ಡನ್ನು ಕತ್ತಲೆಯಲ್ಲೇ ಗೂರಾಡಿ ಅವನಿಗೆ ಚಿಕ್ಕದಾಗ್ತಿದ್ದ ಪ್ಯಾಂಟೊಂದನ್ನು ಎಳೆದು ತೊಟ್ಟು, ಶರ್ಟ್ ಹಾಕಿಕೊಂಡು

ಹೊರಗೆ ಬಂದು ನಾನು ಆ ಧಾರವಾಡದ ಚೆಲುವೆಯಂತೆ ಕಾಣಿಸುತ್ತಿರಬಹುದೇ ಎಂದು ಕನ್ನಡಿ ನೋಡಿಕೊಂಡೆ. "ಖಂಡಿತ ಇಲ್ಲ" ಎಂದಿತು ಕನ್ನಡಿ! ಛೀ...ಈ ಕನ್ನಡಿ ಬರೀ ಸುಳ್ಳೇ ಹೇಳುತ್ತೆ ಎಂದದನ್ನು ಬೈದುಕೊಂಡು ಕತ್ತಲಲ್ಲೇ ಹೊರಬಿದ್ದೆ. ಎಲ್ಲಿಗೆ ಅಂದರೆ ಎಲ್ಲಿಯ ವರೆಗೆ ಓಡುವುದು ಎಂದು ನಿರ್ಧರಿಸಲೇ ಹತ್ತು ನಿಮಿಷ ಹಿಡೀತು!



ಹಕ್ಕಿಗಳು ಎದ್ದೇಬಿಟ್ಟವು...ಸುತ್ತಲೂ ಕಲಕಲ.

'ಅಲ್ಲಿ ಇಲ್ಲಿ ದೂರ ಓಡಿ ನೋಡುವವರಿಗೆ ಯಾಕೆ ಅಸೂಯೆ ಮೂಡಿಸಬೇಕು?

ನಮ್ಮನೆ ಕಾಂಪೌಂಡೇ ಸಾಕಷ್ಟು ದೊಡ್ಡದಿದೆ ಅದನ್ನು ಸುತ್ತು ಹಾಕಿದರೆ ಸಾಕಷ್ಟು ಪ್ರಾಕ್ಟೀಸ್ ಆಗೇಬಿಡುತ್ತೆ' ಎಂದುಕೊಂಡು ಕಾಂಪೌಂಡ್ ಸುತ್ತಲು ಆರಂಭಿಸಿದೆ.

ಮೊದಲ ರೌಂಡ್ ಮುಗಿದಾಗ ಆನಂದ ಆತ್ಮವಿಶ್ವಾಸಗಳು ಪುಟಿದೆದ್ದುವು. 'ಓಹೋ ಬೇಕಾದಷ್ಟು ಓಡಬಲ್ಲೆ ನಾನು ಓಡೋದು ಕಷ್ಟ ಎಂದು ತಿಳಿದವರು ತಿಳಿಗೇಡಿಗಳು' ಎನಿಸಿತು.

ಸುತ್ತುತ್ತಲೇ ನಾಲ್ಕು, ಆರು, ಎಂಟು, ಹತ್ತು ರೌಂಡ್ಸ್ ಮುಗಿದುವೆಂದು ಲೆಕ್ಕ ಹಾಕಿದೆ. ಈಗ ನಾನು ಓಡ್ತಾ ಇರೋದು ಹನ್ನೊಂದನೆಯ ಸುತ್ತು...ಅರೇ ಏನಿದು? ಕಾಂಪೌಂಡ್ ಮುಗಿಯುತ್ತಲೇ ಇಲ್ಲ. ಇಷ್ಟರಲ್ಲೇ ದೊಡ್ಡದಾಗಿಬಿಟ್ಟಿತೇ...ಎನಿಸಿತು.

ಮತ್ತೂ ಓಡಿದೆ, ಓಡಿದೆ ಕಾಂಪೌಂಡೇನಾದರೂ ಉದ್ದಕ್ಕೆ ಬೆಳೀತಾ?ಏನೋ ಅನುಮಾನವಾಗಿ ಕೆಳಗೆ ನೋಡಿದೆ.

'ಅಯ್ಯಾ ನನ್ನ ಕಾಲುಗಳಿಗೇನಾಯ್ತು? ಇದ್ದ ಜಾಗದಲ್ಲೇ ಇವೆ, ಅಂದರೆ ಹನ್ನೊಂದನೆಯ ಸುತ್ತು?'

ಆಗ ಗೊತ್ತಾಗಿದ್ದು ನನ್ನ ಕಾಲುಗಳು ಓಡಲ್ಲ ಅಂದು ಮುಷ್ಕರ ಹೂಡಿದ್ದುವು!

"ಇರಲಿ ಇದನ್ನು ಸೋಲೆಂದು ತಿಳೀಬಾರ್ದು, ಒಂದೇ ಸಲಕ್ಕೆ ಬಹಳಷ್ಟನ್ನು ಸಾಧಿಸಲು ಹೋಗಬಾರದು. ಹಂತಹಂತವಾಗಿ ಹೆಚ್ಚಿಸಬೇಕು" ಎಂದುಕೊಳ್ಳುತ್ತ ಮನೆ ಸೇರಿದೆ.

"ಏ..ಪಾಪ ತುಂಬ ಓಡಿದೆಯೇನೇ? ಎಷ್ಟು ಮೈಲಿ ಹೋಗಿದ್ದೆ? ತೊಗೋ ಹಾಲು ಕುಡಿ" ಎಂದು ಅಕ್ಕ ಗ್ಲಾಸ್ ತುಂಬ ಹಾಲು ಕೊಟ್ಟಳು. ಹಾಲು ಕುಡಿಯದಿದ್ದರೆ ನನ್ನ ಛಲದ ಗತಿಯೇನು?

ಮೂಗು ಮುಚ್ಚಿಕೊಂಡು ಹೊಟ್ಟೆಗಿಳಿಸಿದೆ. ಅದು ಗೊಳ ಗೊಳ ಅಂದಿತು.ಐದೇ ನಿಮಿಷದಲ್ಲಿ ಬಾಯಿ ಮಾರ್ಗವಾಗಿ ಹೋದಂತೆಯೇ ವಾಪಸ್ ಬಂತು!

"ಹೆ ಹೆ ನೋಡಿವ್ಳನ್ನ ಒಂದ್ಲೋಟ ಹಾಲು ಕುಡೀಲಿಕ್ಕಾಗಲ್ಲ ಅಥ್ಲೀಟ್ ಆಗ್ತಾಳಂತೆ ಅಥ್ಲೀಟು" ಅಣ್ಣ ಅಣಕಿಸಿದಾಗ ಅವನನ್ನು ಜೋರಾಗಿ ಜಿಗುಟಿದೆ. "ನೋಡ್ತಾ ಇರೋ, ನಾಳೆ ಗೆಲುವು ಭಾರೀ ಸುದ್ದಿಯಾಗಿ ನನ್ನ ಫೋಟೊ,ವರ್ಣನೆ ಎಲ್ಲ ಕಡೆ ಬಂದಾಗ ಗೊತ್ತಾಗುತ್ತೆ ನನ್ನ ಕೆಪಾಸಿಟಿ" ಅಂದೆ.

ಯಾರೇನೇ ಆಡಲಿ ತಮಾಷೆ ಮಾಡಲಿ ನನ್ನ ಪ್ರಾಕ್ಟೀಸ್ ತಪ್ಪದೆ ಮುಂದುವರಿಸಿದೆ. ರನ್ನಿಂಗ್, ಲಾಂಗ್ ಜಂಪ್ ಇವೆರಡಂತೂ ಈಗ ಸಾಧಿಸೋದು ಅನಂತರ ಉಳಿದದ್ದು... ನಾನು ಮಹಾನ್ ಕ್ರೀಡಾಳುವಾದಾಗ ಎಂತೆಂಥ ಸನ್ಮಾನಗಳು ನನಗೆ ಕಾದಿವೆಯೋ ಎನ್ನುವ ಕನಸಿನಲ್ಲೇ ಟೀಕಾಕಾರರು ಅರ್ಥಾತ್ ಅಣ್ಣಂದಿರನ್ನು ನಿರ್ಲಕ್ಷಿಸಿ ಸಾಧನೆಯ ದಾರಿ ಸವೆಸಿದೆ.

ಶಾಲೆಯಲ್ಲಿನ ಟ್ರಯಲ್ಸ್ ದಿನವೂ ಬಂದೇ ಬಂತು. ನಾನು ಆಡುತ್ತಿದ್ದ ಮಾತುಗಳನ್ನು ಕೇಳಿ ನಾನದೆಷ್ಟು ಭೀಷಣವಾಗಿ ಪ್ರಾಕ್ಟೀಸ್ ಮಾಡಿರಬಹುದೋ ಎಂದು ಬೆರಗಾಗಿದ್ದರು ನನ್ನ ಗೆಳತಿಯರು.



ಲಾಂಗ್ ಜಂಪಿಗಾಗಿ ನನ್ನ ಹೆಸರು ಕರೆದರು.

ಅಪಾರ ಹರ್ಷದಿಂದ ಭಾವೀ ಭಾರತದ ಅಗ್ರ ದರ್ಜೆಯ ಕ್ರೀಡಾಪಟು ನಾನೆಂಬ ಆತ್ಮವಿಶ್ವಾಸದೊಂದಿಗೆ ಬಂದು ನಿಂತೆ. ಪಿಟಿ ಮೇಷ್ಟ್ರು ಸೀಟಿ ಊದಿದಾಗ ರಭಸವಾಗಿ ಓಡಿ ಬಂದು ಮರಳಿಗೆ ನೆಗೆದೆ.

"ಫೌಲ್" ಎಂದು ಕಿರುಚಿದರು ಅಲ್ಲಿದ್ದವರು, ಹಾಗೆಂದರೇನೆಂದೇ ನನಗೆ ಸರಿ ಗೊತ್ತಿರಲಿಲ್ಲ. ಮೂರೂ ಹೊತ್ತೂ ಏನೆಲ್ಲಾ ಓಟಗುಡುವ ಈ ಪಾಪಿ ಅಣ್ಣಂದಿರು ಇಂಥದರ ಬಗ್ಗೆ ಹೇಳಿ ಕೊಡಬಾರದೇ ನನಗೆ ಎಂದು ಬೈದುಕೊಂಡೆ.ಆದರೆ ಅವರಾದರೂ ಇಂಥ ಕ್ರೀಡೆಗಳ ತಂಟೆಗೆಲ್ಲಿ ಹೋಗಿದ್ದರು ಗೊತ್ತಿರಲಿಕ್ಕೆ? ಎಂದು ನೆನಪಾಯ್ತು.

ಸರಿ, ಮುಂದಿನ ಬೌನ್ಸಿನಲ್ಲಿ ಮತ್ತೆ ಜೋರಾಗಿ ಓಡಿ ಬಂದು ಎಲ್ಲ ಶಕ್ತಿಗೂಡಿಸಿ ರಭಸವಾಗಿ ದೂರಕ್ಕೆ ಜಿಗಿದೆ.

ಮತ್ತೆ "ಫೌಲ್" ಎಂಬ ಕಿರುಚಾಟ! ಅಲ್ಲಿರುವವರಿಗೆ ಹಾಗೆ ಅರಚುವುದನ್ನು ಬಿಟ್ಟು ಬೇರೆ ಕೆಲಸವೇ ಇಲ್ಲವೇನೋ ಅನಿಸಿತು.

'ಓ...ಮಹಾ ಹೇಳ್ಕೊಂಡಿದ್ದೆಯಲ್ಲ ನನಗೆಲ್ಲಾ ಗೊತ್ತು, ಪ್ರಾಕ್ಟೀಸ್ ಇದೆ ಅಂತ..ನಿನ್ನ ಬಂಡವಾಳ ನನಗೊತ್ತಿತ್ತು' ಎನ್ನುವ ನೋಟವೊಂದನ್ನು ನನ್ನೆಡೆಗೆ ಬೀರಿದರು ಪಿಟಿ ಸರ್.

ಅದರೂ ಹತ್ತಿರ ಬಂದು ಫೌಲ್ ಸ್ಟೆಪ್ ಗೆರೆಯ ಬಗ್ಗೆ ಸ್ವಲ್ಪ ಸರಿಯಾಗಿ ತಿಳಿಸಿ ಹೇಳಿ, "ಓಡಿ ಬಂದ ಮೇಲೆ ಹೀಗೆ, ಇಲ್ಲಿ ಕಾಲಿಟ್ಟು ಜಂಪ್ ಮಾಡು" ಎಂದರು. ಸರಿಯೆಂದು ತಲೆಯಾಡಿಸಿ ಅವರು ಹೇಳಿದಂತೆಯೇ ಓಡಿ ಬಂದು ಸುಣ್ಣದ ಗೆರೆಯ ಆ ಮಾರ್ಕನ್ನು ಮೆಟ್ಟಬಾರದೆಂಬ ಎಚ್ಚರಿಕೆಯಲ್ಲಿ ನನ್ನ ಪಾದ ಆ ಗೆರೆಯಿಂದ ಒಂದೆರಡು ಫೂಟು ಹಿಂದೆಯೇ ಊರಲ್ಪಟ್ಟು ಮತ್ತೆ ನಾನು ಜಿಗಿದದ್ದು ಕೇವಲ ಎರಡೇ ಎರಡು ಮೀಟರ್ ಮಾತ್ರವೇ ಎಂದು ಅನಂತರ ತಿಳಿಯಿತು!

ಇದಲ್ಲ ಮುಖ್ಯ, ನಾನು ಜಿಗಿದು ಮರಳಿನಲ್ಲಿ ಕೂತುಕೊಳ್ಳುವಾಗ ಬ್ಯಾಲೆನ್ಸ್ ಕಳೆದುಕೊಂಡಿದ್ದೆ! ಆ ಸ್ಥಿತಿಯಲ್ಲಿ ನನ್ನ ಎಡಪಾದ ಬಲಬದಿಗೆ ತಿರುಚಿಕೊಂಡು ಅತೀವ ನೋವಿನೊಂದಿಗೆ ಬುರುಬುರು ಊದಿಕೊಂಡಿತು...ಕುಂಟುತ್ತ ಅಳುತ್ತ ಎದ್ದ ನನ್ನನ್ನು ಮೇಷ್ಟ್ರು ಗಳೆಲ್ಲ ಎಬ್ಬಿಸುತ್ತ ಮುತ್ತಿಕೊಂಡರು.


ಅಣ್ಣ ನನ್ನನ್ನು ಆಸ್ಪತ್ರೆಗೆ ಕರೆದೊಯ್ದ.

ಅಲ್ಲಿ ಎಕ್ಸರೇ ಮಾಡಿದ ಡಾಕ್ಟರ್ "ಏನಮ್ಮಾ ಒಳ್ಳೇ ಕಿಕ್ ಫೈಟಿಂಗೇ ಮಾಡಿ ಬಂದಿರೋ ಹಾಗಿದೆಯಲ್ಲ... ನಿನ್ನ ಕಾಲಿನ ಆಂಕಲ್ ಜಾಯಿಂಟಲ್ಲಿ ಸ್ಟ್ರಾಂಗ್ sprain ಆಗಿಬಿಟ್ಟಿದೆ. ಕಟ್ಟು ಹಾಕ್ತೀನಿ, ಇನ್ನೆರಡು ತಿಂಗಳು ಹೆಚ್ಚು ನಡೀಬಾರ್ದು. ಆ ಮೇಲೆ ಹುಶಾರಾಗಿ ಓಡಾಡು ತಿಳೀತಾ!?" ಎಂದು ಹೇಳಿ ಔಷಧಿಯ ಲಿಸ್ಟ್ ಅಣ್ಣನ ಕೈಗಿತ್ತರು.

ಅಲ್ಲಿಗೆ ಮಹಾನ್ ಅಥ್ಲೀಟಾಗುವ ನನ್ನ ಕನಸಿಗೆ ಜಬರ್ದಸ್ತ್ ವಿರಾಮ ಬಿತ್ತು!

ಅದು ಬಿಡಿ, ಮುಂದೆ ಎಷ್ಟೋ ವರ್ಷ ನನ್ನ ಕಾಲು ಆಟದ ಮೈದಾನಕ್ಕಿಳಿಯಲೂ ಒಲ್ಲೆನೆಂದಿರಲು ಉನ್ನತ ದರ್ಜೆಯ ಒಬ್ಬ ಕ್ರೀಡಾಪಟು ರೂಪುಗೊಂಡು ತಯಾರಾಗಿ ನಮ್ಮ ದೇಶದ ಹೆಮ್ಮೆ ಉತ್ತುಂಗಕ್ಕೇರುವ ಅವಕಾಶ ಇಲ್ಲವಾಯ್ತಲ್ಲ ಎಂಬ ಅತೀವ ಮರುಕ ನನ್ನಲ್ಲಿ ಇನ್ನೂ ಉಳಿದಿದೆ!

(ವಿ ಸೂ:- ಇದು ಒಂದು 'ಶತಮಾನದ' ಹಿಂದಿನ ಸಂಗತಿಯಾಗಿದ್ದು, ನನ್ನಲ್ಲೇ ಉಳಿದಿರುವ ಈ ಗುಟ್ಟನ್ನು ನೀವುಗಳು ಯಾರಲ್ಲೂ ಹೇಳಬೇಡಿ ಎಂಬ ಪ್ರಾರ್ಥನೆ!!)



ಎಸ್ ಎನ್ ಗಣನಾಥ

**ಚು**ಂಗ ಚುಂಗಿ ಅವತ್ತು ಬೆಳ್ ಬೆಳಗ್ಗೆ ಕಾಫಿ ಕುಡಿಯುತ್ತಾ ಮಾತನಾಡುತ್ತಾ ಕೂತಿದ್ದರು. ಅದು ಹರಟೆಯೂ ಅಲ್ಲ . ಜಗಳವೂ ಅಲ್ಲ. ಚುಂಗಿ ಎಂದಿನಂತಿರಲಿಲ್ಲ. ಆಕೆಯ ಮೂಡೇ ಸರಿ ಇರಲಿಲ್ಲ. ಕೆಲವು ದಿನಗಳಿಂದ ಅದೇನೋ ಹೇಳಲಾಗದ ಸಂಕಟ, ತಳಮಳ. FB ಯಲ್ಲಿ ಎಷ್ಟೇ ಪೋಸ್ಟ್ ಹಾಕಿದ್ರೂ ಲೈಕುಗಳು, ಕಾಮೆಂಟುಗಳು ಬರದೇ ಇದ್ದರೆ ಯಾರಿಗೆ ತಾನೆ ಸುಮ್ಮನಿರಲು ಆಗುತ್ತೆ? FB ಯಲ್ಲಿ ಕೆಲವರಿಗೆ ಎಷ್ಟೊಂದು ಲೈಕ್ ಬರುತ್ತವಲ್ಲಾ? ನನ್ನ ಪೋಸ್ಟ್ ಗಳಲ್ಲಿ ಇಲ್ಲದ್ದು ಅಲ್ಲೇನಿದೆ ಎಂದು ಗೊತ್ತಾಗದೆ ಚಡಪಡಿಸುತ್ತಿದ್ದಳು.

ಇಷ್ಟಕ್ಕೂ ಲೈಕುಗಳು ಸಿಕ್ಕರೆ ಯಾರಿಗೆ ಬೇಡ ಹೇಳಿ. ನಮ್ಮ ಪಕ್ಕದ ಮನೆಯ ಹುಡುಗ ಹೇಳಿದ ಹಾಗೆ

ಸಿಕ್ಕಿತೆನಗೆ ಹೈಕು
ಕೊಂಡೆ ಶೂಸು ನೈಕು
ಜೊತೆಗೆ ಒಳ್ಳೆ ಬೈಕು
ಈಃ ಫೋಟೋ ಹಾಕಿ ಪಡೆದೆ
ಬೊಗಸೆ ಬೊಗಸೆ ಲೈಕು

ಈ ನಡುವೆ ಅವರ ಬೀದಿಯಲ್ಲೇನೋ ಸದ್ದು ಕೇಳಿಸಿದಂತಾಗಿ ಚುಂಗ ಹೊರಗೆ ಬಂದ. ನೋಡಿದರೆ ಅಲ್ಲೊಂದು ತಳ್ಳುವ ಗಾಡಿ ಇತ್ತು. ಅದರ ಸುತ್ತಲೂ ಒಂದು ನಾಲ್ಕೈದು ಮಂದಿ ನಿಂತು ಆ ಗಾಡಿಯವನ ಜೊತೆ ಏನೋ ಕೇಳುತ್ತಿದ್ದರು. ಅವನಂತೂ ಫುಲ್ ಜೋಶ್ ನಲ್ಲಿ ಮಾತಾಡುತ್ತಿದ್ದ. ತಳ್ಳುವ ಗಾಡಿಯಲ್ಲಿ "ಇಲ್ಲಿ Likeಗಳು Comment ಗಳು ಮಾರಾಟಕ್ಕಿವೆ". ಅಂತ ದೊಡ್ಡ ಬೋರ್ಡ್ ಇತ್ತು. ಅವನ ಹತ್ತಿರ ಒಂದು ಮೈಕು ಕೂಡ ಇತ್ತು.

ಚುಂಗನಿಗೆ ಇದೇನೋ ವಿಚಿತ್ರವಾಗಿದೆಯಲ್ಲಾ? ಎನಿಸಿತು. ಹಾಗೇ ನೋಡುತ್ತಿದ್ದ. ಆಗ ಗಾಡಿಯವ ಹಾಡಲು ಪ್ರಾರಂಭ ಮಾಡಿದ.

"ಪಲ್ ಭರ್ ಕೆ ಲಿಯೆ
ಕೊಯೀ ಹಮೇ ಲೈಕ್ ಕರ್ ಲೇ
ಝೂಟಾ ಹೀ ಸಹೀ"

"ಇಲ್ಲಿ ನೋಡಿ ಮೇಡಂ, ನೋಡಿ ಸರ್, ನೀವು ಅದೆಷ್ಟು ಸಲ ಫೇಸ್ ಬುಕ್ ನಲ್ಲಿ ಪೋಸ್ಟ್ ಹಾಕ್ತೀರಾ ಅಲ್ವ? ಆದರೆ ಯಾರೂ ಓದಿ ಕಾಮೆಂಟ್ಸ್ ಹಾಕಲ್ಲ. ಕಾಮೆಂಟ್ಸ್ ಹಾಗಿರಲಿ, ಒಂದು ಲೈಕು ಕೂಡ ಒತ್ತೊಲ್ಲ. ಎಷ್ಟು ಬೇಜಾರಿನ ವಿಷಯ ಅಲ್ವಾ? ನಿಮಗೆ ಈ ಥರ ಆಗಿಯೇ ಇರುತ್ತೆ, ಎಲ್ಲೂ ಹೇಳಿಕೊಳ್ಳೋಕೆ ಆಗಲ್ಲ ಅಷ್ಟೆ. ಎಷ್ಟೋ ಸಾರಿ ನೀವು ಬೇರೆಯವರ ಪೋಸ್ಟುಗಳನ್ನು ಎಷ್ಟೇ ಸಾರಿ ಲೈಕ್ ಮಾಡಿದ್ರೂ ಅವರು ಮಾಡಲ್ಲ. ಅಷ್ಟಕ್ಕೂ ನೀವ್ಯಾಕೆ ಲೈಕ್ ಒತ್ತೋದು ಹೇಳಿ? ನಾಳೆ ಅವರೂ ನಿಮಗೆ ಲೈಕ್ ಕೊಡಲಿ ಅಂತ ಅಲ್ವಾ? "



ಅವನ ಒಂದೊಂದು ಮಾತೂ ಹೌದಲ್ಲಾ? ಇವನು ಹೇಳ್ತಾ ಇರೋದು ಎಷ್ಟು ನಿಜ ಅನಿಸಲು ಶುರುವಾಯ್ತು ಚುಂಗನಿಗೆ. "ಹೌದು ಕಣ್ರೀ ನೀವು ಹೇಳೋದು.

ಹಾಗಾದಾಗ ನನಗಂತೂ ಸಿಟ್ಟೇ ಬರುತ್ತೆ" ಅಂತ ಧ್ವನಿ ಕೇಳಿಸಿತು. ಪಕ್ಕಕ್ಕೆ ನೋಡಿದರೆ ಚುಂಗಿ ಹೊರಗೆ ಬಂದಿದ್ದಾಳೆ. ಗಾಡಿಯವನ ಮಾತಿಗೆ ದನಿಗೂಡಿಸುತ್ತಿದ್ದಾಳೆ. ಇದೇನೂ ಚುಂಗನಿಗೆ ಆಶ್ಚರ್ಯವಾಗಲಿಲ್ಲ. ಇತ್ತೀಚೆಗೆ FB ಅಕೌಂಟ್ ತೆರೆದು ಮೇಲಿಂದ ಮೇಲೆ ಪೋಸ್ಟ್ ಹಾಕಲು ಪ್ರಾರಂಭಿಸಿದ್ದ ಚುಂಗಿಯ ಮುಖ್ಯ ಕಂಪ್ಲೇಂಟು ಎಂದರೆ ಅದನ್ನು ಯಾರು ಓದುತ್ತಾರೆ ಎಂದು ಗೊತ್ತಾಗುತ್ತಿಲ್ಲ ಎನ್ನುವುದು. ಅವಳ ಪೋಸ್ಟುಗಳಿಗೆ ಲೈಕು ಕಾಮೆಂಟುಗಳು ಬಂದದ್ದೇ ಅಪರೂಪ. ಎಲ್ಲರಿಗೂ ಫೋನ್ ಮೆಸೇಜ್ ಮಾಡಿ ಮಾಡಿ ಸಾಕಾಯ್ತು. ಇತ್ತೀಚೆಗಂತೂ ಮದುವೆ ಮನೆಗಳಲ್ಲಿ ಅವಳ ಮುಖ ಕಂಡರೆ ನೆಂಟರು ತಪ್ಪಿಸಿಕೊಂಡು ದೂರ ಓಡುತ್ತಿದ್ದರು.

ಅವನ ಮೈಕಿಗೆ ಮತ್ತೆ ಜೀವ ಬಂದಿತ್ತು.

"ಲೈಕು ಪೈಕುಗಳು ಕೊಂಚ ದೊರಕಿದರೆ ನನಗದೇ ಕೋಟಿ ರೂಪಾಯಿ ಲೈಕು ಕಾಮೆಂಟುಗಳ ಸುರಿಮಳೆಯಾದರೆ ನಾನೂ ಒಬ್ಬ ಸಿಪಾಯಿ"

ಈ ತಳ್ಳುವ ಗಾಡಿಯವರಿಗೆ ಅದ್ಯಾವುದೋ ಆರನೆಯ ಇಂದ್ರಿಯ ಓವರ್ ಟೈಂ ಕೆಲಸ ಮಾಡುತ್ತಾ ಇರುತ್ತೆ ಅನಿಸುತ್ತೆ. ಚುಂಗಿಯ ಹತ್ತಿರ ವ್ಯಾಪಾರ ಆಗುತ್ತೆ ಅಂತ ಅದು ಹೇಗೆ ಕಂಡುಹಿಡಿದನೋ ಗೊತ್ತಿಲ್ಲ. ಆಕೆಗೇ ಹೇಳತೊಡಗಿದ .

"ಮೇಡಂ, ನಿಮ್ಮ ಪ್ರಾಬ್ಲಂ ಮುಗೀತು ಅಂತ ತಿಳ್ಕೊಳಿ. ನಿಮ್ಮ ಪೋಸ್ಟುಗಳಿಗೆ ಇನ್ನುಮುಂದೆ ತುಂಬಾ ಲೈಕು ಕಾಮೆಂಟುಗಳು ಬರುತ್ತವೆ."

"ಅದು ಹೇಗೆ ಸಾಧ್ಯ? ನೀವೇನಾದರೂ ಮ್ಯಾಜಿಕ್ ಮಾಡ್ತೀರಾ?"

"ಮ್ಯಾಜಿಕ್-ಗೀಜಿಕ್ ಏನೂ ಇಲ್ಲ ಮೇಡಂ. ಅದು ಹೀಗೆ. ಇಲ್ಲಿ ನೀವು ಲೈಕು, ಕಾಮೆಂಟುಗಳನ್ನು ಕೊಳ್ಳಬಹುದು. ನಂತರ ನೀವು ಪೋಸ್ಟು ಹಾಕಿದಾಗ ಆ ಪೋಸ್ಟಿಗೆ ನಿಮಗೆ ಎಷ್ಟು ಲೈಕು ಬೇಕು ಎಷ್ಟು ಕಾಮೆಂಟು ಬೇಕು ಅಂತ ನಮಗೆ ತಿಳಿಸಿ. ಅಷ್ಟನ್ನು ಹಾಕಿಸುತ್ತೇವೆ. ಲೈಕಿನಲ್ಲೂ ಯಾವ ಇಮೋಜಿ ಬೇಕು ಅಂತ ಹೇಳಿದರೆ ಅದೇ ಬರುತ್ತೆ. ಯಾವ ಥರದ, ಎಷ್ಟು ಉದ್ದದ ಕಾಮೆಂಟು ಬೇಕು ಅಂತ ಹೇಳಿದರೆ ಹಾಗೇ ಬರುತ್ತೆ. ನೀವು ಕೊಂಡ ಲೈಕು/ಕಾಮೆಂಟುಗಳು ಮುಗಿದಾಗ ಮತ್ತೆ ನನ್ನ ಹತ್ತಿರ ತಗೋಬಹುದು. ನಾನು ದಿನವೂ ಈ ಬೀದಿಗೆ ಬರ್ತಾ ಇರ್ತೀನಲ್ಲಾ?"

"ಅಷ್ಟೇ ಅಲ್ಲ ಮೇಡಂ; ಇನ್ನೂ ಸ್ವಲ್ಪ ಹಣ ಕೊಟ್ಟರೆ ನಮ್ಮ ಕಾಮೆಂಟ್ ಬ್ಯಾಂಕ್ ನೋಡಿ ತುಂಬ ಚಂದದ ಕಾಮೆಂಟುಗಳನ್ನೂ ಹುಡುಕಿ ಹಾಕಬಹುದು. ಫೋಟೋಗಳು ಬೇಕೆಂದರೆ ಅದಕ್ಕೆ ಬೇರೆ ದುಡ್ಡು."

ಮತ್ತೆ ಹಾಡತೊಡಗಿದ.

"ಜಾಣಮರಿ ಜಾಣಮರಿ ಲೈಕು ಬೇಕೇ?

ಲೈಕು ಬೇಕು ಕಾಮೆಂಟ್ ಬೇಕು ಎಲ್ಲ ಬೇಕು

ಜಾಣಮರಿ ನಿನಗೆ ಲೈಕು ಏಕೆ ಬೇಕು?

ಲೈಕು ಗಳಿಸಿ ನಾಲ್ಕು ಜನಕೆ ಹೇಳಬೇಕು"

ಚುಂಗಿಗಂತೂ ಈ ಐಡಿಯಾ ತುಂಬ ಹಿಡಿಸಿಬಿಟ್ಟಿತು. "ಡಿಸ್ಕೌಂಟ್ ಇಲ್ಲವಾ? ಗೂಗಲ್ ಪೇ ಮಾಡಬಹುದಾ?" ಅಂತೆಲ್ಲಾ ಕೇಳುತ್ತಾ ಕೊಳ್ಳುವುದರಲ್ಲಿ ಬಿಜಿಯಾದಳು.


ಅಬ್ಬಾ, ಪ್ರಪಂಚ ಎಲ್ಲಿಂದ ಎಲ್ಲಿಗೋ ಹೋಗ್ತಾ ಇದೆ ಎಂದು ಚುಂಗ ತಲೆ ಚಚ್ಚಿಕೊಂಡ!




# ನಿದ್ದೆ ಗ್ಯೆಯೋನ ಹೊತ್ತು ನುಂಗ್ತು !

## ಅವಸರವಸರವಾಗಿ ಮಕ್ಕಳು ಸ್ಕೂಲಿಗೆ ಹೋಗಿ ಮಾಡೋದೆನಪ್ಪಾ ಅಂತಂದ್ರೆ... !!*

ನೈಜ ಘಟನೆಗಳಾಧಾರಿತ ಕಾಲ್ಪನಿಕ ಸೃಷ್ಟಿ ! ವಿಶುಯಲ್ಸ್ : ರಾಂಕಿ





ಗೊರಕೆ ಉಂಟೆಪಾಳ್ಯ
ಬೆಳಗಿನ ವೇಳೆ
7:35
ಹಗಲು ಹೊತ್ತು
8:05
ಸ್ಕೂಲ್ ಶುರು !
8:15
z z Z Z
ಮಕ್ಕಳ ಸ್ಕೂಲ್ ಮನೇಲಲ್ವೇ ?
ಅಂದ್ರು TP ಕೈಲಾಸಂ.
ನಮ್ಮ ಭೂಪ ಅದನ್ನ ಕೇಳಿ ವಾಪಸ್ ಹೇಳಿದ...
ಸ್ಕೂಲು ಮನೆ ಒಂದೇ ಅಂದ ಮೇಲೆ,
ಅಲ್ಲಿ ನಿದ್ದೆ ಮಾಡಬಾರದೇ?

# ದೇವರು ಕೊಟ್ಟದ್ದು, ಕೊಡದ್ದು....

ಎಚ್. ಗೋಪಾಲಕೃಷ್ಣ

ಇದು ಹೇಗಾಯಿತು ಅಂದರೆ ನಿಮಗೊಂದು ಪುಟ್ಟ ಪುರಾಣ ಹೇಳಬೇಕು. ಅದನ್ನು ಹಿನ್ನೆಲೆ ಅಂತ ಇಟ್ಟುಕೊಳ್ಳಿ. ಹಿನ್ನೆಲೆ ವಿವರಣೆ ನಂತರ ರಂಗದ ಮೇಲೆ ಜಿಗಿಯೋಣ, ಸರಿ ತಾನೇ..

ಈಗ ಹಿನ್ನೆಲೆಗೆ

ಮೊನ್ನೆ ಬ್ಲಡ್ ಟೆಸ್ಟ್‌ಗೆ ಅಂತ ಹೋಗಿದ್ದೆ ತಾನೇ? ಅದಕ್ಕೆ ಮೊದಲು ಎಂಟೂವರೆ ಸಾವಿರ ಸ್ಟೆಪ್ಸ್ ಹಾಕಿದ್ದೆ. ಮನೆಗೆ ಬಂದು ವಾಕಿಂಗ್ ಶೂ ಬಿಚ್ಚಿಟ್ಟು ಚಪ್ಪಲಿ ತೊಟ್ಟು ರಕ್ತದಾನಕ್ಕೆ ಹೋಗಿದ್ದೆ. ಶೂ ಸವೆದಿದೆ ಅದಕ್ಕೊಂದು ಆರುಸಾವಿರ ಎತ್ತಿ ಇಡಬೇಕು. ಯಾವುದರ ಖರ್ಚು ಕಡಿಮೆ ಮಾಡಬಹುದು ಅಂತ ಯೋಚಿಸುತ್ತಾ ಚಪ್ಪಲಿ ಮೆಟ್ಟಿದ್ದೆ. ಶೂ ಚಪ್ಪಲಿಗಳ ಒಳಗೆ ಹಾವು ಸೇರಿಕೊಂಡಿರುತ್ತೆ ಜ್ವಾಪಾನ ಎನ್ನುವ ವಾಟ್ಸಾಪ್ ಕತೆಗಳನ್ನು, ಯು ಟ್ಯೂಬ್‌ಗಳ ತುಣುಕುಗಳನ್ನು ಸುಮಾರು ಸಲ ಓದಿದ್ದೆ. ಅದರಿಂದ ಚಪ್ಪಲಿ ಶೂ ತೊಡಬೇಕಾದರೆ ಹತ್ತು ನಿಮಿಷ ಕೊಡವಿ ಹಾವು ಚೇಳು ಇಲ್ಲ ಅಂತ ಕನ್ಫರ್ಮಿಸಿ ಕೊಂಡು ಅವನ್ನ ತೊಡುವುದು. ಇವತ್ತೂ ಹಂಗೇ ಮಾಡಿದ್ನಾ? ಚಪ್ಪಲಿನ ಹಿಂದೆ ಮುಂದೆ ತಿರುಗಿಸಿ ಕೊಡವಿ ಹಾಕಿಕೊಂಡಿದ್ದು. ಚಪ್ಪಲಿ ಅಟ್ಟೆ ಪೂರ್ತಿ ಸವೆದು ಬೋ ಟಿಬ್ಸ್ ಶೂ ತರಹ ಆಗಿತ್ತು. ನಿಮಗೆ ಇವಾಗ ಬೋ ಟಿಬ್ಸ್ ಯಾರು ಅಂತ ಹೇಳಬೇಕು..

"ಬೋ ಟಿಬ್ಸ್" (Beau Tibbs) ಹೆಸರು ಇಂಗ್ಲಿಷ್ ಸಾಹಿತ್ಯದಲ್ಲಿ ಹೆಚ್ಚು ಪ್ರಚಲಿತವಾಗಿದೆ.

ಬೋ ಟಿಬ್ಸ್ ಎಂಬುದು ಆಲಿವರ್ ಗೋಲ್ಡ್‌ಸ್ಮಿತ್ ರಚಿಸಿದ ಒಂದು ಪ್ರಸಿದ್ಧ ವ್ಯಂಗ್ಯಾತ್ಮಕ ಪ್ರಬಂಧದಲ್ಲಿನ ಪ್ರಮುಖ ಪಾತ್ರ. ಈ ಪ್ರಬಂಧವು "The Citizen of the World" ಎಂಬ ಪುಸ್ತಕದಲ್ಲಿ ಪ್ರಕಟವಾಗಿದೆ.

ಬೋ ಟಿಬ್ಸ್ ಪಾತ್ರದ ಪ್ರಮುಖ ಗುಣಲಕ್ಷಣಗಳು. ಈತ ಆಡಂಬರ ಪ್ರಿಯ: ಬೋ ಟಿಬ್ಸ್ ಬಡವನಾಗಿದ್ದರೂ, ತನ್ನನ್ನು ತಾನು ಶ್ರೀಮಂತನೆಂದು ತೋರಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಾನೆ. ಅವನು ಅಗ್ಗದ, ಆದರೆ ಆಡಂಬರದ ಬಟ್ಟೆಗಳನ್ನು ಧರಿಸುತ್ತಾನೆ ಮತ್ತು ಶ್ರೀಮಂತ ಸ್ನೇಹಿತರ ಬಗ್ಗೆ ಸುಳ್ಳು ಹೇಳುತ್ತಾ ತಿರುಗುತ್ತಾನೆ.

ಬಡತನವನ್ನು ಮರೆಮಾಚುವವನು: ಅವನು ಹೊರಗಡೆ ಗಂಭೀರವಾದ ಮತ್ತು ಗಣ್ಯ ವ್ಯಕ್ತಿ ಎಂದು ನಟಿಸುತ್ತಾನೆ. ಆದರೆ ಅವನ ನಿಜವಾದ ಬಡತನವು ಅವನು ವಾಸಿಸುವ ಬಡ ಪ್ರದೇಶದ ಮನೆಯಲ್ಲಿ ಬಹಿರಂಗಗೊಳ್ಳುತ್ತದೆ.

ಸಮಾಜದ ಟೀಕೆ: ಈ ಪಾತ್ರದ ಮೂಲಕ, ಗೋಲ್ಡ್‌ಸ್ಮಿತ್, 18ನೇ ಶತಮಾನದ ಇಂಗ್ಲಿಷ್ ಸಮಾಜದ ಬೂಟಾಟಿಕೆ ಮತ್ತು ಕೃತಕತೆಯನ್ನು ಟೀಕಿಸಿದ್ದಾನೆ. ಜನ ತಮ್ಮ ನಿಜವಾದ ಸ್ಥಿತಿಯನ್ನು ಮರೆಮಾಚಿ, ಕೇವಲ ಬಾಹ್ಯ ಗಾಂಭೀರ್ಯಕ್ಕೆ ಪ್ರಾಮುಖ್ಯತೆ ನೀಡುತ್ತಾರೆ ಎಂಬುದನ್ನು ಈ ಪಾತ್ರದ ಮೂಲಕ ವಿವರಿಸಿದ್ದಾನೆ.



ಪಿಯುಸಿಯಲ್ಲಿ ಬೋ ಟಿಬ್ಸ್ ಪಾಠ ಮಾಡಬೇಕಾದರೆ ಅವನ ಶೂ ಬಗ್ಗೆ


ನಮ್ಮ ಎಸ್ಸೆಸ್ಸಾರ್ ಮೇಷ್ಟ್ರು ವರ್ಣಿಸಿದ್ದು ಇನ್ನೂ ಈಗ ಕೇಳಿದ ಹಾಗಿದೆ. ಅವನ ಹ್ಯಾಟ್‌ಗೆ ಟಾಪ್ ಇರ್ತಾ ಇರ್ಲಿಲ್ಲ, ಅವನ ಶೂ ಗೆ ಅಟ್ಟೆ ಇರ್ತಾ ಇರಲಿಲ್ಲ, ಅವನು ಕೋಟು ಧರಿಸಿದರೆ ಒಳಗಡೆ ಅಂಗಿ ಇರ್ತಾ ಇರಲಿಲ್ಲ... ಹೀಗೆ ಅರವತ್ತು ವರ್ಷದ ಹಿಂದಿನ ಪಾಠ ತಲೆಯಲ್ಲಿ ಪಟ್ಟಾಗಿ ಕೂತಿದೆ ಮತ್ತು ಆಗಾಗ ನನ್ನನ್ನು ಅವನಿಗೆ ಹೋಲಿಸಿಕೊಳ್ಳುವ ಪ್ರಸಂಗಗಳು ಹೇರಳವಾಗಿ ಉದ್ಭವ ಆಗುತ್ತದೆ!

ನನ್ನ ಚಪ್ಪಲಿ ಬೋ ಟಿಬ್ಸ್ ಶೂ ತರಹ ಆಗಿತ್ತು ಅಂದೆ ತಾನೇ? ಪೂರ್ತಿ ಅಟ್ಟೆ ಸವೆದಿತ್ತು, ಹೆಬ್ಬೆರಳು ಮತ್ತು ಕಾಲಿನ ಹಿಂಭಾಗ ಇನ್ನೊಂದೆರಡು ದಿವಸದಲ್ಲಿ ತೂತು ಬಿದ್ದು ಕಾಲಿಗೆ ಭೂ ಸ್ಪರ್ಶದ ಸುಖ ಕೊಡುವ ಹಂತ ತಲುಪಿತ್ತು.

ಸದ್ಯ ಹೊಸಾ ಚಪ್ಪಲಿ ಕೊಂಡು ಕೊಳ್ಳದೇ ಇದ್ದದ್ದು ಚಲೋ ಆಯ್ತು. ರಕ್ತದಾನಕ್ಕೆ ಅದನ್ನೇ ತೊಟ್ಟು ಹೋಗೋದು ಅನಿಸಿತು. ಸರಿ ಅದನ್ನೇ ತೊಟ್ಟೆ. ಮನೆಯಿಂದ ಮೂರೂವರೆ ಕಿಮೀ ಈ ರಕ್ತ ಪರೀಕ್ಷೆ ಲ್ಯಾಬ್. ಬಸ್ಸಿಗೆ ಹತ್ತು ರೂಪಾಯಿ ಆಗುತ್ತೇನೋ ನಡೆದೇ ಬಿಡೋಣ ಹತ್ತು ಮಿಗುತ್ತೆ ಅನಿಸಿತಾ? ಬಸ್ಸಿನ ಲೆಕ್ಕ ಬೇಡಾ ಆಟೋ ಲೆಕ್ಕ ಹಾಕು ಅಂತ ಆತ್ಮ ಐಡಿಯಾ ಕೊಡ್ತು. ಆಟೋ ಬೇಡ ಟ್ಯಾಕ್ಸಿ ಲೆಕ್ಕ ಹಾಕು. ಮುಗಿಸಿದ ಕಾಸು ಹೆಚ್ಚಾಗುತ್ತೆ ಅಂತಾ ಆತ್ಮ ಅದರ ಇನ್ಪುಟ್ ರಿವೈಸ್ ಮಾಡಿತು. ಸರಿ ಅಂತ ಉಬರ್ ನಲ್ಲಿ ಚೆಕ್ ಮಾಡಿದೆನಾ? ಆಟೋಗೆ ಎಪ್ಪತ್ತು ಟ್ಯಾಕ್ಸಿಗೆ ನೂರಾ ನಲವತ್ತು ತೋರಿಸ್ತಾ? ಟ್ಯಾಕ್ಸಿ ಚೋಸ್ ಮಾಡಿದೆ, ಅಂದರೆ ನೂರಾ ನಲವತ್ತು ಸೇವಿಂಗ್ಸ್!

ಅವಾಗವಾಗ ಈ ರೀತಿ ಸೇವಿಂಗ್ಸ್ ಮಾಡಿ ಮಾಡಿ ಈಗ ನನ್ನ ಬ್ಯಾಂಕ್ ಬ್ಯಾಲೆನ್ಸ್ ಎರಡು ಕೋಟಿಗೂ ಹೆಚ್ಚು, ಆದರೆ ಅದನ್ನು ತೆಗೆಯೋಹಾಗಿಲ್ಲ, ಬೇರೆಯವರಿಗೆ ಕೊಡೋಹಾಗಿಲ್ಲ.. ಆದರೆ ಮನಸಿಗೆ ಎಂತಹ ಖುಷಿ ಕೊಡುತ್ತೆ ಅಂತೀರಿ. ಇಂತಹ ಖುಷಿ ಬೇಕು ಅಂದರೆ ನೀವೂ ಸಹ ನನ್ನ ತರಹ ಸೇವಿಂಗ್ಸ್ ಪ್ಲಾನ್ ಮಾಡಿ!

ಆಯ್ತಾ ಚಪ್ಪಲಿ ತೊಟ್ಟೆ. ಬರ್ತೀನಿ ಅಂತ ಮನೆ ಒಳಗೆ ಎಲ್ಲೋ ಸೇರಿಕೊಂಡಿದ್ದ ಒಡತಿಗೆ ಹೇಳಿ ಹೊರಟೆ. ಮೂರು ಕಿಮೀ ಉದ್ದದ ದಾರಿ ಉದ್ದಕ್ಕೂ ಹಗಲು ಕನಸು ಕಂಡೆ, ಕಂಡೆ ಮತ್ತು ಕಂಡೆ. ರೋಲ್ಸ್ ರಾಯ್ಸ್, ಚೆವಾರ್ಲೆ, ಹೈಕಿ ಮುಂತಾದ ಕಾರು ನನ್ನ ಗೆರೆಜಿಗೆ ಬಂದು ಬಿದ್ದವು. ಮೂರು ಹೆಲಿಕಾಪ್ಟರು ನನ್ನ ಸಾವಿರ ಎಕರೆಯ ಫಾರ್ಮ್ ನಲ್ಲಿ ಮೂಲೆಯ ಜಾಗ ಹಿಡಿದವು. ಆಕಾಶದಲ್ಲಿ ಒಂದು ಟೆಂಪರರಿ ಸ್ಟೇಷನ್ ನಿರ್ಮಿಸಿ ಅಲ್ಲಿ ಸೂಪರ್ ಸೋನಿಕ್, ಬೋಯಿಂಗೂ.... ಹೀಗೆ ಮತ್ತೂ ಹಲವು ಹೆಸರು ಕೇಳಿರದ ಏರೋ ಪ್ಲೇನ್ ಗಳು ನನ್ನ ಫಾರ್ಮ್ ಹೌಸ್ ನಲ್ಲಿ ನೆಲೆ ನಿಂತವು. ಬರೀ ಹೆಲಿಕಾಪ್ಟರು ಏರೋಪ್ಲೇನ್ ಆದರೆ ಹೇಗೆ? ಪಾಪ ಬಡವರಿಗೂ ಏನಾದರೂ ಬೇಕು ಅಲ್ವಾ ಸಾಮಾಜಿಕ ನ್ಯಾಯ ಬೇಡವೇ ಅಂತ ಆತ್ಮ ಕೋಶ್ಚನ್ ಎಸೆಯಿತು. ಹೌದಲ್ವಾ ಎಂತ ತಪ್ಪು ಆಗಿಬಿಡ್ತಾ ಇತ್ತು ಅನಿಸಿತು. ಆತ್ಮಕ್ಕೆ ಮನಸಿನಲ್ಲೇ ಥ್ಯಾಂಕ್ಸ್ ಹೇಳಿದೆ.ಕೂಡಲೇ ಒಂದು ಹತ್ತು ವೋಲ್ವೋ, ಮೂರು ಎಲೆಕ್ಟ್ರಿಕ್, ಆರು ಡೀಸೆಲ್ ಬಸ್ಸು ನಮ್ಮ ಫಾರ್ಮ್ ಹೌಸ್‌ಗೆ ಸೇರಿಸಿದೆ. ಫಾರ್ಮ್ ಹೌಸ್ ಏರಿಯಾ ವನ್ನು ಸಾವಿರ ಎಕರೆ ಬದಲು ಎರಡು ಸಾವಿರಕ್ಕೆ ಹಿಗ್ಗಿಸಿದೆ..



ನಿಧಾನಕ್ಕೆ ನನ್ನ ಸಾಮ್ರಾಜ್ಯ ವಿಸ್ತರಿಸಿಕೊಳ್ಳುತ್ತಾ ಲ್ಯಾಬ್ ಗೆ ಬಂದೆ. ಲ್ಯಾಬ್ ಒಳಗೆ ಮಬ್ಬು ಮಬ್ಬು, ಬಿಸಿಲಿನಲ್ಲಿ ಬಂದಿದ್ದೆ ನೋಡಿ ಅದಕ್ಕಿರಬೇಕು. ಚಪ್ಪಲಿ ಬಿಟ್ಟು

ಒಳಕ್ಕೆ ಹೋದೆ. ರಕ್ತದಾನ ಆಯಿತಾ? ಫೀಸ್ ಕೊಟ್ಟೆನಾ...

ಆಚೆ ಬಂದೆ ತಾನೇ? ಮಬ್ಬು ಇನ್ನೂ ಹೆಚ್ಚಾಗಿತ್ತು. ಮೋಡ ಮುಸುಕಿತ್ತು. ಮಳೆ ಬರಬಹುದು, ಛತ್ರಿ ತಂದಿಲ್ಲವೇ ಅಂತ ಅವಲತ್ತುಕೊಳ್ಳುತ್ತಾ ಬರ್ತಾ ಇದ್ನಾ? ಸೀ ಹುಗ್ಗಿ (ಅಂದರೆ ಪೊಂಗಲ್) ವಾಸನೆ ಘಂ ಅಂತ ಮೂಗಿಗೆ ಹೊಡೆಯಬೇಕೇ? ಹುಗ್ಗಿ ವಾಸನೆ, ಮಸಾಲೆ ದೋಸೆ ವಾಸನೆ, ಉದ್ದಿನ ವಡೆ ವಾಸನೆ...ಇವುಗಳು ಅಂದರೆ ಇಂತಹ ವಾಸನೆಗಳು ಮನುಷ್ಯ ಪ್ರಾಣಿಯನ್ನು ಹೆಚ್ಚೆಚ್ಚು ವರ್ಷ ಬದುಕಿರಲು ಪ್ರೇರೇಪಿಸುತ್ತದೆ ಎನ್ನುವ ಸ್ಕೂಲ್ ಆಫ್ ಫಿಲಾಸಫಿ ನನ್ನದು. ವಾಸನೆ ಬಂದ ಎಡೆಗೆ ಹೆಜ್ಜೆ ಹಾಕಿದೆ. ನಮ್ಮ ಗಣೇಶನ ದೇವಸ್ಥಾನದಿಂದ ವಾಸನೆ.ಚಪ್ಪಲಿಯನ್ನು ಪಕ್ಕದಲ್ಲಿ ಬಿಟ್ಟು ಕ್ಯೂ ಅಂಚಿಗೆ ಸೇರಿದೆ. ನನ್ನ ಚಾನ್ಸ್ ಬರುವ ತನಕ ಅಲ್ಲಿ ಹುಗ್ಗಿ ಇರುತ್ತಾ ಮುಗಿದು ಹೋಗುತ್ತಾ ಅನ್ನುವ ಘನ ಚಿಂತೆಯಲ್ಲಿ ಪ್ರಸಾದದ ಹತ್ತಿರ ಬಂದೆ. ದೇವರ ದಯೆ ಒಂದು ದೊನ್ನೆಯಲ್ಲಿ ಅರ್ಧ ತುಂಬಿದ ಹುಗ್ಗಿ, ಸೀ ಹುಗ್ಗಿ ಕೈಗೆ ಬಂತಾ? ಅದನ್ನ ಕೈಲಿ ಹಿಡಿದು ಆಚೆ ಬಂದು ಚಪ್ಲಿ ತೊಟ್ಟು ಮನೆ ಸೇರಿದೆ. ದೇವರು ದೊಡ್ಡವನು ಅನಿಸಿತು, ಪ್ರಸಾದ ಸಿಕ್ತು ಅಂತ ಸಂತೋಷ ಆಯಿತು. ಹಿಂದಿನ ದಿವಸ ರಾತ್ರಿ ಕನಸಲ್ಲಿ ದೇವರಿಗೂ ನನಗೂ ನಡೆದ ಸಂಭಾಷಣೆ ನೆನಪಾಯಿತು.

ದೇವರೇ ಪೆನ್ಷನ್ ಅಂತ ಬರೀ ಸಾವಿರದ ನಾನೂರು ಬರುತ್ತೆ. ಚಪ್ಪಲಿ ಸವೆದಿದೆ ಅದು ತಗೊಳ್ಳೋಕ್ಕೆ ಕಾಸಿಲ್ಲ, ಶೂ ಹಳೆದಾಗಿದೆ ಅದು ಬದಲಾಯಿಸಬೇಕು, ಔಷಧಿಗೆ ಕಾಸು ಸಾಲದು.... ಅಂತ ನನ್ನ ಉದ್ದನೆ ಪಟ್ಟಿ ದೇವರ ಮುಂದೆ ಇಟ್ಟಿದ್ದೆ. ರಾತ್ರಿ ನಿದ್ದೆ ಬರೋದು ತಡ ಆದರೆ ನೀವೇನು ಮಾಡ್ತೀರಿ ಅಂತ ನನಗೆ ಗೊತ್ತಿಲ್ಲ. ನಾನಂತೂ ದೇವರನ್ನು ಎದುರಿಗೆ ಕೂಡಿಸಿಕೊಂಡು ನಾನು ಮಲಗಿಕೊಂಡು ಅವನಿಗೆ ನನಗೆ ಏನೇನು ಕೊರತೆ ಅಂತ ಗಂಟೆ ಗಟ್ಟಲೆ ಹೇಳುತ್ತೇನೆ. "ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ..." ದೇವರ ನಾಮ ನನ್ನ ಪೆಟ್. ಅದರಿಂದ ನಾನು ಮಲಗಿಯೇ ದೇವರನ್ನು ಬೇಕಾದ್ದು ಕೇಳುವ ಅಭ್ಯಾಸದವನು!

ಹೀಗೆ ಕೇಳುತ್ತಾ ಇದ್ದ ನನಗೆ ನಿದ್ದೆ ಯಾವಾಗಲೋ ಬಂತು. ದೇವರು ಕನಸಲ್ಲಿ ಬಂದ. ನಿನ್ನ ಪ್ರಾಬ್ಲೆಮ್ ಸರಿ ಮಾಡಿದ್ದೀನಿ, ನಿದ್ದೆ ಹೋಗು ಅಂದ. ದೇವರು ಹೇಳಿದ ಮೇಲೆ ಮುಗೀತು, ಗೊರಕೆ ನಿದ್ದೆ ಹೊಡೆದೆ....

ಪ್ರಸಾದ ಸಿಕ್ಕಿತ್ತು. ಮನೆಗೆ ತಂದೆ. ಹಂಚಿಕೊಂಡು ಒಂದೊಂದು ಚಮಚ ಸೀ ಹುಗ್ಗಿ ತಿಂದೆವು. ನಂತರ ರಾಗಿ ಮುದ್ದೆ, ಸೊಪ್ಪಿನ ಹುಳಿ, ಮೊಸರನ್ನ ಉಂಡೆ. ಮಲಗಿದೆ. ರೀ ಕಾಫಿ ಅಂದಾಗ ಎದ್ದು ಕಾಫಿ ಕುಡಿದೆ. ಹಾಲು ತಗಂಡು ಬಾ ಅಂದರು ಅಂತ ಆಚೆ ಬಂದರೆ ಯಾವುದೋ ಸುಮಾರು ಹೊಸಾ ಚಪ್ಪಲಿ, ಹನ್ನೊಂದು ಸೈಜು, ನನ್ನ ಸೈಜ್!

ಯಾರದು ಈ ಚಪ್ಪಲಿ ಅಂತ ನನ್ನಾಕೇನ ಕೇಳಿದೆ.



ಬೆಳಿಗ್ಗೆ ಹೋಗಿದ್ಯಲ್ಲಾ ಯಾರದ್ದೋ ಹಾಕ್ಕೊಂಡು ಬಂದಿದ್ದೀಯಾ ಕಣ್ಣು ಕಾಣೋಲ್ಲವಲ್ಲ.... ಅಂತ ಉತ್ತರ ಬಂತು. ಅದನ್ನ ಹಾಕಿಕೊಳ್ಳೋಕ್ಕೆ ಹೋದರೆ ಯಾರು ಯಾರದ್ದೋ ಚಪ್ಲಿ ಹಾಕ್ಕೊಬಾರದು ಅವರ ದರಿದ್ರ ನಮಗೆ ಅಂಟುತ್ತೆ..... ಅಂತ ಶರಾ ಬಂತಾ?

ಇನ್ಯಾವುದೋ ಹಳೇದು ಸಿಕ್ಕಿಸಿಕೊಂಡು ಹಾಲು ತಂದೆ. ಚಪ್ಪಲಿ ಎಲ್ಲೆಲ್ಲಿ

ಬಿಟ್ಟಿದ್ದೆ ಅಂತ ಕ್ರಾಸ್ ಚೆಕ್ ಮಾಡಿದೆ. ಲ್ಯಾಬ್ ಮತ್ತು ದೇವಸ್ಥಾನ ಲಿಸ್ಟ್‌ನಲ್ಲಿ ಬಂತಾ?

ದೇವಸ್ಥಾನ ಮುಂದೆ ನನ್ನ ಹಳೇ ಚಪ್ಪಲಿ ಹುಡುಕಿದೆ, ಸಿಗಲಿಲ್ಲ. ಮಾರನೇ ದಿವಸ ಲ್ಯಾಬ್‌ಗೆ ಹೋದರೆ ಮೂಲೆಯಲ್ಲಿ ನನ್ನ ಹಳೇ ಚಪ್ಪಲಿ ವೋಯ್ ನಾನು ಇಲ್ಲಿದೀನೋ.. ಅನ್ನಬೇಕೇ...?

ಮೂರು ದಿವಸ ಲ್ಯಾಬ್ ಹತ್ತಿರ ಹೋಗಲಿಲ್ಲ. ದೇವರು ಪ್ರಾಬ್ಲೆಮ್ ಸಾಲ್ವ್ ಮಾಡಿದ್ದೀನಿ ಅಂತ ಹೇಳ್ತಲ್ಲಾ, ಅದೇ ಈ ಚಪ್ಪಲಿ ಕೊಡಿಸಿರೋದು. ದೇವರೇ ಕೊಟ್ಟಿದೆ ಅದರಿಂದ ಯಾವ ದರಿದ್ರವೂ ಬರೋಲ್ಲ, ಹಾಕಿಕೋ ಹಾಕಿಕೋ ಹಾಕಿಕೋ ಚಪ್ಪಲಿ ಹಾಕಿಕೋ ಅಂತ ಆತ್ಮ ಹುರಿದುಂಬಿಸಿತು. ಅಲ್ಲದೇ ಚಪ್ಪಲಿ ಕಳೆದು ಕೊಂಡವನು ದರಿದ್ರ ಹೋಯಿತು ಅಂದರೆ ಅದು ಸಿಕ್ಕಿದವನಿಗೆ ಲಕ್ ಹೊಡಿಬೇಕು ತಾನೇ? ಒಂದು ಹೋದರೆ ಒಂದು ಬರಬೇಕು ಇದೇ ತಾನೇ ನ್ಯಾಚುರಲ್ ಲಾ? ಒಬ್ಬರ ದರಿದ್ರ ಮತ್ತೊಬ್ಬರ ಲಕ್ಕು.... ಈ ಲಾಜಿಕ್ ಗೆದ್ದಿತಾ..

ಅದೇ ಚಪ್ಪಲಿ ಈಗ ನಾನು ಹಾಕಿಕೊಳ್ತಾ ಇರೋದು.. ಶೂ ಸಹ ಹೀಗೇ ದೇವರು ದಯಪಾಲಿಸುತ್ತಾ ಅಂತ ಕಾಯುತ್ತಿದ್ದೇನೆ.....! ಅದೂ ಸಹ ಬೇಗ ಸಿಗಲಿ. ಚಪ್ಪಲಿ ಸಿಕ್ಕಿದೆ ಶೂ ಸಿಗದೇ ಹೋದರೆ ಹೋಗಲಿ ಪೆನ್ಷನ್ ಆದರೂ ಬರಲಿ.. ದೇವರು ಕೂತು ಕೇಳಿದರೆ ನಾನು ಮಲಗಿ ಹೇಳುವ ಸನ್ನಿವೇಶಗಳು ಮತ್ತೆಮತ್ತೆ ಹುಟ್ಟಲಿ, at least ಪೆನ್ಷನ್ ಏರುವ ವರೆಗಾದರೂ.....!



## ಕಂದನಿಗೇಕೆ ಮುದ್ದಿನ ಭಾಷೆ ?

ಗಣೇಶ ಹೆಗ್ಗಡೆ, ಮೈಸೂರು

ಹಿಂದಿನ ಕಾಲದಲ್ಲಿ ಯಾರಾದರೂ ಪ್ರೌಢವಯಸ್ಸಿನ ಅವಿವಾಹಿತ ಅಥವಾ ವಿವಾಹಿತ ಹೆಣ್ಣು ಮಕ್ಕಳು, ಹಿರಿಯರ ಕಾಲುಗಳಿಗೆರಗಿದಾಗ, 'ಶೀಘ್ರ ಮೇವ ಕಲ್ಯಾಣಮಸ್ತು' ಅಥವಾ ಮಕ್ಕಳಿರಲವ್ವ ಮನೆತುಂಬಾ' ಎಂದು ಮನತುಂಬಿ ಹರಸುವ ಪರಿಪಾಠವಿತ್ತು. 'ಕಂದನಿಲ್ಲದ ಮನೆ ಕಂದಕಕ್ಕೆ ಸಮಾನ' ಎಂದು ನನ್ನಜ್ಜಿ ಯಾವಾಗಲೂ ಹೇಳುತ್ತಿದ್ದರು. ಇಂಥಹ ಆಶೀರ್ವಾದದ ಬಲದಿಂದ ಕಂದಮ್ಮಗಳು ನಮ್ಮ ನಮ್ಮ ಮನೆಗಳಲ್ಲಿ ಹುಟ್ಟಿ, ತಮ್ಮ ಎರಡು ವರ್ಷಗಳ ಬೆಳವಣಿಗೆಯ ಅವಧಿಯಲ್ಲಿ, ಸುತ್ತಮುತ್ತಲಿನವರ ಜತೆ ವ್ಯವಹರಿಸಲು ಸಂಪರ್ಕ ಭಾಷೆ ಅರಿಯದೆ, ಬರೀ ಕೊರಲಿನಿಂದ ವಿಚಿತ್ರ ಶಬ್ದಗಳನ್ನು ಹೊರಳಿಸಿ ತೊದಲು ನುಡಿಗಳಿಂದ ನಮ್ಮನ್ನು ರಂಜಿಸುವುದು ಎಲ್ಲರಿಗೂ ಅನುಭವಕ್ಕೆ ಬಂದ ಸಂಗತಿ. ನನ್ನ ಸಂಶೋಧನೆಯ ಪ್ರಕಾರ, ಈ ಹಂತದಲ್ಲೇ ಮಹಾ ಯಡವಟ್ಟಾಗಿರುವುದು ಸ್ವಾಮಿ. ಈ ಯಡವಟ್ಟಿಗೆ ಮುಖ್ಯ ಕಾರಣರಾದವರೇ ತಾಯಿ, ತಂದೆ, ಅಜ್ಜ, ಅಜ್ಜಿ, ಇವರೆ ಮುಂತಾದವರು. ಮನೆಯಲ್ಲಿ 'ಕಂದ'ನನ್ನು ಸಂಪರ್ಕಿಸುವಾಗ, ಉಕ್ಕಿಬರುವ ಪ್ರೀತಿಯಿಂದಲೋ, ಉನ್ಮಾದದಿಂದಲೋ ತಮ್ಮ ದೈನಂದಿನ ಆಡುಭಾಷೆ ಕನ್ನಡದ ಸೊಗಡನ್ನೇ ಒಂದು ಕ್ಷಣ ಮರೆತು, ಪರ್ಯಾಯವಾಗಿ ತಮ್ಮ 'ಬುದ್ಧಿ ಮತ್ತೆ'ಯನ್ನೇ ಮಗುವಿನ ಲೆವಲ್‌ಗೆ ಇಳಿಸಿ, ಹೊಸತೊಂದು ಮುದ್ದಿನ ಭಾಷೆಯನ್ನೆ ಸೃಷ್ಟಿಸಿರುವುದು, ಆಡುಭಾಷೆ ಕನ್ನಡಕ್ಕೆಸಗಿರುವ ದೊಡ್ಡ ದ್ರೋಹವೆಂದೇ ನನ್ನ ಪ್ರತಿಪಾದನೆ. ನಮ್ಮ ಅದೃಷ್ಟಕ್ಕೆ, ಈ ಮುದ್ದಿನ ಭಾಷೆ ತೀರಾ ಅಲ್ಪಾಯಸ್ಸು ಹೊಂದಿದ್ದು, ಸೃಷ್ಟಿಯಾದ ಎರಡು ಎರಡೂವರೆ ವರ್ಷಗಳಲ್ಲೇ ಯಾವ ಹಾನಿಯೂ ಮಾಡದೆ ಮನೆಯ ವಾತಾವರಣದಿಂದ ಕಣ್ಮರೆಯಾಗಿ ಹೋಗುವುದು ಕನ್ನಡ ಭಾಷೆಯ ಅದೃಷ್ಟವೆಂದೇ ನನ್ನ ಭಾವನೆ.

ಆರೇಳು ದಶಕಗಳಿಂದ ಹಳೇ ಮೈಸೂರಿನ ಪ್ರಾಂತ್ಯದಲ್ಲಿ ನಾನೀಗ ನೆಲೆಕಂಡಿರುವುದರಿಂದ, ಈ ಮುದ್ದಿನ ಭಾಷೆಯ ಅರ್ಥ, ಅನರ್ಥಗಳ ಬಗ್ಗೆ, ನನ್ನದೇ ಪ್ರಾಂತ್ಯದ ಶೈಲಿಯಲ್ಲಿ ನಿಮಗೆಲ್ಲಾ ತಿಳಿಸಿಕೊಡಲು ನಾನು ಸಮರ್ಥ. ಅಂತೆಯೆ, ಸಹೃದಯ ಓದುಗರಾದ ನೀವು,  ನಿಮ್ಮ ನಿಮ್ಮ ಆಡುಭಾಷೆ ಹಾಗು ಅದಕ್ಕೆ ತತ್ಸಮವಾದ ಕಂದನ ಮುದ್ದಿನ ಭಾಷೆಯನ್ನು ಸ್ವತಃ ಕಲ್ಪಿಸಿಕೊಂಡು ಆನಂದಪಡಲೂ ಸಹಾ ಸರ್ವಸ್ವತಂತ್ರರು. ಬಾಣಂತಿ ಸೊಸೆಯಿರುವ ನನ್ನ ಮನೆಯಲ್ಲೇ ನನಗಾದ ಅನುಭವವನ್ನು ದಯವಿಟ್ಟು ಗಮನಿಸಬೇಕಾಗಿ ವಿನಂತಿಸುತ್ತೇನೆ.



ಹೊಟ್ಟೆ ಹಸಿದಿರುವ ಎಳೆಗೂಸು ತಾಯಿಯ ಗಮನ ತನ್ನತ್ತ ಸೆಳೆಯಲು ಅಳುವಿನ ಮೊರೆ ಹೊಕ್ಕಿದೆ, ಬಿಟ್ಟ ಕೆಲಸ ಬಿಟ್ಟ ತಾಯಿ ಅದರ ಹತ್ತಿರ ಧಾವಿಸಿ ಬಂದು, "ಹಸಿವೆಯಾ ಕಂದ? ತಾಳು, "ಲಾ...ಲಾ..." ಕುಡಿಸುತ್ತೀನಿ ಎಂದು ಲೋಲೈಸುವುದು ನಮಗೆಲ್ಲಾ ಸಹಜವೆನಿಸಿದರೂ,  ಚಿಂತನೆಯ ಹುಳ ನನ್ನ ಬುರುಡೆಯನ್ನು ಕೊರೆಯುತ್ತದೆ. "ಲಾ...ಲಾ" ಬದಲಿಗೆ, 'ಹಾಲು' ಎಂಬ ಪರಿಶುದ್ಧ ಕನ್ನಡ ಪದ ಪ್ರಯೋಗ ಎಷ್ಟು ಸುಂದರವಿತ್ತು?' ಎಂಬ ಭಾವ, ನನ್ನ ಸ್ಮೃತಿ ಪಟಲದಲ್ಲಿ ಹಾದು ಹೋಗುತ್ತದೆ. ಜತಗೆ, ನನ್ನ ಹಾಸ್ಯ ಪ್ರಜ್ಞೆಯೂ ಥಟ್ಟನೆ ಜಾಗೃತವಾಗಿ "ಲಾ..ಲಾ" ಎಂಬ ಪದಪ್ರಯೋಗವನ್ನು ಆಂಗ್ಲಭಾಷೆಯಲ್ಲಿ ಊಹಿಸಿಕೊಂಡು,

‘ಇವಳೇನು? ಈ ಅರೆಕೂಸಿಗೆ ಕಾನೂನನ್ನು ಅರೆದು ಕುಡಿಸುತ್ತಿದ್ದಾಳೆಯೆ’ ಎಂದು ಕೇಳಬೇಕೆನಸುತ್ತದೆ. ಆದರೆ ಯಾಕೋ ಅಧೈರ್ಯ ಅಡ್ಡಬರುತ್ತದೆ.

ಒಂದು ಬೆಳಿಗ್ಗೆ, ಕಂದನಿಗೆ ಮನೆಯಲ್ಲಿ ಅಭ್ಯಂಜನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮನೆಗೆಲಸದ ಅನುಭವೀಕಳು, ಕಂದನನ್ನು ವಿವಸ್ತ್ರಗೊಳಿಸಿ, ನಗ್ನ ಮೈಯನ್ನು ತನ್ನ ಚಾಚಿದ ಕಾಲುಗಳ ಮಧ್ಯೆ ಮಲಗಿಸಿ, ಎಣ್ಣೆಹಚ್ಚುತ್ತಿದ್ದಾಳೆ. ಆಗ ಕನಿಕರದಿಂದ ತಾಯಿ, ‘ತಾಳು, ನಿನಗೆ “ಬುಕ್ಕಶ್ರೀ” ಮಾಡಿಸುತ್ತೇನೆಂದು ಉದ್ಗರಿಸುತ್ತಾಳೆ. ಈ ಬುಕ್ಕಶ್ರೀ’ ಎಂಬ ಕರ್ಣಕಠೋರವಾದ ಭಾಷಾಪ್ರಯೋಗಕ್ಕೂ, ತತ್ಸಮ ಕನ್ನಡ ಭಾಷೆಯ ‘ಸ್ನಾನ’ ಎಂಬ ಪದ ಪ್ರಯೋಗಕ್ಕೂ ತಾಳೆಯೇ ಇಲ್ಲದಿರುವುದು ದಿಟಕ್ಕೂ ಗಾಬರಿ ಮೂಡಿಸುತ್ತದೆ.




ಹಾಗೆ ಅಭ್ಯಂಜನ ಮಾಡಿಸಿಕೊಂಡು, ಸಾಂಬ್ರಾಣಿ ಹೊಗೆಯಲ್ಲಿ ಮೈತೇಲಿಸಿ ಕೊಂಡ ಕೂಸು ಆಯಾಸಕ್ಕೋ ಏನೋ ನಿದ್ರಾವಸ್ಥೆಗೆ ಜಾರಿದೆ. ಇದನ್ನು ಗಮನಿಸುವ ತಾಯಿ ಮಗುವಿನ ಹಣೆಗೆ ಹೂಮುತ್ತೊಂದನ್ನಿತ್ತು,

‘ತಾಚಿ’ ಬಂತೆ ಕಂದಾ?’ ಎಂದು ಪಿಸುಗುಟ್ಟುತ್ತಾಳೆ. ಇಲ್ಲೇ, ನನಗೆ ಬ್ರಹ್ಮೇತಿಸಿಟ್ಟು ಹತ್ತುವುದು. ಲಕ್ಷಣವಾಗಿ, ‘ನಿದ್ರೆ’ ಎಂಬ ಪದಪ್ರಯೋಗವನ್ನು ಬಳಸಲು, ಇವಳಪ್ಪನ ಗಂಟೇನು ಹೋಗುತ್ತಿತ್ತು ಎಂದೆನಿಸಿ ಪಿತ್ಥ ನೆತ್ತಿಗೇರುತ್ತದೆ.

ಮಗು ಬೆಳವಣಿಗೆಯ ಹಾದಿ ಹಿಡಿದಿದೆ. ಈಗ ಅದಕ್ಕೆ ಅನ್ನಪ್ರಾಶನದ ಶಾಸ್ತ್ರವಾಗಿದೆ. ದೈನಂದಿನ ಆಹಾರ ಸೇವನೆಯಲ್ಲಿ ದ್ರವ ಖಾದ್ಯದಿಂದ ಘನ ಖಾದ್ಯಕ್ಕೆ ಬಡ್ತಿ ದೊರೆತಿದೆ. ಹಸಿವೆಯ ಮುಖಭಾವವನ್ನು ಕಂದನಲ್ಲಿ ಗುರುತಿಸುವ ತಾಯಿ, “ತಾಳು, ನಿನಗೆ” “ಮಮ್ ಮಮ್” ತರುತ್ತೇನೆ ಎಂದು ಅಡುಗೆ ಕೋಣೆಗೆ ಧಾವಿಸುತ್ತಾಳೆ. ಅಯ್ಯೋ, ಮಗುವಿಗೆ ಅನ್ನ ಪ್ರಾಶನದ ಶಾಸ್ತ್ರವಾಗಿದೆ. ಮಮ್ ಮಮ್ ಪ್ರಾಶನದ ಶಾಸ್ತ್ರವಲ್ಲ’ ಎಂದು ಕೂಗಿ ಹೇಳುವ ತವಕ ನನ್ನದಾಗುತ್ತದೆ. ಬಾಣಂತಿ ಸೊಸೆಯನ್ನು ಗದರುವುದು ಹಿರಿಯರ ಲಕ್ಷಣವಲ್ಲ ಎಂಬ ವಿವೇಕ ನನ್ನನ್ನು ಎಚ್ಚರಿಸಿ ಮೌನಕ್ಕೆ ಜಾರುತ್ತೇನೆ.


ಒಂದು ತಟ್ಟೆಯಲ್ಲಿ ಬೆಚ್ಚಗಿನ ಮಿಡ್ಡೆ ಅನ್ನ ಎರಡು ಮಿಳ್ಳೆ ಹಸುವಿನ ತುಪ್ಪ, ರುಚಿಗೆ ತಕ್ಕಷ್ಟು ಉಪ್ಪನ್ನು ಮೇಳೈಸಿ, ಕಲೆಸಿ ತಂದು, ಮಗುವನ್ನು ಮನೆ ಹೊರಗಿನ

ಕಾಂಪೌಂಡು ಗೋಡೆಯ ಮೇಲೆ ತಾಯಿ ಕುಳ್ಳಿರಿಸಿಕೊಂಡು, ಒಂದು ಸಣ್ಣ ತುತ್ತನ್ನು ಕಂದನ ಬಾಯಿಗಿಡುವ ಪ್ರಯತ್ನ ಮಾಡಿದಾಗ, ಆ ತರಲೆ ಕಂದ, ತನ್ನ ತುಟಿಗಳನ್ನು ಭದ್ರವಾಗಿ ಕಚ್ಚಿಕೊಂಡು ಕತ್ತನ್ನು ಹೊರಳಿಸಿದೆ. ತಾಯಿಯ ಅದೃಷ್ಟವೂ ಏನೋ, ರಸ್ತೆಯಲ್ಲಿ ಹಾದುಹೋಗುತ್ತಿರುವ ಬಿಡಾಡಿ ದನವೊಂದು ದೃಷ್ಟಿಗೆ ಬೀಳುತ್ತದೆ. ಸದುಪಯೋಗಪಡಿಸಿಕೊಂಡ ತಾಯಿ, ಅಲ್ನೋಡು 'ಬೂಚಿ' ಎಂದು ಗಮನ ಸೆಳೆದು ಈ ಭೋಜನ ಕಾರ್ಯದಲ್ಲಿ ಸಫಲಳಾಗುತ್ತಾಳೆ. ಅಕಸ್ಮಾತ್, ಹಸುವಿನ ಬದಲು ಭಿಕ್ಷುಕನ ದರ್ಶನವಾದರೆ 'ಗೊಗ್ಗಯ್ಯ ನೋಡು' ಎಂದು ಕಂದನನ್ನು ಹೆದರಿಸುತ್ತಾಳೆ ಈ ಸಮಯದಲ್ಲಿ ನನಗೆ, 'ಗುಮ್ಮನ ಕರೆಯದಿರೆ..." ಎಂಬ ದಾಸವಾಣಿ ನೆನಪಾಗಿ, ದಾಸವರೇಣ್ಯರೂ ಈ ಮುದ್ದಿನ ಭಾಷೆಗೆ ದಾಸರಾಗಿದ್ದರೆ? ಎಂಬ ಬಲವಾದ ಸಂಶಯ ಕಾಡಿ ನಗು ಬರುತ್ತದೆ.

ಈಗಂತೂ, ನಗರ ಪ್ರದೇಶಗಳ ರಸ್ತೆಗಳಲ್ಲಿ 'ಬೂಚಿ', 'ಗೊಗ್ಗಯ್ಯ' 'ಅಮ್ಮಾ ತಾಯಿ' ಇವೇ ಮುಂತಾದವರ ಸಂಚಾರವೇ ವಿರಳವಾಗಿ ಬದಲಿಗೆ, ಮೊಬೈಲು, ಟಿವಿ, ಕಾರ್ಟೂನು ಪುಸ್ತಕ ಇತ್ಯಾದಿಗಳು ತಾಯಿ ಮತ್ತು ಮಗುವಿಗೆ ಭೋಜನ ಕೂಟದಲ್ಲಿ ನೆರವಾಗುವುದು ಭವಿಷ್ಯದ ದೃಷ್ಟಿಯಲ್ಲಿ ದೊಡ್ಡ ದುರಂತವೆನಿಸುತ್ತದೆ.

ಹೀಗೆಯೇ ಮುಂದುವರೆದರೆ, ಈ ಮುದ್ದಿನ ಭಾಷೆಯಲ್ಲಿ ಇನ್ನೂ ಅನೇಕ ಶತ್ರು ಪದಗಳು ಕಳ್ಳರಂತೆ ಅಡಗಿ ಕುಳಿತಿದ್ದು, ಇವುಗಳನ್ನೆಲ್ಲಾ ಹೆಕ್ಕಿ ತೆಗೆಯುವ ಪ್ರಯತ್ನ ನಾವು ಮಾಡಬಹುದಾಗಿದೆ. ಉದಾಹರಣೆಗೆ, ಅಬ್ಬಿ(ಗಾಯ), ಜೀಜಿ(ನೀರು), ಸೂಸು(ಮೂತ್ರ), ಬಬ್ಬ(ಹೊರಪಯಣ), ಹತ್ತ(ಏಟು) ಅಪ್ಪಚ್ಚಿ(ತಿಂಡಿ), ಕಚ್ಚಿ(ಹುಳ), ಪಪ್ಪಿ(ಮುತ್ತು) ಇತ್ಯಾದಿ... ಇತ್ಯಾದಿ, ಇಲ್ಲಿ ಅರ್ಥವಾಗದ ಇನ್ನೊಂದು ವಿಚಾರವೆಂದರೆ, ತಾಯಿ ಮತ್ತು ಅವಳ ಸಹಬಂಧುಗಳು ಅಲ್ಪಾಯುಷ್ಯವುಳ್ಳ ಈ ಮುದ್ದುಭಾಷೆಗೆ ಬಂದಿಯಾಗಿ ಯಾಕೆ ತಮ್ಮ ಆಡುಭಾಷೆಗೆ ದ್ರೋಹ ಬಗೆದರೆಂಬುದು.

ಈ ಮುದ್ದಿನ ಭಾಷಾ ಪ್ರಯೋಗದಿಂದಾಗಿ, ಮೊನ್ನೆ ನಮ್ಮ ಮನೆಯಲ್ಲೇ ಒಂದು ಯಡವಟ್ಟಾದ ಪ್ರಸಂಗವನ್ನು ನಿಮಗೆ ನಾನಿಲ್ಲಿ ವಿವರಿಸಲೇಬೇಕು. ಪಕ್ಕದ ಮನೆಯ 'ಮಾಮಿ'ಯೊಬ್ಬರು, ದೂರದೂರಿನಿಂದ ಬಂದಿದ್ದ ನನ್ನಮಗಳು ಹಾಗೂ ಅವಳ ಎರಡು ವರ್ಷದ ಪುಟ್ಟ ಪೋರ ಅಂದರೆ ನನ್ನ ಮೊಮ್ಮಗನನ್ನು ಕಾಣಲು ಮನೆಗೆ ಬಂದಿದ್ದರು. ಇತ್ತೀಚೆಗಷ್ಟೆ ಅವರಿಗೆ ಹೃದಯಾಘಾತವಾಗಿ, ಬೈಪಾಸು ಸರ್ಜರಿ ಮಾಡಿಸಿಕೊಂಡು, ಹ್ಯಾಗೊ ಆಸ್ಪತ್ರೆಯಿಂದ ಬಚಾವಾಗಿ ಮರು ಹುಟ್ಟು ಪಡೆದಿದ್ದರು. ಈ 'ಮಾಮಿ', ನಮ್ಮ ಮನೆಯ ಹಾಲಿನೊಳಗೆ ಬಂದು ಸೋಫಾದಲ್ಲಿ ಕೂರುವುದಕ್ಕೂ, ಅದೇ ತಾನೆ ಸ್ನಾನ ಮಾಡಿ, ಶುಚಿಯಾಗಿ ದೇವರಕೋಣೆಯ ಬಾಗಿಲು ಬಳಿ ನಿಂತಿದ್ದ ನಮ್ಮ ಪೋರ, ಗಟ್ಟಿಯಾಗಿ 'ಮಾಮಿ ಗೋತಾ... ಮಾಮಿ ಗೋತಾ...' ಎಂದುಲಿಯುವುದಕ್ಕೂ ಸಮನಾಗಿತ್ತು. ತೀರಾ ಗಾಬರಿಗೊಂಡ ಮಾಮಿ, ತಮ್ಮೆರಡೂ ಹಿಯರಿಂಗ್ ಏಡ್ ಕಿವಿಗಳನ್ನೂ ಭದ್ರವಾಗಿ ಮುಚ್ಚಿಕೊಂಡು, "ಹೇ ಆಂಡವಾ... ಎನ್ನಪ್ಪಾ ಇದೀ..." ಎನ್ನುತ್ತ ಹೊರಡಲೆದ್ದರು. ಪರಿಸ್ಥಿತಿ ಬಿಗಡಾಯಿಸಿಕೊಂಡಿದ್ದನ್ನು ನನ್ನ ಸೂಕ್ಷ್ಮಮತಿ ಗ್ರಹಿಸಿ,




"ಅಯ್ಯೋ ಮಾಮಿ. ಉಕ್ಕಾರಂಗೊ ಕವಳ ಪಡಾದೆ. ನಮ್ಮ ಮಗು ನಿಮ್ಮನ್ನು ಕುರಿತು ಹೀಗೆ ಮಾತನಾಡಿದ್ದಲ್ಲ. ಅದರ ಭಾವನೆಯಲ್ಲಿ 'ಮಾಮಿ'ಯೆಂದರೆ ದೇವರು ಎಂದರ್ಥ. 'ಜ್ಯೋತಾ' ಎಂಬ ಪದ ಉಚ್ಚಾರಣೆ ಆ ವಯಸ್ಸಿಗೆ ಕಷ್ಟವಿರುವುದರಿಂದ

ತನ್ನ ಮುದ್ದಿನ ಭಾಷೆಯಲ್ಲಿ ಗೋತಾ ಎನ್ನುತ್ತಿದೆ' ಎಂದು ಎಷ್ಟು ಸಮಜಾಯಿಷಿ ಕೊಟ್ಟರೂ ನಂಬುವ ಸ್ಥಿತಿಯಲ್ಲೇ 'ಮಾಮಿ' ಇರಲಿಲ್ಲ. ಬಹುಶಃ, 'ಮಗು' ದೇವರ ಸಮಾನ, ಸುಳ್ಳನ್ನೆಂದೂ ಆಡುವುದಿಲ್ಲ' ಎಂಬ ನಂಬುಗೆಯೇ ಅವರಿಗೆ ಹೆಚ್ಚಾಗಿ ಬಿಟ್ಟಿತೇನೊ.

ಈ ಘಟನೆಯಾದ ಕೆಲವೇ ದಿನಗಳಲ್ಲಿ 'ಮಾಮಿ' ದೇವರ ಪಾದವನ್ನು ಸೇರಿದ್ದು, ವಯೋ ಸಹಜ ಖಾಯಿಲೆಯಿಂದಲೋ? ಅಥವಾ ನಮ್ಮ ಕಂದನ ಮುದ್ದು ಭಾಷೆಯ ಪ್ರಭಾವದಿಂದಲೋ ಉತ್ತರ ಅಸ್ಪಷ್ಟವಾಗಿದೆ.

ಈಗ ನನಗೆ ಹಲವಾರು ಪ್ರಶ್ನೆಗಳು ಎದುರಾಗಿವೆ. ತಾಯಿ-ಮಗುವಿನ ಈ ಸಂಪರ್ಕ ಭಾಷೆಯನ್ನೇ ಇನ್ನು ಮುಂದೆ ನಾವು ಮಾತೃ ಭಾಷೆಯೆಂದು! ಪರಿಭಾವಿಸಬಹುದೇ? ಹಾಗೆ ಪರಿಗಣಿಸಿದರೆ, ನಾವಾಡುವ ದೈನಂದಿನ ಕನ್ನಡ ಭಾಷೆಯ ಸ್ಥಾನವೇನು? ಬಹು ಮುಖ್ಯವಾಗಿ ಕರುನಾಡು ಕಂದಗಳಿಗೆ ಈ ಮುದ್ದಿನ! ಭಾಷಾ ಪ್ರಯೋಗ ಅಗತ್ಯವಿದೆಯೆ? ಈ ಹಂತದಲ್ಲಿಯೇ ಇದನ್ನು ಚಿವುಟಿ ಹಾಕುವುದು 'ಟು ನಿಪ್ ಇನ್ ದಿ ಬಡ್' ಎನ್ನುವ ಹಾಗೆ ಸಮಂಜಸವಲ್ಲವೇ?. ಹೀಗೆ ಮಾಡುವುದರಿಂದ ಒಂದು ಭಾಷಾ ಬೆಳವಣಿಗೆಗೆ ನಾವು ಮಾಡುವ ದೊಡ್ಡ ಉಪಕಾರವಲ್ಲವೆ?

ಇಂಥಹ ತರಲೆ ಪ್ರಶ್ನೆಗಳು ನನ್ನನ್ನು ಕಾಡಿದಂತೆ ನಿಮ್ಮನ್ನೂ ಕಾಡಿದರೆ ನಾನು 'ಧನ್ಯೋಸ್ಮಿ'!



# ಬಹುಮುಖಿ ಸಾಮ್ರಾಜ್ಯ

**ನಳಿನಿ ಟಿ. ಭೀಮಪ್ಪ, ಧಾರವಾಡ**

**'ಎ**ಲ್ಲರೂ ಒಂದೇ ಎಲ್ಲರಿಗೊಂದೇ' ಎನ್ನುವ ತತ್ವ ನಮ್ಮದಾಗಿದ್ದ ಕಾಲದಲ್ಲಿ ಕುಟುಂಬದಲ್ಲಿ ಹೆಚ್ಚು ಸುಖಶಾಂತಿ, ನೆಮ್ಮದಿ ನೆಲೆಸಿದ್ದವು ಎನ್ನಬಹುದು. ಯಾವಾಗ ಬಹು (many) ಸಾಮ್ರಾಜ್ಯದ ಸಿದ್ಧಾಂತವನ್ನು ಅಪ್ಪಿಕೊಳ್ಳತೊಡಗಿದೆವೋ, ಅಂದಿನಿಂದ ಎಲ್ಲ ಸಮಸ್ಯೆಗಳನ್ನೂ ಮೈಮೇಲೆ ಎಳೆದುಕೊಂಡೆವು ಎಂದು ಸಾರಾಸಗಟಾಗಿ ಹೇಳಬಹುದು.

ಹಿಂದೆಲ್ಲ ಕೂಡುಕುಟುಂಬಗಳು ಹೆಚ್ಚು. ಹೊಲ, ಅಂಗಡಿ, ಮನೆ ಎಲ್ಲವನ್ನು ಹಿರಿಯ ತಲೆ ಸಂಭಾಳಿಸುತ್ತಿತ್ತು. ಅದು ಮೆತ್ತಗಾದ ಅಥವಾ ಉರುಳಿದ ನಂತರವೇ ಜವಾಬ್ದಾರಿಗಳು ಮುಂದಿನ ತಲೆಗೆ ವರ್ಗಾವಣೆಯಾಗುತ್ತಿದ್ದವು. ಅವರ ನೆರಳಿನಲ್ಲಿ, ಮಾರ್ಗದರ್ಶನದಲ್ಲಿ, ಬೆಂಗಾವಲಾಗಿ ಕಿರಿಯರು ನೆಮ್ಮದಿಯಿಂದಿರುತ್ತಿದ್ದರು. ಮನೆ ಚಿಕ್ಕದಿರಲಿ, ದೊಡ್ಡದೇ ಇರಲಿ, many many ಬಹೂಗಳು, ಅಂದರೆ ಸೊಸೆಯಂದಿರು, ನಾಲ್ಕೈದು ಸಾಂಸ್‌ಗಳ ಅಂದರೆ ಅತ್ತೆಯಂದಿರ ಜೊತೆಗೆ, ಸಾಂಸ್ ತೆಗೆದುಕೊಳ್ಳುವುದಕ್ಕೂ ಸಾಂಸ್ ಇಲ್ಲದೆ, ಉಚ್ವಾಸ, ನಿಶ್ವಾಸದ ಬಗ್ಗೆ ಗಮನವೂ ಹರಿಸಲಾರದಷ್ಟು ಪುರುಸೊತ್ತು ಇರದೆ ಏಗುತ್ತಿದ್ದರು.

ಮನುಷ್ಯನ ದೈನಂದಿನ ಅವಶ್ಯಕತೆಗಳು ತುಂಬ ಮಿತಿಯಲ್ಲಿರುತ್ತಿದ್ದವು. 'ಮನೆಗೊಂದೇ ಮಗು' ಎನ್ನುವ ಈಗಿನ ಕಾಲದ ಸ್ಲೋಗನ್ ರೀತಿಯಲ್ಲಿ, ಇಡೀ ಕುಟುಂಬಕ್ಕೆ ಒಂದೇ ಬಚ್ಚಲು, ಒಂದೇ ಶೌಚಾಲಯ ಇದ್ದರೆ, ಅದೇ ಭಾಗ್ಯ ಎನ್ನುವ ಪರಿಸ್ಥಿತಿ. ಸ್ನಾನದ ನಂತರ ಮೈಒರೆಸಿಕೊಳ್ಳಲು ಮನೆಯವರಿಗೆಲ್ಲ ಒಂದೋ ಎರಡೋ ಟವೆಲ್ ಉಪಯೋಗಿಸಿದರೆ ಹೆಚ್ಚು. ಹಿರಿಯ ಗಂಡಸರು ಮಾತ್ರ ಹೆಗಲಿಗೊಂದು ಟವೆಲ್‌ಹಾಕಿಕೊಂಡು, ಅದನ್ನು ಬಿಸಿಲಿನಲ್ಲಿ ತಲೆಗೆ ಮುಂಡಾಸಿನ ಹಾಗೆ ಸುತ್ತಲು, ಬೆವರೊರೆಸಲು, ಊಟದ ನಂತರ ಕೈಒರೆಸಲು, ಮೂಗಿನಿಂದ ಇಳಿಯುವ ಗೊಣ್ಣೆ ಒರೆಸಲು, ಹೀಗೆ ಎಲ್ಲದಕ್ಕೂ ಆಲ್ ಇನ್ ಒನ್ ಆಗಿ ಉಪಯೋಗಿಸುತ್ತಿದ್ದರು. ಹೆಂಗಸರಿಗೆ ಮಸಿಬಟ್ಟೆಯಿಂದ ಹಿಡಿದು, ಕರ್ಚೀಫಿನವರೆಗೆ ಅವರ ಸೀರೆಯ ಸೆರಗೇ ನಿಭಾಯಿಸುತ್ತಿತ್ತು. ಗಂಡಸರ ಶೇವಿಂಗ್‌ಗಾಗಿ ಬಚ್ಚಲಿನಲ್ಲೊಂದು ಪುಟ್ಟ ಕನ್ನಡಿ, ಸೋಪನ್ನು ಶೇವಿಂಗ್ ಕ್ರೀಮ್‌ನಂತೆ ಬಳಸುತ್ತಿದ್ದ ಗಂಡಸರಿಗಿಂತ ಹೆಚ್ಚಾಗಿ, ಸೋಪಿನ ನೊರೆಹನಿಗಳ ಚಿತ್ತಾರ ಮೂಡಿಸಿಕೊಂಡು ಗೋಡೆ ಗಂಟಿಕೊಂಡಿರುತ್ತಿತ್ತು. ನಡುಮನೆಯಲ್ಲೊಂದು ಮಬ್ಬು ಮಬ್ಬಾಗಿ ತೋರುತ್ತಿದ್ದ ಕನ್ನಡಿ, ಗೋಡೆಗೆ ಹೊಡೆದಿರುತ್ತಿದ್ದ ಕಟ್ಟಿಗೆಯ ಪಟ್ಟಿಯ ಮೇಲೆ, ಮೊಳೆಗೆ ಕಟ್ಟಿದ ದಾರದ ಮೂಲಕ ನಡುಬಾಗಿಸಿಕೊಂಡು ನಿಂತಿರುತ್ತಿತ್ತು. ಅದರಲ್ಲಿ ಅರ್ಧ ಮುಖ ಕಂಡರೆ ಇನ್ನರ್ಧ ಹುಡುಕಬೇಕಿತ್ತು. ಹಲ್ಲುಗಳ ನಡುವೆ, ಅರ್ಧ ತಲೆಗೂದಲ ಧೂಳು ಕಸದಿಂದಲೇ ತುಂಬಿರುತ್ತಿದ್ದ, ತಲೆಬುರುಡೆಗೆ ಒತ್ತದ, ಸಿಲ್ಕೀ ಗುಣವಿಲ್ಲದೆ, ಎಣ್ಣೆಯಲ್ಲಿ ನೆಂದ ಬತ್ತಿಗಳಂತಿದ್ದ ತಲೆಗೂದಲಿನಲ್ಲೇ ಹೆಚ್ಚಾಗಿ ಸಿಲುಕುವ ಗುಣ ಹೊಂದಿದ, ಒಂದೇ ಒಂದು ಬಾಚಣಿಗೆ ಕನ್ನಡಿಯ ಬೆನ್ನ ಹಿಂದೆ ಪವಡಿಸಿರುತ್ತಿತ್ತು. ಹೇನು, ಸೀರು ಸಾಕಿಕೊಂಡವರಿಗೆ ಸಣ್ಣ ಹಲ್ಲಿನ ಬಾಚಣಿಗೆ, ಸೀರೆ ಮಡಿಕೆ ಮಾಡಿದಂತಿರುವ ಸೀರಣಿಗೆ ಇರುತ್ತಿದ್ದವು. ಹೆಣ್ಣುಮಕ್ಕಳು ಹೆಚ್ಚಾಗಿರುವ ಉಳ್ಳವರ ಮನೆಯಲ್ಲಿ, ಫೇರ್ ಅಂಡ್ ಲವ್ಲಿ ಎನ್ನುವ, ಎಂದಿಗೂ ಗೌರವರ್ಣದ ಕನಸನ್ನು



ಕನಸಾಗಿಯೇ ಉಳಿಸುವ ಕ್ರೀಮಿನ ದಢೂತಿ ಟ್ಯೂಬೊಂದು ಕನ್ನಡಿಯ ಹಿಂದೆ ಬಾಚಣಿಗೆಯ ಜೊತೆ ಸಖ್ಯ ಬೆಳೆಸಿಕೊಂಡು, ಅಡ್ಡಡ್ಡ ಮಲಗಿರುತ್ತಿತ್ತು. ಇದನ್ನು ಎಳೆದರೆ ಅದು, ಅದನ್ನು ಎಳೆದರೆ ಇದು, ಒಂದಕ್ಕೊಂದು ಫ್ರೀ ಆಫರ್‌ನಂತೆ ಹೊರಬರುತ್ತಿದ್ದವು. ಕನ್ನಡಿಯ ಮುಂದೆ ಇರುತ್ತಿದ್ದ ಪುಟ್ಟ ಕಟ್ಟಿಗೆಯ ಸ್ಟ್ಯಾಂಡ್ ಮೇಲೆ, ಸಿಲಿಂಡರ್ ಆಕಾರದ ಮಹಾಕಾಯದ, ಟಿನ್ನಿನ ಪೌಡರ್‌ಡಬ್ಬವೊಂದು



ವರ್ಷಾನುಗಟ್ಟಲೆ ಬಳಸಿದರೂ ಖಾಲಿಯಾಗದೆ, ಮೇಲ್ಪದರದ ಬಣ್ಣವನ್ನೆಲ್ಲ ಕಳೆದುಕೊಳ್ಳುತ್ತ ಪಟ್ಟಾಗಿ ಕುಳಿತಿರುತ್ತಿತ್ತು. ಹೆಸರಿಗೊಂದು ಫಫ್ಫು. ಅದು ಹಿಡಿಕೆ ಕಿತ್ತು, ಅಂಚು ಹರಿದು, ಒಳಗಿನದೆಲ್ಲಾ ಹೊರಗೆ ಇಣುಕುತ್ತ, ಧೂಳು ಧುಮ್ಮವನ್ನೆಲ್ಲ ಹೀರಿ ಸತ್ವ ಕಳೆದುಕೊಂಡಿದ್ದರೂ, ಅದರಲ್ಲೇ ಎಲ್ಲರ ಮುಖಗಳೂ ಪೌಡರ್ ಕಾಣುತ್ತಿದ್ದವು ಎಂಬುದು ಸತ್ಯ. ಒಮ್ಮೊಮ್ಮೆ ಹಸಿ ಮುಖಕ್ಕೆ ಅದನ್ನು ಬಳಸಿ, ಮುಖವೆಲ್ಲ ಪೌಡರ್ ಪ್ಯಾಚ್‌ವರ್ಕ್‌ನಂತಾಗುತ್ತಿತ್ತು. ಕಂಬದ ಮನೆಯಾದರೆ, ಕಿಲುಬುಗೆಟ್ಟ ತಗಡಿನ ಫ್ರೇಮ್ ಇರುತ್ತಿದ್ದ ಕನ್ನಡಿ, ಬಾಚಣಿಗೆಯನ್ನು ಕಿರೀಟದಂತೆ ತಲೆಯ ಮೇಲೆ ಸಿಕ್ಕಿಸಿಕೊಂಡು, ಯಾವುದಾದರೊಂದು ಕಂಬದ ಮೇಲೆ ಗೋಣಿಗೆ ನೇಣು ಹಾಕಿಕೊಂಡಂತೆ ನೇತಾಡುತ್ತಿತ್ತು.

ಬಚ್ಚಲು ಮನೆಯಲ್ಲಿಯೂ ಒಂದೇ ಒಂದು ಪೇಸ್ಟು ಪ್ರಭುತ್ವ ಸ್ಥಾಪಿಸಿಕೊಂಡು ಕೂತಿರುತ್ತಿತ್ತು. ಹಿರಿಯರು ಇಜ್ಜಲನ್ನೇ ಹೆಚ್ಚಾಗಿ ನೆಚ್ಚುತ್ತ, ಕಿರಿಯರು ಟೂಥ್‌ಪೇಸ್ಟಿನ ತಂಟೆಗೆ ಹೋಗುತ್ತಿದ್ದುದು ಕಡಿಮೆಯಾದ್ದರಿಂದ, ಸಿಹಿಹಲ್ಲುಪುಡಿಯನ್ನು ಅಂಗೈಯಲ್ಲಿ ಹಾಕಿಕೊಂಡು ತೋರುಬೆರಳಿನಲ್ಲಿ ಹಲ್ಲುಜ್ಜುವುದಕ್ಕಿಂತ ಹೆಚ್ಚು ಚಪ್ಪರಿಸಿ ನುಂಗುತ್ತ ಉಜ್ಜುವುದನ್ನೇ ಮರೆಯುವುದಿತ್ತು. ಕೆಲವೇ ಕೆಲವರು ಮಾತ್ರ ರೆಗ್ಯುಲರ್ ಆಗಿ ಬಳಸುತ್ತಿದ್ದುದರಿಂದ, ಅದೂ ಸಹ ಎಷ್ಟೋ ತಿಂಗಳಿನವರೆಗೆ, ಹೊಟ್ಟೆಯೆಲ್ಲ ಬಗೆದು ಬೆನ್ನಿಗೆ ಹತ್ತುವಷ್ಟು ಬರಿದಾಗುವವರೆಗೆ ಚಾಲ್ತಿಯಲ್ಲಿರುತ್ತಿತ್ತು. ಒಂದೇ ಸೋಪು ಎಲ್ಲರ ಮೈಕೈ ತೊಳೆದು ತೊಳೆದು ನವೆಯುತ್ತಿತ್ತು. ಮಕ್ಕಳ ಸಂಖ್ಯೆಗೆ ಅಂಕೆಯಿರದಿದ್ದರೂ ಉಪಯೋಗಿಸುವ ವಸ್ತುಗಳೆಲ್ಲ ಕೆಲವೇ ಸಂಖ್ಯೆಗಳ ಲೆಕ್ಕದಲ್ಲಿ ಜಾರಿಯಲ್ಲಿರುತ್ತಿತ್ತು.

ಹೆಂಗಳೆಯರು ಅಡುಗೆ, ಊಟ, ತಿಂಡಿ ಎಂದು ಪ್ರತಿದಿನ ತಲೆಕೆಡಿಸಿಕೊಳ್ಳುವ ಗೋಜಲಿರಲಿಲ್ಲ. ಮೂರು ಹೊತ್ತು ಮಾತ್ರ ತಿಂಡಿ, ಊಟ ತಯಾರಾಗುತ್ತಿತ್ತು. ಎಲ್ಲರೂ ಅದನ್ನೇ ತಿನ್ನದೆ ಬೇರೆ ಆಯ್ಕೆಯಿರಲಿಲ್ಲ. ಹೋಟೆಲ್ಲು, ಸ್ಟ್ರೀಟ್‌ಫುಡ್ಡು ಎನ್ನುವ ಕಾನ್ಸೆಪ್ಟೇ ಇರುತ್ತಿರಲಿಲ್ಲ. ಹಾಗಾಗಿ ಹಬ್ಬ, ಹುಣಿವೆಯಲ್ಲಿ ಮಾತ್ರ ಕೆಲ ಸಿಹಿತಿನಿಸುಗಳು, ಕರಿದ ತಿಂಡಿಗಳು ತಯಾರಾಗಿ, ಮಕ್ಕಳು ಖಾಲಿಯಾಗುವ ತನಕ ಮುಗಿಬಿದ್ದು ತಿನ್ನುತ್ತಿದ್ದರು. ಪಾತ್ರೆ, ಬಟ್ಟೆ, ಕಸ, ನೆಲ, ರುಬ್ಬುವುದು, ಅರೆಯುವುದು, ಕುಟ್ಟುವುದು ಎಲ್ಲವನ್ನೂ ಹಂಚಿಕೊಂಡು ಮಾಡುತ್ತಿದ್ದುದರಿಂದ ಹೊರೆ ಎನಿಸುತ್ತಿರಲಿಲ್ಲ. ಸಂಜೆ ಸಾಕಷ್ಟು ಸಮಯ ಮಿಕ್ಕಿ, ಹೆಣ್ಣುಮಕ್ಕಳು ಕಾಳು ಕಡ್ಡಿ ಹಸನು ಮಾಡುವುದು, ಚವ್ವಂಗ, ಅಳಗುಳಿ ಆಡುತ್ತಲೋ, ಹೂವಿನ ಮಾಲೆ ಕಟ್ಟುತ್ತಲೋ ಕಾಲಕಳೆಯುತ್ತಿದ್ದರು.

ಸಂಜೆ ಏಳು ಅಥವಾ ಎಂಟಕ್ಕೆ ಊಟ ಮುಗಿಸಿ ನಿದ್ರೆಗೆ ಜಾರಿಬಿಡುತ್ತಿದ್ದರು. ವರ್ಷಕ್ಕೊಂದೆರಡು ಬಟ್ಟೆಗಳು ಹೊಲಿಸಿದರೆ ಹೆಚ್ಚು. ಬಟ್ಟೆ ಪುಸ್ತಕಗಳೆಲ್ಲ ಮನೆಯಲ್ಲಿನ ಸೇರಿನಿಂದ ಅಚ್ಚೇರು, ಪಾವು, ಅರ್ಪಾವು, ಚಟಾಕು, ಸೊಲಗದ ಪೀಳಿಗೆಯವರೆಗೆ ವರ್ಗಾವಣೆಯಾಗುತ್ತಿದ್ದವು. ಹೆಚ್ಚಾಗಿ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆ, ಉಳ್ಳವರಿಗೆ ಇಂಗ್ಲೀಷ್ ಮಾಧ್ಯಮದ ಕಾನ್ವೆಂಟ್ ಆಯ್ಕೆಯಾಗಿತ್ತು. 'ಸರ್ವರೋಗಕ್ಕೂ ಸಾರಾಯಿ' ಮದ್ದು ಎನ್ನುವಂತೆ, ಸರ್ವಾಂಗರೋಗಕ್ಕೂ ಸರ್ಕಾರಿ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದುದು ಸಾಮಾನ್ಯ. 'ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೇನು ಕೆಲಸ' ಎನ್ನುವಂತೆ, ಕ್ಲಿನಿಕ್ಕುಗಳು ನಡೆಯುತ್ತಿದ್ದುದೇ ಕಡಿಮೆ. ಮಾಹಿತಿ, ಮನರಂಜನೆಗೆ ಇದ್ದಿದ್ದೇ ಸಿನೆಮಾ, ರೇಡಿಯೋ, ದೂರದರ್ಶನ, ಹೀಗೆ ಕೆಲವೇ ಕೆಲವು ಆಯ್ಕೆಗಳು. ಹೆಚ್ಚೂಕಡಿಮೆ ಬಹುತೇಕ ಕುಟುಂಬಗಳ ಚಿತ್ರಣ ಹೀಗೆಯೇ ಇರುತ್ತಿತ್ತು.

'ಬ್ರಿಟೀಷರು ಡಿವೈಡ್ ಅಂಡ್ ರೂಲ್' ಪಾಲಿಸಿಯನ್ನು ದೇಶವನ್ನು ಒಡೆಯುವ ಹುನ್ನಾರದಿಂದ ತಂದರೆ, ಬಹಳಷ್ಟು ತುಂಬುಕುಟುಂಬಗಳೂ ಅದನ್ನು ಅನ್ವಯಿಸಿಕೊಂಡು ಡಿವೈಡ್ ಆಗತೊಡಗಿ ಬಹೂಗಳೆಲ್ಲ ಪ್ರತ್ಯೇಕ ಮನೆಗಳಿಗೆ ಚದುರಿ ಬಹುಮನೆಗಳ ಸಾಮ್ರಾಜ್ಯ ಸ್ಥಾಪನೆಯಾಗತೊಡಗಿತು.

ಆಸ್ತಿ, ಮನೆ, ಬಾತ್‌ರೂಮು, ಕೋಣೆ, ಸೋಪು, ಟವೆಲ್ಲು, ಪೇಸ್ಟು, ಊಟ, ತಿಂಡಿ ಎಲ್ಲವೂ ಪ್ರತ್ಯೇಕ, ವೆರೈಟಿ ಎನ್ನುವ ಕಾನ್ಸೆಪ್ಟ್‌ಗೆ ಬಿದ್ದಾಯಿತು. ಪ್ರತಿಯೊಬ್ಬರ ಆಯ್ಕೆ, ಆದ್ಯತೆಗಳು ಬದಲಾದವು. ಕೆಲಸಗಳನ್ನು ಸರಾಗ ಮಾಡಲು ಅದೆಷ್ಟೋ ಆಧುನಿಕ ಯಂತ್ರಗಳು ಬಂದರೂ, ಮಾಡಿದ್ದೇ ಮಾಡು, ತಿಕ್ಕಿದ್ದೇ ತಿಕ್ಕು, ತೊಳೆದಿದ್ದೇ ತೊಳಿ ಎನ್ನುವ ರಾಗ ಶುರುವಾಯಿತು. ಬಟ್ಟೆ, ಬರೆ, ಪುಸ್ತಕ, ಆಟಿಕೆ ಎಲ್ಲವೂ ಅಗತ್ಯಕ್ಕಿಂತ ಹೆಚ್ಚಾಗಿ, ಅವುಗಳ ಬೆಲೆಯೂ ಅರಿಯದೆ, ಎಲ್ಲವೂ ಕ್ಷಣಿಕ ಆಸಕ್ತಿಯ ಸುಖದ ಸಾಧನಗಳಾಗಿ ಬದಲಾಯಿತು. ಸರ್ಕಾರಿ ಶಾಲೆಗಳು, ಆಸ್ಪತ್ರೆಗಳು ತ್ರಾಣವಿಲ್ಲದೆ ನಾಮ್‌ಕೆವಾಸ್ತೇ ಎಂಬಂತಾಗಿ, ನಾಯಿಕೊಡೆಗಳಂತೆ ಗಲ್ಲಿಗಲ್ಲಿಗೆ ಹುಟ್ಟಿಕೊಂಡಿರುವ ಖಾಸಗಿ ಸಂಸ್ಥೆಗಳ ಶಾಲೆ, ಆಸ್ಪತ್ರೆಗಳದೇ ದರ್ಬಾರು ಹೆಚ್ಚಾಗತೊಡಗಿತು.

ಈಗ ರೇಡಿಯೋ, ಟಿವಿ ಎಲ್ಲದರಲ್ಲೂ ಪೈಪೋಟಿ ನೀಡುವಂತಹ ನೂರಾರು ಚಾನೆಲ್‌ಗಳು, ಓಟಿಟಿಗಳು ಲಗ್ಗೆಯಿಟ್ಟಿವೆ. ಸಮಯ ಉಳಿತಾಯವಾದರೂ ಸಹ ವಯಸ್ಸು ಮತ್ತು ಲಿಂಗಬೇಧವಿಲ್ಲದೆ, ತಮ್ಮ ತಮ್ಮವರ ಫೇಸ್‌ಗಳನ್ನು ಮತ್ತು ಪುಸ್ತಕಗಳನ್ನು ಮರೆತು, ಫೇಸ್‌ಬುಕ್‌ನಲ್ಲಿ ಫೇಕ್‌ಲುಕ್ ಕೊಡುವುದರಲ್ಲಿ ತಲ್ಲೀನರಾಗಿ, ಇನ್ಸ್ಟಾಗ್ರಾಂ ಎನ್ನುವ ಇನ್ಸ್ಟಂಟ್ ಗ್ರಾಮದಲ್ಲಿ ರೀಲ್ಸ್‌ಗಳನ್ನು ಸುತ್ತಿಕೊಳ್ಳುತ್ತ ರಿಯಲ್ ಲೈಫ್ ಕಡೆ ಬೆನ್ನು ಮಾಡುತ್ತಿರುವುದು ವಿಷಾದದ ಸಂಗತಿ. ಇದೇ ರೀತಿ ಇನ್ನೂ ಅದೆಷ್ಟೋ ಜಾಲತಾಣಗಳು ತಮ್ಮ ಜಾಲದಲ್ಲಿ ಬೀಳಿಸಿಕೊಂಡು, ಮನುಷ್ಯ ಮನುಷ್ಯರ ನಡುವೆ ದೊಡ್ಡ ಕಂದಕವನ್ನೇ ಸೃಷ್ಟಿಮಾಡುತ್ತಿವೆ.

ಈ ಬಹು (many) ಸಾಮ್ರಾಜ್ಯದ ಸಿದ್ಧಾಂತ ಮನುಷ್ಯನ ಜೀವನದಲ್ಲಿ ಇನ್ನೂ ಅದೆಷ್ಟು ರಾದ್ಧಾಂತ ಎಬ್ಬಿಸುತ್ತ ಸಾಗುವುದೋ ತಿಳಿಯದು. ಕೆಲವೇ ಕೆಲವು ಆಯ್ಕೆಗಳು ಎನ್ನುವ ಕಾಲ ಸರಿದು ಹಲವಾರು ಆಯ್ಕೆಗಳ ಜಗತ್ತಿಗೆ ಮುಖಾಮುಖಿಯಾಗಿದ್ದೇವೆ. ಆ ಹಲವಾರುಗಳಲ್ಲಿ ಉತ್ತಮ ಎನಿಸುವ ಕೆಲವುಗಳನ್ನು ಆಯ್ಕೆ ಮಾಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ಕಾಲಕಾಲಕ್ಕೆ ಸಕಾಲದಲ್ಲಿ ಅಪ್ಡೇಟ್ ಆಗುತ್ತ ಸಾಗುವುದೇ ಜೀವನ. ಅಲ್ಲವೇ?



# ಜಯಹೇ ರಸರುಚಿಗಳ ಬೀಡೇ.....!

**ಸುಮಾ ರಮೇಶ್, ಹಾಸನ**

**ಆ**ಹಾರ-ಪಾನೀಯಗಳನ್ನು ಸೇವಿಸುವ ಸಮಯ ಅದರಿಂದ ಹೊರಹೊಮ್ಮುವ ಅರೋಮ, ರೋಮ ರೋಮಗಳಿಗೂ ರಸಾಸ್ವಾದನೆಯ ಸವಿಯನ್ನು ತಲುಪಿಸುವುದು. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯ, ಬೀಭತ್ಸ, ಅದ್ಭುತ, ಶಾಂತ ಇವು ನವರಸಗಳಾದರೆ.... ಉಪ್ಪು, ಹುಳಿ, ಸಿಹಿ, ಕಹಿ, ಖಾರ, ಒಗರು ಇವು ಷಡ್ರಸಗಳು. ನಾವೀಗ ನವರಸಗಳ ತಂಟೆಗೆ ಹೋಗದೆ 'ರಸನ' ಎಂದರೆ ನಾಲಿಗೆಗೆ ಸಂಬಂಧಪಟ್ಟ ರಸದ ಬಗ್ಗೆ ಚರ್ಚಿಸೋಣ.

ಮೂಗಿಗೂ ನಾಲಿಗೆಗೂ ಹತ್ತಿರದ ನಂಟು. ದೇಹದ ನಕ್ಷೆಯಲ್ಲೂ ಇವುಗಳ ಅಂತರ ಬಹಳ ಕಡಿಮೆಯೇ. ಹಾಗಾಗಿಯೇ ಇವೆರಡೂ ಪರಸ್ಪರ ಪೂರಕ. ನಾಲಿಗೆಗೆ ಇಳಿಯುವ ರಸಕ್ಕೆ ಪರಿಮಳ ಬೆರೆತಾಗ ರುಚಿಯ ಪರಿಮಾಣ ಹೆಚ್ಚುವುದು. ರಸ್ತೆ, ರೆಸ್ಟೊರೆಂಟ್ ಗಳೆದುರು ತೇಲಿ ಬರುವ ಪರಿಮಳಕ್ಕೆ ನಾಲಿಗೆಯಲ್ಲಿ 'ಲಾಲಾ' ಎಂಬ ರಸ ಚಿಲ್ಲನೆ ಕೋಡಿಯಾಗುವುದು. ಅಂತೆಯೇ ಪರಿಮಳ ಅಸಹನೀಯವಾಗಿದ್ದರೆ ಅಗ್ನಿಕಾರಕ 'ಲಾವಾ'ರಸ ಉದರದಿಂದ ಒತ್ತರಿಸಿ ಬರುವುದು.

ಕ್ರಿಕೆಟ್‌ನಲ್ಲಿ ಬೌಲರ್, ಬ್ಯಾಟ್ಸ್ ಮನ್, ವಿಕೆಟ್ ಕೀಪರ್, ಫೀಲ್ಡರ್‌ಗಳು ಆಯಾಯ ಸ್ಥಳಗಳಿಗೆ ಫಿಕ್ಸ್ ಆದಂತೆ ನಾಲಿಗೆಯಲ್ಲೂ ಷಡ್ರಸಗಳನ್ನು ಗುರುತಿಸಲು ಶಾಖೆಗಳಿವೆ. ತಾಟಿನ ಮುಂದೆ ಕುಳಿತು ಬ್ಯಾಟಿಂಗ್ ಮಾಡುವಾಗ ನಾಲಿಗೆಯ ಮುಂಭಾಗದ ರುಚಿ ಮೊಗ್ಗುಗಳು ಸಿಹಿಯನ್ನೂ ಹಿಂಭಾಗ ಕಹಿಯನ್ನೂ ಗುರುತಿಸಿದರೆ ಮುಂದಿನ ಎರಡೂ ಸೈಡ್‌ಗಳು, ಸಾಲ್ಟ್ ಹಾಗು ಮಧ್ಯದ ಎರಡೂ ಬದಿ ಹುಳಿಯನ್ನು ಗುರುತಿಸಿ ಮೆದುಳೆಂಬ ಅಂಪೈರ್ ಗೆ ಸಂದೇಶ ಕಳಿಸುವವು. ಅಲ್ಲಿಂದ ಗ್ರೀನ್ ಸಿಗ್ನಲ್ ರವಾನೆಯಾಗಿ ನಾಲಿಗೆಯ ಆಳಕ್ಕೆ ರುಚಿ ಇಳಿದು ರಸಾಸ್ವಾದನೆಯಾಗುವುದು. ದೇಹಕ್ಕೆ ಬಿಪಿ, ಶುಗರ್, ಕೊಲೆಸ್ಟ್ರಾಲ್‌ಗಳು ಜೊತೆಯಾದಾಗ ವೈದ್ಯರೆಂಬ ಥರ್ಡ್ ಅಂಪೈರ್ ಸವಿರುಚಿಯ ಸಮೃದ್ಧ ಬ್ಯಾಟಿಂಗಿಗೆ ಬ್ರೇಕ್ ಹಾಕಿಬಿಡುವರು.

ಸಕ್ಕರೆ ತುಪ್ಪದ ಕಾಲುವೆ ಹರಿಸಿ ಪುರಂದರದಾಸರು ಶುಕ್ರವಾರದ ಪೂಜೆಯ ವೇಳೆಗೆ ಸೌಭಾಗ್ಯ ಲಕ್ಷ್ಮೀಯನ್ನು ಬರಮಾಡಿಕೊಂಡಂತೆ ಪ್ರತಿದಿನ ಉದರವೆಂಬ ದೇವರಿಗೆ ಷಡ್ರಸಗಳ ಕಾಲುವೆ ಹರಿಸಿ ಕೊಬ್ಬು ಕೊಲೆಸ್ಟ್ರಾಲನ್ನು ಬರಮಾಡಿಕೊಳ್ಳುವೆವು. ಕರ್ಮದಲ್ಲಿ ಸಂಚಿತ, ಪ್ರಾರಬ್ಧ, ಆಗಾಮಿ ಕರ್ಮಗಳಿರುವಂತೆ ಕೊಬ್ಬಿನಲ್ಲೂ ಮೂರು ಬಗೆಗಳಿವೆ. ಹುಟ್ಟಿದಾರಭ್ಯ ನಾಲ್ಕಂಗುಲದ ನಾಲಿಗೆಯನ್ನು ತಣಿಸಿ ಶೇಖರಿಸಿಕೊಂಡ ಕೊಬ್ಬು 'ಸಂಚಿತ' ಕೊಬ್ಬು. ಇದು ನಮ್ಮ ಬ್ಯಾಂಕ್ ಬ್ಯಾಲೆನ್ಸ್ ನಂತೆ ಬಡ್ಡಿ ಸಮೇತ ಬೆಳೆಯುತ್ತಾ ಹೋಗುವುದು. 'ಪ್ರಾರಬ್ಧ' ಕೊಬ್ಬು ಪೂರ್ವ ಜನ್ಮದಿಂದ ಸಂಚಯಿಸಿಕೊಂಡು ಬಂದ ಕೊಬ್ಬು. ಅರ್ಥಾತ್ ಇದು ರಸರುಚಿಗಳಿಂದ ಪೂರ್ವಜರು ತಮ್ಮ ನಾಲಿಗೆಯನ್ನು ತಣಿಸಿದ ಫಲ. ಒಂದು ಬಗೆಯಲ್ಲಿ ಪಿತ್ರಾರ್ಜಿತವಾಗಿ ಬಂದದ್ದು. ಬಿಪಿ ಶುಗರ್, ದುರ್ಬುದ್ಧಿ, ಸದ್ಬುದ್ಧಿ, ನಡಿಗೆ, ಎತ್ತರ, ಬಣ್ಣ ಎಲ್ಲವೂ ಹೇಗೆ ಹಿರಿಯರ ಬಳುವಳಿಯೋ ಹಾಗೆಯೇ ಪ್ರಾರಬ್ಧ ಕೊಬ್ಬು ನಮ್ಮ ವರ್ಣತಂತುಗಳಿಗೆ ವರ್ಗಾಯಿಲ್ಪಟ್ಟದ್ದು. ಇದನ್ನು ಬದಲಾಯಿಸಲು ಹಣೆಬರಹ ಬರೆದ ಬ್ರಹ್ಮನಿಂದಲೂ ಸಾಧ್ಯವಿಲ್ಲ.



ಇನ್ನು 'ಆಗಾಮಿ' ಕೊಬ್ಬು ಎಂಬುದು ಈ ಜನ್ಮದಲ್ಲಿ ನಾವೇ ಕ್ರೋಢೀಕರಿಸಿದ ಕೊಬ್ಬು. ಇದು ಸಂಪೂರ್ಣ ಸ್ವಯಾರ್ಜಿತ. ಹಾಗಾಗಿ ಇದನ್ನು ಏರಿಸುವ ಇಳಿಸುವ ಬಳಸುವ ಸಂಪೂರ್ಣ ಹಕ್ಕು ನಮ್ಮದೇ. ನಾಲಿಗೆಗೆ ಬರಮಾಡಿಕೊಳ್ಳುವ ಷಡ್ರಸೋಪೇತ ಭೋಜನದ ಗುಣ ಪ್ರಮಾಣದ ಮೇಲೆ ನಿಗಾ ಇಟ್ಟರೆ ಅದನ್ನು ಪರಿಷ್ಕರಿಸಿದರೆ ಆಗಾಮಿ ಕೊಬ್ಬಿನ ಆಗಮನವನ್ನು ಅವಾಯ್ಡ್ ಮಾಡಬಹುದು.

ಅಸಲಿಗೆ ನಾಲಿಗೆ ಅಡಕವಾಗಿರುವುದೇ ನಿರಂತರ ರಸೋತ್ಪಾದನೆಯಾಗುವ ಆರ್ದ್ರ ಪ್ರದೇಶದಲ್ಲಿ. ಹಾಗಾಗಿ ಕೊಟ್ಟ ಮಾತುಗಳು ಸಲೀಸಾಗಿ ಜಾರಿ ಹೋದಂತೆಯೇ ರುಚಿಕರ ಖಾದ್ಯಗಳೂ ಸಲೀಸಾಗಿ ಒಳಗಿಳಿಯುತ್ತವೆ. ಸಿಹಿಯಾದ ರಸದಲ್ಲಿ ಮಿಂದೆದ್ದ ಜಾಮೂನು ನಮ್ಮ ರಸೇಂದ್ರಿಯಗಳನ್ನು ಪ್ರಚೋದಿಸಿದರೆ ಹೆಸರಿನಲ್ಲೇ ರಸವನ್ನು ಹೊಂದಿರುವ ಅತಿರಸ, ರಸಮಲ್ಯೆ, ರಸಗುಲ್ಲಗಳು ಉದಾರವಾಗಿ ನಾಲಿಗೆಗೆ ರಸವಿಳಿಸಿ ಉದರವನ್ನೂ, ಗಲ್ಲವನ್ನೂ ಗುಂಡಗಾಗಿಸುವವು.




ಷಡ್ರಸಗಳನ್ನು ಹೊಂದಿದ ಖಾದ್ಯಗಳಲ್ಲಿ ಪುಳಿಯೋಗರೆಯ ನಂತರ 'ರಸಂ'ಗೆ ವಿಶೇಷ ಸ್ಥಾನ. ತುಪ್ಪದ ಒಗ್ಗರಣೆಯೊಂದಿಗೆ ಚೆನ್ನಾಗಿ ಕುದಿಸಿದ ತಿಳಿ ಸಾರೆಂಬ ವ್ಯಂಜನ ಕಾಲಾಂತರದಲ್ಲಿ 'ರಸಂ' ಆದದ್ದಾದರೂ ಹೇಗೆಂದು ಯೋಚಿಸುವಾಗ ನನಗೆ ಹೊಳೆದದ್ದು ಇಷ್ಟು. ಈ ರಸಂ ಎಂಬ ರಸ ಬಾಯೊಳಗೆ ಸೇರಿದೊಡನೆಯೇ ಅದರ ರುಚಿಗೆ ಪರವಶನಾಗಿ ತುಟಿಗಳು 'ಅಂ' ಎಂದು ಲಾಕ್ ಆಗಿಬಿಡುತ್ತವೆ. (ಸೆಲ್ಫ್ ಲಿಪ್ ಲಾಕ್). ಹಾಗಾಗಿಯೇ ಇದು 'ರಸಂ' ಆಗಿರಬಹುದು. ನಂತರ ನಾಲಿಗೆ ಆ ರಸವನ್ನು ಆಸ್ವಾದಿಸಿ 'ಪ್ಚ್ ಚ್' ಎಂದು ಸಶಬ್ದವಾಗಿ ಚಪ್ಪರಿಸಿದೊಡನೆ ಅನುಸ್ವಾರದೊಂದಿಗೆ ಲಾಕ್ ಆದ ತುಟಿಗಳು ಆಃ ಎಂಬ ವಿಸರ್ಗದೊಂದಿಗೆ ತೆರೆದುಕೊಳ್ಳುತ್ತವೆ.

ಗ್ರಹಣಗಳಲ್ಲಿ ಖಂಡಗ್ರಾಸ, ಖಗ್ರಾಸ, ಸಂಪೂರ್ಣ, ಭಾಗಶಃ ಎಂಬ ವಿಧಗಳಿರುವಂತೆ ಭೋಜನಗಳಲ್ಲೂ ಷಡ್ರಸ, ಖಗ್ರಾಸ, ಮೃಷ್ಟಾನ್ನ, ಭೂರೀ ಭೋಜನಗಳೆಂಬ ಬಗೆಗಳಿವೆ. ಆರೂ ರಸಗಳನ್ನೊಳಗೊಂಡ ಖಾದ್ಯ 'ಷಡ್ರಸೋಪೇತ ಭೋಜನ' ವಾದರೆ ಕಹಿಯನ್ನು ಹೊರತುಪಡಿಸಿ ಸಿಹಿಯನ್ನು ಪ್ರಧಾನವಾಗಿ ಹೊಂದಿದ ಪಂಚರಸೋಪೇತ ಭೋಜನಕ್ಕೆ 'ಮೃಷ್ಟಾನ್ನ ಭೋಜನ' ಎನ್ನುವರು. ಎರಡರಿಂದ ಆರು ರಸಗಳನ್ನು ಹೊಂದಿದ ಭೋಜನ 'ಭೂರೀ ಭೋಜನ'. ಕೃಪಣರು ಜೇನುತುಪ್ಪವ ತೋರಿ ಸಕ್ಕರೆ ನೀರು ನೀಡುವುದೂ ಮತ್ತೊಂದು ಬಗೆಯ ಭೂರೀ ಭೋಜನವೇ! ಬಾಯಿಗಿಟ್ಟ ತುತ್ತಿನಿಂದ ನಾರು-ತೊಟ್ಟು-ಸಿಪ್ಪೆ ಏನೂ ಇಲ್ಲದಂತೆ ತಯಾರಿಸಿದ ಭೋಜನ (ನಾನ್ ವೆಜ್‌ಗಳ ದೃಷ್ಟಿಯಲ್ಲಿ ಬೋನ್ ಲೆಸ್)ವನ್ನು ಖಗ್ರಾಸ/ಸುಗ್ರಾಸ ಭೋಜನವೆನ್ನುವರು.



ನಾವು ಬಳಸುತ್ತಿದ್ದ ಮಸಾಲೆ ಪದಾರ್ಥಗಳ ರುಚಿ ವಿದೇಶಿಗರ ನಾಲಿಗೆಗೂ ಇಳಿದು ಹಲವು ದಶಕಗಳ ಕಾಲ ಅವರು ಈ ನೆಲದಲ್ಲಿ ಝುಂಡಾ ಊರಿದ್ದು ಇತಿಹಾಸ. ಮಸಾಲೆಯ ಘಮಲು ಸೃಷ್ಟಿಸಿದ ಅಮಲು ಅವರ ರುಚಿಮೊಗ್ಗುಗಳಿಗೆ 'ಡೀಪ್ ರೂಟ್' ಆಗಿ ಇಳಿದು ಬಾಯಿಯ ಎಲ್ಲಾ ಮೂಲಗಳಿಂದ ಜಲೋತ್ಪಾದನೆಯಾಗಿ ವಾಸ್ಕೋಡಗಾಮ 'ಸೀ ರೂಟ್' ಅನ್ವೇಷಿಸುವ ಮಟ್ಟಕ್ಕೆ ಪ್ರಚೋದನೆ ನೀಡಿತು.

ದೇವಾನುದೇವತೆಗಳಿಗೂ ಪ್ರಿಯವಾದ ರಾಮರಸ, ಸೋಮರಸಗಳಂತೆಯೇ ಇಂದು ಹಲವು ಬ್ರ್ಯಾಂಡಿನ ಬಣ್ಣದ ರಸಗಳು ಕಂಗೊಳಿಸುವ ಬಾಟಲುಗಳಿಂದ ಲೋಟಕ್ಕೆ ಜಾರಿ ಡೀ ಡೀ ಆಗುತ್ತವೆ. ನಾಲಿಗೆಯ ರುಚಿ ಮೊಗ್ಗುಗಳಿಗೆ ಆ ರಸ ಗುಟುಕು ಗುಟುಕಾಗಿ ಎಟಕುತ್ತಾ ಹೋದಂತೆ ತನುಮನವೆಲ್ಲಾ ರಸಮಾಲಿನ್ಯದಿಂದ ಡಿಡಿಕ್ಕ ಡಿಡಿಕ್ಕ ಡಿಡಿಕ್ಕ ಡಿಡಿಕ್ಕ !!

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ರಸ್ತೆಬದಿ ಮುತ್ತು ರತ್ನ ವಜ್ರ ವೈಢೂರ್ಯಗಳು ಬಿಕರಿಯಾಗುತ್ತಿದ್ದಂತಹ ಸಂಪದ್ಭರಿತ ಭಾರತ ಕಾಲಕ್ರಮೇಣ ವಿದೇಶಿಗರ ಆಕ್ರಮಣದಿಂದ ಬಡವಾಗಿ ರಸ್ತೆ ಬದಿ ಸೌತೆಕಾಯಿ, ಕಡ್ಲೆಕಾಯಿ, ಕೊತ್ತಂಬರಿಯಂತಹ  ಕಚ್ಚಾ ಆಹಾರ ಸಾಮಗ್ರಿಗಳ ತಾಣವಾಯಿತು. ಇಂದು ಜಾಗತಿಕ ಮಟ್ಟದ ಪಲ್ಲಟಗಳಿಂದ ಗೃಹ ಮುಕ್ತ, ಬಯಲು ಪಾಕಾಲಯಗಳು ತೆರೆದುಕೊಂಡಿವೆ. ಫುಟ್ ಪಾತ್ ನಲ್ಲಿ ಫುಡ್ ಕೋರ್ಟ್ ಸಮುಚ್ಚಯಗಳು ತಲೆಎತ್ತಿ ಪಾನಿಪೂರಿ, ಗೋಬಿ ಮಂಚೂರಿ, ಸಮೋಸ, ಎಗ್ ರೈಸ್ ಗಾಡಿಗಳಿಂದ ಘಮಘಮಿಸುವ ನಾಡು... ರಸರುಚಿಗಳ ಬೀಡಾಗಿದೆ. ಹಟ್ಟಿ ಕಾಪಿ, ಸೌದೆ ಒಲೆ ಊಟ, ಇಡ್ಲಿ ಮಾಮು, ಅಮ್ಮನ ಕೈ ರುಚಿ ಇಂತಹ ಗ್ರಾಮೀಣ ಸೊಗಡಿನ ವಿಶಿಷ್ಟ ಫಲಕದ ಭೋಜನ ಶಾಲೆಗಳು ಇದಕ್ಕೆ ಇನ್ನಷ್ಟು ಫ್ಲೇವರ್ ಆಡ್ ಮಾಡಿವೆ. ಕಾಗದ ಪತ್ರ, ಪಾರ್ಸೆಲ್‌ಗಳನ್ನು ಹೊತ್ತು ತರುತ್ತಿದ್ದ ಅಂಚೆಯಣ್ಣನಂತೆ ಇಂದು ಅಂಚು ಮಡಿಸಿದ ಪಾರ್ಸೆಲ್ ಬಾಕ್ಸ್‌ಗಳಲ್ಲಿ ರುಚಿಕರ, ಪರಿಮಳಯುಕ್ತ ಆಹಾರವನ್ನು ಹೊತ್ತ ಡೆಲಿವರಿ ಬಾಯ್‌ಗಳು ಲೊಕೇಶನ್ ಸರ್ವೆ ಮಾಡುತ್ತಾ ಸಾಗುವುದು ಸರ್ವೇಸಾಮಾನ್ಯ.

ಪ್ರಾದೇಶಿಕವಾಗಿ ಪ್ರಸಿದ್ಧವಾದ ಮೈಸೂರು ಪಾಕು, ಬೆಳಗಾವಿಯ ಕುಂದ, ಮಂಗಳೂರಿನ ನೀರುದೋಸೆ, ಧಾರವಾಡ ಪೇಡ, ಮದ್ದೂರು ವಡೆ, ಮಂಡ್ಯದ ಮುದ್ದೆ ಬಸ್ಸಾರು ಎಂಬ ವೆರೈಟಿಗಳು ಇಂದು ಆ ಪ್ರದೇಶಕ್ಕಷ್ಟೇ ಸೀಮಿತವಾಗದೆ ಯೂಟ್ಯೂಬ್ ಮಾರ್ಗದರ್ಶನದಲ್ಲಿ ಎಲ್ಲೆಡೆ ತಲುಪಿ ಸರ್ವಜನಾಂಗದ ಪ್ರೀತಿಯ ಊಟವಾಗಿದೆ.

ಕೊರೋನಾ ಸಮಯ ವೈರಸ್ ದಾಳಿಯಿಂದ ನಾಲಿಗೆಯ ರುಚಿಮೊಗ್ಗುಗಳೆಲ್ಲಾ ಪೀಡನೆಗೊಳಗಾಗಿ ಯಾವ ರುಚಿಯೂ ದಕ್ಕದೆ, ರಸವೂ ಉಕ್ಕದೆ ನಾಲಿಗೆ ಎಂಬ ಇಂದ್ರಿಯ 'ರುಚಿಪೀಡಿಯ' ಆಗಿಹೋಗಿತ್ತು.

ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭಾರತ ಸುಂದರ ನದಿ ವನಗಳ ನಾಡು, ರಸ ಋಷಿಗಳ ಬೀಡು ಎಂದರು ರಾಷ್ಟ್ರ ಕವಿಗಳು. ಈ ದೇಹವೆಂಬ ತಡಿಕೆಯಲ್ಲಿ ಅಡಕವಾದ ನಾಲಿಗೆ ಎಂಬ ಅಂಗ ರಸ ರುಚಿಗಳ ಬೀಡಾಗಿದೆ. ಷಡ್ರಸಗಳಿಂದ ಅದನ್ನು ತಣಿಸಿದರೆ ತನುವಿಗೂ ತಂಪು ಮನಕ್ಕೂ ಇಂಪು. ಈ ರಸರುಚಿಗಳ ಬೀಡಿಗೆ ಜೈ ಎನ್ನೋಣವೇ !



# ನಗಲು ಒಂದೇ ದಿನ ಸಾಕೇ ?

✍ ಕೆ.ಎಸ್.ಸೋಮೇಶ್ವರ

ಇದನ್ನು ಕೇಳಿದರೆ ಬಿದ್ದು ಬಿದ್ದು, ಉರುಳಾಡಿ ಹೊರಳಾಡಿ ನಗ ಬೇಕೆನಿಸುತ್ತದೆ. ಮೇ ಎರಡನೇ ತಾರೀಕು ವಿಶ್ವ ನಗೆ ದಿನ ಅಂತಾ ಆಚರಣೆ ಮಾಡಿದರು. ಅವತ್ತು ಎಲ್ಲರೂ. ಯಾವ ಜಾಲತಾಣದಲ್ಲಿ ನೋಡಿ, ಕೇಳಿದರೂ ಕೇಕೆ ಹಾಕಿಕೊಂಡು ಪಕ ಪಕ, ಕಿಸಿ ಕಿಸಿ, ಮುಸಿ ಮುಸಿ ನಗುಗಳ ಅಲೆಯೇ ಹರಿದು ಬೀಳುತ್ತಿತ್ತು. ಆಮೇಲೆ ನಾಳೆಗಳು ಏನಾಯಿತೋ ಗೊತ್ತಿಲ್ಲ.

ಈ ಒಂದೊಂದು ದಿನದ ಆಚರಣೆಗಳಿಗೆ ಇತ್ತೀಚೆಗೆ ಬರವಿಲ್ಲ. ಇದು ದಿನಕ್ಕೊಂದಾದರೂ ಸಾಕಾಗಲ್ಲ. ಕೆಲವೊಮ್ಮೆ ಕೊಸರು ಬೇರೆ. ಮುಂಚೆಯೆಲ್ಲಾ ಯಾರೊ ದೊಡ್ಡವರ ವರ್ಧಂತಿಯೋ ಜಯಂತಿಯೋ ಇರುತ್ತಿತ್ತು. ಅವರ ಪಟವೊ, ಪ್ರತಿಮೆಯೋ ಒಂದು ಹಾರ ತಗಲು ಹಾಕಿದರೆ ಆಯಿತು. ಚಪ್ಪಾಳೆ ತಟ್ಟಿ ಹೋಗಿ ಬಿಡುವರು. ಈಗಂತೂ ತಲೆಯಿಂದ ಉಂಗುಷ್ಠದ ವರೆಗೂ ದಿನಾಚರಣೆಗಳೇ. ಈ ನಗೆ ದಿನ ಆಗಿ ಎಂಟೇ ದಿನಕ್ಕೆ ಮದರ್ಸ್ ಡೇ ತಂದರು. ಅಯ್ಯೋ ಪಾಪ! ಆ ಮಹಾ ಮಾತೃಕೆಯರ ಪಾಡೇನೋ ಅವರೇ ಹೇಳ ಬೇಕು. ನಾವುಗಳು ವರುಷಕ್ಕೊಮ್ಮೆ ಮಾತ್ರ

ನಗುವಂತಿದ್ದರೆ ಉಳಿದ ದಿನ, ರಾತ್ರಿಗಳೆಲ್ಲ ನಮ್ಮ ಉರಿಮುಖವನ್ನು ನೋಡುತ್ತ ಬಿರು ಬೇಸಗೆಯಲ್ಲೂ 'ಅ ದಿನಕರ ನಾಚಿ ನೀರಾದರೆ, ಹುಣ್ಣಿಮೆಯ ಚಂದಿರ ಕರಗಿಯೇ ಹೋಗುತ್ತಿದ್ದನೇನೋ. ಇದೇ ಆಗಸ್ಟ್ 22 ರಂದು ಹಿರಿಯ ನಾಗರಿಕರ ದಿನಾಚರಣೆ ಅಂತ ಊರುಗೋಲು ಹಿಡಿದಿರುವ ಒಬ್ಬ ಮುದಿ ದಂಪತಿಗಳ ಎಮೋಜಿ ನನಗೆ ಬಂತು. ಸರಕಾರದ ಪ್ರಕಾರ ನಾನೂ ಹಿರಿಯ ನಾಗರೀಕನೇ ಆದರೆ, ಇನ್ನೂ ಊರುಗೋಲು ಭಾಗ್ಯ ಕೈಗೆ ಬಂದಿಲ್ಲ!

ಇತ್ತೀಚೆಗೆ ಬೆಳಿಗ್ಗೆ ವೃತ್ತ ಪತ್ರಿಕೆಗಳಲ್ಲಿ ಪುಟ ತುಂಬ ಒಂದು ಜಾಹೀರಾತು. ಅಂದು 'ವಿಶ್ವ ಎಗ್ ದಿನ' ವಂತೆ. ಇದ್ಯಾವ ಕೋಳೀ ಕೆ ರಂಗ ಈ ಜಾಹೀರಾತು ನೀಡಿರಬಹುದು ಎನಿಸಿತು. ಏನೇ ಇರಲಿ ಆಮ್ಲೆಟ್ ಪ್ರಿಯರಿಗೆ ಬಾಯಿ ಚಪ್ಪರಿಸಿರಬೇಕು. ಅದೇ ರೀತಿ ಆ ಮೊಟ್ಟೆಗಳು ಹೊರ ಹಾಕುವ ಕೋಳಿ ಮರಿಗಳು. ಆ ರೀತಿಯ ವಿಶೇಷ ಭೋಜನ ಪ್ರಿಯರಿಗೆ ಮೊಟ್ಟೆಯಾದರೆ ಆಮ್ಲೆಟ್ ಮರಿಯಾದರೆ ಕಟ್ಲೆಟ್ ಇಲ್ಲ ಬಿರಿಯಾನಿಯ ಡಬಲ್ ಧಮಾಕ. ಈಗಂತೂ ಟರ್ಕಿ ಎಂಬ ಕೋಳಿಯನ್ನು ಕೊ ಕೋ ಕೋ ಎನ್ನಿಸಲು ಸಾಧ್ಯವೇ ಇಲ್ಲ. ಏಕೆಂದರೆ, ಆ ಹೆಸರಿನ ಪದಾರ್ಥಗಳನ್ನೇ ನಾವು ನಿಷಿದ್ಧ ಮಾಡಿಕೊಂಡಿದ್ದೇವೆ. ಇದೇ ರೀತಿ ಮೊಟ್ಟೆಯಿಡುವ ಪಕ್ಷಿಗಳು ಮತ್ತು ಜಲಚರಗಳಿಗೆ ಈ ರೀತಿ ಮೊಟ್ಟೆ ಭಾಗ್ಯ (ದಿನದ) ದರದು ಇರಲ್ಲ. ಈಗೇನಾದರೂ ಆ ದೈತ್ಯ ಡೈನೊಸಾರ್ ಇದ್ದಿದ್ದರೆ ? ಅದರ ಮೊಟ್ಟೆಗಳೇ ಒಂದು ಬಲಿತ ದೊಡ್ಡ ಹುಂಜದಷ್ಟಿರುತ್ತಿಂತೆ. ಕಂಡವರ್ಯಾರು. ಅಕಸ್ಮಾತ್, ಈಗ ಇದ್ದಿದ್ರೆ ಅದೆಷ್ಟು ರೀತಿಯ ರಸನ ತಣಿಸುತ್ತಿತ್ತೋ ! ಅದನ್ನು ನಮ್ಮ ಪಲಾವ್ ಪೈಲ್ವಾನ ಹೇಳಬೇಕು. ಇದ್ಯಾರು ಈ ಜಗ ಜಟ್ಟಿ ಅಂತೀರಾ. ಇದೊಂದು ನಮ್ಮ ಜಯನಗರದ ತಿಂಡಿ ಮನೆ. ಹೆಸರು ಪೈಲ್ವಾನ್ ಪಲಾವ್. ಇಲ್ಲಿ ಪಲಾವ್ ತಿಂದವರು ಪೈಲ್ವಾನರೋ ಇಲ್ಲ ಕೊಟ್ಟವರೋ



ಇನ್ನೂ ತಿಳಿದಿಲ್ಲ.

ಇದೆಲ್ಲ ಬಿಡಿ, ಈ ನಗುವೆನ್ನುವುದು ಒಂದೇ ದಿನಕ್ಕೆ ಸಾಕೇ? ಉಳಿದ 364 ಊ ವರೆ ದಿನಗಳು ಬರೀ ವರಿ, ಚೀರಾಟ, ಹಾರಾಟವೇ. ಇದೇನಾದರೂ ಹಾಸ್ಯ ಬ್ರಹ್ಮ ಬೀಚಿ, ನಟ ರತ್ನಾಕರ ಹಿರಣ್ಣಯ್ಯ ನವರ ಕಿವಿಗೆ ಬಿದ್ದಿದ್ದರೆ ಅವರಿಬ್ಬರೂ ಅವರದೇ ಶೈಲಿಯಲ್ಲಿ ನಮ್ಮನ್ನ ನಗೆ ಬುಗ್ಗೆಯಲ್ಲಿ ಷವರ್ ಬಾತ್ ಮಾಡಿಸಿ ಬಿಡುತ್ತಿದ್ದರು. ಒಂದೇ ಉದಾಹರಣೆ, ರಾಜರತ್ನಂ ರವರ ಪದಗಳಲ್ಲೇ ಹೇಳಿದರೆ ನಾಲ್ಗೆ ಸೀಳ್ಸಿದರೂ ನಗ್ ನಗ್ತಾ ಇರ್ತೀಮವಿ.

ಈಗ ಹುಟ್ಟು ಹಬ್ಬದ ಆಚರಣೆಗಳು ಸಾಮಾನ್ಯ.... ಯಾರು ಯಾರಿಗೋ ತುಂಡರಿಸಿದ ಕೇಕನ್ನು ತಿನ್ನಿಸಿ ಸಶಬ್ದವಾಗಿ ಗವ್ ಎಂದು ತೇಗುತ್ತಾ ಪಲ್ಲಂಗದ ಮೇಲೆ ಗೊರಕೆ ಹೊಡೆದರೆ ಮುಗಿಯಿತು. ಇದೇ ರೀತಿ ನಗುವಿನ ದಿನವೇ ? ಸಾಧ್ಯವೇ ಇಲ್ಲ. ಹಿಂದೆಲ್ಲ ರಾಜ-ಕುಮಾರಿಯರ ಕಥೆಗಳಲ್ಲಿ ಅವಳನ್ನು ನಗಿಸುವುದೇ ಒಂದು ಪ್ರಹಸನ. ಅವಳನ್ನು ನಗಿಸುವವನು ಒಬ್ಬ ಗಮಾರನಾಗಿರುತ್ತಾನೆ. ಇಲ್ಲಿನ ತಾತ್ಪರ್ಯ. ಏನೆಂದರೆ ನಗದಿರುವ ಜೀವನ ಸಾಧ್ಯವೇ ಇಲ್ಲ. ಇನ್ನು ನಮ್ಮ ನಾಯಕರುಗಳು. ಹುಟ್ಟು ಹಬ್ಬವೆಂದರೆ ಸಾಕು



ಪತ್ರಿಕೆಗಳಲ್ಲಿ ಆಳೆತ್ತರದ ನಗೆ ಮೊಗದ ಚಿತ್ರಗಳು. ಆಗ ನಗಲೇ ಬೇಕಲ್ಲವೇ. ಇಲ್ಲದಿದ್ದರೆ ಕ್ಯಾಮೆರಾ ಮ್ಯಾನ್ 'ಸ್ಮೈಲ್ ಪ್ಲೀಸ್' ಅಂತ ಗೋಗರೆಯ ತೊಡಗುತ್ತಾನೆ.

ನಮ್ಮ ಚಲನ ಚಿತ್ರಗಳಲ್ಲಿ ನೋಡ ಹೊರಟರೆ ಒಂದೊಂದು ಚಿತ್ರಗಳಲ್ಲೂ ಹೊಸ ಅಧ್ಯಾಯಗಳಿರುತ್ತವೆ. ಬಾಲಕೃಷ್ಣ – ನರಸಿಂಹರಾಜು ಜೋಡಿ ತಮ್ಮ ನಗೆ ಭಾಷೆಯಲ್ಲೇ ಪ್ರೇಕ್ಷಕರಿಗೆ ನಗುವಿನ ಹೊಸ ಭಾಷ್ಯವನ್ನೇ ತೋರಿಸಿದ್ದಾರೆ. ಒಂದೇ ಉದಾಹರಣೆಯಲ್ಲಿ ಹೇಳಬೇಕೆಂದರೆ ಭೂತಯ್ಯನ ಮಗ ಅಯ್ಯು ಚಿತ್ರದಲ್ಲಿ ಕುಹಕವಾಗಿ 'ಒಗ್ಗಟ್ಟು ಅಂದರೆ ಒಬ್ಬಟ್ಟು ಅಂತೀರಲ್ಲೋ' ಅಂದರೆ ಮತ್ತೊಂದರಲ್ಲಿ ನರಸಿಂಹರಾಜುರವರು ಸಹ ನಟಿ ಲಕ್ಷ್ಮೀ ದೇವಿ ಯವರೊಂದಿಗೆ 'ಯಾರು ಯಾರು ನೀ ಯಾರು..... ರುಂಡ ಒಂದು ಕಡೆ ಮುಂಡ ಒಂದು ಕಡೆ' ಎನ್ನುತ್ತ ಕೊಡುವ ನಗೆ ರಸಾಯನ ಇಂದಿಗೂ ಮೆಲುಕು ಹಾಕುವಂತಹುದೇ. ಇಲ್ಲಿ ಲಕ್ಷ್ಮೀ ದೇವಿ, ಬಿ.ಜಯ, ರಮಾದೇವಿ, ಉಮಾಶ್ರೀ ಇವರುಗಳ ನಟನೆಯೇನು ಸಾಮಾನ್ಯವೇ. ಸಹ ನಟರನ್ನು ಮೀರಿಸಿದ ಹಾಸ್ಯ ಪ್ರಜ್ಞೆ ಅವರುಗಳದಾಗಿತ್ತು. ಇಲ್ಲಿ ಸಾಲು ಹೇಳುತ್ತಾ ಹೋದರೆ ಅದಕ್ಕೆ ಕಡೆಯಿಲ್ಲ. ದ್ವಾರಕೀಶ್ ರವರು ತಮ್ಮ ದೇಹವನ್ನೇ ನಗಿಸಲು ಇಟ್ಟರೆ ಎನ್.ಎಸ್.ರಾವ್ ರವರ 'ಅಯ್ಯಯಪ್ಪಾ' ಹೇಳುವ ರೀತಿಯೇ ನಮ್ಮ



ನಗುವನ್ನು ತೆರೆದಿಡುತ್ತಿತ್ತು. ಅದೇ ರೀತಿ ಸಾಧು ಕೋಕಿಲಾರವರ ದೇಹ ಭಾಷೆ. ಇಲ್ಲಿ ನಾಯಕ ನಟರು ನಾವು ಏನು ಕಮ್ಮಿಯಿಲ್ಲ ಎನ್ನುತ್ತಾ ಬಿಸಿ ಬಿಸಿ ಕಜ್ಜಾಯವನ್ನೇ ತಿನ್ನಿಸುತ್ತಾ,, ನಂದಿನಿಗೆ ರೋಜ ಹೂ ಕೊಡಲು ಅಭ್ಯಾಸ ಮಾಡಿಕೊಂಡು, ಮನೇಲಿ ಇಲಿ, ಬೀದೀಲಿ ಹುಲಿಗಳಾಗಿ ತಮ್ಮ ತಮ್ಮ ಘನತೆಯಲ್ಲೇ ನಗುವನ್ನು ಮೊಗೆ ಮೊಗೆದು ಸುರಿದಿದ್ದಾರೆ. ನಮ್ಮ ಚಲನ ಚಿತ್ರಗಳಲ್ಲಿ ನಾರದನಾಗಲೀ ಯಮೋ ಯಮಃ ನಾಗಲಿ ನೋಡಿದರೆ (ನಿಜವಾಗಿ ಅವರನ್ನು ಯಾರು ನೋಡಿರಲು ಸಾಧ್ಯ) ಬಾಯ್ತುಂಬ ನಗುವಂತಿರುತ್ತದೆ. ಅದೊಂದು ದಿನ ಚಂದನ ವಾಹಿನಿಯಲ್ಲಿ "ಭೂತಯ್ಯನ ಮೊಮ್ಮಗ ಅಯ್ಯು" ಎಂಬ ಚಿತ್ರ ಪ್ರಸಾರವಾಗುತ್ತಿತ್ತು. ಅದರ ನಿರೂಪಕ ಇದೊಂದು ಅಚ್ಚ ಕಾಮಿಡಿ ಎನ್ನುತ್ತಿದ್ದರು. ಆದರೆ, ಮೊದಲೆರಡು ದೃಶ್ಯಗಳೇ ಇದೇ ನಗುವೇ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಿತ್ತು. ಅದರ ಅಪಹಾಸ್ಯವನ್ನು ಆ ಭೂತಯ್ಯ ಮತ್ತವನ ಮಗ ಅಯ್ಯು ನೋಡಿದ್ದರೆ ಕೇಕೆ ಹಾಕಿಕೊಂಡು ಉರುಳಾಡುತ್ತಿದ್ದರು.

ಪಕ್ಕದ ತಮಿಳಿಗೆ ಹೋಗಿ. ತಾಯ್ ನಾಗೇಶ್ ರಿಂದ ಆರಂಭಿಸಿದರೆ ಗೌಂಡುಮಣಿ – ಸೆಂದಿಲ್ ಜೋಡಿ ತಮ್ಮ ನಗೆ ಸಾಮ್ರಾಜ್ಯ ವನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇವರ ಜೊತೆಗೆ ವಿವೇಕ್, ವಡಿವೇಲು ಇವರುಗಳು ಇನ್ನಷ್ಟು, ಮತ್ತಷ್ಟು ನಗಿಸಲೇ ಹುಟ್ಟಿದವರಂತೆ ತಮ್ಮಗಳ ನಟನೆಯನ್ನು ನಗೆಯ ಸಮುದ್ರದ ಭರತದಂತೆ ಉಕ್ಕಿಸಿದ್ದಾರೆ. ಇಲ್ಲಿಯೂ ನಾಯಕ ಅಥವಾ ಪೋಷಕ ನಟರ ನಗೆ ಪಾತ್ರೆ ತುಂಬಿಯೇ ಇರುತ್ತದೆ. ಒಂದು ಉದಾಹರಣೆ.; ನಾಯಕ ದನ ಮೇಯಿಸುವ ಗೌಳಿಗ. ಇವನು ಹೀಗೆ ಅವುಗಳಿಗೆ ಮೇವು ಕೊಡುತ್ತಿದ್ದಾಗ ಅಲ್ಲೊಬ್ಬ ಪ್ರಚಂಡ ಬಂದವನೇ, ಇದಕ್ಕೆ ಮೇವಿನ ಬದಲು ಹಾರ್ಲಿಕ್ಸ್ ಸೇರಿಸಿ ಕೊಡು ಅಗ ಹಾಲಿನ ಬದಲು ನೇರವಾಗಿ ಹಾರ್ಲಿಕ್ಸೇ ಕರೆಯಬಹುದು. ಇದಕ್ಕೆ ಸಾಥ್ ಆಗಿ ಅವ ಐದಾರು ದೊಡ್ಡ ಹಾರ್ಲಿಕ್ಸ್ ಡಬ್ಬಗಳನ್ನೇ ಅವನಿಗೆ ಕೊಡುತ್ತನೆ. ಇದೆಲ್ಲ ನಮ್ಮನ್ನು ಯಾವಾಗಲೂ ನಗಿಸಲೆಂದೇ ಇರುವುದು.

ಹಿಂದಿ ಚಿತ್ರಗಳಿಗೆ ಬಂದರೆ ಜಾನಿವಾಕರ್, ಕೆಸ್ಟೋ ಮುಖರ್ಜಿ, ಮುಖ್ರಿ ಇವರುಗಳನ್ನು ಹೇಗೆ ಮರೆಯುವುದು. ಮುಂದೆ ಮೆಹಮೂದ್. ಇವರಂತೂ ಅಲ್ಲಿ ತಮ್ಮ ಕುಚೇಷ್ಟೆಯಿಂದಲೇ ನಗೆ ಸಾಮ್ರಾಜ್ಯವನ್ನು ಕಟ್ಟಿದರೆ, ಕಿಶೋರ ಕುಮಾರ ಹಾಡು, ನಟನೆ ಎರಡರಲ್ಲೂ ಮಿಂಚಿದವರೇ. ಪಡೋಸನ್ ಚಿತ್ರ ನೋಡಿ. ಇವರಿಬ್ಬರೂ 'ಎಕ್ ಚತುರ ನಾರಿ ಕರಕೇ ಸಿಂಗಾರ್...' ಎನ್ನುತ್ತಲೇ ಜುಗಲಬಂದಿಯಲ್ಲೇ ತಮ್ಮ ಬಡಿ ಹೋಷಿಯಾರ್ ನಟನೆಯಲ್ಲೇ ಹಾಸ್ಯದ ಹೊನಲನ್ನು ನಮಗೆ ಕೊಟ್ಟಿದ್ದಾರೆ. ಖಾದಿರ್‌ಖಾನ್, ಉತ್ಪಲ ದತ್ ಇವರುಗಳು ಗಂಭೀರವಾಗೇ ನಗಿಸಿದ್ದಾರೆ. ಗಬ್ಬರ್ ಸಿಂಗನ' ಅರೇ ಓ ಸಾಂಬಾ' ನಗು ನಮಗೆ ನಗು ತರಿಸಿಲ್ಲವೇ. ಇದನ್ನೆಲ್ಲ ನೋಡುತ್ತಿದ್ದರೆ ಈ ನಗೆ ದಿನಕ್ಕೆ ದಿನ, ಘಂಟೆಗಳ ಲೆಕ್ಕ ಹಾಕಲಾಗುತ್ತದೆಯೇ ? ಖಾದಿರ್‌ಖಾನ್ ರವರ ನಗೆ ದೃಶ್ಯ ಒಂದು ಹೀಗಿದೆ. ಅವರು ವಿಮಾನ ನಿಲ್ದಾಣಕ್ಕೆ ಓಡೋಡಿ



ಬಂದು. ಟಿಕೆಟ್ ಕಿಟಕಿಯಲ್ಲಿ ಮುಖವಿಟ್ಟು ಒಂದು ಟಿಕೆಟ್ ಕೇಳುತ್ತಾರೆ. ಕಿಟಕಿಯ ಹಿಂದಿನ ಲಲನಾ ಮಣಿ ಇಲ್ಲ ಎಲ್ಲಾ ಫುಲ್ ಎನ್ನುತ್ತಾಳೆ. ಆದರೆ, ಇವರದೇ ಹಠ. ಬಸ್ ನಲ್ಲಿ ಸ್ಟಾಂಡಿಂಗ್ ಸೀಟ್ ಕೇಳುವಂತೆ ಅಂಗ ಚೇಷ್ಟೆ ಮಾಡಿ ಅದಾದರೂ ಕೊಡು ಎನ್ನುತ್ತಾರೆ. ಇವರುಗಳ ಜೊತೆಗೆ ಚಾರ್ಲಿ ಚಾಪ್ಲಿನ ತಮ್ಮ ಮೂಕ ಭಾಷ್ಯದ ನಗೆಯಿಂದಲೇ ಸರ್ವಾಧಿಕಾರಿಯನ್ನು ಅಣಕಿಸುತ್ತಾ ನಮ್ಮನ್ನು ನಗಿಸಿದ್ದಾರೆ. ಅದೇ

ರೀತಿ ಡಸ್ಟಿನ್ ಹಾಫ್ ಮನ್ ತನ್ನ ಕಣ್ಣು ಮತ್ತು ದೇಹ ಭಾಷೆಯಲ್ಲೇ ನಗಿಸಿದ್ದಾರೆ. ನಮ್ಮಲ್ಲಿ ಸ್ಟಾಂಡ್ ಅಪ್ ಕಮೆಡಿಯನ್ ಗಳೂ ನಮಗಳಿಗೆ ಸಾಕಷ್ಟು ಮನ ತಿಳಿ ಮಾಡುವ ನಗೆ ಉಣಿಸುತ್ತಿದ್ದಾರೆ. ಅದರಲ್ಲಿ ರಾಘವೇಂದ್ರ ಆಚಾರ್ಯ ಒಬ್ಬರಾದರೆ ಇನ್ನೊಬ್ಬಾಕೆ "ಅಯ್ಯೋ ಶ್ರದ್ದಾ" ಅಂತಲೇ ನಗಿಸುತ್ತಿರುವ ಶ್ರದ್ದಾ ಜೈನ್ ರವರು. ಇವರಿಬ್ಬರ ಸತ್ವ ಪೂರ್ಣ ಸಿಹಿ ನಗೆಗೆ ಸ್ಟಾಂಡಿಂಗ್ ಓವೇಷನ್ ನೀಡಲೇಬೇಕು.

ಜಾನಿ ಲೀವರ್ ಇನ್ನೊಬ್ಬ ಹಾಸ್ಯ ನಟ ಮತ್ತು ಅಗಾಗ್ಗೆ ಕಾಮಿಡಿ ಶೋಗಳನ್ನು ಮಾಡುವವರು. ಅವರು ಹೇಳಿದ ಒಂದು ಪ್ರಸಂಗ ಹೀಗಿದೆ. ಮುಂಬೈ ನ ಅಂದಿನ ಕಾಲದ ಟ್ರಾಫಿಕ್ ಜಾಮ್‌ನಲ್ಲಿ ಕಡ್ಲೆ ಕಾಯಿ ಕೊಂಡು ತಿನ್ನುತ್ತಿದ್ದವರು ಈಗ ಪಿಜ್ಜ, ಬರ್ಗರ್ ಆರ್ಡರ್ ಮಾಡಿ ತಿಂದು ತೇಗಿ ಮುಂದೆ ಹೋಗುತ್ತಾರಂತೆ. ಬೆಂಗಳೂರಾದರೆ ಬಾಳೆಲೆ ಊಟ!! ಜಾನಿ ಲೀವರ್ ರವರ ಇನ್ನೊಂದು ವಿಷಯ ಮುಂಬೈನ ವಿಮಾನ ನಿಲ್ದಾಣ ಬಳಿ ಟ್ರಾಫಿಕ್ ಜಾಮ್ ಆದಾಗ ಒಬ್ಬ ಕಿಲಾಡಿ ಕಂಡುಕೊಂಡ ದಾರಿ ಹೀಗಿದೆ. ಅಲ್ಲಿ ವಿಮಾನ ಪ್ರಯಾಣಕ್ಕೆ ಬರುವವರಿಗೆ ನಿಲ್ದಾಣ ತಲುಪುವ ಧಾವಂತ. ಇದಕ್ಕೆ ಅವ ಹೇಳಿದ್ದು ಅವರನ್ನು ಹತ್ತಿರದ ದೊಡ್ಡ ಮೋರಿಯಲ್ಲಿ ಇಳಿಸಿ ಈಜಿಸಿ ಕರೆದೊಯ್ಯುವೆ ಎಂದು. ಅವರು ಅಲ್ಲಿನ ಗಬ್ಬು ನಾತ ಅಂತ ಮುಖ ಸಿಂಡರಿಸಿದಾಗ ಅವ ಹೇಳಿದ್ದು ಅದಕ್ಕೆ ತಕ್ಕ ಫುಲ್ ಬಾಡಿ ಸೂಟ್ ಹಾಕಿ ಕರೆದೊಯ್ಯುವೆ ಎಂದು ಅದಕ್ಕೊಂದು ಫೀಸ್ ಕೂಡ ನಿಗದಿ ಮಾಡಿದನಂತೆ. ಏರ್ ಪೋರ್ಟ್ ನೋಡಿ ಅದೊಂದು ರೀತಿ ಕಸ್ಟಮರಿ ಕಸ್ಟಮ್ಸ್ ಸುಂಕದಂತೆ.

ಇನ್ನು ನಮ್ಮ ಟಿವಿ ಎಂದರೆ ಮನರಂಜನೆಗಾಗಿ ತಾನೇ. ಅಲ್ಲಿ ನಗಲೇ ಬೇಕು, ಕಾಮಿಡಿ ಕಿಲಾಡಿಗಳು ಹೀಗೆ ಹಲ ಶೀರ್ಷಿಕೆಗಳು ಬರುತ್ತವೆ. ಇಲ್ಲಿ ಬಲವಂತವಾಗಿಯೂ ನಗಲಾಗುವುದಿಲ್ಲ. ಈ ಕಾರ್ಯಕ್ರಮಗಳ ನಡುವೆ ಅಂತರವಿರಲಿ ಎಂದು ಜಾಹೀರಾತುಗಳು ಬರುತ್ತವೆ. ಇದರಲ್ಲಿ ಸಿಗುವ ಮನರಂಜನೆ ಎಲ್ಲಿಯೂ ಸಿಗುವುದಿಲ್ಲ. ಅದೊಬ್ಬ ವೈದ್ಯ ಮಂಚವನ್ನೇ ಕಟ್ಟಿಕೊಂಡು ರೋಗಿಗೇ ಹಲೊ ಡಾಕ್ಟರ್ ಅಂತಾನೆ. ಅವನ ನಿದ್ದೆ ಕಳೆಯಲು ಹಲ್ಲುಜ್ಜ ಬೇಕಂತೆ. ಅದಾವ ಬೆಡ್ ಬ್ರಷ್ ಇದೆಯೋ ಗೊತ್ತಿಲ್ಲ. ಇನ್ನೊಂದು ಆರೆಂಜ್ ಜ್ಯೂಸಾ ಇಲ್ಲ ಅರ್ಧಂಬರ್ಧ ಜೂಸಾ ಅಂತ ಒಂದು ಮಂಗ ಕೇಳತ್ತೆ. ಇಲ್ಲೆಲ್ಲಾ ಜಾಹೀರಾತಿನ ವಸ್ತುಗಳು ಗೌಣವಾಗಿ ಈ ಕಮಂಗಿಗಳ ಕಿತಾಪತಿಯೇ ಹೆಚ್ಚಾಗಿರುತ್ತದೆ. ಮೊನ್ನ ಒಂದು ತೆಳು ಬಿಸ್ಕೆಟ್ ಅಂದರೆ ವೇಫರ್‌ನ ರುಚಿ ನೋಡಿದೆ. ಅದರಲ್ಲಿನ ವಿಶೇಷ ಎಂದರೆ ಅದಕ್ಕೆ ಉಪ್ಪು ಸವರಿದ್ದರು. ಅದರ ಜಾಹೀರಾತಿನಲ್ಲಿ ನಿಮ್ಮ ವೇಫರ್ ನಲ್ಲಿ ಉಪ್ಪು ಇದೆಯೇ ಎಂದು ವಿಚಾರಿಸಿಕೊಳ್ಳಬಹುದೇನೋ.


ವ್ಯಂಗ್ಯ ಚಿತ್ರಗಳ ಜನಕರಾದ ಆರ್.ಕೆ ಲಕ್ಷ್ಮಣ್ ಕೆ.ಆರ್. ಸ್ವಾಮಿ, ನಾಡಿಗ್, ಇವರುಗಳ ಚಿತ್ರಣ ನೋಡಿ ನಗದಿದ್ದವನು ಮನುಷ್ಯನೇ ಅಲ್ಲ. ಇವರುಗಳು ಅಂದಂದಿನ ವಿದ್ಯಮಾನವನ್ನು ಹೇಳುತ್ತಲೇ ನಗೆ ಬುಗ್ಗೆ ಹಾರಿಸುತ್ತಿದ್ದರು. ಕೆ.ಶಂಕರ ಪಿಳ್ಳೈ ಯವರ ಶಂಕರ್ಸ್ ವೀಕ್ಲಿ ಅಂದಿನ ಗಣ್ಯ ವ್ಯಕ್ತಿಗಳ ಅಪರೂಪದ ದೇಹ ಭಾಷೆಯನ್ನು ನಮಗೆ ನೀಡುತ್ತಿದ್ದರು. ಅದನ್ನು ಕಂಡ ಆ ವ್ಯಕ್ತಿಗಳಿಗೆ ಅದು ಹೊಟ್ಟೆ ಹುಣ್ಣಾಗುವಂತೆ ಆಗುತ್ತಿತ್ತು. ಇವರ ಸಾಲಿಗೆ ಸೇರಿದವರು ಅಬು ಅಬ್ರಹಾಂ. ಈಗಿನ ಸುಜಿತ ಶೇಖರ್ ಮತ್ತು ಇನ್ನೂ ಅನೇಕರು. ಲಕ್ಷ್ಮಣ್ ರವರ ಮಿ.ಸಿಟಿಜನ್



ಯಾರೂ ಮರೆಯಲಾಗದ ಸಭ್ಯ ನಾಗರೀಕ.

ಬರಹ ಜಗತ್ತಿಗೆ ಬಂದರೆ ಡಾ .ರಾ.ಶಿವರಾಮ್ ರವರ ಕೊರವಂಜಿ ದಶಕಗಳ ಕಾಲ ಓದುಗರನ್ನು ರಂಜಿಸಿ ಈಗ ಅವಳ ಮಗಳಾಗಿ ಅಪರಂಜಿ ನಮಗೆ ತೆಳು ಹಾಸ್ಯದ ನಗೆಯೂಟವನ್ನು ಇಂದಿಗೂ ಉಣ ಬಡಿಸುತ್ತಿದ್ದಾಳೆ. ಇದೇ ರೀತಿ ಹಲವು ಪತ್ರಿಕೆಗಳು, ಮಾಸಿಕ, ವಾರ ಪತ್ರಿಕೆಗಳು ನಾವು ನಗಲೆಂದೇ ನಗೆ ಪುಟಗಳ ತಯಾರು ಮಾಡಿರುತ್ತಾರೆ. ಅದರಲ್ಲೂ ನಾ ಕಸ್ತೂರಿಯವರ ಟಿ.ಸುನಂದಮ್ಮನವರ ಹಾಸ್ಯದ ಹೊನಲಿನ ಲೇಖನಿಯ ಮೊನಚು ಎಂದೆಂದಿಗೂ ಮೊಂಡಾಗುವುದೇ ಇಲ್ಲ. ಇಲ್ಲಿ ಬೀಚಿ, ರಾಜರತ್ನಂ ಇವರುಗಳ ಹಾಸ್ಯದ ಮೊನಚು ಮತ್ತೆ ಮಾ.. ಹಿರಣ್ಣಯ್ಯ ನವರ ನಾಟಕದ ಭಾಷೆ, ಏಬಎಸ್ ಮೂರ್ತಿಯವರ ಮರ್ತೆ ಸರ್........ ಬಿಟ್ಟಿದ್ದೆ ಎಲ್ಲಾ ನಗೆಯ ದೋಣಿಯಲ್ಲೇ ತೇಲಿಸಿಬಿಡುತ್ತದೆ.

ಹೀಗೆ, ನಾವು ನಗೆ ದಿನವನ್ನು ಒಂದು ದಿನವಾಗಿ ಮಾಡಲಾಗಲ್ಲ ಮತ್ತು ಮಾಡಬಾರದು. 'ಅಳುವ ಕಡಲೊಳು ನಗೆಯ ಹಾಯಿ ದೋಣಿ' ಎಂಬ ಕವಿವಾಣಿಯಂತೆ ನಗುವುದು ನಮ್ ಧರ್ಮ. ಅದಕ್ಕೆ ಏನೂ ಸಾಹಸ ಬೇಕಿಲ್ಲ. ನಮ್ಮ ದಿನ ನಿತ್ಯದ ಬದುಕಿನಲ್ಲೇ ನಗು ನಮಗೆ ಮೊಗೆದಷ್ಟೂ ಸಿಗುತ್ತದೆ. ಈ ರೀತಿಯ ಉತ್ತಮ ಆರೋಗ್ಯದ ದಿವ್ಯೌಷಧ ಯಾವುದೇ ವೈದ್ಯ ಅಥವಾ ಔಷಧಿಗಳು ಅದನ್ನು ನಮಗೆ ತೇಯ್ದು ತಿನಿಸಲಾರವು. ವಿಲಿಯಮ್ ಫ್ರಾಯ್ ಎಂಬ ನಗೆ ಚಿಂತಕ ಹೇಳುವಂತೆ ಆರೋಗ್ಯಕರ ಜೀವನಕ್ಕೆ ದಿನದಲ್ಲಿ ಹದಿನೈದು ನಿಮಿಷಗಳಾದರು ನಗಬೇಕು. ಅದು ಮತ್ತೊಬ್ಬರನ್ನು ನೋಡಿ ನಗುವ ಅಪಹಾಸ್ಯವಾಗಿರಬಾರದು. ಬದಲಿಗೆ ನಮ್ಮನ್ನು ನೋಡಿ ನಮ್ಮ ಚರ್ಯೆಯಲ್ಲೇ ನಗಬೇಕು. ರಾತ್ರಿಯಲಿ ಮಳೆ ಬಂದು ನಿನ್ನ ನೆನಪು ಸುರಿದಿದೆ ಅಂತ ನಗೆ ಎಂಬುದು ಸದಾ ಸುರಿಯುವ ನಗೆ ಮಲ್ಲಿಗೆಯ ಮಳೆಯಾಗಿರಬೇಕು ಅಲ್ಲವೇ.



# ಹಿರಿಯರ ತೀರ್ಮಾನ

**ಡಾ. ಶ್ಯಾಮಲಾ ರವಿಶಂಕರ್**

ರಿಟೈರ್ಮೆಂಟ್ ಹತ್ತಿರ ಆಗ್ತಾ ಇದ್ದಹಂಗೆ ನನ್ನ ಸಹೋದ್ಯೋಗಿ ಒಬ್ಬರು ಇದು ನನ್ನ ನಿಜವಾದ ವಯಸ್ಸಲ್ಲ, ಅನ್ಯಾಯವಾಗಿ ಎರಡು ವರ್ಷ ಮುಂಚೇನೆ ರಿಟೈರ್ ಆಗತಿದ್ದೀನಿ, ಅಂದರು. ನಾವೆಲ್ಲ ಅವರನ್ನ ಒಂದೇ ಸಲ ಕೇಳಿದ್ವಿ : ಯಾಕೆ ನೀವು ಇದನ್ನ ಮೊದಲೇ ಹೇಳಲಿಲ್ಲ, ಅಂದ್ರೆ, ಕೆಲಸಕ್ಕೆ ಸೇರಿದಾಗ ಅಂತ. ಏನೋ ಮಾತು ಮುಂದುವರೀತು, ಬಿಡಿ. ನಾನಂತೂ ಬೇಗ ರಿಟೈರ್ ಆದ್ರೆ ಒಳ್ಳೆಯದೇ, ಅದೂ ಬೇಗ ಸೇರಿದ್ದಾಗ, ಅದ್ಕಕೆ ಯಾಕೆ ತಲೆ ಕೆಡಿಸ್ಕೊ ಬೇಕು ? ಈ ವೃತ್ತಿಪರ ತರಲೆ ತಾಪತ್ರಯಗಳೂ, ಟೆನ್ಷನ್ಗಳೂ ಹಾಗೂ ಜ್ಯೂನಿಯರ್ಸು ನಮ್ಮ ಕುರ್ಚಿಗಾಗಿ ಕಾದುಕೊಂಡಿದ್ರೂ ರಿಟೈರ್ಮೆಂಟ್ ಪಾರ್ಟಿಲಿ ನಮ್ಮನ್ನ ಹೊಗಳೋದು ಇವೆಲ್ಲ ಎಂದೋ ಆಗೋದು ಇಂದೇ ಆಯಿತು, ಅಷ್ಟೇ. ಹಾಯಾಗಿ ಮನೇಲಿ ಟೈಮ್ ಸೆನ್ಸ್ ಇಲ್ಲದೆ, ಗಡಿಯಾರ ನೋಡೋದು ಇಲ್ಲದೆ ಇರಬಹುದು, ಇದು ನನ್ನ ವಾದ. ನನ್ನ ಸಹೋದ್ಯೋಗಿ ಕಾಳಜಿ ಏನಪ್ಪಾ ಅಂದ್ರೆ, ಪೇ ಕಮಿಷನ್ ಬಂದ ಮೇಲೆ ಆಗಿದ್ದಿದ್ರೆ .., ಹೇಗೂ ಪೋಸ್ಟ್ ವೇಕೆಂಟ್ ಆಗತ್ತೆ ಅಂತ ಹೋಗೋಕೆ ಮುಂಚೆ ಪ್ರಮೋಷನ್ ಒಂದು ಕೆಲವರಿಗೆ ಸಿಗತ್ತಲ್ಲ ಅದಾದ್ರೂ ದಕ್ಕಿಸಿಕೊಂಡ್ರೆ.. ಅಂತ ಎಲ್ಲರನ್ನೂ ನಗಿಸಿ ಪೆನ್ಷನ್ ಹೆಚ್ಚಿಸಿಕೊಳ್ಳೋ ಬಗ್ಗೆ ಚರ್ಚಿಸ್ತಾ ಇದ್ದರು. ಇವೆಲ್ಲ ತಮಾಷೆಗೆ, ಅಷ್ಟೇ .. ಸಂ ಟೈಮ್ ಪಾಸ್.:

ಈ ಅಸಲಿ ನಕಲಿ ಬರ್ತ್ ಡೇಗಳು ಹೇಗಾಯಿತು ಅಂತ ಹೇಳೋಕೆ ಶುರು ಮಾಡಿದರು .ಅರ್ಥಾತ್ ಹುಟ್ಟಿದ್ದು ಅಸಲಿನೇ, ಡಿ ಓ ಬಿ ಕೊಟ್ಟಿರೋದು ನಕಲಿ ಆದದ್ದು ಅವರ ತಾತನಿಂದ ಅಂತ : ನಮ್ಮ ಶಾಲೆ ನಮ್ಮ ಒಟ್ಟು ಕುಟುಂಬವೆಂಬ ಸತ್ರದಿಂದ ನಾಲ್ಕು ಫರ್ಲಾಂಗ್ ದೂರ. ನಮ್ಮ ಮನೆ ಹಾದು ಹೋಗ ಬೇಕು .. ನಮ್ಮ ತಾತ ಏನು ಓದಿದ್ರೋ, ಏನು ಕೆಲಸ ಮಾಡಿದ್ರೋ ಗೊತ್ತಿಲ್ಲ, ಆದ್ರೂ ಎಲ್ಲರ ಮೇಲೂ ವಿಶ್ವಾಸ ಪೂರ್ವಕ ಜೋರು, ಜಬರ್ದಸ್ತು, ದಬ್ಬಾಳಿಕೆ ಮಾಡ್ತಿದ್ರು. ತಮಾಷೆ ಅಂದ್ರೆ ಎಲ್ಲರೂ ಅವರ ಮಾತನ್ನು ಕೇಳೊವ್ರು, ನಡೆದು ಕೊಳ್ಳೊವರೂ ಕೂಡ ..ಈ ಕಾಲದಲ್ಲಾದರೆ "ಬುಲ್ಲಿ" ಅನ್ನೋವರೇನೋ, ಆದರೆ ಆ ಕಾಲದಲ್ಲಿ, ಅಂದರೆ, ಅವರ ತಾತನ ಕಾಲದಲ್ಲಿ ಇನ್ನೂ ಆ ಪದ ನಿಘಂಟಿನಲ್ಲಿರಲಿಲ್ಲ ಅಂತ ಕಾಣತ್ತೆ. ಇನ್ನು ಬರ್ತ್ ಸರ್ಟಿಫಿಕೇಟ್ ಕಂಡರಿಯದ ಕೇಳರಿಯದ ಮಾತು., ಈಗ ಆ ಕಾಲಕ್ಕೆ ಜಾರೋಣ.

ನನ್ನ ಸಹೋದ್ಯೋಗಿ ವಿಪರೀತ ಚೇಷ್ಟೆ ಮಾಡಿ ಎಲ್ಲರನ್ನೂ ಸುಸ್ತು ಹೊಡಿಸ್ತಾ ಇದ್ದ ಕಾರಣ ಸುಸ್ತು ವಿನಿಮಯ ಹಾಗೂ ಚೇಷ್ಟೆ ಸ್ಥಳಾಂತರ ಮಾಡಿ ಸ್ವಲ್ಪ ಸಮಯವಾದರೂ ಮನೆ ಯಲ್ಲಿ ಶಾಂತಿ ಇರಲಿ ಎನ್ನುವ ಉದ್ದೇಶದಿಂದ ಮೂರು ವರ್ಷದವನನ್ನ ಎರಡು ವರ್ಷ ಹೆಚ್ಚಿಸಿ ಒಂದನೇ ತರಗತಿಗೆ (ಪ್ರೀಸ್ಕೂಲ್, ಕೆ ಜಿ ಗಳ ಗೋಜಿಲ್ಲದ ಕಾಲವಾದ್ದರಿಂದ) ಸೇರಿಸಿದರಂತೆ. ಊಹೆಗೆ ತಕ್ಕಂತೆ ಈ ಹುಡುಗ ಕ್ಲಾಸಿಗೆ ಚಿಕ್ಕವನಾದರೂ ಚೇಷ್ಟೆಗ್ಯಾಂಗೊಂದನ್ನು ಒಗ್ಗೂಡಿಸಿದ ಕೀರ್ತಿವಂತ . ಇವನಿಗೆ ಶಿಕ್ಷೆ ಬೆದರಿಕೆ ಮಾತ್ರ . ಶಿಕ್ಷೆ ಕೊಟ್ಟವರನ್ನ ಮನೆ ಮುಂದೆ ಕೂತು ಮನೆಗೆ ಹಿಂತಿರುಗಿತ್ತಿದ್ದವರನ್ನ ಹಿಡಿದು,



"ಏನಪ್ಪಾ .. ನನ್ನ ಮೊಮ್ಮಗನಿಗೆ ಶಿಕ್ಷೆ ಕೊಟ್ಟೆಯಂತೆ, ನನಗೆ ಹೇಳಿದ್ದಿದ್ರೆ ನಾನು ನೋಡ್ಕೋತಿದ್ದೆ, ಏನೋ ಮಕ್ಕಳು... ಚಿಕ್ಕವು ತರಲೆ ಮಾಡತ್ತವೆ, ಅವುಗಳ ಮೇಲೆ ತೋರಿಸೋದಾ ನಿನ್ನ ಪ್ರತಾಪ ? ಹುಡುಗರನ್ನ ಹಿಡಿತದಲ್ಲಿಡೋಕೆ ಬರದಿದ್ದರೆ ಎಲ್ಲಾದ್ರೂ ಗುಮಾಸ್ತೆ ಕೆಲಸ ಹುಡುಕ್ಕೋ "ಎಂಬೋ ಪ್ರೀತಿ ಪೂರ್ವಕ ಉಪದೇಶ!

ಇವನಿಗೊಬ್ಬ ಕಸಿನ್, ಅವನ ಕಥೆ ಇವನಿಗೆ ದಳ್ಳುರಿ. ಒಂದಾನೊಂದು ದಿನ ಅವನ ಕೈಲೊಂದು ಚೀಟಿ ಕೊಟ್ಟು ಇದನ್ನ ಹೆಡ್ ಮೇಷ್ಟ್ರಿಗೆ ಕೊಡು ಅಂತ ತಾತ ಅಂದರಂತೆ. ಅಂದಿನ ಪತ್ರ ವ್ಯವಹಾರ ಎಲ್ಲ ಇಂಗ್ಲಿಷ್ನಲ್ಲೇ. ಅದೇನಪ್ಪಾ ಅಂದ್ರೆ "ಮೀಟ್ ಮಿ ಆನ್ ಯುವರ್ ವೇ ಹೋಂ "ಸರಿ, ಭಯದಿಂದಲೋ ಭಕ್ತಿ ಇಂದಲೋ ವಿಶ್ವಾಸದಿಂದಲೋ ಆತ ಬಂದಾಗ, ಕಾಫಿ ಉಪ್ಪಿಟ್ಟು ಸರಬರಾಜಾದ ಮೇಲೆ," ಅಲ್ವೋ, ಮಾಧವ. ನೀನ್ಯಾಕೆ ನನ್ನ ಮೊಮ್ಮಗನ ವಯಸ್ಸನ್ನ ತಿದ್ದಿದ್ದು ? ತರಲೆ ಮುಂಡೆದೇ ನೀನು ಚಿಕ್ಕಂದಿನಿಂದ ತರ್ಲೆನೇ. ನಿನ್ನ ಜಾತಕ ನಾನೆ ತಾನೇ ಬರೆದಿದ್ದು. ಅಷ್ಟೇ ಅಲ್ಲ ನಿಮ್ಮಪ್ಪ, ನಿಮ್ಮ ಕುಲ..."ಅಂತಅವರ ಕುಲಕ್ಕೇ ಮಂಗಳಾರತಿ ಎತ್ತಿ "ನಾನು ಕೊಟ್ಟ ಹಾಗೆ ಬರ್ಕೊ" ಅಂತ ಅವನ್ನ ತರಾಟೆಗೆ ತೊಗೊಂಡರಂತೆ. ಅವನೇನು ಸುಮ್ನೆ ಇರತಾನಾ? ಅದೇ ಸಲುಗೆಯಿಂದ," ಅಲ್ಲ, ಮಾಮಾ, ಅವನು ನನ್ನ ಮಗಳಿಗಿಂತ ಐದು ದಿವಸ ಚಿಕ್ಕವನೂಂತ ನನಗೆ ಗೊತ್ತಿಲ್ವಾ ? ನೀವು ತಪ್ಪಾಗಿ ಹಾಕಿದ್ರೆ ಹೇಗೆ, ಅದೂ ಎರಡು ವರ್ಷ? ಮಾಮ, ಒಪ್ಕೊಳ್ಳಿ ನಿಮಗೆ ಅರಳು ಮರಳು ಅಂತ "ಅಂತ ತಾತನಿಗೆ ಮರುಸವಾಲು ಹಾಕಿದ. "ಏಯ್, ಸ್ವಲ್ಪ ಶಾಂತವಾಗು. ನನಗೆ ಅರಳು ಇಲ್ಲ ಮರಳು ಇಲ್ಲ. ಇವನ ಪರಿಸ್ಥಿತಿ ನೋಡು, ವರ್ಷದಲ್ಲಿ ಎಷ್ಟೋ ದಿನ ಉಬ್ಬಸ, ಕ್ಲಾಸಿರಲಿ ಟೆಸ್ಟಿದ್ರೂ ಸ್ಕೂಲಿಗೆ ಹೋಗೋಕಾಗೋಲ್ಲ. ಇನ್ನು ಪಾಠ ಏನು ಕಲೀತಾನೆ ? ಇನ್ನ ಫೇಲ್ ಆದ್ರೆ ? ಅದಕ್ಕಾಗೆ ನಾನು ಕಡಿಮೆ ವಯಸ್ಸು ಕೊಟ್ಟಿರೋದು. ಹಿರಿಯರಿಗೆ ತೋಚೊ ಹಾಗೆ ನಿಮ್ಮ ಮಂದ ಬುದ್ಧಿಗಳಿಗೆಲ್ಲಿರತ್ತೆ ಮುಂದಾಲೋಚನೆ. ಸರಿ, ನಾನು ಹೇಳಿದ ಹಾಗೆ ಮಾಡು" ಅಂತೂ ಇಂತೂ ಇಬ್ಬರೂ ಒಪ್ಪಂದ ಮಾಡ್ಕೊಂಡು" ನ ಮೇರಾ ನ ತೇರಾ "ಅಂತ ಚೌಕಾಸಿ ಮಾಡಿ ಒಂದು ವರ್ಷ ಕಡಿಮೆ ವಯಸ್ಸು ಮಾಡಿದರು, ಆ ನನ್ನ ಕಸಿನ್ಗೆ .. ಅವನು ಬೆಳೆದ ಹಂಗೆ ಉಬ್ಬಸನೂ ಓಡಿಹೋಯಿತು (ಬಹುಶಃ ನಮ್ಮ ತಾತನಿಗೆ ಹೆದರಿಕೊಂಡೇ ಇರಬೇಕು), ಅವನು ಫೇಲಾಗೋದಿರಲಿ, ಡಬಲ್ ಪ್ರಮೋಷನ್ನೋ ತೊಗೊಂಡ ಪ್ರಚಂಡ ಬುದ್ಧಿವಂತ!. ಸ್ಕಾಲರ್ಶಿಪ್ನಲ್ಲೇ ಓದಿ ಕೆಲಸಕ್ಕೂ ಬೇಗ ಸೇರಿ ದುಡ್ಡು ಮಾಡ್ಕೊಳ್ತಾ ಇದ್ದಾನೆ." ನಮ್ಮ ಸಹೋದ್ಯೋಗಿಯ ಪ್ರಾಬ್ಲಮ್ಮು ಅವನ ಕಸಿನ್ನ ಏಳ್ಗೆ !

ಇವೆಲ್ಲ ಆ ಕಾಲದಲ್ಲಿ ನಡೀತಾ ಇತ್ತು, ನಾನೇನು ಅದರ ಸತ್ಯಾಸತ್ಯತೆ ಬಗ್ಗೆ ವಿಮರ್ಶಿಸ್ತಾ ಇಲ್ಲ. ಈ ಎರಡೂ ರೀತಿಯ ಕೇಸುಗಳನ್ನು ಕಂಡೂ ಇದ್ದೇನೆ. ಹಲವಾರು ದೇಶಗಳಲ್ಲಿ ಹೆಚ್ಚಗೆ ಕೊಟ್ರೂ ತಪ್ಪು, ಇಲ್ಲ ಕಡಿಮೆ ಕೊಟ್ರೂ ತಪ್ಪೇ.

ಮೊನ್ನೆ ನನ್ನನ್ನಪಕ್ಕದ ಮನೆಯಾಕೆ ಅವರ ಸೊಸೆಗೆ ಪರಿಚಯಿಸ್ತಾ, "ವಾಲಂಟರಿ ರಿಟೈರ್ಮೆಂಟ್ ತೊಗೊಂಡು ಬಂದು ಇಲ್ಲಿ ನೆಲಿಸಿದ್ದಾರೆ" ಅಂದರು. ತಕ್ಷಣ ನಾನು 'ಇಲ್ಲಮ್ಮ, ಸೂಪರ್ ಅನ್ಯುಯೇಶನ್ ಆಗಿ ಬಂದೆ ಇಲ್ಲಿಗೆ 'ಅಂತ ಆಕೇನ ತಿದ್ದಿದೆ.



# ನೆನಪಿನ ಶಕ್ತಿ ಜಾಸ್ತಿ ಇರಲಿ, ನಾಲಿಗೆಯುದು ಕಡಿಮೆ ಆಗಲಿ !

**ಸಹನ ಪ್ರಸಾದ್**

"**ನಾ**ಣಿ ಎಂದರೆ ನೆನಪಿನ ಗಣಿ!" ಎಂದು ಗೆಳೆಯ, ಗೆಳತಿಯರೆಲ್ಲ ಹೊಗಳಿದರೆ ನಾಣಿಗೆ ಹೆಮ್ಮೆ. 60 ದಾಟಿ, ರಿಟೈರ್ ಆದ ಮೇಲೆ ಅವನು ಸುಮ್ಮನೆ ಕುಳಿತಿಲ್ಲ. ಸುಮಾರು ವಾಟ್ಸಪ್ ಗುಂಪಿನ ಸದಸ್ಯತ್ವ, ಅಡ್ಮಿನ್ ಆಗಿರುವ ಅವನಿಗೆ ವಿಪರೀತ ಕೆಲಸ. ಹುಟ್ಟು ಹಬ್ಬದ ದಿನ, ಮದುವೆ ವಾರ್ಷಿಕೋತ್ಸವ ಇತ್ಯಾದಿ ಸಂದರ್ಭಗಳಲ್ಲಿ ಅವರ ಬಗ್ಗೆ ಒಂದು ಮಹತ್ವದ ವಿಷಯಗಳನ್ನು ಹೇಳುವುದು ಅವನ ಪರಿಪಾಠ. ಕಾರಣ ಅವನಿಗೆ ಎಲ್ಲರ ಬಗ್ಗೆಯೂ, ಎಲ್ಲವೂ ನೆನಪಿದೆ. 4 ತರಗತಿಯಲ್ಲಿ ಓದುತ್ತಿದ್ದಾಗ, ತನ್ನ ಖಾಸಾ ಗೆಳೆಯ ನವೀನ ಚಡ್ಡಿ ಹಾಕುವುದನ್ನು ಮರೆತು, ಹಾಗೆಯೇ ಸ್ಕೂಲಿಗೆ ಬಂದಿದ್ದು, ಈಗ ನವೀನನ ಜನುಮದಿನದ ಹಾರೈಕೆಗಳೊಡನೆ ಪೋಸ್ಟ್ ಮಾಡಬೇಕು. 8ನೇ ತರಗತಿಯಲ್ಲಿದ್ದಾಗ ತನ್ನ ಕ್ಲಾಸಿನ ವೇದಾ  ಹಾಗೂ ಪೀಟಿ ಟೀಚರ್  ಪ್ರೀತಿ ಮಾಡಿದ್ದು ವೇದಾಳ ನಿವೃತ್ತಿ ದಿನದ ಕೋರಿಕೆಯೊಡನೆ  ನೆನಪಿಸಬೇಕು. ಆದರೆ ಡೈರೆಕ್ಟ್ ಆಗಿ ಅಲ್ಲ. ಕಾರಣ, ಅದೇ ಗುಂಪಿನಲ್ಲಿರುವ ಅವಳ ಹಾಲಿ ಗಂಡ ಮೋಹನನಿಗೆ ಗೊತ್ತಾಗದಂತೆ ಹಾಸ್ಯಮಯವಾಗಿ ಹೇಳಬೇಕು. ಡಿಗ್ರಿ ಓದುತ್ತಾ ಇದ್ದಾಗ ಸಂಪ್ರದಾಯಸ್ಥರ ಮನೆಯ  ರವಿ, ಅನ್ಯ ಧರ್ಮೀಯಳಾದ ಮೊನಿಕಾಳನ್ನು ಪ್ರೀತಿಸಿದರೂ, ಅವಳ ಬಾಯಿಯಿಂದ ಬಂದ ಮೀನಿನ ವಾಸನೆಗೆ ಹೆದರಿ, ಪ್ರೇಮ ತ್ಯಾಗ ಮಾಡಿದ್ದು, ಕೆಲಸಕ್ಕೆ ಸೇರಿದ ಮೊದಲನೆಯ ದಿನದ ಸಂಜೆ, ಸಿಕ್ಕಾಪಟ್ಟೆ ಗುಂಡು ಹಾಕಿ, ಪೋಲೀಸರ ಕೈಗೆ ಸಿಕ್ಕು, 3–4 ತಾಸು ಠಾಣೆಯಲ್ಲಿ ಕಳೆದ ರಾಜುವಿನ ಮದುವೆದಿನದ ಹಾರೈಕೆಗಳೊಂದಿಗೆ ಲಘುವಾಗಿ ಹೇಳಬೇಕು...

ನಾಣಿಗೆ ತನ್ನ ನೆನಪಿನ ಶಕ್ತಿಯ ಬಗ್ಗೆ ಅತಿ ಹೆಮ್ಮೆ. ನಿನ್ನೆ ತಿಂದ ಊಟದ ರುಚಿಯಿಂದ ಹಿಡಿದು, 55 ವರ್ಷದ ಹಿಂದೆ ನಡೆದ  ಮಾತುಗಳವರೆಗೆ ಎಲ್ಲವನ್ನೂ ಕರಾರುವಾಕ್ಕಾಗಿ ನೆನಪಿಟ್ಟುಕೊಳ್ಳುತ್ತಿದ್ದ. ಇದುವರೆಗೆ ನಡೆದ ಸಣ್ಣ, ಪುಟ್ಟ ಘಟನೆಯಿಂದ ಹಿಡಿದು, ದೊಡ್ಡ ವಿಷಯಗಳವರೆಗೂ ಅವನ ಜ್ಞಾನ ಭಂಡಾರ! ಆದರೆ, ಅವನ ಹೆಂಡತಿ ಮೀನಿ ಅರ್ಥಾತ್ ಮೀನಾಕ್ಷಿಗೆ ಇದು ಬಹಳ ಸಿಟ್ಟು ತರುವ ವಿಷಯ. "ಮದುವೆಯಾದ ಹೊಸತರಲ್ಲಿ ನೀನು ಮಾಡುವ  ಚಪಾತಿ ಸೀದು ಹೋಗಿರುತ್ತಿತ್ತು" ಎಂದು ಶುರುವಾಗಿ, ಮೊದಲ ಮಗ ಜನಿಸಿದಾಗ, ಕೇವಲ 19 ವರುಷದ ನೀನು "ಈ ಮಗು ಬೇಡ ನಂಗೆ, ಒಂದೇ ಸಮನೆ ಅಳುತ್ತದೆ, ಮಲಗಲು ಬಿಡುವುದಿಲ್ಲ" ಎಂದು ಹಠ ಮಾಡಿದ್ದೆ ಎಂದು  ಹೇಳಿದಾಗ ಕೋಪ ಬರುತ್ತಿತ್ತು. ಜತೆಗೆ, ನಿನ್ನ 30ನೇ ವರುಷದ ಹುಟ್ಟಿದ ಹಬ್ಬದ ದಿನ ಉಟ್ಟಿದ್ದ ಸೀರೆಯಲ್ಲಿ ತುಂಬಾ ಮುದ್ದಾಗಿ ಕಾಣುತ್ತಾ ಇದ್ದೆ,  ನನ್ನ 40ನೇ ಹುಟ್ಟುಹಬ್ಬದ ದಿನ ಮಾಡಿದ ಹೋಳಿಗೆ, ಆಂಬೊಡೆ ಸಕತ್ ಆಗಿ ಇತ್ತು, ಎಂದು ಸಹ ಹೇಳುತ್ತಿದ್ದರೂ, ಮಾಡಿದ ಪ್ರತಿಯೊಂದು ತಪ್ಪನ್ನೂ ಮೆದುಳಲ್ಲಿ ಇಟ್ಟಿದ್ದ ಗಂಡನ ಬಗ್ಗೆ ಕೋಪ ಉಕ್ಕುತ್ತಿತ್ತು.  ದುರಾದೃಷ್ಟವಶಾತ್ ಒಳ್ಳೆಯದಕ್ಕಿಂತ ಕೆಟ್ಟದ್ದೇ ಜಾಸ್ತಿ ನೆನಪಿನಲ್ಲಿ ಉಳಿದಾಗ, ಅದರದೇ ಮಾತು ಬರುತ್ತಿತ್ತು. ಹೀಗೆ ಹಲವಾರು ಸಲ , ಸಣ್ಣ ನೆನಪಿನಿಂದ ಮನೆ ರಣರಂಗವಾಗುತ್ತಿದ್ದೂ ಉಂಟು!" ಸ್ವಾಮಿ, ಈ ನೆನಪಿನ ಬಂಡವಾಳ ಸಾಕು, ದಯವಿಟ್ಟು ಸುಮ್ಮನಿರಿ,' ಎಂದು ಹಲವಾರು ಸಲ ಹೇಳಿದರೂ, ನಾಣಿ ಕೇಳುತ್ತಲೇ ಇರಲಿಲ್ಲ.



ಆದರೆ ಇತ್ತೀಚಿಗೆ ಅವನ ನೆನಪಿನಿಂದ ಹಲವಾರು ಸಮಸ್ಯೆಗಳು ಹುಟ್ಟಿಕೊಂಡವು. ಇವನ ನರ್ಸರಿ ಗುಂಪಿನಲ್ಲಿ, ತನ್ನ ಸ್ನೇಹಿತ ಸೀನ ಚಡ್ಡಿ ಒದ್ದೆ ಮಾಡಿಕೊಂಡಿದ್ದು ನೆನಪಿಸಿ, "ಹುಟ್ಟು ಹಬ್ಬದ ಶುಭಾಷ್ಯಗಳು, ಕಣೋ, ಈಗಲಾದರೂ ನೀನು ಸದಾ ಒಣಗಿದ್ದ ಚಡ್ಡಿ ಹಾಕುತ್ತಿರುವೆ ಎಂದು ನಂಬಿದ್ದೇನೆ" ಎಂದು ಮೆಸೇಜು ಮಾಡಿದಾಗ ಅಭಾಸವಾಯಿತು. ಕಾರಣ, ಇತ್ತೀಚಿಗೆ ಸೀನನಿಗೆ ಮೂತ್ರದ ಸಮಸ್ಯೆ ಉಂಟಾಗಿ ಸುಮಾರು ಸಲ ಪ್ಯಾಂಟ್ ಅಥವಾ ಪಂಚೆ ಹಸಿಯಾಗುತ್ತಿತ್ತು. ಸೀನ ವಾಟ್ಸಪ್ಪ್ ಗುಂಪಿನಲ್ಲಿ ಜಗಳವಾಡಿ, ಸುಮಾರು ಜನ ನಾಣಿಗೆ ಬೈದರು.



ಮೊಬೈಲ್ ಹಿಡಿದು ಮಂಕಾಗಿ ಕೂತಿದ್ದ ಗಂಡನನ್ನು ಬಲವಂತವಾಗಿ ಮೀನಿ ಎಬ್ಬಿಸಬೇಕಾಯ್ತು. ಅಷ್ಟರಲ್ಲಿ ಮತ್ತೊಂದು ನೋಟಿಫಿಕೇಶನ್. ಮೊನ್ನೆ ತಾನೇ ತೀರಿ ಹೋದ ನನ್ನಪ್ಪ ತಮ್ಮ ವಿಲ್ ನಲ್ಲಿ  ನಮ್ಮ ಮನೆಯ ಕುಕ್ಕರ್ ಯಾರಿಗೆ ಬಿಟ್ಟಿದ್ದಾರೆ?, ಎಂದು ಕೇಳಿದ ಒಬ್ಬ ಸಹಪಾಠಿಯ ಸುಪುತ್ರ. "ನನಗೆ ಹೇಗಯ್ಯಾ ಗೊತ್ತಿರುತ್ತದೆ?" ಎಂದು ಕೇಳಿದಾಗ, ಅಪ್ಪ ಹೇಳಿದ್ರು ನೀವೇ ಸಹಿ ಹಾಕಿದ್ದಂತೆ, ನಿಮಗೆ ನೆನಪಿನ ಶಕ್ತಿ ಹೆಚ್ಚು, ಅದಕ್ಕೆ ಕೇಳಿದೆ ! ಎಂದಾಗ ನಾಣಿಗೆ ಮಾತನಾಡಲು ತೋಚಲಿಲ್ಲ.

"ಅಲ್ಲಯ್ಯ, ಇಷ್ಟು ವಯಸ್ಸಾಗಿದೆ. ಏನು ಮಾತನಾಡಬೇಕು, ಯಾವಾಗ ಸುಮ್ಮನೆ ಇರಬೇಕು ಎಂದು ಗೊತ್ತಾಗುವುದಿಲ್ಲವಾ?" ಎಂದು ತನ್ನ ಮಾಜಿ ಬಾಸ್ ರವೀಂದ್ರ ಕರೆ ಮಾಡಿದಾಗ ತಬ್ಬಿಬ್ಬಾದ. "ನಾನು 35 ವರುಷದ ಹಿಂದೆ 100 ರೂಪಾಯಿ ಲಂಚ ತೆಗೆದುಕೊಂಡಿದ್ದೆ ನಿಜ. ಅದನ್ನು ನನ್ನ ಪ್ರೈವೇಟ್ ಚಾಟ್ ನಲ್ಲಿ ಹಾಕಿ, ಆ 100 ರೂಪಾಯಿಗಳು, ನಿಮ್ಮ 70 ಹುಟ್ಟಿದಹಬ್ಬಕ್ಕೆ ಎಷ್ಟು ಬಡ್ಡಿ ಕೊಟ್ಟಿದೆ?" ಎಂದು ಕೇಳಿದೆಯಲ್ಲ. ಅದನ್ನು ನನ್ನ ಮಗ ನೋಡಿ, ಸಿಕ್ಕಾಪಟ್ಟೆ ಬೈದ!"  ಹೇಗಿದ್ದಾಗೂ ಹಳೆ ಬಾಸ್, ಅವನ ಮುಲಾಜೇನು? ಮಾತಾಡ್ರಿ ಎಂದು  ಅಲ್ಲಿಯೇ ಇದ್ದ ಮೀನಿ ತಿವಿದಳು. ಇವನು ಬೆ ಬ್ಬೆ ಎಂದಾಗ ತಾನೇ ಫೋನ್ ಕಿತ್ತು "ನೀವು ಯಾಕೆ ಪ್ರೈವೇಟ್ ಆಗಿ ಕಳಿಸಿದ್ದು ಅವನಿಗೆ ತೋರಿಸಿದ್ರಿ?" ಎಂದು ಗುಡುಗಿದಾಗ, ಅವನು ಮತ್ತಷ್ಟು ಸಿಟ್ಟಾದ." ನನ್ನ ಹುಟ್ಟುಹಬ್ಬಕ್ಕೆ ಬಂದ ಶುಭಾಶಯಗಳನ್ನು ಸೇರಿಸಿ ರೀಲ್ಸ್ ಮಾಡುತ್ತಿದ್ದ. ಇಷ್ಟು ಕಿತ್ತುಹೋದ ಸಂದೇಶ ಕಳಿಸಿದ್ದು ನೀವೊಬ್ಬರೇ!" ಫೋನ್ ಕುಕ್ಕಿದ.



"ನೆನಪಿನ ಶಕ್ತಿ ಒಳ್ಳೆಯದೇ. ಆದರೆ ನಾಲಿಗೆ , ಬೆರಳಿನ ಶಕ್ತಿ ಕಡಿಮೆ ಮಾಡಿ!" ಎಂದು ಮುಖ ತಿರುವಿ ನಡೆದ ಮಡದಿಯನ್ನು ನೋಡಿ ನಿಟ್ಟಿಸುರಿಟ್ಟ ನಾಣಿ !

# ಪ್ರವಾಸ ?.....ಪ್ರಯಾಸ !?

**ಸೌಮ್ಯ ಮಿತ್ರ**

**ಕೊ**ವಿಡ್‌ನ ಎರಡು ಅಲೆಗಳು ಬಂದು ಅಪ್ಪಳಿಸಿ ಹಿಂದಿರುಗಿದ್ದ ಹೊಸತು. ಆ ಮಹಾಮಾರಿಯ ಹಾವಳಿಯಿಂದ ಚೇತರಿಸಿಕೊಂಡು ಒಂದೊಂದೇ ಹೆಜ್ಜೆಗಳನ್ನಿಡುತ್ತಾ ಸಹಜ ಸ್ಥಿತಿಗೆ ಜನ ಮರಳುತ್ತಿದ್ದ ಕಾಲ. ಬೆಳಿಗ್ಗೆ ಸುಮಾರು 11 ಗಂಟೆ ಆಗಿತ್ತು. ನನ್ನ ಬಾಲ್ಯದ ಗೆಳತಿ ಶಾಂತಾ ಇದ್ದಕ್ಕಿದ್ದಂತೆ ಮನೆಗೆ ಬಂದಳು. ಕಳೆದ ಎರಡು ವರ್ಷಗಳಿಂದ ಗೆಳತಿಯರನ್ನಿರಲಿ, ಮನುಷ್ಯರ ಮುಖವನ್ನೇ ನೋಡುವುದು ಕಷ್ಟವಾಗಿತ್ತಲ್ಲ, ಹಾಗಾಗಿ ಮನೆಗೆ ಯಾರಾದರೂ ಬಂದರೆ ಎಲ್ಲರಿಗೂ ಎಲ್ಲಿಲ್ಲದ ಸಂಭ್ರಮ. ಮನೆಯಲ್ಲಿ ನಾನೊಬ್ಬಳೇ ಇದ್ದದ್ದು, ಬಾಲ್ಯದ ಗೆಳತಿ ಬೇರೆ, ನಗು ನಗುತ್ತಾ ಸ್ವಾಗತಿಸಿದೆ... ಹಾ...ಸ್ವಲ್ಪ ಇರಿ...ಇದನ್ನು ಓದಿ ನಾನು ಬೇರೆಯವರನ್ನು ಸಿಡುಕುತ್ತಾ ಸ್ವಾಗತಿಸುತ್ತೇನೆ ಅಂತ ತಪ್ಪು ತಿಳಿಯಬೇಡಿ. ಯಾರು ಯಾವಾಗ ಬಂದರೂ ನಗು ನಗುತ್ತಲೇ ಸ್ವಾಗತಿಸುತ್ತೇನೆ, ಮನೆಯಲ್ಲಿ ನಾನೊಬ್ಬಳೇ ಇದ್ದಿದ್ದು, ಹಾಗಾಗಿ ನಾನೊಬ್ಬಳೇ ನಗುತ್ತಾ ಸ್ವಾಗತಿಸಿದೆ ಅಂತ ಹೇಳಲು ಹೊರಟೆ.

ಗೆಳತಿ ಒಳಬಂದು, 'ಎಂತಹ ಬಿಸಿಲು ಮಹಾರಾಯ್ತಿ' ಅಂದಳು. ಫ್ಯಾನು ಜಾಸ್ತಿ ಮಾಡಿ, 'ಕಾಫಿ ಕೊಡಲೇನೇ?' ಅಂದೆ. 'ಸೆಕೆ...ಪ್ರಾಣ ಹೋಗ್ತಾ ಇದೆ...ಕಾಫಿ ಕೊಡ್ಲಾ ಅಂತೀಯಾ?' ಅಂತ ರೇಗಿ, 'ತಂಪಾಗಿ ಏನಾದರೂ ಕೊಡು' ಅಂದಳು. ನನ್ನ ಗೆಳತಿ ಕಾಫಿ ಪ್ರಿಯೆ, 'ಏನೇ ಅನ್ನು ಕಾಫಿ ಬಿಟ್ಟಿರಿಲ್ಲ ಕಣೆ' ಅನ್ನುತ್ತಿದ್ದವಳು ಸದ್ದಿಲ್ಲದೇ ಪಕ್ಷಾಂತರ ಮಾಡಿರುವುದಲ್ಲದೇ ಕಾಫಿಯ ಬಗ್ಗೆ ಗರಂ ಆಗಿರುವುದುದನ್ನು ಕಂಡು ಸ್ವಲ್ಪ ಆಶ್ಚರ್ಯವಾಯಿತು. ನೋಡೋಣ, ಮಾತಾಡುತ್ತಾ ವಿಚಾರಿಸಿದರಾಯಿತು ಅಂದುಕೊಂಡು ಪಾನೀಯ ತರಲು ಹೋದೆ.

ಕೆಲ ನಿಮಿಷಗಳ ನಂತರ ತಂಪಾದ ಪಾನೀಯ ಸವಿಯುತ್ತಾ ಕುಳಿತೆವು... ನೋಡಿ, ನೋಡಿ... ಪಾನೀಯ ಅಂದ ತಕ್ಷಣ ನೀವು ತಪ್ಪು ತಿಳಿಯುವಂತಿಲ್ಲ... ನಾವಿಬ್ಬರೂ ಕುಡಿದಿದ್ದು ನಿಂಬೆಯಹಣ್ಣಿನ ರಸವನ್ನ. ಇಂದಿನ ಕಾಲದ ಹುಡುಗಿಯರು ಬೇರೊಂದು ಪಾನೀಯವನ್ನು ಸೇವಿಸುವುದರಲ್ಲಿ ಹುಡುಗರಷ್ಟೇ ಸಮರ್ಥರು ಅನ್ನುವ ವಿಷಯ ಲಾಕ್‌ಡೌನ್ ಸಮಯದಲ್ಲಿ ಅಂಗಡಿಯ ಮುಂದೆ ನಿಂತಿದ್ದ ಹುಡುಗಿಯರನ್ನು ನೋಡಿ ತಿಳಿದುಕೊಂಡೆವಲ್ಲ...ನಾವು ಈ ವಿಷಯದಲ್ಲಿ ಸ್ವಲ್ಪ ಹಳೆಯ ಕಾಲದವರೇ ಅನ್ನಬೇಕು... ಇರಲಿ...ಒಟ್ಟಿನಲ್ಲಿ ನಾವು ಕುಡಿದದ್ದು ನಿಂಬೆ ಹಣ್ಣಿನ ಶರಬತ್ತನ್ನು ಅಂತ ನಿಮಗೆ ಹೇಳಬೇಕು ಎನಿಸಿತು ಅಷ್ಟೇ!

ಫ್ಯಾನು ಮತ್ತು ನಿಂಬೆ ಹಣ್ಣಿನ ಶರಬತ್ತಿನ ಪ್ರಭಾವದಿಂದಲೋ ಏನೋ ಒಟ್ಟಿನಲ್ಲಿ ಗೆಳತಿ ಸ್ವಲ್ಪ ತಣ್ಣಗಾಗಿದ್ದಾಳೆ ಅನಿಸಿತು. 'ಏನು ಅಮ್ಮನವರು, ಇಷ್ಟು ಹೊತ್ತಿನಲ್ಲಿ, ಅದರಲ್ಲೂ ಒಬ್ಬರೇ ದಯಮಾಡಿಸಿದ್ದೀರಾ?' ಎಂದು ಮಾತು ಪ್ರಾರಂಭಿಸಿದೆ. ಅವಳು, 'ಹೂಂ ಕಣೆ, ನನ್ನ ಮಗರಾಯನನ್ನು ಮೃದಂಗದ ಕ್ಲಾಸಿಗೆ, ಮಗಳನ್ನು ಬಾಲಿವುಡ್ ಡ್ಯಾನ್ಸ್ ಕ್ಲಾಸಿಗೆ ಬಿಟ್ಟು ಬಂದೆ. 12.30 ಗೆ ಅವರಿಬ್ಬರನ್ನೂ ಕರೆದುಕೊಂಡು ಮನೆಗೆ ಹೋಗಬೇಕು...ಬಿಡುವಿತ್ತಲ್ಲ, ನಿನ್ನ ನೋಡೋಣ ಅಂತ ಬಂದೆ' ಅಂದಳು.



'ಹೌದಾ? ಇಲ್ಲಿಗೆ ಬಂದದ್ದು ಒಳ್ಳೆಯದಾಯಿತು, ಸ್ವಲ್ಪ ಹೊತ್ತು ಆರಾಮಾಗಿರಬಹುದು' ಅಂದೆ.

ಬಂದಿತು...ಪಾಂಡಿಚೆರಿ ಅಂತ ಒಬ್ಬರಂದರು....ಅಯ್ಯೋ ಅಲ್ಲಿ ರಣ ಬಿಸಿಲು, ಬೇಡಪ್ಪಾ ಅಂದರು ಒಬ್ಬರು...ಊಟಿ ಅಂದಾಗ... ಅಯ್ಯೋ ಅಷ್ಟು ಹತ್ತಿರವೇ? ಊರು ಬಿಟ್ಟು ಹೋದಂತೆಯೇ ಅನಿಸುವುದಿಲ್ಲ.... ಕೊಡೈಕೆನಾಲ್...ಉಹೂಂ...ಘಾಟ್ ಸೆಕ್ಷನ್... ವಾಂತಿ ಆಗುತ್ತದೆ... ಶೃಂಗೇರಿ, ಧರ್ಮಸ್ಥಳ, ಹೊರನಾಡು...ಉಹೂಂ, ಅದೆಲ್ಲ ಬೇಸಿಗೆ ರಜಕ್ಕೆ ಸರಿ, ಈಗ ನಾಲ್ಕು ದಿನ ರಜದಲ್ಲಿ ಎಲ್ಲಾದರೂ ಮಜವಾಗಿರಬೇಕು... ಸರಿ ಹಾಗಾದರೆ, ಸಮುದ್ರ ಎಲ್ಲರಿಗೂ ಇಷ್ಟ, ಮಂಗಳೂರು, ಉಡುಪಿ ಅಥವಾ ಕಾರವಾರ...ಅಯ್ಯೋ ಅಷ್ಟು ದೂರ ಕಾರಿನಲ್ಲಿ ಹೋಗುವುದು ಸರಿಯಿಲ್ಲ, ಬಸ್ಸು ಬೇಜಾರು, ರೈಲಲ್ಲಿ ರಿಸರ್ವೇಷನ್ ಸಿಗುವುದಿಲ್ಲ...'



ನನ್ನ ಗೆಳತಿ, 'ಕರೆಕ್ಟ್, ನಮ್ಮ ಮನೆಯಲ್ಲೂ ಇದೇ ವಾಗ್ವಾದ, ಅದು ಸರಿ, ನೀವು ಎಲ್ಲಿಗೆ ಹೋದಿರಿ ಕೊನೆಗೆ' ಅಂದಾಗ ನಾನು ನಕ್ಕು ವಿವರಿಸಿದೆ, 'ಇಷ್ಟೆಲ್ಲಾ ಮಾತಿನ ನಡುವೆ ಎಚ್.ಆರ್ ಮ್ಯಾನೇಜರ್ ಆಗಿದ್ದ ನನ್ನ ಪತಿಗೆ ಒಂದು ಫೋನ್ ಬಂತು, 'ಮುಂಬೈ ಆಫೀಸಿನಲ್ಲಿ ತೊಂದರೆ ಆಗಿದೆ. ನಾಳೆಯೇ ನಾನು ಅಲ್ಲಿಗೆ ಹೋಗಿ ಪರಿಸ್ಥಿತಿ ನಿಭಾಯಿಸಬೇಕು. ನಾನು ಬರುವುದು ಒಂದು ವಾರವಾಗಬಹುದು' ಅಂದರು. ಅಲ್ಲಿಗೆ ನಮ್ಮ ಪ್ರವಾಸದ ಚರ್ಚೆ ಮುಗಿಯಿತು'.

ನನ್ನ ಗೆಳತಿ ನಸುನಕ್ಕು, 'ಕೆಲವೊಮ್ಮೆ ಪ್ರವಾಸ ಹೋಗುವುದೇ ಬೇಡ ಅನಿಸುತ್ತದೆ ಕಣೆ. ಗಂಡಸರಿಗಾದರೆ ಬುಕಿಂಗ್ ಮಾಡಿದರೆ ಆಯಿತು, ಆದರೆ ನಮಗೆ, ಆ ಸ್ಥಳಕ್ಕೆ ತಕ್ಕ ಬಟ್ಟೆ ತೆಗೆದು, ಅದನ್ನು ಒಗೆದು, ಇಸ್ತ್ರಿ ಮಾಡಿ ಅಥವಾ ಮಾಡಿಸಿ, ಪ್ಯಾಕ್ ಮಾಡುವುದಕ್ಕೆ ಎರಡು ದಿನ ಬೇಕು. ಅಷ್ಟಾದರೆ ಆಯಿತೇ, ಅಗತ್ಯ ಔಷಧಿಗಳು, ವಸ್ತುಗಳು ಎಲ್ಲವನ್ನೂ ಮರೆಯದೆ ಇಟ್ಟುಕೊಳ್ಳಬೇಕು. ಹೊರ ಹೋದಾಗ ಒಂದು ವಸ್ತು ಸಿಗದೇ ಇದ್ದರೂ, 'ಅಯ್ಯೋ ಅದನ್ನು ತರಲಿಲ್ಲವೇ?' ಅಂತ ಮುಖ ದಪ್ಪ ಮಾಡಿ ಕೂರುತ್ತಾರೆ. ಇದೆಲ್ಲದರ ಜೊತೆಗೆ ಊರಿಗೆ ತೆಗೆದುಕೊಂಡು ಹೋಗಲು ಕರಿದ ತಿಂಡಿ ಮಾಡಿ, ಮನೆಯಲ್ಲಿ ಫ್ರಿಜ್‌ನಲ್ಲಿರುವ ಹಣ್ಣು, ತರಕಾರಿ, ಹಾಲು, ಮೊಸರು ಎಲ್ಲವನ್ನೂ ತೆರವುಗೊಳಿಸಿ, ಕೆಲಸದವಳಿಗೆ, ಹಾಲಿನವನಿಗೆ ಹೇಳಿ, ರಾತ್ರಿ ಹೊತ್ತು ಮಲಗಲು ಯಾರನ್ನಾದರೂ ಗೊತ್ತುಮಾಡಿ ಹೊರಡುವಷ್ಟರೊಳಗೆ ಸಾಕು ಸಾಕಾಗುತ್ತದೆ. ಆಮೇಲೆ ಪ್ರವಾಸ ಮುಗಿಸಿ ಬಂದಮೇಲೆ ಮತ್ತೆ ತರಕಾರಿ, ಹಣ್ಣು, ಕುಡಿಯುವ ನೀರು, ಊಟ, ತಿಂಡಿ ವ್ಯವಸ್ಥೆ ಮಾಡಿ, ಊರಿಂದ ತಂದ ಕೊಳೆ ಬಟ್ಟೆ ಒಗೆದು ಅದರ ಜಾಗದಲ್ಲಿಟ್ಟು...ಒಟ್ಟಿನಲ್ಲಿ ಮನೆಯನ್ನು ಸಹಜ ಸ್ಥಿತಿಗೆ ತರುವುದಕ್ಕೆ ಎರಡು ದಿನ ಬೇಕು. ಸಾಕಪ್ಪಾ ಸಾಕು...'



ನಾನು, 'ಹೂಂ ಕಣೆ, ನೀನು ಹೇಳುವುದು ಸರಿ. ಆದರೆ, ಕರಿದ ತಿಂಡಿ ಮಾಡುವುದು ಅಂದೆಯಲ್ಲ. ಹಿಂದಿನ ದಿನಗಳಲ್ಲಿ ಹಾಗೆ ಮಾಡುತ್ತಿದ್ದದ್ದು ನಿಜ,

ಈಗ ಎಲ್ಲ ಕಡೆ ಎಲ್ಲ ತಿಂಡಿಗಳು ಸಿಗುತ್ತವೆ, ನೀನು ಯಾಕೆ ಮನೆನಲ್ಲಿ ಮಾಡುವ ಶ್ರಮ ತೊಗೊತೀಯಾ?' ಅಂದೆ.

ಶಾಂತಾ, 'ಇಲ್ಲ ಕಣೆ ನಾವು ಮುಂಚೆ ಹಾಗೇ ಮಾಡ್ತಾ ಇದ್ವಿ. ಆದ್ರೆ ಎರಡು ವರ್ಷಗಳ ಹಿಂದೆ ಪ್ರವಾಸ ಹೋದಾಗ, ಮಕ್ಕಳು ಆಸೆಪಟ್ಟರೆಂದು ಕರಿದ ತಿಂಡಿ ಕೊಡಿಸಿ, ಫುಡ್ ಪಾಯ್ಸನಿಂಗ್ ಆಗಿ ಪಾಡಾಯಿತು. ಅದಕ್ಕೆ ಈಗ ಮನೆಯಲ್ಲೇ ಮಾಡಿಕೊಂಡು ಹೋಗುವುದು, ಹೊರಗೆ ಊಟ ತಿಂಡಿ ಮಾತ್ರ ತಿನ್ನುವುದು ಅಂತ ನಿರ್ಧಾರ ಮಾಡಿದ್ದೇನೆ.'

ನಾನು, 'ನೀನು ಹೇಳುವುದು ಸರಿ...ಆದರೆ ನೀನು ಮಾಡ್ತಾ ಕೂತ್ಕೋಬೇಡ. ಲಾಕ್‌ಡೌನ್ ಸಮಯದಲ್ಲಿ ಮನೆಯಲ್ಲಿ ತಿಂಡಿಗಳನ್ನು ತಯಾರಿಸುವ ಉದ್ಯಮ ಆರಂಭಿಸಿರುವ ಅನೇಕ ಮಹಿಳೆಯರಿದ್ದಾರೆ. ನನಗೆ ಕೆಲವರ ಪರಿಚಯ ಇದೆ. ಅವರ ಕಾಂಟಾಕ್ಟ್ ನಂಬರ್ ಕೊಡುತ್ತೇನೆ. ನಿನಗೆ ತೊಂದರೆ ತಪ್ಪುತ್ತದೆ, ಅವರಿಗೂ ಸಹಾಯ ಆಗುತ್ತದೆ' ಅಂದೆ.

ಶಾಂತಾ, 'ಹೋಗ್ಲಿ ಬಿಡು. ನಿನ್ನ ಹತ್ತಿರ ಬಂದಿದ್ದಕ್ಕೆ ಒಂದಾದರೂ ತಲೆ ನೋವು ಕಮ್ಮಿ ಆಯಿತಲ್ಲ' ಅಂದಳು.

ನಾನು, 'ಅಬ್ಬ! ಅಂತೂ ಇಂತೂ ನಿನ್ನ ಬಾಯಲ್ಲಿ ಒಂದು ಒಳ್ಳೆ ಮಾತು ಬಂತಲ್ಲ' ಅಂತ ರೇಗಿಸಿ, 'ಒಂದು ತಲೆನೋವು ಕಡಿಮೆ ಆಯಿತು' ಅಂದೆಯಲ್ಲ ಇನ್ನೆಷ್ಟು ತಲೆ ನೋವಿದೆ ನಿನಗೆ?' ಅಂದಾಗ ಅವಳು, 'ಯಾವ ಜಾಗಕ್ಕೆ ಹೋಗುವುದು ಅನ್ನೋದು ಇನ್ನೂ ನಿರ್ಧಾರ ಆಗಿಲ್ಲವಲ್ಲೇ ತಾಯಿ, ಅದೇ ದೊಡ್ಡ ತಲೆನೋವು. ಇನ್ನೊಂದು ವಿಷಯ ಹೇಳ್ತೀನಿ ಕೇಳು, ಪ್ರವಾಸ ಹೋಗೋದು ಅಂದ್ರೆ ಎಂಜಾಯ್ಮೆಂಟ್ ಗಿಂತ ಟೆನ್ಶನ್ ಏ ಜಾಸ್ತಿ. ಇದೇನಿದು, ಇವಳು ಹೀಗೆ ಹೇಳ್ತಾಳೆ ಅಂತ ಹುಬ್ಬೇರಿಸಬೇಡ. ನಿನಗೆ ಜ್ಞಾಪಕ ಇರಬೇಕಲ್ಲ, ನಾಲ್ಕು ವರ್ಷಗಳ ಹಿಂದೆ ನಾನು, ನಮ್ಮ ಯಜಮಾನರು, ಅವರ ಆಫೀಸಿನ ಗೆಳೆಯರ ಜೊತೆ ಹಿಮಾಲಯದ ಹತ್ತಿರ ಹೋಗಿದ್ದೆವಲ್ಲ. ಅಲ್ಲಿಯ ರಸ್ತೆಗಳು ಎಷ್ಟು ಚಿಕ್ಕದಾಗಿದ್ದವು ಗೊತ್ತೆ? ನಡೆಯುವುದು ಕಷ್ಟ ಅಂತ ಕುದುರೆಯ ಮೇಲೆ ಹೋದೆವು. ಆದರೆ ಆ ಕಿರಿದಾದ, ಕಲ್ಲು ತುಂಬಿದ, ಅಲ್ಲಲ್ಲಿ ನೀರು ಹರಿಯುವುದರಿಂದ ಜಾರಿಕೆ ಇರುವ ದಾರಿ, ಪಕ್ಕದಲ್ಲಿ ಪ್ರಪಾತ, ಕುದುರೆ ಜಾರಿದರೆ ಸೀದಾ ಸ್ವರ್ಗಕ್ಕೆ ಹೋಗುತ್ತೇವೆ ಎಂದು ಹೆದರಿ ಎಡಗೈಯಲ್ಲಿ ಜೀವ ಹಿಡಿದು ಅಂತ ಹೇಳ್ತಾರಲ್ಲ, ಹಾಗೆ ಹೋಗಿ ವಾಪಸ್ ಬೇಸ್ ಕ್ಯಾಂಪ್ ಗೆ ಬರುವಷ್ಟರಲ್ಲಿ ಹೊಸ ಜಾಗ ನೋಡಿದ ಹುರುಪಿಗಿಂತ, ಸಧ್ಯ ಬದುಕಿ ಬಂದೆವಲ್ಲ ಅನ್ನೋ ರಿಲೀಫ್ ಹೆಚ್ಚಾಗಿತ್ತು' ಅಂದಳು.

ನಾನು ಸುಮ್ಮನಿದ್ದೆ. ಅವಳು, 'ಏನೇ ಗಂಭೀರವಾಗಿ ಯೋಚನೆ ಮಾಡ್ತಾ ಇದ್ದೀಯಾ?' ಅಂದಾಗ ನಾನು, 'ಅಲ್ಲ, ನೀನು 'ಎಡಗೈಯಲ್ಲಿ ಜೀವ ಹಿಡಿದು' ಅಂದೆಯಲ್ಲ, ನಮ್ಮ ಮನೆಗಳಲ್ಲಿ ಎಡಗೈಯಲ್ಲಿ ಕಾಫಿ ಲೋಟ ಹಿಡಿದುಕೊಂಡು ಕುಡಿದರೆ 'ಬಲಗೈಯಲ್ಲಿ ಕುಡಿಯಿರಿ' ಅಂತ ಬೈಯ್ತಾರೆ. ಅಂಥದ್ದರಲ್ಲಿ ಜೀವದಂತಹ ಅಮೂಲ್ಯವಾದ ವಸ್ತುವನ್ನ ಎಡಗೈಯಲ್ಲಿ ಹಿಡಿದುಕೊಂಡು ಹೋಗುವುದು ಅಂತ ಹೇಳುವುದು ಅಕ್ಷಮ್ಯ ಅಪರಾಧ ಅಲ್ಲವೇ ಅಂತ ಯೋಚನೆ ಬಂತು' ಅಂದೆ.




ಅವಳು ನಗುತ್ತಾ, 'ನಿನ್ನ ತಲೆ' ಅನ್ನುತ್ತಾ ಎದ್ದಳು. ನಾನು, 'ಅಂತೂ ನಕ್ಕೆಯಲ್ಲ ಮಹಾರಾಯ್ತಿ. ನಾನೆಲ್ಲೋ ನನ್ನ ಮಾತನ್ನು ಕೇಳಿ ನಿನ್ನ ಪಕ್ಕದಲ್ಲಿರುವ

ಹೂದಾನಿ ಮತ್ತು ನನ್ನ ತಲೆ ಒಡೆಯುವುದು ಗ್ಯಾರಂಟಿ ಅಂದುಕೊಂಡಿದ್ದೆ' ಅನ್ನುತ್ತಾ, 'ಯಾವ ತಿಂಡಿಗಳು ಬೇಕು ಅಂತ ಹೇಳು, ನಾನು ಆ ತಿಂಡಿ ಮಾಡುವವರ ಕಾಂಟಾಕ್ಟ್ ನಂಬರ್ ಕೊಡ್ತೀನಿ' ಅಂತ ಹೇಳಿ ಅವಳನ್ನು ಬೀಳ್ಕೊಟ್ಟು ಒಳಬಂದೆ.

ಎರಡು ದಿನಗಳಾದವು. ಶಾಂತಳಿಂದ ಯಾವುದೇ ಸುದ್ದಿ ಬಂದಿರಲಿಲ್ಲ. ಫೋನ್ ಮಾಡಿ ಕೇಳಬೇಕು ಅಂದುಕೊಳ್ಳುತ್ತಿದ್ದೆ. ಅಷ್ಟರಲ್ಲಿ ವಾಟ್ಸಾಪ್ ಮೆಸೇಜ್ ಬಂತು, 'ನಾವು ಮೈಸೂರಿನ ಹತ್ತಿರ ಇರುವ ಒಂದು ರೆಸಾರ್ಟ್‌ಗೆ ಹೋಗುತ್ತಿದ್ದೇವೆ. ನಾಲ್ಕು ದಿನ ಅಲ್ಲಿ ವಿಶ್ರಾಂತಿ ಪಡೆದು ಹಿಂದಿರುಗುತ್ತೇವೆ. ಅಲ್ಲಿ ಎಂಟರ್ಟೆನ್ಮೆಂಟ್‌ಗೆ ಎಲ್ಲ ವ್ಯವಸ್ಥೆ ಇರುವುದರಿಂದ ಮಕ್ಕಳು ಖುಷಿಯಾಗಿದ್ದಾರೆ. ಅಲ್ಲದೆ, ಊಟ ತಿಂಡಿ, ಕುರುಕಲು ಎಲ್ಲದರ ವ್ಯವಸ್ಥೆ ಇದೆ, ನನಗೂ ಶ್ರಮ ಇಲ್ಲ, ಆರಾಮಾಗಿರಬಹುದು. ನಿನ್ನ ಭೇಟಿ ಮಾಡಿದ್ದು ಖುಷಿಯಾಯಿತು. ಊರಿಗೆ ವಾಪಸ್ ಬಂದಮೇಲೆ ನಿನ್ನ ಮನೆಗೆ ಬರುತ್ತೇನೆ'

ಸಧ್ಯ ನನ್ನ ಗೆಳತಿ ಖುಷಿಯಾಗಿದ್ದಾಳಲ್ಲ ಅಂತ ನನಗೆ ಸಂತೋಷವಾಯಿತು, ಆದರೆ ಎರಡು ದಿನಗಳಿಂದ ಬೇಡದ ವಿಷಯಗಳ ಬಗ್ಗೆ ಯೋಚನೆ ಮಾಡಿದ್ದರಿಂದಲೋ ಏನೋ, ನನಗೆ ಸಿಕ್ಕಾಪಟ್ಟೆ ತಲೆ ನೋಯುತ್ತಿತ್ತು. 'ಕಾಫಿ ಕುಡಿದು ಮಾತ್ರೆ ತೊಗೋಬೇಕು' ಅಂದುಕೊಂಡೆ.



# ಮಡಿ ಮಡಿ ಎಂದು ಅಡಿಗಡಿಗ್ಹಾರುವೆ....

ವೈ.ಎನ್.ಗುಂಡೂರಾವ್

**ನೂ**ರಾರು ವರ್ಷಗಳ ಹಿಂದೆಯೇ ಪುರಂದರ ದಾಸರು ಮಡಿಯ ಬಗ್ಗೆ ಲೇವಡಿ ಮಾಡುತ್ತಾ, ಒಳಗೆಲ್ಲಾ ಮೈಲಿಗೆ ತುಂಬಿಕೊಂಡು ಹೊರಗೆ ಮಡಿ ಎಂದು ಏಕೆ ಹಾರಾಡುವೆ ? ಹುಟ್ಟು ಸೂತಕ, ಸಾವು ಸೂತಕ ಮಧ್ಯೆ ಮಡಿ ಎಲ್ಲಿ ಬಂತು ಬಿಕನಾಸಿ! ಎಂದು ವೈರಾಗ್ಯ ಪಥದತ್ತ ಮನುಷ್ಯನ ಆಲೋಚನಾ ಲಹರಿ ಹರಿಯಲೆಂದು ದಾಸರು ಹಾಡಿದ್ದೇನೊ ಸರಿ. ಆದರೆ ನೈರ್ಮಲ್ಯದ ದೃಷ್ಟಿಯಿಂದಲೂ ಇದು ಅವಶ್ಯಕವಲ್ಲವೇ. ಶಾಸ್ತ್ರಿಗಳೋ ಪುರೋಹಿತರೋ ಕೆರೆಯಲ್ಲೋ, ನದಿಯಲ್ಲೋ ಸ್ನಾನ ಮಾಡಿ, ತಂಬಿಗೆ ನೀರನ್ನು ಕೈಲಿ ಹಿಡಿದು ಹೆಜ್ಜೆ ಹೆಜ್ಜೆಗೂ ನೀರು ಹೊಯ್ಯುತ್ತಾ, ಚೆಲ್ಲಿದ ನೀರ ಮೇಲೆ ಹೆಜ್ಜೆ ಇಡುತ್ತಾ ಬರುವುದು ಮಡಿಗಿಂತ ನೈರ್ಮಲ್ಯಕ್ಕೆ ಪ್ರಾಮುಖ್ಯತೆ ಕೊಟ್ಟ ರೆಂದೇ ನನ್ನ ಅಭಿಮತ. ಬೀದಿಯಲ್ಲಿ ಯಾರು ಉಗುಳಿರುತ್ತಾರೊ, ಮತ್ತೊಂದು ಮಾಡಿರುತ್ತಾರೊ ಹಾಗೇ ತುಳಿದು ಬರಲು ಸಾಧ್ಯವೇ? ಅದಕ್ಕೋಸ್ಕರವೆ ತಂಬಿಗೆಯ ನೀರು ಹೊಯ್ಯುತ್ತಾ ಹೆಜ್ಜೆ ಇಟ್ಟು ಮನೆ ತಲುಪುತ್ತಿದ್ದುದು.


ಈಗ ಬಿಡಿ, ಎಲ್ಲರಿಗೂ ಆರೋಗ್ಯದಕಡೆ, ನೈರ್ಮಲ್ಯದಕಡೆ ಹೆಚ್ಚು ಗಮನ. ನನ್ನ ಮೊಮ್ಮನಿಗೊಂದು ಚಾಕೊಲೇಟ್, ಚಿಕಿ ಕೊಡಿಸಿದರೂ ಸರಿ. ಎಕ್ಸ್ ಪೈರಿ ಡೇಟ್ ನೋಡು ತಾತ ಎನ್ನುತ್ತಾನೆ ಐದು ವರ್ಷದ ಪೋರ.

ನಾವು ಹಳ್ಳಿಯಲ್ಲಿದ್ದಾಗ ಆರೋಗ್ಯದಕಡೆ, ನೈರ್ಮಲ್ಯದಕಡೆ ಗಮನ ಹರಿಸುತ್ತಿದ್ದುದು ಅಷ್ಟರಲ್ಲೇಯಿದೆ.

ಕೆರೆಗೆ ಹೋಗಿ ನೀರು ತಾ ಎಂದರೆ ಬಿಂದಿಗೆ ಪೃಷ್ಠದಿಂದ ನೀರು ತಳ್ಳಿ ಅಲೆಗಳೆಬ್ಬಿಸಿ, ಕಸ ದೂರ ಮಾಡಿ ನೀರು ತುಂಬಿ ತಂದು ಕುಡಿಯುತ್ತಿದ್ದೆವು. ( ಆದರೆ ಸಿಹಿ ನೀರಿನ ಕೆರೆ ಪ್ರತ್ಯೇಕವಾಗಿದ್ದು ಅದರಲ್ಲಿ ಮತ್ತೇನು ಕಾರ್ಯಕ್ಕೆ ಉಪಯೋಗಿಸುತ್ತಿರಲಿಲ್ಲ – ಅಷ್ಟಾದರೂ ಇದ್ದುದು ನಮ್ಮ ಅದೃಷ್ಟ).

ನೀರು ತರಲು ಹೇಳಿದ ತಕ್ಷಣ ಓಡಿ ಹೋಗಲು ನಮಗಿದ್ದ ಆಕರ್ಷಣೆಯೆಂದರೆ ಕೆರೆಯ ದಡದಲ್ಲಿದ್ದ ನೇರಳೆಯ ಮರದಿಂದ ಉದುರಿರುತ್ತಿದ್ದ ನೇರಳೆ ಹಣ್ಣಿನಾಸೆ. ಆಯ್ದು ಆಯ್ದು ತಿಂದು ಬರುತ್ತಿದ್ದವು. ಹಣ್ಣು ತೊಳೆಯುತ್ತಿದ್ದೆವಾ ? ಉಫ್ ಉಫ್ ಎಂದು ಊದಿದರಾಯಿತಷ್ಟೆ !

ಸ್ಕೂಲಿಗೆ ಹೊರಟಾಗ ದಾರಿಯಲ್ಲಿ ಸಿಕ್ಕ ಪೇರಳೆ, ನೇರಳೆ, ಮಾವು ಎಲ್ಲಕ್ಕೂ ಕಲ್ಲು ಹೊಡೆದು ಉದುರಿಸಿಕೊಂಡು, ಸ್ಕೂಲ್ ಬ್ಯಾಗಿಗೆ ತುಂಬಿಕೊಂಡು ಬಂದದಿನ ಮಧ್ಯಾಹ್ನದ ಲಂಚ್ಗೆ ರಿಚ್ ಫುಡ್. ಮಾವಿನ ಕಾಯಿಯ ತೊಟ್ಟಿನ ರಸ ಒಸರುತ್ತಿದ್ದರೆ ಪುಸ್ತಕದ ಬಟ್ಟೆ ಬ್ಯಾಗಿಗೆ ವರೆಸಿದರೆ ಆಯಿತಷ್ಟೆ!



ಹಲಸಿನ ಹಣ್ಣನ್ನು ತ್ರಿಭುಜಾಕೃತಿಯಲ್ಲಿ ನಾಯಿಯ ನಾಲಿಗೆಯಷ್ಟೇ ತೆಳ್ಳಗೆ ಕೊಯ್ದು ರಂಗಿ ಮಾರುತ್ತಿದ್ದ ಹಲಸಿನ ಹಣ್ಣಿಗೆ ಆಟವಾಡಲು ಸುತ್ತುತ್ತಿದ್ದ ನೊಣಗಳೆಷ್ಟೋ !

ಮೂರು ಕಾಸು ಕೊಟ್ಟು ಕೊಂಡು ನಾರಿನ ಮಧ್ಯದ ತೊಳೆ ಬಿಡಿಸಿ ಬಾವಿಗೆಸೆದು ಕೊಳ್ಳುತ್ತಿದ್ದೆವು.

ಪರಂಗಿ ಹಣ್ಣನ್ನು ಉದ್ದನೆಯ ಸೀಳಾಗಿ ಕತ್ತರಿಸಿ ಕೊಡುತ್ತಿದ್ದವನಿಗೆ ನೆಗಡಿಯೇನಾದರು ಆಗಿದ್ದರೆ ಮೂಗು ಸೀಟಿ ಒರೆಸಿಕೊಂಡ ಕೈಯಿಂದಲೇ ಅವನು ಕೊಯ್ದು ಕೊಟ್ಟು ಪರಂಗಿ ಹಣ್ಣನ್ನು ನಾವೆಂದಾದರೂ ಬೇಡವೆಂದಿದ್ದೆವಾ?



ಸಂಜೆ ಸ್ಕೂಲು ಬಿಟ್ಟಾಗ ಮನೆ ತಲುಪುವವರೆಗೂ ಹಸಿವೆ ನೀಗಲು ದಾರಿಯಲ್ಲಿ ಸಿಕ್ಕ ಕಡಲೆಪುರಿ, ಗೌರಿ ಬೆಲ್ಲ, ಕಾಯಿಚೂರು ಬೆರೆಸಿ ಎಲ್ಲವನ್ನೂ ಜೇಬಿಗೆ ತುಂಬಿಕೊಂಡು ನಿಧಾನವಾಗಿ ಮೆಲ್ಲುತ್ತಾ ಹೊರಟರೆ ಮೂರು ಮೈಲಿ ದೂರದ ದಾರಿ ಹೋದದ್ದೇ ತಿಳಿಯದೆ ಮನೆ ತಲುಪಿರುತ್ತಿದ್ದೆವು.

ಮಾರನೆ ದಿನ ಉಪ್ಪು ಮೆಣಸಿನ ಪುಡಿ ಬೆರೆಸಿದ ಮಾವಿನ ಕಾಯಿಯ ಹೋಳುಗಳನ್ನು ಅದೇ ಜೇಬಿಗೆ ತುಂಬಿಕೊಂಡು ತಿಂದಾಗ ಜೇಬಿನಲ್ಲಿರುವ ನಿನ್ನೆಯ ಶಿಲ್ಕು ಸೇರಿ ಸಿಹಿಸಿಹಿ, ಖಾರಖಾರ, ಹುಳಿಹುಳಿ....ಎಂಥಾ ರುಚಿ ! ನಾವೆಂದೂ ಇಂಥ ರುಚಿಯನ್ನು ತಪ್ಪಿಸಿಕೊಂಡವರಲ್ಲ !

ಎಳೆಯ ಹುಣಸೆ ಕಾಯಿಗೆ ಉಪ್ಪು ಖಾರ ಹಾಕಿ ಅರೆದು ನಿಂಬೆ ಗಾತ್ರದ ಉಂಡೆಯನ್ನು ಮಾಡಿರುತ್ತಿದ್ದ ದೇವೀರಿಯ ಬಳಿ ಹೋದರೆ ಮೂರು ಕಾಸಿಗೆ ಎರಡು ಉಂಡೆ. ಅದನ್ನು ಕೊಂಡು ನಾವು ನಾಲ್ವರು ಹಂಚಿಕೊಳ್ಳಲು ಗಟ್ಟಿಯಿದ್ದರೆ ಬಾಯಿಂದಲೇ ಕಡಿದ ಉಚ್ಚಿಷ್ಠ ಪ್ರಸಾದಕ್ಕೆ ನಾವೆಂದಾದರೂ ಹೀಗಳೆಯುತ್ತಿದ್ದೆವೇ ?

ಇಷ್ಟೆಲ್ಲಾ ಏಕೆ ಜ್ಞಾಪಕಕ್ಕೆ ಬಂದಿತೆಂದರೆ ಕಳೆದ ಜುಲೈ ಕಡೇ ವಾರದಿಂದ ಆಗಸ್ಟ್ ಪೂರ್ತಿ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾದ **"ತಟ್ಟೆಯೊಳಗೆ ತಳಮಳ"** ಎಂಬ ಅಭಿಯಾನ ಆರಂಭಿಸಿ ತರಕಾರಿ, ಸೊಪ್ಪು , ಹಣ್ಣುಗಳು ಯತೇಚ್ಛವಾದ ರಾಸಾಯನಿಕ ಗೊಬ್ಬರದ ಬಳಕೆಯಿಂದ ಹೇಗೆ ವಿಷಯುಕ್ತವಾಗುತ್ತಿದೆ ಎಂದು ಜನರನ್ನು ಎಚ್ಚರಿಸಿತ್ತು. ಆದರೆ ಹಳ್ಳಿಯಲ್ಲಿದ್ದಾಗ ನಾವೆಂದು ಇಷ್ಟು ಕಾಳಜಿ ವಹಿಸಿರಲಿಲ್ಲ. ಅಥವಾ ಆಗ ರಾಸಾಯನಿಕ ಗೊಬ್ಬರದ ಉಪಯೋಗ ಕಡಿಮೆಯಿತ್ತೇ?

ಈಗ ಮನೆಯಿಂದಾಚೆ ಹೋಗಿ ಬಂದರೆ ಸ್ಯಾನಿಟೈಸರ್/ ಸೋಪ್ ವಾಟರ್ ನಿಂದ ಕೈತೊಳೆ; ತರಕಾರಿ, ಹಣ್ಣು, ಸೊಪ್ಪುಗಳನ್ನು ಸ್ವಲ್ಪ ಉಪ್ಪು ಬೆರೆಸಿದ ಬಿಸಿನೀರಿನಿಂದ ತೊಳೆದು ತಿನ್ನಿ; ಆಸ್ಪತ್ರೆ ಮುಂತಾದೆಡೆ ಹೋಗಿ ಬಂದರೆ ಬಟ್ಟೆ ಬಿಚ್ಚಿ ನೇರ ವಾಷಿಂಗ್ ಮಿಷನ್‌ಗೆ ಹಾಕಿ....ಅಂತೂ ಬದುಕಿದ್ದೇವೆ.

ಆದರೆ ಬಾಲ್ಯದಲ್ಲಿ ಯಾವ ರೋಗ ರುಜಿನಗಳಿಗೂ ಒಳಗಾಗದ್ದೇ ಮಹಾ ವಿಸ್ಮಯ ವಲ್ಲವೇ!

# ಸೂಪರ್ ನಾನಾ ನಾನಿಗಳಾಗಿ !

**ಜಿ.ವಿ. ಅರುಣ**

"ಪಿಂಕೀ..., ಸ್ವಲ್ಪ ನಿನ್ನ ಕ್ಯಾಲ್ಕುಲೇಟರ್ ಕೊಡ್ತೀಯಾ? ಐದು ನಿಮಿಷಗಳಲ್ಲಿ ವಾಪಸ್ ಕೊಟ್ಟುಬಿಡ್ತೀನಿ.." ಓದುತ್ತಾ ಕುಳಿತಿದ್ದ ಮೊಮ್ಮಗಳನ್ನು ರಾಯರು ಕೇಳಿದರು.


ಅವರ ಕೈಯಲ್ಲಿ ಸೌರಶಕ್ತಿಯಿಂದ ನಡೆಯುತ್ತಿದ್ದ ಒಂದು ಹಳೆಯ ಕ್ಯಾಲ್ಕುಲೇಟರ್ ಇತ್ತು. ಅದರಲ್ಲಿ ಒಂದು ಸೆಂಟಿಮೀಟರ್ ಉದ್ದದ, ದಪ್ಪ ಸಂಖ್ಯೆಗಳು ಕಾಣಿಸುತ್ತಿದ್ದುದರಿಂದ ರಾಯರಿಗೆ ಅದನ್ನು ಉಪಯೋಗಿಸಲು ಅನುಕೂಲವಾಗಿತ್ತು. ಅವರ ಬಳಿ ಬಹಳ ಹಿಂದೆ ಮೂರು ಬೆರಳುಗಳ ಅಗಲದ ಪಾಕೆಟ್ ಕ್ಯಾಲ್ಕುಲೇಟರ್ ಇತ್ತು. ಆದರೆ ವಯಸ್ಸಾಗುತ್ತಾ ಬಂದಂತೆ, ಅದರಲ್ಲಿದ್ದ ಸಂಖ್ಯೆಗಳನ್ನು ಕನ್ನಡಕವಿಲ್ಲದೆ ಓದಲು ಆಗುತ್ತಿರಲಿಲ್ಲ. ಇದರ ಬಗ್ಗೆ ಒಮ್ಮೆ ವಾಯುವಿಹಾರದ ಸಮಯದಲ್ಲಿ ಮಾತುಕತೆಯಾಗಿತ್ತು. ಎಲ್ಲಾ ಸ್ನೇಹಿತರಿಗೂ ಅದೇ ಸಮಸ್ಯೆ. ಹಾಗಾಗಿ, ಅವರೆಲ್ಲರೂ ಸೇರಿ ದಪ್ಪ ಸಂಖ್ಯೆಗಳಿರುವ, ಬ್ಯಾಟರಿಯನ್ನು ಬದಲಾಯಿಸುವ ತೊಂದರೆಯಿಲ್ಲದೆ ಸೌರಶಕ್ತಿಯಿಂದ ಕಾರ್ಯನಿರ್ವಹಿಸುವ ಕ್ಯಾಲ್ಕುಲೇಟರನ್ನು ಚೌಕಾಶಿ ಮಾಡಿ, ಒಳ್ಳೆಯ ರಿಯಾಯಿತಿ ಬೆಲೆಗೆ ಒಟ್ಟಿಗೆ ಕೊಂಡುಕೊಂಡಿದ್ದರು.

ಅಂದು ಕ್ಯಾಲ್ಕುಲೇಟರ್ ಅಕಸ್ಮಾತ್ತಾಗಿ ಕೆಳಗೆಬಿದ್ದು, ಕೆಲಸ ಮಾಡುವುದನ್ನು ನಿಲ್ಲಿಸಿ, ಮುಷ್ಕರ ಹೂಡಿಬಿಟ್ಟಿತ್ತು. ಹಾಗಾಗಿ ಮೊಮ್ಮಗಳ ಬಳಿ ಅವಳ ಕ್ಯಾಲ್ಕುಲೇಟರ್ ಕೇಳಿದ್ದರು.

ನಾವು ಚಿಕ್ಕವರಾಗಿದ್ದ ಆ ಕಾಲದಲ್ಲಿ, ಹಿರಿಯರು ಏನಾದರೂ ಕೇಳಿದರೆ, ಕಿರಿಯರು ತಕ್ಷಣ ಅದನ್ನು ತೆಗೆದುಕೊಟ್ಟು ಧನ್ಯತಾಭಾವವನ್ನು ಮೆರೆಯುತ್ತಿದ್ದೆವು. ಕೇಳಿದ್ದನ್ನು ಬೇಗ ಕೊಟ್ಟಷ್ಟು ನಮ್ಮ ಧನ್ಯತೆಯ ಇಂಡೆಕ್ಸ್ ಮೇಲಕ್ಕೆ ಏರುತ್ತಿತ್ತು! ಆದರೆ ಇವತ್ತಿನ ಪರಿಸ್ಥಿತಿ ಹಾಗಿಲ್ಲ. ಅಂದರೆ ನಾನು ಇಂದಿನ ಕಿರಿಯರನ್ನು ಖಂಡಿತ ಕೀಳಾಗಿ ನೋಡುತ್ತಿಲ್ಲ. ನನ್ನದು ಅವರನ್ನು ಪ್ರಶಂಸಿಸುವ ಧ್ವನಿ. ಇಂದಿನ ಮಕ್ಕಳ ಬುದ್ಧಿಮತ್ತೆಯು ನಮ್ಮ ಕಾಲದ ಮಕ್ಕಳಿಗಿಂತ ಅನೇಕ ಪಟ್ಟು ಹೆಚ್ಚು. ರಾಯರು ಪಿಂಕಿಯ ಬಳಿ ಐದುನಿಮಿಷಗಳಿಗೆ ಕ್ಯಾಲ್ಕುಲೇಟರ್ ಕೇಳಿದಾಗ ಏನಾಯಿತು ಎಂಬುದು ನಿಮಗೆ ಗೊತ್ತಾದರೆ ನನ್ನ ಹೇಳಿಕೆಯ ಪರಮಸತ್ಯ ನಿಮಗೆ ಗೊತ್ತಾಗುತ್ತದೆ.

ಪಿಂಕಿಗೆ ಅವರ ಕೈಯಲ್ಲಿದ್ದ 'ಮ್ಯೂಸಿಯಂ ಪಿಸ್' ನೋಡಿದ ತಕ್ಷಣ ಮುಖ ಅರಳಿತು. "ತಾತ ಅದನ್ನ ನನಗೆ ಕೊಡಿ; ನಮ್ಮ ಶಾಲೆಯಲ್ಲಿ 'ಕಂಪ್ಯೂಟರ್ ಆವಿಷ್ಕಾರಕ್ಕೆ ಮೊದಲು ಏನಿತ್ತು?' ಅಂತ ಒಂದು ವಸ್ತುಪ್ರದರ್ಶನ ಏರ್ಪಾಟು ಮಾಡ್ತಿದ್ದಾರೆ. ಅದರಲ್ಲಿ ಇದನ್ನು ಇಡ್ತೀನಿ..." ಎಂದಳು.

"ಧಾರಾಳವಾಗಿ ತೊಗೋಮ್ಮ.., ಬೇಕಿದ್ದರೆ ಕೇಳು, ಸರಿಯಾಗಿ ಕೆಲಸ ಮಾಡುತ್ತಿರುವ, ಕ್ಯಾಲ್ಕುಲೇಟರ್‌ನೇ ಸ್ನೇಹಿತರಿಂದ ತಂದುಕೊಡ್ತೀನಿ...; ಅದು ಅಲ್ಲದೆ ಮೊದಲು ನಾನು ಸ್ಲೈಡ್ ರೂಲ್ ಬಳಸುತ್ತಾ ಇದ್ದೆ. ಅದೂ ಚೆನ್ನಾಗಿದೆ, ಕೊಡ್ತೀನಿ. ನಾನು ಗಣಿತಶಾಸ್ತ್ರದಲ್ಲಿ, ಭೌತಶಾಸ್ತ್ರದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಹಿಂದೆ ಕ್ಲಾರ್ಕ್ಸ್ ಟೇಬಲ್ ಉಪಯೋಗಿಸುತ್ತಿದ್ದೆ. ಅದನ್ನೂ ಕೊಡ್ತೀನಿ..." ಎಂದರು.




ಅವಳು "ಸ್ಲೈಡ್ ರೂಲ್, ಕ್ಲಾರ್ಕ್ಸ್ ಟೇಬಲ್..." ಅಂತ ಮೊಬೈಲಿನಲ್ಲಿ

ಗುರುತು ಹಾಕಿಕೊಂಡಳು, ಸಮಯ ಸಿಕ್ಕಿದಾಗ ಗೂಗಲಿಸಿ ಅವುಗಳ ಬಗ್ಗೆ ಅರಿಯಲು.

ಅನಂತರ "ತಾತ, ಕ್ಯಾಲ್ಕುಲೇಟರ್ ನಿಮಗೆ ಈಗ ಏಕೆ ಬೇಕು? ನಿಮಗೆ ಏನಾದರೂ ಕ್ಲಿಷ್ಟವಾದ ಅಂಕಗಣಿತದ ಸಮಸ್ಯೆಗೆ ಉತ್ತರ ಕಂಡುಹಿಡಿಯಬೇಕಿತ್ತಾ...?" ಎಂದು ಕೇಳಿದಳು.

"ಅಂಥದ್ದೇನು ಇಲ್ಲಮ್ಮ..., ನಾಳೆ ಒಂದನೇ ತಾರೀಕು, ಬ್ಯಾಂಕಿನಲ್ಲಿರೋ ಠೇವಣಿಯ ಬಡ್ಡಿಯನ್ನು ಖಾತೆಗೆ ಹಾಕುತ್ತಾರೆ. ಅದು ಸರಿಯಾಗಿದೆಯೋ ಇಲ್ಲವೋ ಅಂತ ತಾಳೆ ನೋಡಲು ಲೆಕ್ಕಾಚಾರ ಮಾಡಿ, ಗುರುತು ಹಾಕಿಕೊಳ್ಳಬೇಕಾಗಿತ್ತು..."




"ಅಷ್ಟೇ ತಾನೇ ತಾತ..., ಒಂದು ನಿಮಿಷ..." ಎಂದು ತನ್ನ ಮೊಬೈಲಿನಲ್ಲಿ ಏನೋ ಟೈಪ್ ಮಾಡಿ, "ತಾತ..., ನಿಮ್ಮ ಮೊಬೈಲ್ಗೆ ಒಂದು ಸಂದೇಶ ಕಳುಹಿಸಿದ್ದೇನೆ. ಅದರಲ್ಲಿ 'ಎ' ಅಂತ ಇರುವ ಕಡೆ ನಿಮ್ಮ ಠೇವಣಿಯ ಮೂಲ ಧನವನ್ನು ಹಾಕಿ; 'ಬಿ' ಅಂತ ಇರುವ ಕಡೆ ಶೇಕಡ ಬಡ್ಡಿ ಎಷ್ಟು ಕೊಡುತ್ತಾರೆ ಹಾಕಿ; ಗುಂಡಿ ಒತ್ತಿದರೆ ನಿಮಗೆ ಬರಬೇಕಾಗಿರುವ ಬಡ್ಡಿ ಹಣ ತೋರಿಸುತ್ತದೆ" ಎಂದಳು.

ತಾತ ಆಶ್ಚರ್ಯದಿಂದ ಪಿಂಕಿಯ ಕಡೆ ಮೆಚ್ಚುಗೆಯ ದೃಷ್ಟಿಯನ್ನು ಬೀರಿದರು.

ಅವಳು "ತಾತ, ನೀವು ನಿಮ್ಮ ಬ್ಯಾಂಕಿನಲ್ಲಿ ಇಟ್ಟಿರುವ ಪ್ರತಿ ಠೇವಣಿಯ ಮೊತ್ತ, ಅವುಗಳಿಗೆ ಕೊಡುತ್ತಿರುವ ಶೇಕಡ ಬಡ್ಡಿಯನ್ನು ನನಗೆ ಹೇಳಬಹುದು, ಪರವಾಗಿಲ್ಲ ಅನ್ನಿಸಿದರೆ, ಹೇಳಿ. ಮುಂದಿನ ಹನ್ನೆರಡು ತಿಂಗಳುಗಳು ಅವುಗಳಿಂದ ಬರುವ ಬಡ್ಡಿಯ ಹಣದ ಕೋಷ್ಟಕವನ್ನು ತಯಾರಿಸಿ, ಪ್ರಿಂಟ್ ಮಾಡಿ ಕೊಟ್ಟುಬಿಡುತ್ತೇನೆ. ಬ್ಯಾಂಕಿನಿಂದ ಹಣ ಬಂದಾಗ, ಅದರಲ್ಲಿ ಒಂದು ಬಾರಿ ತಾಳೆ ನೋಡಿ, ಗುರುತು ಹಾಕಿಕೊಂಡರೆ ಆಯಿತು; ಅಷ್ಟೇ...!" ಎಂದಳು.

ಅದನ್ನು ಕೇಳಿ ರಾಯರು, 'ಅದರಿಂದ ತಮ್ಮ ಕೆಲಸ ಎಷ್ಟು ಸುಲಭವಾಗಿ ಆಗಿಹೋಗುತ್ತದೆ. ನನ್ನ ಮೊಮ್ಮಗಳು ಬಲು ಚೂಟಿ, ಬಲು ಬುದ್ಧಿವಂತೆ' ಎಂದುಕೊಂಡು, ಅವಳ ತಲೆಯನ್ನು ಪ್ರೀತಿಯಿಂದ ನೇವರಿಸಿದರು.



"ತಾತ ನೀವು ಗಣಿತದಲ್ಲಿ ಎಕ್ಸ್ಪರ್ಟ್ ಅಂತ ಅಮ್ಮ ಹೇಳ್ತಿದ್ರು..." ಮೊಮ್ಮಗಳ ಈ ಮಾತುಗಳನ್ನು ಕೇಳಿ ರಾಯರು ಫುಲ್ ಖುಷ್!

"ಹೌದು ಮರಿ, ಎಸ್ಎಸ್ಎಲ್ಸಿ ಅಂದರೆ ನಿಮ್ಮ ಹತ್ತನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ನನಗೆ ಆಲ್ಮೋಸ್ಟ್ ಶೇಕಡ ನೂರು ಅಂಕಗಳು ಬಂದಿತ್ತು..."

"ಅಲ್ಲ ತಾತ, ಗಣಿತದಲ್ಲಿ ನೂರಕ್ಕೆ ನೂರು ಬರುತ್ತೆ ಅಥವಾ ಇಲ್ಲ; 'ಆಲ್ಮೋಸ್ಟ್' ಅಂದ್ರೆ ಅದೆಂಥ ಲೆಕ್ಕ?" ಪಿಂಕಿಯ ಪ್ರಶ್ನೆ ಶೇಕಡ ನೂರು ತರ್ಕಬದ್ಧವಾಗಿತ್ತು.

ರಾಯರು "ನನಗೆ ಗಣಿತದಲ್ಲಿ ಬಂದದ್ದು ತೊಂಬತ್ತೈದು ಅಂಕಗಳು. ನಾನು ಉತ್ತರ ಬರೆದದ್ದು ತೊಂಬತ್ತೈದಕ್ಕೆ ಮಾತ್ರ. ಐದು ಪ್ರಶ್ನೆಗಳನ್ನು ಕೊಟ್ಟು, ನಾಲ್ಕಕ್ಕೆ ಉತ್ತರ ಬರೆಯಿರಿ ಅಂತ ಹೇಳಿದ್ದರು. ಆದರೆ ನಾನು ಮೂರಕ್ಕೆ ಮಾತ್ರ ಉತ್ತರಿಸಿದ್ದೆ. ನಾಲ್ಕನೆಯದಕ್ಕೆ ಉತ್ತರ ಚೆನ್ನಾಗಿ ಗೊತ್ತಿತ್ತು. ಅದನ್ನು ಬರೆದಿದ್ದೇನೆ ಅಂದುಕೊಂಡು ಬಿಟ್ಟಿದ್ದೆ. ಅದಕ್ಕೆ ಆಲ್ಮೋಸ್ಟ್..."

ಇಷ್ಟು ಹೇಳುವ ಹೊತ್ತಿಗೆ, ಅವರು ಎಸ್ಎಸ್ಎಲ್‌ಸಿ ತೇರ್ಗಡೆಯಾಗಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲವಾಗಿದ್ದರೂ, ರಾಯರ ಗಂಟಲು ಕಟ್ಟಿತ್ತು; ಮುಂದೆ ಮಾತು ಹೊರಡಲಿಲ್ಲ. ಉತ್ತರ ಚೆನ್ನಾಗಿ ಗೊತ್ತಿದ್ದರೂ ಲೆಕ್ಕದಲ್ಲಿ ನೂರಕ್ಕೆ ನೂರು ಬರಲಿಲ್ಲವಲ್ಲ ಎಂಬುದು ಅವರ ಮನದಲ್ಲಿ ಅಷ್ಟು ಆಳವಾಗಿ ಬೇರೂರಿಬಿಟ್ಟಿತ್ತು.

"ಅಯ್ಯೋ ಪರೀಕ್ಷೆಯ ಕೊನೆಗೆ ಪರಿಶೀಲಿಸಲಿಲ್ವಾ ತಾತ...? ಹೋಗ್ಲಿ ಬಿಡಿ, ನಾನು ನಿಮಗೆ ಶೇಕಡ ನೂರು ಅಂತಾನೇ ಅಂದುಕೊಳ್ಳುತ್ತೇನೆ" ಪಿಂಕಿಯ ಸಾಂತ್ವನದ ಮಾತನ್ನು ಕೇಳಿ ತಾತನಿಗೆ ಎಷ್ಟೋ ಸಮಾಧಾನವಾಯಿತು. ಗಣಿತದಲ್ಲಿ ಇಷ್ಟೊಂದು ಬುದ್ಧಿವಂತರಾದ ತಾತನ ಹತ್ತಿರ ಮೊಮ್ಮಗಳಿಗೆ ಕೇಳುವ ಒಂದೆರಡು ಪ್ರಶ್ನೆಗಳು ಇದ್ದವು. ಹಾಗಾಗಿ "ತಾತ..., ನನಗೆ ಸೆಟ್ ಥಿಯರಿಯಲ್ಲಿ ಕೆಲವು ಸಂದೇಹಗಳಿವೆ, ಬಗೆಹರಿಸ್ತೀರಾ...?" ಪ್ರೀತಿಯಿಂದ ಕೇಳಿದಳು.

"ಸೆಟ್ ಥಿಯರೀನಾ! ನಾವು ಓದುವಾಗ ಅದು ನಮ್ಮ ಪಠ್ಯದಲ್ಲಿ ಇರಲೇ ಇಲ್ಲ ಮರಿ..., ಅದರ ಬಗ್ಗೆ ನನಗೆ ಅಷ್ಟು ಗೊತ್ತಿಲ್ಲ. ತ್ರೈರಾಶಿ, ಭಿನ್ನರಾಶಿ, 'ಏ' ಪ್ಲಸ್ 'ಬಿ' ಹೋಲ್ ಸ್ಕ್ವೇರ್, ಪೈಥಾಗರಸ್ ಥಿಯರಂ... ಮುಂತಾದ ಯಾವುದು ಬೇಕಾದರೂ ಕೇಳು, ಹೇಳಿಕೊಡ್ತೀನಿ..." ಎಂದು ತಮ್ಮ ಜ್ಞಾನ–ಅಜ್ಞಾನಗಳ ಬಗ್ಗೆ ರಾಯರು ಬೆಳಕು ಚೆಲ್ಲಿದರು.

"ಅವೆಲ್ಲ ಈಗ ನಮಗಿಲ್ಲ ತಾತ; ಹೋಗಲಿ ಬಿಡಿ. ನಾನು ಬಂಡವಾಳವಿಲ್ಲದೆ ಹೊಸದಾಗಿ ಯಾವ ಉದ್ಯಮ ಪ್ರಾರಂಭಿಸಿ ಹಣ ಗಳಿಸಬಹುದು? ಅದರ ಬಗ್ಗೆ ಏನಾದರೂ ಐಡಿಯಾ ನಿಮಗೆ ಗೊತ್ತಿದೆಯಾ ತಾತ?"

"ಪಿಂಕಿಮರೀ..., ನೀನು ಇನ್ನೂ ಹೈಸ್ಕೂಲಿನಲ್ಲಿ ಓದುತ್ತಾ ಇದ್ದೀಯ. ಡಿಗ್ರಿ ಮುಗಿಸಿ, ಎರಡು ಮೂರು ವರ್ಷ ಕೆಲಸ ಮಾಡು. ಆಮೇಲೆ ಉದ್ಯಮವನ್ನು ಪ್ರಾರಂಭಿಸುವ ಬಗ್ಗೆ ನೋಡೋಣ. ಅದು ಅಲ್ಲದೆ ಬಂಡವಾಳವಿಲ್ಲದೆ ಮಾಡುವ ಉದ್ಯಮ ಅಂದರೆ ನನಗೆ ಗೊತ್ತಿರುವ ಹಾಗೆ 'ಮೂಲಕ ಮಹಾಶಯ'ರಿಂದ ಮಾಡಿಸುವ ಕೆಲಸ. ಆದರೆ ಅದು ಹುಡುಗಿಯರಿಗೆ ಸೂಕ್ತ ಅಲ್ಲ"

"ಮೂಲಕ ಮಹಾಶಯರು ಅಂದರೆ...?"

"ಅಂದರೆ ಅದು ಒಂದು ತರಹ ದಲ್ಲಾಳಿಗಳ ಕೆಲಸ. ಯಾರಿಗಾದರೂ ಏನಾದರೂ ಕೆಲಸ ಸರ್ಕಾರದಲ್ಲೋ ಇನ್ಯಾವುದೋ ಆಫೀಸಿನಲ್ಲೋ ಆಗಬೇಕು ಅಂತ ಇಟ್ಟುಕೋ. ಆ ಕೆಲಸವನ್ನು ಯಾರ ಮೂಲಕ ಮಾಡಿಸಬಹುದು ಅಂತ ತಿಳಿದುಕೊಂಡಿರುವ ವ್ಯಕ್ತಿಯೇ 'ಮೂಲಕ ಮಹಾಶಯ'. ಅವನಿಗೆ ಫೀಸ್ ಕೊಟ್ರೆ ಕೆಲಸ ಸುಗಮವಾಗಿ, ಸರಾಗವಾಗಿ, ಯಾರಿಂದ ಆಗಬೇಕೋ ಅವರ ಮೂಲಕವೇ



ಮಾಡಿಸಿಕೊಡುತ್ತಾನೆ. ಬಂಡವಾಳವಿಲ್ಲದೆ ಹಣ ಮಾಡುವುದು ನನಗೆ ಗೊತ್ತಿರುವ ಹಾಗೆ ಅದೊಂದೇ...!"

"ಅದೊಂದೇನಾ...?" ಮೊಮ್ಮಗಳು ಒತ್ತಿ ಕೇಳಿದಳು.

"ಹೌದು, ಅದೊಂದೇ...!" ರಾಯರು ಇನ್ನೂ ಒತ್ತಿ ಹೇಳಿದರು.

ಮೊಮ್ಮಗಳು ತನ್ನ ಎರಡು ಕೈಗಳನ್ನು ಮೇಲಕ್ಕೆ ಎತ್ತಿ, "ಯುರೇಕಾ ಯುರೇಕಾ..." ಎಂದು ಜೋರಾಗಿ ಕಿರುಚಿದಳು. ರಾಯರಿಗೆ ಗಾಬರಿ. ಪಿಂಕಿ ಏಕೆ ಹೀಗೆ ಹುಚ್ಚುಹುಚ್ಚಾಗಿ ಕಿರುಚುತ್ತಿದ್ದಾಳೆ ಎಂದು ಆತಂಕವಾಯಿತು.

ಇವಳ ಕಿರುಚಾಟವನ್ನು ಕೇಳಿ ಅವಳ ಅಪ್ಪ, ಅಮ್ಮ ಓಡಿಬಂದರು. ಅವರಮ್ಮ "ಏನು ಕಂಡುಹಿಡಿದೆಯೇ...? ನೊಬೆಲ್ ಪ್ರೈಸ್ ಗ್ಯಾರಂಟಿನಾ...?" ಎಂದು ಅಪರಿಮಿತ ನಿರೀಕ್ಷೆಯಿಂದ ಕೇಳಿದರು. ಅವಳ ತಂದೆ ಮಗಳ ಮುಖದ ಮೇಲಿದ್ದ ಸಂತಸದ ಭಾವವನ್ನು ನೋಡಿ "ಯಾವ ಒಲಂಪಿಯಾಡಿನಲ್ಲಿ ಪ್ರೈಸ್ ಬಂತು...?" ಎಂದು ಕೇಳಿದರು

"ಅದು ಯಾವುದು ಅಲ್ಲ. ಆದರೆ ನನ್ನ ಮಟ್ಟಿಗೆ ಈ ಸಂದರ್ಭ ಅತ್ಯಂತ ಮಹತ್ವದ ಕ್ಷಣ!" ಎಂದಳು ಪಿಂಕಿ.

ತಾತ, ಅಮ್ಮ, ಅಪ್ಪ ಮೂವರೂ 'ಯಾವುದು' ಎಂದು ಪ್ರಶ್ನಾರ್ಥಕವಾಗಿ ಅವಳತ್ತ ನೋಡಿದರು.

"ಶಾಲೆಯಲ್ಲಿ 'ನೀವು ನಿಮ್ಮದೇ ಹೊಸ ಸ್ಟಾರ್ಟಅಪ್ಪನ್ನು ಪ್ರಾರಂಭಿಸುವ ಬಗ್ಗೆ ಒಂದು ಲೇಖನ ಬರೆಯಿರಿ' ಅಂತ ಕೇಳಿದ್ದರಲ್ಲ; ಯಾವುದೇ ಐಡಿಯಾ ಹೊಳೆದಿರಲಿಲ್ಲ. ಇವತ್ತು ತಾತನ ಜೊತೆ ಮಾತನಾಡಿದ ಮೇಲೆ ಆ ಸೂಪರ್ ಐಡಿಯಾ ಹೊಳೆಯಿತು" ಎಂದಳು.

"ನಾನು ನಿನಗೆ ಯಾವ ಐಡಿಯಾ ಕೊಟ್ಟೆ ಮರಿ...?" ಹೆಮ್ಮೆಯಿಂದ ತಾತ ಕೇಳಿದರು.

"ಅಮ್ಮಾ..., ತಾತನಿಗೆ ಮೊಬೈಲಿನಲ್ಲಿ ಕ್ಯಾಲ್ಕುಲೇಟರ್ ಇದೆ ಅಂತ ಗೊತ್ತಿಲ್ಲ. ಫಾರ್ಮುಲಾ ಹಾಕಿ ಪ್ರತಿ ತಿಂಗಳು ಬ್ಯಾಂಕಿನಿಂದ ಬರುವ ಬಡ್ಡಿ ಲೆಕ್ಕ ಮಾಡಿಕೊಡುವ ಎಕ್ಸಲ್ ಶೀಟ್ ಬಗ್ಗೆ ಗೊತ್ತಿಲ್ಲ. ಅಪ್ಪಾ..., ಒಂದು ಕಾಸು ಬಂಡವಾಳವಿಲ್ಲದೆ ಹೊಸ ಸ್ಟಾರ್ಟಅಪ್ ಪ್ರಾರಂಭಿಸಬಹುದು ಅಂತಲೂ ಅವರಿಗೆ ಗೊತ್ತಿಲ್ಲ. ಹೀಗೆ ಇಂದಿನ ಮಕ್ಕಳಿಗೆ ಗೊತ್ತಿರುವ, ಬೇಕಾಗಿರುವ ಅನೇಕ ವಿಚಾರಗಳು ಅಜ್ಜಿ ತಾತಂದಿರಿಗೆ ಗೊತ್ತಿರುವುದಿಲ್ಲ. ಅದಕ್ಕೆ ಅಂಥವರ ಸಹಾಯಕ್ಕೆ "ನಾನ – ನಾನಿ ಆನ್ಲೈನ್ ಕೋರ್ಸ್" ಪ್ರಾರಂಭಿಸುತ್ತೇನೆ!"

ಇಂಥ ಒಂದು ಕ್ರಾಂತಿಕಾರಿ ಯೋಜನೆಯ ಹಿಂದಿದ್ದ ಆಲೋಚನೆಯನ್ನು ಪಿಂಕಿ ಎಳೆಎಳೆಯಾಗಿ ತೆರೆದಿಟ್ಟಳು. ಇಂದಿನ ಅನೇಕ ವಿಚಾರಗಳು ಗೊತ್ತಿಲ್ಲದ ಕಾರಣಕ್ಕೆ, ಅವಳ ಅನೇಕ ಸ್ನೇಹಿತರು ತಮ್ಮ ಅಜ್ಜಿ ತಾತಂದಿರಿಗೆ ಗೌರವವನ್ನೇ ಕೊಡುತ್ತಿರಲಿಲ್ಲ, ಅಸಡ್ಡೆ ಮಾಡುತ್ತಿದ್ದರು. ಅವರ ಕಾಲದಲ್ಲಿ ಹೀರೋಗಳಾಗಿದ್ದವರು ಇಂದು ಜೀರೋಗಳಾಗಿರುವುದನ್ನು ನೋಡಿ ಪಿಂಕಿಗೆ ಬೇಜಾರಾಗುತ್ತಿತ್ತು. ಅದಕ್ಕೆ 'ಜೆನ್ ಝಿ? ಮೊಮ್ಮಕ್ಕಳಿಗೆ ತಕ್ಕ ಅಜ್ಜಿ ತಾತಂದಿರಾಗಿ' ಅಂತ ಆನ್ಲೈನ್ ಟುಟೋರಿಯಲ್



ಪ್ರಾರಂಭ ಮಾಡುವ ಐಡಿಯಾ ಅವಳದ್ದು. ಇದರಿಂದ 'ಏನು ಗೊತ್ತಿಲ್ಲ' ಅನ್ನುವುದಕ್ಕಿಂತ 'ಆ ವಿಚಾರದ ಬಗ್ಗೆ ಗೊತ್ತು' ಎನ್ನುವಷ್ಟರ ಮಟ್ಟಿಗೆ ಆತ್ಮವಿಶ್ವಾಸವನ್ನು ಅಜ್ಜಿ ತಾತಂದಿರಲ್ಲಿ ಉದ್ದೀಪಿಸುವ ಮಹತ್ವಾಕಾಂಕ್ಷಿ ಯೋಜನೆ ಅದು.

'ನಿಮ್ಮ ಅಜ್ಜಿ ತಾತಂದಿರಿಗೆ ಏನೇನು ಗೊತ್ತಿಲ್ಲ ತಿಳಿಸಿ' ಎಂದು ಆನ್ಲೈನ್‌ನಲ್ಲಿ ಮೊಮ್ಮಕ್ಕಳ ಸರ್ವೆ ಮಾಡಿ, ಹತ್ತಕ್ಕಿಂತ ಹೆಚ್ಚು ವಿಚಾರಗಳನ್ನು ತಿಳಿಸಿದವರಿಗೆ ನಾನ – ನಾನಿ ಆನ್ಲೈನ್ ಕೋರ್ಸ್ ಶುಲ್ಕದಲ್ಲಿ ಶೇಕಡ ಹತ್ತು ವಿನಾಯಿತಿ; ಅವುಗಳೊಂದಿಗೆ ಸೂಕ್ತ ಕಲಿಸುವ ವಿಧಾನಗಳನ್ನು ಅವರ ಅನುಭವದಿಂದ ಆನ್ಲೈನ್‌ನಲ್ಲಿ ತಿಳಿಸಿದವರಿಗೆ ಶೇಕಡ ಇಪ್ಪತ್ತೈದರಷ್ಟು ರಿಯಾಯಿತಿ. ಇವುಗಳ ಜೊತೆಗೆ "ಒಂದೆರಡು ಮೊಬೈಲ್ ಕಂಪನಿಯವರೊಡನೆ ಒಪ್ಪಂದ ಮಾಡಿಕೊಂಡು ಅಜ್ಜಿ ತಾತಂದಿರಿಗೆ ರಿಯಾಯಿತಿ ದರದಲ್ಲಿ ಹೊಸ ಮೊಬೈಲ್ ಕೊಡಿಸುವ ಏರ್ಪಾಟು ಮಾಡಿ, ಅದರ ಕಮಿಷನ್ ನೇರವಾಗಿ ನಮ್ಮ ಖಾತೆಗೆ ಬರುವ ಹಾಗೆ ಮಾಡ್ತೀನಿ" ಎನ್ನುವ ಅಪ್ಪಟ ವ್ಯವಹಾರದ ಆಲೋಚನೆ ಪಿಂಕಿಯದು.

"ನಿನ್ನ ಹೊಸ ಸ್ಟಾರ್ಟ್ ಅಪ್‌ಗೆ 'ನಾನ – ನಾನಿ' ಅನ್ನುವ ಹಿಂದಿ ಹೆಸರೇ ಯಾಕಮ್ಮ? ಅಪ್ಪಟ ಕನ್ನಡದ ಅಜ್ಜಿ ತಾತ ಅಂತ ಇಡಬಹುದಲ್ವಾ?" ಶೇಕಡಾ ನೂರು ಕನ್ನಡ ಪ್ರೇಮಿ ತಾತ ಪಿಂಕಿಯನ್ನು ಕಳಕಳಿಯಿಂದ ವಿಚಾರಿಸಿದರು.

"ಮೊದಲು ನಾನು ಹಾಗೆ ಅಂದುಕೊಂಡೆ ತಾತಾ..., ಆದರೆ ಇದಕ್ಕೆ ಅಖಿಲ ಭಾರತದಿಂದ ಎಲ್ಲ ಭಾಷೆಗಳನ್ನು ಮಾತನಾಡುವ ಅಜ್ಜಿ ತಾತಂದಿರು ಸೇರಿಕೊಳ್ಳುತ್ತಾರೆ. ನಿಧಾನವಾಗಿ ಅವರವರ ಮಾತೃಭಾಷೆಯಲ್ಲೂ ಈ ಶಿಕ್ಷಣ ಕೊಡ್ತೀವಿ! ಹಾಗಾಗಿ ಆ ಹೆಸರು. ಅದರ ಜೊತೆಗೆ ಅದಕ್ಕೆ ಒಂದು ಆಕರ್ಷಕ ಇಂಗ್ಲಿಷ್ ಟ್ಯಾಗ್ ಲೈನು ಇರುತ್ತೆ ತಾತ...!" ಇಷ್ಟು ಹೇಳಿ ಕೇಳುತ್ತಿದ್ದ ಹಿರಿಯರ ಕುತೂಹಲ ಹೆಚ್ಚಿಸಿದಳು.


"ಅದೇನಮ್ಮಾ...?" ಎಲ್ಲರು ಅಚ್ಚರಿಯಿಂದ ಕೇಳಿದರು.

"ಗ್ರಾಂಡ್ ಪೇರೆಂಟ್ಸ್ ಅಲ್ಟಿಮೇಟ್ ಸೈಟ್ ಫಾರ್ ಅಫೆಕ್ಷನೇಟ್ ಔರ"

ತಾತ, ಅಮ್ಮ, ಅಪ್ಪ, ಅಷ್ಟುಹೊತ್ತಿಗೆ ಅವರೊಂದಿಗೆ ಸೇರಿದ್ದ ಅಜ್ಜಿ – ನಾಲ್ವರೂ ತಮ್ಮತಮ್ಮ ತೆರೆದ ಬಾಯಿಂದ ಅವಳ ಗಾಢಭರವಸೆಯು ತುಂಬಿತುಳುಕುತ್ತಿದ್ದ ಮುಖವನ್ನೇ ಹೆಮ್ಮೆಯಿಂದ ದೃಷ್ಟಿಸಿದರು.

"ಜೆನ್ ಝಿ? ಶಕೆ"ಯ ಪಿಂಕಿಯು ಬಂಡವಾಳವಿಲ್ಲದೆ ಪ್ರಾರಂಭಿಸುವ ಉದ್ಯಮದ ಬಗ್ಗೆ ತಿಳಿದು, ಅವಳ ತಾತ "ಹೌದಮ್ಮ, ನನ್ನ ಬುದ್ಧಿವಂತ ಮೊಮ್ಮಗಳಿಗೆ ತಕ್ಕ ತಾತ ಆಗಲು ನಮ್ಮಂಥ ಅಜ್ಜಿ ತಾತಂದಿರು ತಿಳಿಯಬೇಕಾಗಿರುವುದು ಬೇಕಾದಷ್ಟಿದೆ. 'ಅದಕ್ಕೆ ಒಂದೇ ಮಾರ್ಗ ಈ ನಾನ – ನಾನಿ ಆನ್ಲೈನ್ ಕೋರ್ಸ್' ಅಂತ ನಾನು 'ಬ್ರಾಂಡ್ ಅಂಬಾಸಿಡರ್' ಆಗ್ತೀನಿ" ಎಂದರು.

"ತಾತಾ..., ನೀನು ಸೂಪರ್ ಸ್ಮಾರ್ಟ್! ಅದಕ್ಕೆ ಸೂಕ್ತ ಸಂಭಾವನೆಯನ್ನು ನಾನು ನಿನಗೆ ಕೊಡ್ತೀನಿ!" ಎಂದು ಪಿಂಕಿ ಅವರನ್ನು ಅಪ್ಪಿಕೊಂಡಳು.



## ಸಿ.ಸಿ.ಟಿ.ವಿ ಕ್ಯಾಮೆರಾಗಳ ಸಮಾವೇಶ

**ರಾಂಕಿ ಬೆಳ್ಳೂರ್**

ಬೆಂಗಳೂರಿನಲ್ಲಿರೋ ಸಿ ಸಿ ಟಿ ವಿ ಕ್ಯಾಮೆರಾಗಳ ಸಮಾವೇಶ ನಡೀತಿತ್ತು ನ್ಯಾಷನಲ್ ಕಾಲೇಜ್ ಮೈದಾನದಲ್ಲಿ. ಕಣ್ ದೃಷ್ಟಿ ಗಣಪನ ಕುರಿತ ಪ್ರಾರ್ಥನೆ ಗೀತೆಯೊಂದಿಗೆ ಕಾರ್ಯಕ್ರಮದ ಓಂಕಾರ ಹಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಧಾನ ಸೌಧದ ಸಿ ಸಿ ಟಿ ವಿ ಮೈಕ್ ಹಿಡಿದು ಹೇಳಿತು :

"ಪ್ರಪಂಚದಲ್ಲೆಡೆ ಹೆಚ್ಚುತ್ತಿರುವ ನಮ್ಮ ಸಂಖ್ಯೆಯಿಂದಾಗಿ, ನಮಗೆ ಮನ್ನಣೆ ಸಿಕ್ಕಿ ಇಂದು ರಾಷ್ಟ್ರಪತಿ ಭವನದಲ್ಲಾಗಲಿ ಪುಢಾರಿಗಳ ಮನೆಯಲ್ಲಾಗಲಿ, ನಮ್ಮ ಅಸ್ತಿತ್ವ ಇದೆ. ಮನುಷ್ಯರಾದರೂ ಕಣ್ ಮಿಟುಕಿಸುವಷ್ಟರಲ್ಲಿ ತಮ್ಮ ಕೈ ಚಳಕ ತೋರಿಸ್ತಾರೆ. ಮೊನ್ ಮೊನ್ನೆ ನಡೆದ ಘಟನೆ. ಅಮೆರಿಕಾದಲ್ಲಿ ನೆಲೆಸಿರುವ ಸಾಫ್ಟ್‌ವೇರ್ ಇಂಜಿನಿಯರ್ ಶೃತಿ, ಮುಧೋಳದಲ್ಲಿ ತಮ್ಮ ತಂದೆಯ ಮನೆಯ ಸಿಸಿಟಿವಿ ದೃಶ್ಯಗಳನ್ನು ನೋಡಿ ಚಡ್ಡಿ ಗ್ಯಾಂಗ್ ಕಳ್ಳರ ಬಗ್ಗೆ ಎಚ್ಚರಿಕೆ ನೀಡಿದ ಘಟನೆಯು ನಡೆದಿದೆ. ಕಳ್ಳರನ್ನು ಹಿಡಿದ ಶ್ರೇಯಸ್ಸು ತಕ್ಕಮಟ್ಟಿಗೆ ನಮಗೂ ಸೇರಲ್ಲವೇ?

ಮನುಷ್ಯರು ನಮ್ಮನ್ನು ನಂಬಿರುವುದೇ ನಮಗೆ ಕಣ್ ರೆಪ್ಪೆ ಇಲ್ಲದೆ ಇರುವುದರಿಂದ. ನಾವು ಕಣ್ಣಿಗೆ ಎಣ್ಣೆಬಿಟ್ ಕೊಳ್ಳದೆ ಸದಾ ಕಣ್ ಬಿಟ್ ಕೊಂಡ್ ಕಾಯೋ ಭೂಪರು. ವೇದಿಕೆ ಮೇಲಿರುವ ಗಣ್ಯ ಸಿ ಸಿ ಟಿ ವಿ ಕ್ಯಾಮೆರಾಗಳಿಗೆಲ್ಲ ವಂದನೆ. ಸಭೆಯಲ್ಲಿರುವ ಸಮಸ್ತ ಸಿ ಸಿ ಟಿ ವಿ ಕ್ಯಾಮೆರಾ ಇನ್ಸ್ಟಾಲ್ ಮಾಡುವ ಟೆಕ್ನಿಷಿಯನ್ಸ್ ಎಲ್ಲರಿಗೂ ನಮಸ್ಕಾರ. ನೀವಿದ್ದರೆ ನಾವು. ನಾವಿದ್ದರೆ ನೀವು. ಕನಕದಾಸರ ಕಾಲದಲ್ಲಿ ನಾವುಗಳು ಇದ್ದಿದ್ದರೆ ಮಠದವರು ಎಲ್ಲೆಲ್ಲಿ ಬಾಳೆ ಹಣ್ಣು ತಿಂದರು ಎಂದು ನೋಡಬಹುದಿತ್ತು. ನಾವುಗಳು ಹುಟ್ಟಿದ್ದು 1927 ಕ್ರೆಮ್ಲಿನ್ ಅಂತಾ ಇದ್ದರೂ, ಆ ದೃಶ್ಯಗಳನ್ನು ರೆಕಾರ್ಡ್ ಮಾಡಲಾಗಲಿಲ್ಲ. 1942ರಲ್ಲಿ ಅಂತ ಅಧಿಕೃತವಾಗಿ ದಾಖಲಿಸಲಾಗಿದೆ. ನಮ್ಮ ದೇಶಕ್ಕೆ ಬಂದಿದ್ದು ಎಂಬತ್ತರ ದಶಕದ ಕೊನೆಯಲ್ಲಿ. ಇಂದು ಬೆಂಗಳೂರಿನಲ್ಲಿ ಸದ್ಯ ಐದು ಲಕ್ಷದಷ್ಟು ನಮ್ಮಗಳ ಸಂಸಾರ ಬೆಳೆದಿದೆ. ನಮ್ಮವರು ಮುಂಚೂಣಿಯಲ್ಲಿರುವುದು ತೆಲಂಗಾಣದಲ್ಲಿ–ಒಂದು ಸಾವಿರ ಜನರಿಗೆ ಮೂವತ್ತಾರು ಕ್ಯಾಮರಾಗಳು ಅಲ್ಲಿ !

ಸಿ ಸಿ ಟಿ ವಿ ಕ್ಯಾಮೆರಾ ಕಂಡು ಹಿಡಿದು ಈ ಉದ್ಯಮವನ್ನು ಹುಟ್ಟುಹಾಕಿ ಬೆಳೆಸುತ್ತಿರುವ ಮನುಷ್ಯರಿಗೆ ಒಂದೇ ಮಾತು ಹೇಳ ಬಯಸುವೆ : ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ಎಂದರು ದಾಸರು. ಆದುದರಿಂದ ನಮ್ಮನ್ನು ಹೆಚ್ಚು ಹೆಚ್ಚು ಎಲ್ಲೆಡೆ ಅಳವಡಿಸಿ ನಿಮ್ಮ ಜೀವನದಲ್ಲಿ ಕಣ್ಗಾವಲು ಮಾಡೋ ಕೆಲಸಕ್ಕೆಲ್ಲ ಸಮಯ ವ್ಯರ್ಥ ಮಾಡಬೇಡಿ. ಐಸ್ ಪೈಸ್ ಆಡುವಾಗ ನೀವೇ ಹೇಳ್ತಿದ್ರಲ್ಲ : ಅಜ್ಜಿ ಮನೆ ಕಾಯೋ ಹಾಗಿಲ್ಲ ಅಂತ... ಆ ಕಾಯೋ ಕೆಲಸ ನಾವ್ ಮಾಡ್ತೀವಿ. ನೀವು ಉನ್ನತವಾದ ಕೆಲಸಗಳಲ್ಲಿ ತೊಡಗಿಕೊಂಡು ಜೀವನದಲ್ಲಿ ಸಾರ್ಥಕ್ಯ ಪಡೆಯಲೆಂದು ನಮ್ಮ ಆಸೆ."



ನಂತರ ಮಾತನಾಡಿದ ಕೆಲ ಮುಖ್ಯ ಸಿ ಸಿ ಟಿ ವಿ ಕ್ಯಾಮೆರಾಗಳು ತಮ್ಮ ದಿನ ನಿತ್ಯದ ಬವಣೆಯನ್ನು ಹೇಳಿಕೊಂಡವು. ಮೊದಲು ಬಂದಿದ್ದು ಕಾರ್ಪೊರೇಷನ್

ಸರ್ಕಲ್–ನಲ್ಲಿರುವ ಸಿ ಸಿ ಟಿ ವಿ ಕ್ಯಾಮೆರಾ. ನಮ್ಮ ಕಷ್ಟ ಯಾರಿಗೂ ಬೇಡ. ವಾಯು ಮಾಲಿನ್ಯ ಅತ್ಯಧಿಕ ನಾನಿರೋ ಜಗದಲ್ಲಿ. ಆ ಹೋಗೆ ಧೂಳಿನಿಂದಾಗಿ




ಕಣ್ ಕಾಣಲ್ಲ ಸರಿಯಾಗಿ. ಕಣ್ ಆಪರೇಷನ್ ಆಗಬೇಕಿದೆ. ಯಾವಾಗಲೂ ಒಂದು ಕಾವು ಇರತ್ತೆ ರಸ್ತೇಲಿ. ತಂಪು ವಾತಾವರಣವೇ ಕಾಣೆ.

ನೆಕ್ಸ್ಟ್ ಬಂದಿದ್ದು ಮಾರತ್ತಳ್ಳಿಯ ಜ್ಯುವೆಲರಿ ಅಂಗಡಿ ಸಿ ಸಿ ಟಿ ವಿ : ನನ್ನ ಕಾರ್ಯ ಸ್ಥಳವೇನೋ ಸದಾ ತಂಪು... ಆದರೆ ನಮ್ಮ ಅಂಗಡಿಯಲ್ಲಿ ಬೆಲೆ ಬಾಳುವ ವಸ್ತುಗಳಿರೋದರಿಂದ ಆಕಡೆ ಈಕಡೆ ನೋಡಕ್ಕಾಗಲ್ಲ. ಕಳ್ಳರು ಬಂದ್ರೆ ನನ್ನ ಮೇಲೆ ಕಪ್ಪು ಬಟ್ಟೆ ಹೊದಿಸಿ ಕೆಲಸ ಮಾಡಿ ಹೋಗ್ತಾರೆ, ಇಲ್ಲ ನನ್ನ ನರ ನಾಡಿಗಳನ್ನೆಲ್ಲ ಕತ್ತರಿಸಿ ಬಿಸಾಡಿ ಹೋಗ್ತಾರೆ.

ರಾಜಾಜಿನಗರದ ಕಾಲೇಜಿನಲ್ಲಿರುವ ಸಿ ಸಿ ಟಿ ವಿ ಕ್ಯಾಮೆರಾ ತನ್ನ ಅಳಲನ್ನು ತೋಡಿಕೊಂಡಿತು : ನಿಮ್ಮದೆಲ್ಲಾ ಏನೂ ಇಲ್ಲ, ನನ್ನ ಕರ್ಮಾ ನೋಡಿ...ಈಗಿರೋ ವಿದ್ಯಾರ್ಥಿಗಳ ಚಂಗಲುತನ ನೋಡಿ ಏನು ಹೇಳಲಿ–ಬೆಳಬೆಳಗ್ಗೆ ಅವುಗಳ ಹುಡುಗಾಟ ಶುರು... ತಿಂಡಿಗೆ ಬಿಂಗೊ ತಿನ್ನಾಟ, ಲಲ್ಲೆ ಹೊಡೆಯಾಟ, ಯಾವಾಗಲೂ ಮೊಬೈಲ್ ಒಳಗೇ ಮುಳುಗಾಟ, ನೋಡಕ್ಕಾಗಲ್ಲ ಕಣ್ರಯ್ಯ !


ಮಲ್ಲೇಶ್ವರದ ದೋಸೆ ಹೋಟೆಲ್ ಸಿ ಸಿ ಟಿ ವಿ ಕ್ಯಾಮೆರಾ ನಿಧಾನಕ್ಕೆ ಬಂದು ನಿಂತು ಮಾತು ಶುರು ಮಾಡಿತು : ನಿಮ್ಮದೆಲ್ಲಾ ಅಂಥಾದ್ದೇನಿಲ್ಲ ಬಿಡ್ರಪ್ಪ, ಬರೀ ನೋಡೋದು.. ನಂದು ಕೇಳಿ. ನಮ್ ಹೋಟೆಲ್ ದೋಸೆ ಅಂದರೆ ಬೇರೆ ಊರಿಂದ ಬಂದು ತಿಂದ್ ಹೋಗ್ತಾರೆ... ಆ ಲೆವೆಲ್ ಫೇಮಸ್ಸು... ನನ್ ಹಣೆಬರಹದಲ್ಲಿ – ತಿನ್ನೋರನ್ನ ನೋಡಬೇಕೆ ಹೊರತು... ತಿನ್ನೋ ಭಾಗ್ಯ ಕೇಳ್ಕೊಂಡ್ ಬರ್ಲಿಲ್ಲ. ಎಂಥೆಂಥ ತಿಂಡಿ ತಿನಿಸುಗಳು ಕಣ್ ಮುಂದೆ ಹೋಗತ್ತೆ... ಇದಕ್ಕಿಂತ ಕಷ್ಟ ಏನಿದೆ ಹೇಳಿ ?

ಇಷ್ಟರ ಮಧ್ಯೆ ಬಂದು ಮಾತಾಡಿದ ಪ್ರಸಿದ್ಧ ಎಂಟ್ರಮಣಸ್ವಾಮಿ ದೇವಸ್ಥಾನದ ಸಿ ಸಿ ಟಿ ವಿ ಹೀಗೆ ಹೇಳಿತು : ನನ್ನ ಪೂರ್ವ ಪುಣ್ಯದ ವಿಶೇಷ ನೋಡ್ರಪ್ಪಾ... ಇಪ್ಪತ್ನಾಲ್ಕು ಘಂಟೆ ದೇವರನ್ನು ನೋಡಿ ಸಾರ್ಥಕ್ಯ ಪಡೆಯೋ ಸೌಭಾಗ್ಯ ನನ್ನದು! ದೇವರಿಗೆ ಆಗೋ ಅಭಿಷೇಕ, ಕಲ್ಯಾಣೋತ್ಸವ, ಉತ್ಸವಾದಿಗಳನ್ನು ನೋಡಿ ಕಣ್ ತುಂಬಿಕೊಳ್ತಿದ್ದೇನೆ. ಇಲ್ಲೇ ರಿಟೈರ್ ಮಾಡಿಸಪ್ಪಾ ಅಂತ ಸ್ವಾಮಿಗೆ ಅರ್ಚನೆ ಮಾಡಿಸಿದ್ದೇನೆ.



ಆರ್ ಆರ್ ನಗರದ ಪುಢಾರಿ ಮನೆ ಮೂಲೇಲಿ ನೇತಾಡೋ ಸಿ ಸಿ ಟಿ ವಿ ಕ್ಯಾಮೆರಾ ಸಂಕೋಚದಿಂದ ಬಂದರು ಜೋರಾಗೆ ಬೀಗಿತು : ನಮ್ ಓನರ್ ಅಂದು ಡಾನ್.. ಇಂದು? ಖ್ಯಾತ ರಾಜಕಾರಿಣಿ.. ನನ್ ಏರಿಯಾದಲ್ಲಿ ನೋಡಿರೋ ಅಷ್ಟು ಗಲಭೆ ಗದ್ದಲ ನೀವುಗಳು ಇಡೀ ನಿಮ್ಮ ಜೀವನದಲ್ಲಿ ನೋಡಿರಲ್ಲ... ಆಲ್ ಟೈಮ್ ಅಲರ್ಟ್ ಆಗಿರ್ಬೇಕ್ ನಾನು.

ಊಟದ ಸಮಯ ಆದರೂ ಒಂದೇ ಸಮಯ ವಟಗುಟ್ಟುತ್ತಿರುವ ಸಿ ಸಿ ಟಿ ವಿ ಕ್ಯಾಮೆರಾಗಳನ್ನ ನೋಡಿ ಮೈದಾನದಲ್ಲಿರೋ ಸಿ ಸಿ ಟಿ ವಿ ಕ್ಯಾಮೆರಾಗಳು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿರುವುದನ್ನು ಕಂಡ ಆಯೋಜಕರು ಲಂಚ್ ಬ್ರೇಕ್ ಎಂದು ತಕ್ಷಣ ಘೋಷಿಸಿದರು !



# ಅಪರೂಪದ ಅಪರಂಜಿ

**ಕುಮುದಾ ಪುರುಷೋತ್ತಮ್**

**ಅ**ಪರಂಜಿ ಹೆಸರಿಗೆ ತಕ್ಕಂತೆ ಚೊಕ್ಕ ಚಿನ್ನವೇ. ಪರಿಶುದ್ಧವಾದ ನಿಷ್ಕಳಂಕ ಹಾಗೂ ಉತ್ತಮ ಹಾಸ್ಯಬೀರುತ್ತಾ ವಯ್ಯಾರದಿಂದ ಸಾಗುವವಳು. ಅವಳು ಅಪರೂಪದವಳೂ ಹೌದು. ಇಂತಹವಳು ದೊರಕುವುದು ಬಲು ವಿರಳ. ಯಾರನ್ನೂ ನೋಯಿಸದೆ ಎಲ್ಲದಕ್ಕೂ ತೆಳುಹಾಸ್ಯ ಲೇಪಿಸಿ ಓದುಗರ ಮನಸ್ಸಿನಲ್ಲಿ ಬಹುಕಾಲ ನಿಂತು ಬಾಯಿ ಚಪ್ಪರಿಸುವಂತೆ ಮಾಡುವವಳು ನಮ್ಮ ಅಪರಂಜಿ.

ಇವಳ ಇರುವಿಕೆ ನನ್ನರಿವಿಗೆ ಬರುವವೇಳೆಗೆ ಅವಳಾಗಲೆ ಐದುವರ್ಷದ ಕಿಶೋರಿ. ಮನೆಗೆ ಬಂದಿದ್ದ ಸಾಹಿತ್ಯ ಪ್ರಿಯ ಗೆಳೆಯರೊಬ್ಬರಿಂದ ಕೊರವಂಜಿಯ ವಾರಸುದಾರಿಣಿಯಾಗಿ ಅಪರಂಜಿಯ ಅವತಾರವಾಗಿದೆ ಎಂದು ತಿಳಿದೊಡನೆ ಅವಳ ತೌರಿಗೆ ಧಾವಿಸಿದೆ. ಕುಣಿಕುಣಿಯುತ್ತಾ ನಗುನಗುತ್ತಾ ಬಂದು ನನ್ನ ಕೈಹಿಡಿದು ನನ್ನ ಬಳಗಕ್ಕೆ ಸೇರುತ್ತೀಯಾ ಎಂದು ಕಣ್ಣಿನಲ್ಲೇ ಕೇಳಿದಳು. ಅಂದೇ ಅವಳ ಬಳಗಕ್ಕೆ ಸೇರಿಯೂ ಬಿಟ್ಟೆ ಒಂದು ಶರತ್ತಿನಮೇಲೆ. ತಿಂಗಳಿಗೊಂದು ಬಾರಿ ನಾನೆಲ್ಲಿದ್ದರೂ ಬಂದು ದರ್ಶನನೀಡಿ ಹಾಸ್ಯ ಸಿಂಚನ ಮಾಡಿ ಹೋಗಬೇಕೆಂದೆ. ಓಪ್ಪಿದಳು. ಅದರಂತೆ ನಡೆದೂ ನಡೆದಳು. ಕಾಲ ಬದಲಾಗುತ್ತಾ ಬಂತು. ಅವಳನ್ನು ಹೆಗಲಮೇಲೆ ಹೊತ್ತು ತರುತ್ತಿದ್ದ ಅಂಚೆಯವನ ರೂಪ ಬದಲಾಗುತ್ತಾ ಹೋಯಿತು. ಖಾಕಿ ಧರಿಸಿ ಹೊರೆ ಅಂಚೆ ತರುತ್ತಿದ್ದವನ ಚೀಲ ಹಗುರಾಗುತ್ತಾ ಹೋಯಿತು. ಪತ್ರಗಳ ಮೂಲಕ ನಡೆಯುತ್ತಿದ್ದ ಸಂವಹನ ಇಂಟರ್‌ನೆಟ್‌ನ ಪಾಲಾಯ್ತು. ಅದುವರೆಗೂ ಪತ್ರಗಳನ್ನು ನೀಡಿ ನಗುತ್ತಾ ಯೋಗಕ್ಷೇಮ ವಿಚಾರಿಸುತ್ತಾ ನಮ್ಮೊಳಗೊಬ್ಬನಾಗಿದ್ದ ಅಂಚೆಯವ ಅಮಾವಾಸ್ಯೆಗೊಮ್ಮೆ ಹುಣ್ಣಿಮೆಗೊಮ್ಮೆ ಸರ್ರನೆ ಬೈಕಿನಲ್ಲಿ ಬಂದು ಕೈಯಲ್ಲಿ ಹಿಡಿದಿದ್ದ ಒಂದೆರಡು ಪತ್ರಗಳನ್ನು ಮನೆಯ ಅಂಚೆ ಡಬ್ಬಿಯಲ್ಲಿ ತೂರಿಸಿ ಬಿರುಗಾಳಿಯಂತೆ ಹೋಗಿಬಿಡುತ್ತಿದ್ದ. ಅವನ ಕೈಯಲ್ಲಿದ್ದ ಅಪರಂಜಿ ಬಾಲ್ಯ ಯೌವನ ದಾಟಿ ಪ್ರೌಢತೆಯತ್ತ ಸಾಗುತ್ತಿದ್ದವಳು ಹೇಗೋ ನನ್ನ ಕೈಸೇರುತ್ತಿದ್ದಳು.

ಕಾಲಸರಿದಂತೆ ಇವಳೂ ಸ್ವಲ್ಪ ಸ್ವಲ್ಪವೇ ಬದಲಾಗತೊಡಗಿದಳು. ಹಿಂದೆಲ್ಲಾ ತಪ್ಪದೆ ತಿಂಗಳ ಮೊದಲ ವಾರದಲ್ಲಿಯೇ ಬರುತ್ತಿದ್ದವಳು ಕ್ರಮೇಣ ತಡವಾಗಿ ಬರತೊಡಗಿದಳು. ಒಮ್ಮೊಮ್ಮೆ ನಾನು ಕಾದೂ ಕಾದೂ ಅವಳಿಗಾಗಿ ಹಲುಬುವಂತಾಗುತ್ತಿತ್ತು. ಒಮ್ಮೆ ಅವಳ ತೌರಿಗೆ ಫೋನಾಯಿಸಿದೆ. "ನಾವು ಸಮಯಕ್ಕೆ ಸರಿಯಾಗಿ ಕಳುಹಿಸುತ್ತಿದ್ದೇವೆ. ಅದೆಲ್ಲಿ ತಪ್ಪಿಸಿ ಓಡಾಡುತ್ತಿದ್ದಾಳೆಯೋ ತಿಳಿಯದು. ಅಂಚೆ ಕಛೇರಿಯಲ್ಲಿ ವಿಚಾರಿಸಿ ನೋಡಿ ಎಂದು ಕೈ ತೊಳೆದುಕೊಂಡರು. ಅವರ ಸಲಹೆ ಶಿರಸಾವಹಿಸಿ ಪಾಲನೆ ಮಾಡಿ ಪೋಸ್ಟ್ ಮಾಸ್ಟರ್ ಬಳಿ ನನ್ನ ಅಹವಾಲು ಕೊಂಡೊಯ್ದೆ." ಮೇಡಂ, ರಿಜಿಸ್ಟರ್ಡ ಅಂಚೆಯಾದರೆ ಪರಿಶೀಲಿಸಬಹುದು. ಬುಕ್ ಪೋಸ್ಟ್ ಮೂಲಕ ಬಂದಿದ್ದರೆ ನಾವು ಜವಾಬ್ದಾರರಲ್ಲ" ಎಂದು ಹೇಳಿ ಸೋಪು ಹಾಕಿ ಕೈ ತೊಳೆದುಕೊಂಡರು!

ಒಂದು ದಿನ ಹೊತ್ತು ಹೋಗದೆ 'ದಾರಿಕಾಣದಾಗಿದೆ ರಾಘವೇಂದ್ರನೇ....' ಗುನುಗುತ್ತಾ ಕುಳಿತಿದ್ದೆ. ಅಂಚೆ ಪೆಟ್ಟಿಯಲ್ಲಿ ಭಾರವಾದ ಲಕೋಟೆ ಬಿದ್ದ ಸದ್ದಾಯಿತು. ಪಳನಿ ಮುರುಗ ದೇವಾಲಯದಿಂದ ಬಂದಿದ್ದ ಅಂಚೆ ಅದು. ನಮ್ಮ ಪಕ್ಕದ ಬಡಾವಣೆಯ ಆರ್ಮುಗಂ ಅನ್ನುವವರಿಗೆ ಪ್ರಸಾದ ಬಂದಿತ್ತು. ವಿಳಾಸ ಸರಿಯಾಗಿ ಓದದೆ ಅಂಚೆಯವ ನಮ್ಮಲ್ಲಿಗೆ ತಂದು ಹಾಕಿದ್ದ. ಕೂಡಲೇ ವಿಳಾಸವನ್ನು ಕೆಂಪು ಶಾಯಿಯಲ್ಲಿ ಢಾಳಾಗಿ ಕಾಣುವಂತೆ ಮತ್ತೊಂದು ಬದಿಯಲ್ಲಿ ಬರೆದು ಅಂಚೆಗೆ ಹಾಕಿದ್ದಾಯಿತು. ಮೂರನೆಯ ದಿನ ಗೋಡೆಗೆ ಹೊಡೆದ ಚಂಡಿನಂತೆ ಮತ್ತೆ ನಮ್ಮ




ಅಂಚೆ ಪೆಟ್ಟಿಗೆಯಲ್ಲಿ ಬಂದು ಬಿದ್ದಿತ್ತು! ಆಗ ಜ್ಞಾನೋದಯವಾಗಿ ಆವಿಳಾಸದ ಮೇಲೆ ಗಮನವಿಟ್ಟು ಕಣ್ಣು ಹಾಯಿಸಿದೆ. ಆ ಮನೆಯ ನಂಬರ್ ನಮ್ಮ ಮನೆಯ ನಂಬರ್ ಒಂದೇ ಆಗಿತ್ತು! ಆಂದರೆ ಅಂಚೆಯವ ವಿಳಾಸದ ಮತ್ತ್ಯಾವ ವಿವರವನ್ನೂ ನೋಡದೆ ಕೇವಲ ಮನೆಯ ನಂಬರ್ ಆಧಾರದ ಮೇಲೆ ಅಂಚೆ ಹಾಕುತ್ತಿದ್ದ ಎಂದಾಯಿತು. ಹಾಗೆಯೇ ಒಂದೇ ಅಂಚೆ ಕಛೇರಿಯ ವ್ಯಾಪ್ತಿಯ ಎರಡು ಮನೆಗಳಿಗೆ ಒಂದೇ ನಂಬರ್ ಇದ್ದದು ಖಚಿತವಾಯ್ತು. ಅಲ್ಲಿಗೆ ಹೋಗಬೇಕಿದ್ದ ಅಂಚೆ ಇಲ್ಲಿಗೆ ಬಂದಂತೆ ನಮ್ಮಲ್ಲಿಗೆ ಬರಬೇಕಿದ್ದ ಅಂಚೆಯೂ ಅಲ್ಲಿಗೆ ಹೋಗಿರಬಹುದಲ್ಲಾ? ನಮ್ಮ ಪರಂಜಿಯೂ ಹಾದಿತಪ್ಪಿ ಆ ವಿಳಾಸಕ್ಕೆ ಹೋಗಿರಬಹುದಾದ ಸಾಧ್ಯತೆ ಕಂಡು ನ್ಯೂಟನ್ನಿನಂತೆ ಯುರೇಕಾ ಎಂದು ಕೂಗಿಯೇಬಿಡಬೇಕೆನಿತು. ಪೋಸ್ಟ್ ಮಾಸ್ಟರಿಗೆ ಫೋನ್ ಮಾಡಿದೆ. "ನೀವು ಹೇಳುವ ಸಾಧ್ಯತೆ ಇದೆ ಮೇಡಂ. ವಿಚಾರಿಸುತ್ತೇನೆ" ಎಂದು ಸಂಪರ್ಕ ಕಡಿತಗೊಳಿಸಿದರು.

ಇದಾದ ಒಂದೆರಡು ದಿನಗಳ ಬಳಿಕ ಮಧ್ಯಾಹ್ನದ ಸಮಯ. ಬಾಗಿಲ ಗಂಟೆ ರಿಂಗಣಿಸಿತು. ಯುವಕನೊಬ್ಬ ತನ್ನೆರಡು ಕೈಗಳನ್ನು ಬೆನ್ನಿನಹಿಂದೆ ಏನನ್ನೊ ಮುಚ್ಚಿಟ್ಟುಕೊಂಡಂತೆ ಇಟ್ಟುಕೊಂಡು ನಿಂತಿದ್ದ. ಬೇಡದ ವಸ್ತುಗಳನ್ನು ತಮ್ಮ ಮಾತಿನ ಚಾತುರ್ಯದಿಂದ ಮರುಳುಮಾಡಿ ತಲೆಗೆ ಕಟ್ಟುವ ಸೇಲ್ಸ್ಮನ್ನನ ಪ್ರತಿರೂಪದಂತಿದ್ದ. ಈ ಹಿಂದೆ ಇಂತಹವರಿಂದ ಹಲವಾರು ಬಾರಿ ಬೇಸ್ತು ಬಿದ್ದಿದ್ದವಳು ಜಾಗರೂರೂಕಳಾದೆ. "ನನಗೇನೂ ಬೇಡಪ್ಪ.ಮುಂದೆ ಹೋಗು" ಬಾಗಿಲು ಹಾಕಲು ಮುಂದಾದೆ." ಬೇಕೆ ಬೇಕು ಅಂತ ದೂರು ಕೊಟ್ಟವರು ನೀವು. ಈಗ ಬೇಡ ಅಂದ್ರೆ ಹೇಗೆ ಮೇಡಂ?"

"ನಾನು ಬೇಕು ಅಂತ ಹೇಳಿದ್ನಾ? ಎಲ್ಲವೂ ಉಚಿತ ಉಚಿತ ಅಂತ ಆರಂಭಿಸಿ ತರುವಾಯ ಸಾವಿರಾರು ರೂಪಾಯಿ ಕಕ್ಕಿಸುವ ನಿಮ್ಮ ವ್ಯಾಪಾರ ತಂತ್ರ ನಾಕಾಣೆನಾ? ಸುಮ್ನೆ ಹೋಗಪ್ಪ" ಎನ್ನುತ್ತಾ ತುಸು ಧ್ವನಿ ಎತ್ತರಿಸಿದೆ. ಆಗ ಹಿಂದಿದ್ದ ಅವನ ಕೈ ಮುಂದೆ ಬಂತು. ಅದರಲ್ಲಿ ನಾನು ಹಪಹಪಿಸುತ್ತಿದ್ದಎರಡು ತಿಂಗಳ ಅಪರಂಜಿ ಮುಗುಳ್ನಗುತ್ತಾಪವಡಿಸಿದ್ದಳು! ಕೈ ನೀಡಿ ತೆಗೆದುಕೊಂಡು ಬಿಗಿದಪ್ಪಿದೆ. "ಮೇಡಂ, ಇನ್ಮೇಲೆ ಇಂಥದಕ್ಕೆಲ್ಲಾ ದೂರು ಕೊಡೋಕ್ಕೆ ಹೋಗ್ಬೇಡಿ. ಏನಾದ್ರೂ ವಿಷಯ ಇದ್ರೆ ನನಗೆ ಫೋನ್ ಮಾಡಿ"ಹೇಳುತ್ತಾ ನನ್ನ ಕೈಗೆ ಅವನ ಕಾರ್ಡ ನೀಡಿ ಕ್ಷಣ ಮಾತ್ರದಲ್ಲಿ ಬೈಕ್ ಏರಿ ಮಾಯವಾದ. ಅವನತ್ತ ಹೋದ ಮೇಲೆ ಅವನನ್ನು ಅಪರಂಜಿ ಇಷ್ಟುದಿನ ಎಲ್ಲಿ ಇದ್ದಳು, ಹೇಗೆ ಸಿಕ್ಕಿದಳು ಎಂದೆಲ್ಲಾ ಕೇಳಬೇಕಿತ್ತು ಎಂದೆನಿಸಿದರೂ ಸಧ್ಯ ಬಂದು ಸೇರಿದಳಲ್ಲಾ ಅಷ್ಟೇ ಸಾಕು ಎನಿಸಿ ಅಲ್ಲಿಯೇ ಅವಳಲ್ಲಿ ಮಗ್ನಳಾದೆ.

ಮುಂದಿನ ಒಂದೆರಡು ತಿಂಗಳು ತಪ್ಪದೇ ಬರುತ್ತಿದ್ದವಳು ಮತ್ತದೇ ಹಿಂದಿನ ಚಟುವಟಿಕೆಗೆ ಮುಂದಾದಳು. ಅಂಚೆಯವನಿಗೆ ಅವ ಹೇಳಿದಂತೆ ಫೋನ್ ಮಾಡಿದ್ದು ಆಯ್ತು." ಆಕೆ ಬಂದಿಲ್ಲಾ ಮೇಡಂ ನಾನೇನು ಮಾಡ್ಲಿ? ಬಂದ್ರೆ ಕೂಡ್ಲೆ ತಂದು ಹಾಕ್ತೀನಿ. ಎಲ್ಲಿ ಹೋಗ್ತಾಳೆ ಅಂತ ಹೇಳೋಕ್ಕೆ ಸಾಧ್ಯ ಇಲ್ಲ" ಎಂದು ತನ್ನ ಹೊರೆ ಕಳಚಿಕೊಂಡ.



ಈಗ ಮೊಬೈಲ್‌ನ ಅಧಿಪತ್ಯದ ಕಾಲದಲ್ಲಿ ಸಾಹಿತ್ಯ ಓದುವ ಮಂದಿಯೇ ಕಡಿಮೆ ಯಾಗಿರುವಾಗ ಯಾರೋ ಸಾಹಿತ್ಯಪ್ರೇಮಿಯ ಕೈಸೇರಿದ್ದಲ್ಲಿ ನನ್ನ ಅಭ್ಯಂತರವೇನಿಲ್ಲ. ಅಂಚೆಯವನನ್ನು ಕೇಳುವುದೂ ನಿಲ್ಲಿಸಿದ್ದೇನೆ. ನೀನೆಲ್ಲಿಯೇ ಇರು ಹೇಗೆಯೇ ಇರು ಎಂದೆಂದಿಗೂ ಹಾಸ್ಯ ಹರಿಸುತ್ತಾ ಖುಷಿಪಡಿಸುತಾ ಅಪರಂಜಿಯಾಗಿಯೇ ಇರು ಎಂದು ಹಾಡಿಕೊಳ್ಳುತ್ತಾ ಸಮಾಧಾನ ಕಂಡುಕೊಂಡಿದ್ದೇನೆ.

# ಸಭಾತ್ಯಾಗ


**ಸುಧಾ ಸರನೋಬತ್**

**ಒ**ಂದೊಂದು ಸಲ ಧಿಡೀರನೆ ಎರಡೆರಡು ಕಾರ್ಯಕ್ರಮಗಳಿಂದ ಒಟ್ಟೊಟ್ಟಿಗೆ ಆದರದ ಆಹ್ವಾನ ಬಂದು ಬಿಟ್ರೆ ಹ್ಯಂಗೆ...? ಬೆಳಿಗ್ಗೆ ಒಂದು ಕಾರ್ಯಕ್ರಮ, ಸಂಜೆ ಒಂದು ಇದ್ದಾಗ ನಿರ್ಯೋಜನೆಯಿಂದ ಎರಡಕ್ಕೂ ಅಟೆಂಡೆನ್ಸ್ ಹಾಕಬಹುದು. ಕೆಲವು ಸಲ, ಒಂದು ಪುಸ್ತಕ ಬಿಡುಗಡೆ, ಒಂದು ಮುಂಜಿ, ಒಂದು ಮದುವೆ (ರಿಸೆಪ್ಶನ್ ಇಲ್ಲದೇ ಇರೋದು) ಒಟ್ಟೊಟ್ಟಿಗೆ ಬಂದು, ಎಲ್ಲರೂ ತುಂಬಾ ಬೇಕಾದವರು, ಅಟೆಂಡ್ ಮಾಡಲೇಬೇಕು, ಆಗ ಹಿಂದಿನ ದಿನ ರಾತ್ರಿಯೇ ಚಿಂತೆ ತಳಮಳ ಶುರುವಿಟ್ಟುಕೊಳ್ಳುತ್ತೆ.ಹೇಗಪ್ಪಾ ಮ್ಯಾನೇಜ್ ಮಾಡುವುದು..? ಎಂದು.

ಆಗ ಒಂದೊಂದು ಕಾರ್ಯಕ್ರಮ ಕ್ಕೂ ಇಷ್ಟಿಷ್ಟು ಸಮಯ ಅಂತ ನಿಗದಿಪಡಿಸಿ, ಕಾರ್ಯಕ್ರಮದ ಮಧ್ಯದಲ್ಲಿ ಅನಿವಾರ್ಯ ಸಭಾತ್ಯಾಗ ಮಾಡಲೇಬೇಕು. ಎಲ್ಲರ ಕಣ್ಣು "ಮಾರಿ ಕಣ್ಣು, ಹೋರಿಕಣ್ಣು" ನಮ್ಮ ಮೇಲೆಯೇ. "ಏನಪ್ಪ, ಇವರು ತಿಂಡಿ ತಿಂದು ಮುಖ ತೋರಿಸಿ ಹೊರಟು ಬಿಟ್ರಾ ? ಎಂಬ ಪ್ರಶ್ನೆ ಎಲ್ಲರ ಮುಖದಮೇಲೆ ನಲಿದಾಡುತ್ತೆ. ಅದರಲ್ಲೂ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಇದು ಬಹಳೇ ಕಷ್ಟದಾಯಕ ಕೆಲಸ. ಜನ ಕಮ್ಮಿ ..ನಾವು ಗುಂಪಿನಲ್ಲಿ ಗೋವಿಂದ ಅಂತ ಯಾರಿಗೂ ಕಾಣದೆ ಎದ್ದು ಹೋಗುವಂತಿಲ್ಲ. ಕುಳಿತ ಆಹ್ವಾನಿತರ ಕಾಲು ತುಳಿಯುತ್ತಲೋ, ಫೋಟೋ ಗ್ರಾಫರ ನಮ್ಮನ್ನು ಫಾಲೋ ಮಾಡದಂತೆ ಅಸಹಾಕ ಪ್ರಯತ್ನ ಮಾಡುತ್ತಲೋ, ರಂಗಸ್ಥಳದಿಂದ ಅದೃಶ್ಯ ರಾಗಬೇಕಾದ ಅನಿವಾರ್ತೆ. ಸ್ವಲ್ಪ ಕುಳ್ಳಗಿದ್ದವರು ಅದೃಷ್ಟವಂತರು ಅವರು ಸಭೆಗೆ ಬಂದದ್ದು, ನಡುವೆ ಎದ್ದು ಸಭಾತ್ಯಾಗ ಮಾಡಿದ್ದೂ ಅಷ್ಟೊಂದು ಎದ್ದು ಕಾಣುವುದಿಲ್ಲ.ಕೆಲಸಲ ಕಾಣುವುದೇ ಇಲ್ಲ.!

ನನ್ನ ಗೆಳತಿ ಕೊಂಚ ಕುಳ್ಳು. ನಾನು ಅಜಾನುಬಾಹು. ನಾವಿಬ್ಬರೂ ಒಟ್ಟಿಗೇ ಫಂಕ್ಷನ್‌ಗೆ ಹೋದಾಗ, ಇಕ್ಕಟ್ಟಿಗೆ ಸಿಕ್ಕಿಕೊಂಡವಳು ನಾನು. ಬೇರೆ ಕಾರ್ಯಕ್ರಮ ಹೋಗಲೇಬೇಕಾದ ಅನಿವಾರ್ಯತೆ, ನಾನು ಎದ್ದು ನಿಂತ ತಕ್ಷಣ ವೇದಿಕೆ ಮೇಲಿದ್ದ.. ನನ್ನ ಕ್ಲೋಸ್ ಫ್ರೆಂಡ್ ವೇದಿಕೆಯಿಂದಲೇ ಕೈ ಮಾಡಿ ನನ್ನ ಕುಳಿತುಕೊಳ್ಳಲು ಸನ್ನೆ ಮಾಡಿದಳು. ನನ್ನ ಜೊತೆ ಬಂದಿದ್ದ ನನ್ನ ಗೆಳತಿ ಹೊರನಡೆದಿದ್ದು ಯಾರ ಗಮನಕ್ಕೂ ಬಂದಿರಲಿಲ್ಲ. ನಾನು ಇಂಗು ತಿಂದ ಮಂಗನಂತೆ, ಮುಖ ಮಾಡಿ ಕುಳಿತೆ. ಹೊರಗೆ ಹೋಗಿದ್ದ ನನ್ನ ಗೆಳತಿ ನನಗೋಸ್ಕರ ಕಾಯ್ದು ಸುಸ್ತಾದಳು.

ಈ ಅನಿವಾರ್ಯ ಸಭಾತ್ಯಾಗ ಇದೆಯಲ್ವಾ ..ಇದು ಅನಿವಾಸಿ ಭಾರತೀಯನಂತೆ. ಸ್ವಲ್ಪ ದಿನ ಭಾರತದ ಭೇಟಿಗೆ ಬಂದವರು.ಇಲ್ಲಿಯೂ ಇರಲಾಗದೆ, ಅಲ್ಲಿಯೂ ಬೇಗ ಹೋಗಲು ಸಾಧ್ಯವಾಗದೆ, ಚಡಪಡಿಕೆ ಉಳ್ಳವರು. ಇಲ್ಲಿಯ ಮೂಲಭೂತ ಸೌಕರ್ಯಗಳ ಕೊರತೆ ಅವರಿಗೆ ಒಂದು ಕಡೆ ಬಾಧಿಸಿದರೆ, ಇನ್ನೊಂದು ಅಲ್ಲಿಯ ಪರಿಸರ ಸ್ವಚ್ಛತೆ ಇಂಡಿಪೆಂಡಂಟ್ ಜೀವನಕ್ಕೆ ಅವರ ಹೊಂದಾಣಿಕೆ, ಅವರನ್ನು ಅಲ್ಲಿಗೆ ಸೇಳೆಯುತ್ತದೆ. ಇಲ್ಲಿಯ ಐಷಾರಾಮಿ ಜೀವನ ಕೆಲವರಿಗೆ ಹಿಡಿಸದು.



ವಿಷಯಾಂತರವಾಯಿತು. ಮತ್ತೆ ಸಭೆಗೆ ಬರೋಣ.

ದ್ರೌಪದಿ ತನ್ನ ಮೇಲೆ ಸಂಕಟ ಬಂದಾಗ..ಸಭಾತ್ಯಾಗ ಮಾಡಿದ್ದರೆ, ಶ್ರೀಕೃಷ್ಣನ ಮಹಿಮೆ ಜಗತ್ತಿಗೆ ಗೋಚರವಾಗುತ್ತಿತ್ತೆ?ಅವನು ಭಕ್ತಪರಾಧೀನ ಎಂಬುದು ಜನ ಅರಿಯುತ್ತಿದ್ದರೆ..?

ಕೆಲ ಸಲ ಅನಿವಾರ್ಯವಿದ್ದರೆ ಮಾತ್ರ ಸಭಾತ್ಯಾಗ ಮಾಡಬೇಕು. ಇಲ್ಲವಾದರೆ ಅಲ್ಲಿಯೇ "ಸಭಾನಿದ್ರಾಸನ" ಮಾಡಲು ಅಡ್ಡಿಯಿಲ್ಲ.

ಕೆಲವು ಸಲ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕಿಕ್ಕಿರಿದ ಸಭಾಂಗಣದಲ್ಲಿ ಕೂರಲೂ ನಿಲ್ಲಲೂ ಜಾಗ ಸಿಗದೆ, ಏಕಪಾದಾಸನದಲ್ಲಿ ನಿಂತು ಬಂದ ಉದಾಹರಣೆಗಳುಂಟು. ಕೊನೆಗೆ ನನ್ನ ಹೆಸರು ವೇದಿಕೆಯ ಮೇಲಿದ್ದವರು ಕೂಗಿ, ನನಗೆ ತಮ್ಮ ಪುಸ್ತಕದ ಗೌರವ ಪ್ರತಿ ಕೊಡಲು ಕರೆದಾಗ ನನ್ನ ಏಕ ಪಾದ ಉಬ್ಬಿ, ನಡೆಯಲು ಬರದೆ ಕುಂಟಾಸನದಲ್ಲಿ ಕುಂಟುತ್ತ ಹೋಗಿ, ಗೌರವ ಪ್ರತಿ ಸ್ವೀಕರಿಸಿದ ಘಟನೆಗಳೂ ಉಂಟು. ಪಾಪ ಅವರು ವೇದಿಕೆಯಿಂದ ನನಗೆ ಗೌರವ ಕೊಟ್ಟು ಕರೆದಾಗ, ಅವರ ಗೌರವಕ್ಕೆ ಕುಂದು ಬಾರದಂತೆ ನಡೆದುಕೊಳ್ಳಬೇಕು.

ಗೌರವ ಪ್ರತಿ ಎಂದಾಕ್ಷಣ ನೆನಪಿಗೆ ಬಂತು.ಈಎರಡು ವರ್ಷಗಳ ಹಿಂದೆ.. ಒಬ್ಬ ಗಣ್ಯವ್ಯಕ್ತಿಯ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದೆ. ಕಾರ್ಯಕ್ರಮದ ಮಧ್ಯದಲ್ಲಿ ನೆನಪಿಗೆ ಬಂತು ಇನ್ನೊಬ್ಬ ಹಿರಿಯ ಸಾಹಿತಿಗಳ ಪುಸ್ತಕ ಬಿಡುಗಡೆಯ ಕಾರ್ಯಕ್ರಮ ಅವತ್ತೇ ಅದೇ ಟೈಮಿಗೆ ಇರೋದು. ಕೈ ಕೈ ಹಿಸುಕಿಕೊಂಡೆ. ಅನಿವಾರ್ಯ ಸಭಾತ್ಯಾಗ ಮಾಡಲೇಬೇಕಾದ ಸಂದರ್ಭ. ವೇದಿಕೆಯ ಮೇಲಿದ್ದ ಗಣ್ಯ ವ್ಯಕ್ತಿಗಳು ನನ್ನನ್ನೇ ವಕ್ರದೃಷ್ಟಿಯಿಂದ ನೋಡುತ್ತಿದ್ದರು. ನನ್ನಲ್ಲಿ ಅಪರಾಧಿಭಾವ ನೆಲೆಯೂರಿತ್ತು.ಮನದಲ್ಲಿ ವಕ್ರತುಂಡನನ್ನು ನೆನೆದೆ.

ಬೇರೆ ಕಾರ್ಯಕ್ರಮಕ್ಕೆ ಹಾಜರಾದೆ. ಅಲ್ಲಿ ಗಣ್ಯ ವ್ಯಕ್ತಿಗಳ ಮುಖ ಸಹ ಕಾಣಲಿಲ್ಲ. ಸಾವಿರಾರು ಸಂಖ್ಯೆ ಯಲ್ಲಿ ನೆರೆದ ಸಾಹಿತ್ಯಾಸಕ್ತರು. ಗದ್ದಲದ ನಡುವೆ ನುಸುಳಲು ಪ್ರಯತ್ನಿಸಿದೆ. ಫ್ರೀ ಬಸ್ನಲ್ಲಿ ನುಗ್ಗಿ ಕೈ ಮುರಿದುಕೊಂಡ ಮಹಿಳೆಯ ಸ್ಥಿತಿಯಾಗಿತ್ತು ನನ್ನದು. ಹ್ಯಾಗೋ ಹೊರಗೆ ಬಂದು, ಅಲ್ಲಿದ್ದ ತಣ್ಣೀರು ಕುಡಿದು.. ಸಭಾತ್ಯಾಗ ಮಾಡಿದೆ. ತಿರುಗಿ ಮೊದಲಿನ ಸಭೆಗೇ ಬಂದಾಗ ಕಾರ್ಯಕ್ರಮದ ಕೊನೇ ಘಟ್ಟ ಬಂದಿತ್ತು. ವೇದಿಕೆಯ ಮೇಲಿದ್ದವರು ನನ್ನ ಹೆಸರು ಕೂಗಿ ಕರೆದರು, "ಆರೋಪಿ ಹಾಜಿರ ಹೋ, ಹಾಜಿರ ಹೋ, ಹಾಜಿರ ಹೋ" ಎಂದು ಕೇಳಿಸಿತು. ಒಂದೇ ನೆಗೆತಕ್ಕೆ ಓಡಿದೆ. ಅವರ ಕೈಯಲ್ಲಿ ಹಿಡಿದ ಪುಸ್ತಕದ ಗೌರವ ಪ್ರತಿ ತೆಗೆದುಕೊಂಡು ಗೌರವ ನನ್ನದು ಮತ್ತು ಅವರದನೂ ಉಳಿಸಿದ ಸಂತಸ ಮುಖದ ಮೇಲೆ ಲಾಸ್ಯವಾಡಿತ್ತು.



ಆಸ್ಪತ್ರೆಯಲ್ಲಿ ರೌಂಡ್ಸ್ ನಡೀತಿತ್ತು. ಡಾ॥ ರವಿಯವರು ಒಬ್ಬ ಡಯಾಬಿಟೀಸ್ ರೋಗಿಯನ್ನು ಕುರಿತು, "ನೀವು ಯಾವ ಇನ್‌ಸುಲಿನ್ ತಗೋತೀರಾ?" ಅಂತ ಕೇಳಿದ್ದಕ್ಕೆ ಆತ, "ಹನುಮಾನ್ ಇನ್‌ಸುಲಿನ್ "ಅಂದ್ಬಿಡೋದೇ!" ಪಾಪ ಆತನಿಗೆ ಅದು ಹ್ಯೂಮನ್ ಇನ್‌ಸುಲಿನ್ ಅಂತ ತಿಳಿದಿರಲಿಲ್ಲ !

# ಸವತಿಯೊಂದಿಗೆ ಸರಸ

✍ನಿರ್ಮಲ ಮೃತ್ಯುಂಜಯ ಸ್ವಾಮಿ

'**ರೀ** ಈವತ್ತ ಸಂಜೀಮುಂದ ವಾಕಿಂಗ್‌ಗೆ ಹೋಗಿ ಬರುವಾಗ ಹೊಟೇಲ್‌ಗೆ ಹೋಗಿ ಬರೊಣೇನ್ರಿ? ಅಲ್ಲೊಂದು ಹೊಸ ವೆಜ್ ಹೊಟೆಲ್ ಆಗೇದ' ತಲೆ ಮೇಲೆತ್ತದೇ ಬರೀ ಹೂಗುಟ್ಟಿದರು ನನ್ನವರು. ನನ್ನ ಮಾತಿಗೆ ಕಿಮ್ಮತ್ತೇ ಇಲ್ಲ. ಕೆಲವು ಗಂಡಸರು ಮುಖ ಕೆಳಗೆ ಹಾಕಿ ಎಷ್ಟೊಂದು ತಲ್ಲೀನರಾಗಿ ಪೇಪರ ಓದುತ್ತಾರೋ, ಸದ್ಯದಲ್ಲೇ ಅವರಿಗೆ ಪೇಪರ್ ಪರೀಕ್ಷೆ ಕಾದಿದೆ ಎಂಬಷ್ಟು ತದೇಕಚಿತ್ತದಿಂದ ಓದುತ್ತಾರೆ. ಮಾತನಾಡಿಸಿದರೆ ಹೂಇಲ್ಲಾ ಹಾಇಲ್ಲಾ. ಅದೇ ತರಗತಿಗೆ ಇವರೂ ಸೇರುತ್ತಾರೆ. 'ಯಾವ ಜನ್ಮದಲ್ಲಿ ನನ್ನ ಸವತಿಯಾಗಿದ್ದಳೋ, ಈ ಜನ್ಮದಲ್ಲಿ ಬಂದು ನಿಮ್ಮೊಂದಿಗೆ ತನ್ನ ಸರಸ–ಸಲ್ಲಾಸದೊಂದಿಗೆ ನನ್ನ ಹೊಟ್ಟೆ ಉರಿಸ್ತಾಳ' ಎನ್ನುತ್ತಿದ್ದಂತೆಯೇ, ಒಮ್ಮಿಂದೊಮ್ಮೆಲೇ ಚುರುಕಾದರು ಸಾಹೇಬರು.

'ಯಾರ ನಿನ್ನ ಸವತಿ ನನ್ನ ಜೊತಿ ಯಾರಿದ್ದಾರ? ಸವತಿ–ಪವತಿ ಅಂತ ಬಾಯಿಗೆ ಬಂದ್ಹಂಗ ನಾಲಗಿ ಹರಿಬಿಡ್ತಿಯಾ? 'ಏಕಪತ್ನಿವ್ರತಸ್ಥನಾದಂಥ ನನಗ ಇಲ್ಲದ ಅಪವಾದ ಕೊಡ್ತಿಯಾ?' 'ಮತ್ತ್ಯಾರು ಅವಳೇ ನಿಮ್ಮ ಜೊತೆ ಸದಾ ಇರ್ತಾಳಲ್ಲಾ, ಅವಳೊಂದಿಗೆ ಸದಾ ಅಂಟಿಕೊಂಡೇ ಕೂತಿರ್ತೀರಿ, ಒಂದು ಕ್ಷಣನಾದ್ರೂ ಬಿಟ್ಟಿರ್ತೀರಾ? 'ನಿನಗ ಎಲ್ಲೋ ಹುಚ್ಚು ಹಿಡಿಧದ. ನಾಲಿಗೆ ಬಿಗಿ ಹಿಡಿದು ಮಾತಾಡು' 'ಯಾಕ್ರಿ ಸುಳ್ಳು ಮಾತಾಡ್ತೀರಿ. ಸದಾ ಅವಳ ಕೈ ಹಿಡಿದುಕೊಂಢ ಮನ್ಯಾಗ ಅಷ್ಟ ಯಾಕ ಹೊರಗ ಹೋದಾಗಲೂ ಅಕಿ ಕೈ ಬಿಡೋದಿಲ್ಲಾ. ಸುಮ್ಮನ ನನಗ ಬಿ.ಪಿ. ಏರೂವಂಗ ಮಾಡಬ್ಯಾಡ್ರಿ. ರಾತ್ರಿನೂ ಅಕಿ ನಿಮ್ಮ ಬಾಜೂಕ.. ಅಗ್ನಿಸಾಕ್ಷಿಯಾಗಿ ಕೈಹಿಡಿದ ಧರ್ಮಪತ್ನಿಯಿರುವಾಗ ಬೇರೆದವಳ ಸಹವಾಸ ಯಾಕ ಅಂತ?' 'ಅರೆ ಹುಚ್ಚಿ, ನಿನಗ ತಾಳಿಕಟ್ಟಿ, ನಿನ್ನ ಕೈ ಹಿಡಿದಮ್ಯಾಲೆ, ಮತ್ತ್ಯಾರ ಕೈ ಹಿಡೀಲಿ?' ಎಂದು ಕೇಳಿದರು.

ಅಕಿ ಒಬ್ಬ ಸುಸರಿಯಿದ್ರ ಸಾಕ ನಿಮಗ, ನನ್ನ ನೆನಫ ಆಗೂದಿಲ್ಲಾ. ನಾ–ಪಡಕೊಂಡ ಬಂದದ್ದನ್ನ ಅನುಭೋಗಿಸಬೇಕಲ್ಲಾ. ಈಗ ಲಗ್ನಾ ಒಲ್ಲೆಂತ ನಮ್ಮಪ್ಪಗ ಎಷ್ಟ ಹೇಳಿದೆ ನಾ, ಅವಾ ಅವರ ಜಮೀನು ಜಾಯದಾದ ನೋಡಿ ಅವಸರಾ ಮಾಡಿಕೊಟ್ಟಾ. ಈಗ ನೋಡಿದ್ರ ನಾ ಲಗ್ನಾದ್ರೂ ಒಂಟಿಗ್ಯಾನಂಗ ಇರಬೇಕು. ಅಂತ ದು:ಖ ಉಮ್ಮಳಿಸಿ, ಅಳಲಿಕ್ಕೆ ಶುರುಮಾಡಿದೆ. ಲಗ್ನಾದಾಗಿಂದ ಇಲ್ಲಿ ತನಾ ನಾ ನಿನಗ ಏನ ಕಡಿಮಿ ಮಾಡೇನಿ? ಬಟ್ಟಿ–ಬರಿ, ಬಂಗಾರ–ಬೆಳ್ಳಿ ಎಲ್ಲಾ ಕೊಡಸೇನಿಲ್ಲೋ ಅಂದ್ರೂ ನೀ ನನ್ನ ಮ್ಯಾಲೆ ಗೂಬಿ ಕೂಡ್ಸುದ ಬಿಡೂದಿಲ್ಲಾ. ನಿನ್ನ ಮಾತು ಕೇಳಿದವರು ಏನ ಅನಕೊಂಡಾರು? ಅಕಿ ಎಲ್ಲಿದ್ದಾಳ ತೊರ್ಸೆರ ತೋರ್ಸ ಅಕಿನ್ನ' ಅಂದರು.

ಇವರು ಸರ್ವಿಸನ್ಯಾಗ ಇದ್ದಾಗ ಭಾಳ ಬೀಜಿ ಇರತಿದ್ದರು. ಇಂಥಾದಕ್ಕೆಲ್ಲಾ ಟೈಮ್ ಇರ್ತಿದ್ದಿಲ್ಲಾ. ರಿಟೈಯರ್ಡ್ ಆದಮ್ಯಾಲೆ ಫ್ರೀಬರ್ಡ್ ಆಗಿಬಿಟ್ಟಾರ. ಹಿಂಗಾಗಿ ಅಕಿ ಸಿಕ್ಕಮ್ಯಾಲೆ ನನ್ನ ಮರೀಲಿಕ್ಕ ಶುರುಮಾಡ್ಯಾರ. ಊಟಾ, ನಿದ್ದಿ ಖಬರೂ ಇಲ್ಲ ಇವರಿಗೆ. ಇದಕ್ಕ ಏನು ಉಪಾಯ ಮಾಡಬೇಕೋ ಹೊಳಿವಲ್ದು. 'ಯಾರಿಗೂ



ಕೇಳಿಸದ್ಹಂಗ ಪಿಸಿಪಿಸಿ ಮಾತಾಡ್ತೀರಿ ಖಾಸಗಿಯಾಗಿ, ಯಾವತ್ತೂ ಅಕಿ ನಿಮ್ಮ ಕಿವಿಗೆ ಅಂಟಿಗೊಂಡು ಮುದ್ದುಕೊಟಗೋತ ಇರ್ತಾಳ. ಅಕಿನ್ನ ಬಿಟ್ಟು ನನ್ನ ಹತ್ತರ ಬಂದ್ರ ನಿಮ್ಮ ಜೋಡಿ ಮಾತಾಡತೇನಿ. ಇಲ್ಲದಿದ್ರ ನಿಮ್ಮ ಚಾಳಿ ಟೂ ಬಿಡಬೇಕಾಗ್ತದ' ಅಂದೆ. "ಓಹೋ! ಈಗ ತಿಳೀತಬಿಡು, ನನ್ನ ಮುದ್ದಿನ ಮಡದಿ ಸೆಟಗೊಂಡದ್ದು ಯಾಕಂತ. ಇಷ್ಟಕ್ಕೆ ಒಗಟೊಗಟಾಗಿ ಮಾತಾಡಿ ಇಷ್ಟೊಂದು ರಾದ್ಧಾಂತ ಮಾಡಿದ್ಯಾ'? ಎಂದರು.

'ನಾನು ನಿಮಗ ಮೊಬೈಲಿನ್ಯಾಗ ಮಾತಾಡಲೇಬ್ಯಾಡ್ರಿ ಅಂದಿಲ್ಲಾ. ದಿನದ ಎಲ್ಲಾ ಟೈಮೂ ಅದರಾಂಗ ಮುಳುಮುಳುಗೆದ್ದು, ಬೀಝಿಯಿದ್ರ ನನ್ನ ಗತಿ ಏನು ಅಂತ ಯಾವುದೂ ಅತಿಯಾಗಬಾರದು, ಮಿತಿಮೀರಬಾರದು. ನಿಮಗೀಗ ತಿಳಿಯೂದಿಲ್ಲಾ. ಕಿವುಡರಾಗೋ ಸಂಭವನೂ ಇರ್ತದ'. 'ಕಂಡ ಕಂಡವರ ಜೊತಿ ಮಾತಾಡತೀನಾ ನಾನು. ತಂದಿ, ತಾಯಿ, ಗೆಳೆಯಂದಿರ ಜೋಡಿ ಮಾತಾಡತೇನಿ. ಅದಕ್ಕೂ ಕತ್ರಿ ಹಾಕತೀಯಾ'? ಅಂದ್ರು. 'ಸಣ್ಣಾಗಿ ಮಾತಾಡಿದಾಗ ಯಾರ ಜೋಡಿ ಮಾತಾಡ್ತಿರೋ ಏನೋ'.

'ಅವಶ್ಯಯಿದ್ದಷ್ಟ ನೇರವಾಗಿ ಮಾತಾಡಿ, ಬಾಕೀದು ಮೆಸೇಜ ಮಾಡ್ರಿ, ಜಾಸ್ತಿ ಬಿಲ್ ಬರೋಹಂಗ ಮಾಡಬ್ಯಾಡ್ರಿ' ಅಂತ ಹೇಳಿದೆ. 'ರಿಟೈರ್ ಆದ ಮ್ಯಾಲೆ ನನಗೆ ಅಡಗಿಮನ್ಯಾಗ ಸಹಾಯಹಸ್ತಾ ನೀಡ್ತೀರಂತ ತಿಳಕೊಂಡಿದ್ದೆ. ಉಳ್ಳಾಗಡ್ಡಿ ಹೆಚ್ಚೂದು, ತರಕಾರಿ ಸೋಸುವುದು ಮತ್ತೆ ಹಿಟ್ಟು ನಾದೂದು, ಇಂಥಾವೆಲ್ಲಾ ಕೆಲಸ ಮಾಡಿದ್ರ, ನನಗೂ ಅಷ್ಟ ಸಹಾಯ ಆಗ್ತದ. ನಿಮಗೂ ಟೈಮ್ ಪಾಸಆಗ್ತದ. ಅಷ್ಟ ಅಲ್ಲಾ ನನ್ನ ಬರವಣಿಗಿಗೂ ಟೈಮ್ ಸಿಗ್ತದ. ಇಷ್ಟು ವರ್ಷಾನೂ ನಾನೊಬ್ಬಕೀನ ಎಲ್ಲಾ ಕೆಲಸಾ ಮಾಡಿಕೊಂಡ ಬಂದೇನಿ. ವಾಕಿಂಗ್ ಹೋಗೋದು, ತರಕಾರಿ ತರೋದು, ಲೈಬ್ರರಿಗೆ ಹೋಗೋದು, ಪಾರ್ಕಿಗೆ ಹೋಗಿ ಗೆಳೆಯಂದಿರನ್ನ ಭೇಟಿಯಾಗೋದು, ಯೋಗ, ಪ್ರಾಣಾಯಾಮ, ಸತ್ಸಂಗ ಏನಾದರೂ ಮಾಡಬಹುದು'.

'ಆಗ್ಲಿರೀ ರಾಣಿಸಾಹಿಬಾ ನನಗ ಅದನ್ನ ಬಿಟ್ಟಿರಲಿಕ್ಕೆ ಆಗವಲ್ದು. ಆದ್ರೂ ನೋಡ್ತೇನಿ. ಆದ್ರ ನಂದೊಂದು ಕಂಡೀಶನ್. ನೀನು ಮಹಿಳಾಮಂಡಳ, ಸಾಹಿತ್ಯದ ಕಾರ್ಯಕ್ರಮ ಅಂತ ಒಮ್ಮೊಮ್ಮೆ ಇಡೀ ದಿನಾ ಅಲೀತಿರ್ತಿ. ಆವಾಗ ನಾ ಒಬ್ಬನೇ ಆಗ್ತೀನಿ. ಆವಾಗೂ ನನಗ ಮೊಬೈಲ್ ಸಂಗಾತಿ. ನೀ ಎಲ್ಲೇ ಹೋದ್ರು ಮೂರು ಮೂರು ತಾಸು ಹೋಗಬ್ಯಾಡಾರಿ, ಲಗೂನೆ ಬಾ' ಎಂದರು.

ನಾನೂ ನೋಡ್ತೇನಿ. ಅರ್ಧಾ ಕಾರ್ಯಕ್ರಮದೊಳಗ ಹ್ಯಾಂಗ್ ಎದ್ದ ಬರಬೇಕು? ಕನಿಷ್ಠ ಸಭಾ ಮರ್ಯಾದಿನಾದ್ರೂ ಕಾಪಾಡಬೇಕಲ್ಲಾ. ಒಬ್ರ ಆಗಲಿಕ್ಕೆ ನೀವೇನೂ ಸಣ್ಣ ಮಕ್ಕಳ, ಒಬ್ರ ಇದ್ರ ಅಂಜಿಕಿ ಬರ್ತದೇನು. ಇದ್ದಾಳಲ್ಲಾ ನಿಮ್ಮ ಜೋಡಿ ನನ್ನ ಸವತಿ' ಎಂದೆ. ಇನ್ನೂ ಎಷ್ಟ ಹಂಗಸ್ತಿಯೋ ಹಂಗಿಸು. ಹೆಂಡತಿ ಸ್ಥಾನಾ ತುಂಬತ್ತಾ ಅದು'? 'ಹೀಂಗ ಬರ್ರಿ ದಾರಿಗೆ' ಇದ ರೀತಿ ಮುಂದುವರದ್ರ, ತಲಿಮ್ಯಾಲೆ ಏರಿಸಿಕೊಂಡ ಸವತೀನ್ನ ಬಿಟ್ಟು ಕೊಡದಿದ್ರ ನಾನು ಬಳಸುವ ಕೊನೆಯ ಅಸ್ತ್ರ, ತವರುಮನಿ ದಾರಿಹಿಡಿಯೋದು. ಅಂದ್ರ ಮಾತ್ರ ತಾವೇ ದಾರಿಗೆ ಬರ್ತಾರೆಂದು, ಮುನಿಸಿಕೊಂಡಂತೆ ನಟಿಸಿ, ನನ್ನ ಬಟ್ಟೆ-ಬರೆಗಳನ್ನ ಪ್ಯಾಕ ಮಾಡತೊಡಗಿದೆ.



ಖರೇನ ಹೊರಟೇನಿ ಅಂತ ತಿಳಿದ ಇವರು 'ನೀ ಹೋದ್ರ ಹೋಗು, ನಾ ಅಡಗಿ ಮಾಡಿಕೊಂಡು ಆರಾಮ ಆಗಿ ಇರ್ತೇನಿ' ಎಂದು ಕೊಚ್ಚಿಕೊಂಡರು.

ಹೇಗಿದ್ದರೂ ಒಂದು ಕಾಲು ಹೊರಗೇ ಇಟ್ಟಿದ್ದೇನೆಂದು ನೋಡೇ ಬಿಡೋಣ ಅಂತ ತವರಿಗೆ ಹೋಗಿಯೇ ಬಿಟ್ಟೆ. ಗಾಡಿ ಹೊರಡು–ತ್ತಿದ್ದಂತೆಯೇ ಸರಸೂ, ಸರಸೂ ಅಂತ ಇಪ್ಪತ್ತೆಂಟು ಸಲ ಫೋನಕರೆ ಮಾಡ–ತೊಡಗಿದರು. 'ಏಕಾಏಕಿ–ನನ್ನ ಒಬ್ಬಂಟಿ ಮಾಡಿ, ಹೋದಿ. ಆದಷ್ಟು ಲಗೂನೆ ಬಾ. ಭಾಳ ದಿನಾ ಇರಬ್ಯಾಡಾ' ಎಂದು, ಊರು ಮುಟ್ಟುವವರೆಗೂ ಒಂದರ ಮೇಲೊಂದು ಕರೆಗಳು. ಹೇಗಿದೆ ನೋಡ್ರಿ ಊರಲ್ಲಿದ್ದಾಗ ನನಗೆ ಬೆಲೆಂಬೋ ಇಲ್ಲ. ಪರಊರಿಗೆ ಹೋದಾಗಲೇ ಮಹತ್ವ ತಿಳಿಯುವದು.



ಬಹುಶ: ಅವರಿಗೆ ಮೂರು ಹೊತ್ತೂ ಬೇಯಿಸುವುದರಲ್ಲೇ ಬೆವರುಸುರಿಸಿ, ಟೈಮ್ ಕಳೆದು ಮೊಬೈಲ್ ಮುಟ್ಟಲಿಕ್ಕೂ ಸಮಯ ಸಿಕ್ಕಿರಲಿಕ್ಕಿಲ್ಲ. ಇದೇನು ಬಂತು ಗ್ರಹಚಾರ ಅಂತ ಹಣೆ ಘಟ್ಟಿಸಿಕೊಂಡಿರಬಹುದು. 'ಅಡುಗೆಯ ಮತ್ತು ಮನೆಯ ಮೇಲುಸ್ತುವಾರಿಯ ಜವಾಬ್ದಾರಿ ಎಷ್ಟು ದೊಡ್ಡದೆಂದು ನನಗೀಗ ತಿಳೀತು. ಖಾನಾವಳಿಗೆ ಎಷ್ಟಂತ ರೊಕ್ಕಾ ಬಡೀಬೇಕು ಅಂತಾ ಮನಿಯೊಳಗ ಅಡಗಿ ಮಾಡಿದ್ರ ಕೈಸುಟಗೊಂಡು, ಬಾಯಿಸುಟಗೊಂಡು ಮೂರ ಹೊತ್ತೂ ದೇಕೂದಾಯ್ತು. ಆದಷ್ಟು ಲಗೂನೆ ಬಾ' ಅಂತಾ ಮೇಲಿಂದ ಮೇಲೆ ಕರೆಮಾಡಹತ್ತಿದರು.

ನನ್ನೊಂದಿಗೆ ಎರಡೂ ಮಕ್ಕಳನ್ನ ಕರೆತಂದಿದ್ದೆ. ಒಬ್ಬ ತುಂಟ ಹುಡುಗಿಯನ್ನು ಮಾತ್ರ ಬಿಟ್ಟು ಬಂದಿದ್ದೆ. ಅವಳ ಊಟೋಪಚಾರದ ಜವಾಬ್ದಾರಿಯೂ ಅವರ ಮೇಲೆಯೇ ಬಿದ್ದಿತ್ತು. ಹೀಗಾಗಿ ಮನೆಗೆಲಸ ಮಾಡಿಕೊಂಡು ಸಾಕಷ್ಟು ಸುಸ್ತಾಗಿ, ಇವರು ದಿನಕ್ಕೆ 5–6 ಸಲ ಕರೆಮಾಡಿ ವಾಪಸ್ ಬರಲು ತಿಳಿಸುತ್ತಿದ್ದರು. ನಾನು ಮಾತ್ರ ಇವತ್ತ ಬರ್ತೇನಿ, ನಾಳೆ ಬರ್ತೇನಿ ಅಂತ ಅವರೆದುರು ಹೇಳಿ ಅವರ ಹೇಳಿಕೆಯನ್ನು ತಳ್ಳಿಹಾಕುತ್ತಿದ್ದೆ.

ನೀ ಮಾಯೆಯೋ ನಿನ್ನೊಳು ಮಾಯೆಯೋ ಅನ್ನೋ ದಾಸವಾಣಿ ಹಂಗ ಈ ಮೊಬೈಲ್ ಮೋಹನಾಂಗಿ ಮೋಡಿಗೆ ಮರುಳಾಗದವರ ಯಾರಿಲ್ಲ. ಈಗೀಗಂತೂ ಮೊಬೈಲ್ ವ್ಯಾಮೋಹಾ ಮಿತಿಮೀರಿ ಬಿಟ್ಟದ, ಚಿಣ್ಣರಿಂದ ಹಿಡಿದು, ಹಣ್ಣುಹಣ್ಣು ಮುದುಕರತನಕಾ ತನ್ನ ಕಪಿಮುಷ್ಠಿಯೊಳಗ ಬಂಧಿಸಿ, ಪ್ರತಿಯೊಬ್ಬರ ಅಂಗೈ ಅರಳಗಿಳಿಯಾಗಿ ಬಿಟ್ಟದ ಡಿಮಾಂಡಪ್ಪೊ ಡಿಮಾಂಡ್ ಈ ಬೆಡಗಿಗೆ ಯಾವತ್ತೂ ಮಕ್ಕಳ ಕೈಯಾಗ ಆಟಗಿ ಸಾಮಾನ ಇದ್ದಂಗ. ಸ್ವಲ್ಪ ತಿಳುವಳಿಕೆ ಬಂದಮ್ಯಾಲಂತೂ, ಫೇಸಬುಕ್, ವಾಟ್ಸಪ್, ಯುಟ್ಯೂಬ್ ಸುತ್ತಲೂ ಗಿರಕಿ ಹೊಡಿತಾರ.



ನಾನು ಎಷ್ಟೋ ವರ್ಷ ಮೊಬೈಲ ತಂಗೊಡಿದ್ದೇ ಇಲ್ಲಾ. ಮ್ಯಾಲಿಂದ ಮ್ಯಾಲೆ ಕೆಲಸಕ್ಕೆ ಚಕ್ಕರ ಕೊಡೊ ನಿಂಗಿ ಸಲುವಾಗಿ ಎಮರ್‌ಜನ್ಸಿಗೆ ತುಗೊಂಡೆ. ಹಿಂದಿನ ಕಾಲದಾಗ ಮಕ್ಕಳು ಊಟಕ್ಕೆ ಹಟಾ ಮಾಡಿದ್ರ ಚಂದಮಾಮಾನ್ನ ತೋರಿಸಿ ಊಟಾ ಮಾಡಿಸತಿದ್ರು. ಆದ್ರ ಈಗಿನ ಮಕ್ಕಳಿಗೆ ಆ ಚಂದಮಾಮ, ಯಾರಂಥ ಗೊತ್ತಿಲ್ಲಾ. ಮೊಬೈಲಿನ ಒಡನಾಟದೊಳಗ ಊಟಾ ಮಾಡಿ ಬೆಳೀತಾರ. ಅಷ್ಟ ಯಾಕ ದೊಡ್ಡವರಿಗೂ ಮೊಬೈಲ್ ಅಂದ್ರ ಪಂಚಪ್ರಾಣಾ.

ದಿನಕ್ಕೆ 5–6 ಸಲ ಫೋನ ಮಾಡುತ್ತಿದ್ದ. ನನ್ನವರ ಫೋನು ಏಕದಂ ಬಂದಾತು. ಆರಾಮ ಇದ್ದಾರೋ, ಇಲ್ಲೋ ಅಂತ ನನಗ ಟೆನ್‌ಶನ್ ಶುರುವಾತು. ನಾನು ಸಾಕಷ್ಟ ಸರ್ತಿ ಫೋನ ಮಾಡಿದೆ. ಫೋನ ತುಗೊಳಲಿಲ್ಲಾ. ಕೆಲವು ಸಲ ಸ್ವಿಚ್ ಆಫ್ ಬರತಿತ್ತು. ಒಮ್ಮೆ ಅಪರಿಚಿತ ನಂಬರನಿಂದ ಫೋನ ಬಂತು. ತೊಗೊಳ್ಳೊ, ಬೇಡೋ ಅಂತ ಅಂಜಿಕೊಂಡು ತುಗೊಂಡೆ. ಇವರ ಮಾಡಿದ್ರು, ತಮ್ಮ ಗೆಳೆಯನ ಮೊಬೈಲನಿಂದ, ಮೊಬೈಲ್ ಕಳೀತಂತ–ದು:ಖದಿಂದ ಹೇಳಿದರು. ಆದ್ರ ಆ ಸುದ್ದಿ ಕೇಳಿ ನನಗ ಅಮೃತ ಸುರದಂಗಾತು. ನನ್ನ ಸವತಿ–ಕಾಟ ತಪ್ಪಿತು ಅಂದ್ರ ಇದಕ್ಕಿಂತ ಇನ್ನೇನು ಬೇಕು ನನಗೆ? ಅರಸುವ ಬಳ್ಳಿ ಕಾಲಿಗೆ ತೊಡರಿದಂಗಾತು.

ಊರಿಗೆ ಹೋಗೋ ತಯಾರಿ ನಡೆಸಿದೆ ಖುಷಿಯಿಂದ. ಆದ್ರ ಮತ್ತೊಂದು ಹೊಸಾ ಮೊಬೈಲ ತುಗೊಂಡ್ರ ಹ್ಯಾಂಗ್ ಅಂತ ವಿಚಾರನೂ ಬಂತು. ಸಧ್ಯಕ್ಕಂತೂ ಸೇಫ್ ಝೋನ್. ಆದ್ರ ಇವರು ಗೆಳೆಯನ ಮೊಬೈಲ್‌ನಿಂದ ಮ್ಯಾಲಿಂದ ಮ್ಯಾಲೆ ಫೋನ ಶುರುವಿಟ್ಟುಕೊಂಡರು. 'ಕೈಬಾಯಿ ಸುಟಗೊಂಡು ಅಡಗಿ ಮಾಡಿಮಾಡಿ ಸಾಕಾಗೇದ ನನಗ. ಮೊನ್ನೆ ಅವ್ವಿಗೆ ಜ್ವರಾ ಬಂದಿದ್ವು, ಒಬ್ಬನ ಎಲ್ಲಾ ನಿಭಾಯಿಸಬೇಕು. ಕುತ್ತಗೀಗ ಬಂದದ ನನಗೀಗ. ಈವತ್ತ ಗಾಡಿ ಹತ್ತು' ಅಂತ ಫೋನಿನ ಸುರಿಮಳೆ.

ತಕ್ಷಣ ಹೊರಟ ನಾನು ಊರು ತಲುಪಿದೆ. ಬಂದು ನೋಡುತ್ತೇನೆ. ಕೈನೂ ಸುಟಗೊಂಡಿಲ್ಲಾ. ಬಾಯಿನೂ ಸುಟಗೊಂಡಿಲ್ಲಾ. ಖಾನಾವಳಿಗೆ ಹೆಸರು ಹಚ್ಚಿ ಅಲ್ಲೇ ಊಟಾ ಮಾಡ್ಯಾರ. ಮೊಬೈಲ್ ಕಳೆದದ್ದೂ ಸುಳ್ಳು. ಕೇಳಿದ್ರ 'ಏಪ್ರಿಲ್‌ಫೂಲ್' ಅಂತ ನಗತಾರ. ಇದನ್ನ ಕೇಳಿ ನಾ ಹಣಿ ಹಣಿ ಫಟ್ಟಿಸಿಕೊಂಡೆ. ನಾನು ಲಗೂನೆ ಊರಿಂದ ಬರಲಿ ಅಂತ ಮಾಡಿದ ಶುದ್ಧ ನಾಟಕಾ. ಖಾನಾವಳಿ ಊಟಾ ಮಾಡಿದರೂ ಸಹಿತ, ಮನೆಯ ಜವಾಬ್ದಾರಿ ಹೊರಲೇಬೇಕಾಯ್ತು. ಕೆಲವು ತೊಂದರೆಗಳನ್ನಾದರೂ ಅನುಭವಿಸಿರಲೇಬೇಕು.

ನನ್ನ ಸವತಿಯ ಅಸ್ತಿತ್ವ ಮತ್ತು ನನ್ನ ವ್ಯಕ್ತಿತ್ವ ಎರಡನ್ನೂ ಹೋಲಿಸಿದಾಗ, ಆಕೆ ನನ್ನ ಸ್ಥಾನವನ್ನು ತುಂಬಲು ಸಾಧ್ಯವೇ? ಹಗಲೂ ರಾತ್ರಿ ಜೊತೆಯಲ್ಲಿದ್ದರೇನಂತೆ, ಇವರ ಎಲ್ಲ ಬೇಕು ಬೇಡಿಕೆಗಳನ್ನು ಪೂರೈಸುತ್ತಾಳೆಯೇ? ಎಂಬುದು ಇವರಿಗೆ ಈಗಲಾದರೂ ಹೊಳೆಯಿತಲ್ಲವೇ? ಅದೇ ನನಗೆ ಸಂತೋಷ. ಎಷ್ಟೆಷ್ಟು ಸವತಿಯೊಂದಿಗೆ ಸಲುಗೆ ಬೆಳೆಸುತ್ತೇನೋ ಅಷ್ಟು ಆ ನನ್ನ ಮಡದಿ ನನ್ನಿಂದ ದೂರ ಹೋಗುತ್ತಾಳೆಂಬದು ಅವರಿಗೆ ಈಗ ಅರಿವಾಯ್ತು.



ನಿಜವಾಗಿಯು ಮೊಬೈಲ್ ಕಳಿಯಿತೆಂದು ನಂಬಿದ್ದ ನಾನು ಗಾಬರಿಯಾಗಿದ್ದೆ. ಇಂತ ತಂತ್ರ(ಕು) ರೂಪಿಸುವುದರಲ್ಲಿ ಎತ್ತಿದ ಕೈ ನನ್ನವರದು. ಏನೇ ಮಾಡಿದರೂ ಈ ತಂತ್ರಗಳು ತಾತ್ಪೂರ್ತಿಕ. ಇವೆಲ್ಲಾ ನನ್ನ ಮುಂದೆ ವರ್ಕಔಟ್ ಆಗುವುದಿಲ್ಲ.

ತಂತ್ರಕ್ಕೆ ಪ್ರತಿತಂತ್ರ ಹೂಡಬಹುದು. ದಿನಬೆಳಗಾದರೆ ಮಕ್ಕಳೆದರು ಜಗಳವಾಡುವುದು, ಸರಿಯಲ್ಲವೆಂದು ಸುಮ್ಮನಾಗಿದ್ದೇನೆ. ಸತ್ಯದ ತಲೀಮ್ಯಾಲೆ ಹೊಡೆಯುವ್ಹಂಗ ಸುಳ್ಳು ಹೇಳಿದರೂ, ಒಂದಿಲ್ಲ ಒಂದು ದಿನ ಹೇಳಿದವರ ಹೂರಣ ಹೊರಬಿದ್ದೇ ಬೀಳುತ್ತದೆ.

ಬೀಡಿ, ಸಿಗರೇಟ ಸೇದುವದು, ಸರಾಯಿ ಕುಡಿಯುವುದು ಇಸ್ಪೇಟ್ ಆಟ, ಮೊಬೈಲ್‌ಗೀಳು ಇಂಥ ವ್ಯಸನಗಳನ್ನು ಬಿಡಿಸಲು ಎಷ್ಟೋ ಜನ ಮಹಿಳೆಯರು ತಮ್ಮ ಪತಿಮಹಾಶಯರಿಗಾಗಿ ಪ್ರಯತ್ನ ಪಡುತ್ತಲೇ ಇರುತ್ತಾರೆ. ಇದು ನಿಜವಾಗಿಯೂ ಕಷ್ಟಕರ. ಏಕೆಂದರೆ ಒಂದು ಸಾರಿ ಚಟಕ್ಕೆ ಅಂಟಿಕೊಂಡ ವ್ಯಕ್ತಿ ಚಟ್ಟಕ್ಕೇರುವವರೆಗೂ ತನ್ನ ವ್ಯಸನವನ್ನು ಬಿಡಲಾರ. ಅದೇ ರೀತಿ ಈ ಮೊಬೈಲ್ ಗೀಳೂ ಸಹ.

‘ಈ ಮನೆಯಲ್ಲಿ ನಾನಾದರೂ ಇರಬೇಕು ಇಲ್ಲಾ ಅವಳಿರಬೇಕು. ಇಬ್ಬರಲ್ಲಿ ಒಬ್ಬರನ್ನ ಆರಿಸಿಕೊಳ್ಳಿ’ರೆಂದು ಖಡಕ್ಕಾಗಿ ಹೇಳಿದೆ. ವಿರಹವೇದನೆಯನ್ನು ತಾಳಲಾರದ ಇವರು, ಈಗ ಕ್ರಮೇಣ ಬದಲಾಗುತ್ತಿದ್ದಾರೆ. ನಾನು ಹೇಳಿದಂತೆ ಸವತಿಯಿಂದ ದೂರ ಸರಿದು ಈಗ ಅಡುಗೆಯಲ್ಲಿ ಇವರು ಕೈಗೂಡಿಸುತ್ತಿದ್ದಾರೆ. ತರಕಾರಿ ಹೆಚ್ಚುವದು, ಮಿಕ್ಸಿ ಮಾಡುವುದು, ಪಾಟಿಗೆ ನೀರು ಹುಯ್ಯುವದು, ವಾಶಿಂಗ್‌ಮಶಿನ್ ಆಪರೇಟ್ ಮಾಡುವದು, ಇಂಥ ಸಣ್ಣಪುಟ್ಟ ಕೆಲಸಗಳನ್ನೆಲ್ಲ ಮಾಡುತ್ತಿದ್ದಾರೆ. ತರಕಾರಿ, ಹಣ್ಣು–ಹಂಪಲುಗಳನ್ನೂ ತರುತ್ತಿದ್ದಾರೆ. ಏಕಾಕಿಯಾಗಿ ಪೇಚಾಡುವುದು ತಪ್ಪಿದೆ. ಈ ಕಾರಣಕ್ಕಾಗಿಯೇ ನನ್ನ ಲೇಖನಿ ನಿದ್ರಾಂಗನೆಯ ಸುಳಿಯಲ್ಲಿ ಸಿಲುಕಿತ್ತು. ನನಗೆ ಈಗ ಬರೆಯಲು, ಓದಲು ಬರವಣಿಗೆಗೆ ಸಾಕಷ್ಟು ಸಮಯ ಒದಗುತ್ತಿದೆ. ಮನೆಯಲ್ಲಿ ಜರುಗುವ ಇಂಥ ವಿಷಯಗಳೇ ನನಗೆ ಬರೆಯಲು ಸ್ಫೂರ್ತಿಯ ಸೆಲೆಯಾಗಿವೆ.



## ಮೈಸೂರಿಗೆ ಹೋಗುವಾಗ ಆದ ಅವಾಂತರ !

**ಇ.ಆರ್. ರಾಮಚಂದ್ರನ್, ಮೈಸೂರು**

**ಅ**ರವತ್ತರ ದಶಕದಲ್ಲಿ ಡಿಫೆನ್ಸ್ ಅಕೌಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ನನ್ನ ಅಣ್ಣ ಮತ್ತು ಅತ್ತಿಗೆ ಮತ್ತು ಅವರ ಪುಟ್ಟ ಮಗು ಪೂರ್ಣಿಮ ಡೆಹ್ರಡೌನ್ನಿಂದ ಮೈಸೂರಿಗೆ ವರ್ಗವಾಗಿ ಬೆಂಗಳೂರಿಗೆ ಬಂದರು. ಅಲ್ಲಿಂದ ಬೆಂಗಳೂರಿಗೆ ಟ್ರೈನ್ನಲ್ಲಿ ಬರಲು ನಾಲ್ಕು ದಿವಸ ಹಿಡಿಯಿತು.

ಅಣ್ಣ ಮೈಸೂರಿಗೆ ಹೋಗಿ ಮನೆ ಗೊತ್ತುಮಾಡಿದ ಮೇಲೆ ಅತ್ತಿಗೆ ಮತ್ತು ಮಗು ಮೈಸೂರಿಗೆ ಹೋಗುವ ದಿನ ನಿಷ್ಕರ್ಷೆಯಾಯಿತು.

ನನಗೆ ಮೈಸೂರಿಗೆ ಅವರ ಜೊತೆ ಹೋಗುವುದಕ್ಕೆ ಆಸೆಯಿತ್ತು. ಆಗ ತಾನೆ ಹೊಸ ಹೆಸರಿನಲ್ಲಿ ಬಂದಿದ್ದ ಕಾಹಿಲೆ 'ಇನ್ಫ್ಲುಯೆಂಜಾ ' ನನಗೆ ಬಂದಿದ್ದರಿಂದ ನಾನು ಚೇತರಿಸಿಕೊಳ್ಳಬೇಕು ಅವರ ಜೊತೆ ಬರಬಾರದೆಂದು ಅಣ್ಣ ಸುಗ್ರೀವಾಜ್ಞೆ ಹೊರಡಿಸಿದ್ದ!

ಅವರಲ್ಲಿದ್ದ ಕಬ್ಬಿಣದ ಟ್ರಂಕ್ ಎಲ್ಲರ ಮನ ಸೆಳೆಯಿತು. ಡಿಫೆನ್ಸ್ ಕ್ಯಾಂಟೀನ್ನಲ್ಲಿ ಕೊಂಡಿದ್ದು ಇರಬೇಕು. ಅದು ಎಷ್ಟು ದೊಡ್ಡದಾಗಿತ್ತು ಎಂದರೆ ಒಬ್ಬ 10 ವರ್ಷದ ಹುಡುಗ ಅದರೊಳಗೆ ಆರಾಮವಾಗಿ ಮಲಗಬಹುದಾಗಿತ್ತು! ಟ್ರೈನ್ ಬಗ್ಗೆ ಪರಿಚಯವಿದ್ದ ನನ್ನ ಸ್ನೇಹಿತ ಸೋಮು ಅದನ್ನು ಸುತ್ತ ಮುತ್ತ ಗೇಣಿನಿಂದ ಅಳೆದು ಅದನ್ನು ಬೋಗಿಯಲ್ಲಿ ತಳ್ಳಬೇಕಾದರೆ ಎರಡು ಕಡೆ ಒಂದೊಂದು ಬೆಟ್ಟಷ್ಟು ಜಾಗ ಮಾತ್ರ ಸಿಗುತ್ತೆ ಮತ್ತು ಅದನ್ನು ಬೋಗಿಯಲ್ಲಿ ಸಾಗಿಸಬೇಕಾದರೆ ಕನಿಷ್ಠ ಇಬ್ಬರು ಹಮಾಲಿಗಳು ಬೇಕಾಗುತ್ತೆ ಎಂದು ಸಾರಿದ.

ಆಗಿನ ಕಾಲದಲ್ಲಿ ಹೋಗಿಬರುವುದು ಎಲ್ಲಾ ಜಟಕಾ ಗಾಡಿಯಲ್ಲೇ ಆಗುತಿತ್ತು. ಅಲ್ಲಲ್ಲಿ ಒಂದೆರೆಡು ಆಟೋಗಳು ಓಡಾಡುತ್ತಿದ್ದವು. ರಸ್ತೆ ಪೂರ್ತಿ ಓಡಾಡುತ್ತಿದ್ದ ನೂರಾರು ಸೈಕಲ್ಗಳನ್ನು ನೋಡಿ ಆಗ ತಾನೆ ಬಂದಿದ್ದ ಆಟೊ ಬೆಚ್ಚಿ ಬೀಳುತ್ತಿದ್ದ ಕಾಲವದು! ಊಟಮಾಡಿ ಕೈಯಲ್ಲಿ ಮಧ್ಯಾಹ್ನದ ಟಿಫನ್ ಡಬ್ಬಿಯನ್ನು ಹಿಡಿದು ಅಠರಾ ಕಛೇರಿಗೆ ನಡೆದುಕೊಂಡೇ ಕೆಲವರು ಹೋದರೆ, ಒಂದಿಬ್ಬರು ಉಟ್ಟ ಕಚ್ಚೆ ಪಂಚೆಯಲ್ಲೇ ಸೈಕಲ್ ಜೊತೆಗೆ ಓಡುತ್ತಾ ಛಂಗನೆ ಹಾರಿ ಸೈಕಲ್ ಮೇಲೆ ಕೂತು ಪೆಡಲ್ ತುಳಿಯುತ್ತಾ ಹೋಗುತ್ತಿದ್ದರು.

ಟ್ರಂಕನ್ನು ಸ್ಟೇಷನ್ಗೆ ಸಾಗಿಸುವುದಕ್ಕೆ ಟ್ರಾಕ್ಟರ್ ಅಥವ ಜೆಸಿಬಿ ಆಗ ಇನ್ನೂ ಹುಟ್ಟಿರಲಿಲ್ಲ. ಜಟಕ ಗಾಡಿಯಲ್ಲೇ ಅದನ್ನು ಸಾಗಿಸಬೇಕಾಗಿತ್ತು. ಕುದುರೆಗೆ ಡಬಲ್ ಊಟ ಮಾಡಿಸಿ ಗುಡ್ಶೆಡ್ ರೋಡ್ ಮೂಲಕ ಹೋದರೆ ಜಟಕಗಾಡಿ ಸ್ಟೇಷನ್ ಸೇರಬಹುದು ಎಂದು ಸೋಮು ತೀರ್ಪು ಕೊಟ್ಟ.



11 ಘಂಟೆ ಟ್ರೈನ್ಗೆ ಸೋಮು ನಮ್ಮ ಮನೆಗೆ 8 ಘಂಟೆಗೇ ಬಂದು ಬೀದಿಯಲ್ಲಿ ಹೋಗುತ್ತಿದ್ದವರನ್ನು ಕರೆದು ಅವರ ಸಹಾಯದಿಂದ ಟ್ರಂಕನ್ನು ಜಟಕಾ ಗಾಡಿಗೆ ಹತ್ತಿಸಿದ್ದಾಯಿತು. ಟ್ರಂಕನ್ನು ನೋಡಿ ಹೆದರಿದ ಕುದುರೆ ಊಟಕ್ಕೆ ಮೂತಿಯಿಂದ ಮತ್ತೆ ಸನ್ನೆ ಮಾಡಿತು! ಅದಕ್ಕೆ ಇನ್ನಷ್ಟು ಹುಲ್ಲು ತಿನ್ನಿಸಿ, ಸೋಮು ಗಾಡಿಯಲ್ಲಿ

ಸ್ಟೇಷನ್ಗೆ ಹೊರಟ.

ಆವತ್ತು ಮದುವೆಯೋ, ಮುಂಜಿಯೋ ಏನು ಕಥೆಯೋ, ಎಷ್ಟು ಹೊತ್ತಾದರೂ ನಮಗೆ ಜಟಕಗಾಡಿ ಸಿಗಲಿಲ್ಲ. ಕೊನೆಗೆ ನಿಶಕ್ತಿಯಿಂದ ಸೊರಗಿದ್ದ ಕುದುರೆ ಜಟಕ ಗಾಡಿ ಸಿಗ್ತು.

ಮಗು ಪೂರ್ಣಿಮ ಇನ್ನೂ ಕೈಗೂಸು. ಅವಳ ಡೈಪರ್ಗಳೇ ಮೂರು ಬುಟ್ಟಿಯಲ್ಲಿತ್ತು. ಮತ್ತೆ ಅವಳ ಆಟದ ಸಾಮಾನುಗಳು, ಅತ್ತಿಗೆಯ ಸೀರೆಗಳು, ಒಡವೆ, ಮನೆ ಸಾಮಾನು, ಡೆಹ್ರಾ – ಡೌನ್‌ನಿಂದ ಸಾಮಾನು ಬರುವ ತನಕ ಅಡುಗೆ ಮಾಡಿಕೊಳ್ಳಕ್ಕೆ ಸ್ವಲ್ಪ ಪಾತ್ರೆಗಳು, ಬಟ್ಟೆ ಬರೆ ಇವೆಲ್ಲವೂ ಮುಕ್ಕಾಲು ಜಟಕ ತುಂಬುವಷ್ಟು ಇತ್ತು. ಇದೆಲ್ಲವನ್ನೂ ಗಾಡಿಗೆ ತುಂಬಿ ಅವರಿಬ್ಬರನ್ನೂ ಹತ್ತಿಸಿ, ನಾನು ಮುಂದೆ ಕುದುರೆ ಹತ್ತಿರ ಗಾಡಿ ಓಡಿಸುವವನ ಪಕ್ಕದಲ್ಲಿ ಕೂತೆ. ದಾರಿಯುದ್ದಕ್ಕೂ ಟೈಮ್ಗೆ ಸೇರುತ್ತೇವೋ ಇಲ್ಲವೋ ಅಂತ ಶಂಕೆ ಜೊತೆಗೆ ಜಪ. ಕುದುರೆಯನ್ನು ಬೇಗ ಓಡಿಸಲು ಹೆದರಿಕೆ. ಅದು ಅಲ್ಲೇ ಕುಸಿದು ಬಿದ್ದರೆ ಮುಂದೆ ಏನು ಗತಿ ಎಂಬ ಹೆದರಿಕೆ!



ನಾವು ಪ್ಲಾಟಫಾರ್ಮ್ ಸೇರುವ ಹೊತ್ತಿಗೆ ಗಾರ್ಡ ಸೀಟಿ ಊದುತ್ತಿದ್ದ... ಟ್ರೈನ್ ನಿಧಾನವಾಗಿ ಹೊರಟಿತು...


ನಾವು ಬರುವುದಿಲ್ಲ ಅಂಥ ಸೋಮು ಟ್ರಂಕನ್ನು ಕೆಳಗೆ ಪ್ಲಾಟ್ಫಾರ್ಮ್ ಗೆ ಇಳಿಸಿದ್ದ... ದೂರದಿಂದ ನಮ್ಮನ್ನು ನೋಡಿ ಸುತ್ತಮುತ್ತ ಇದ್ದವರ ಸಹಾಯದಿಂಧ ಟ್ರಂಕನ್ನು ಮತ್ತೆ ಬೋಗಿಗೆ ಏರಿಸಿದ. ನಮ್ಮ ಹತ್ತಿರವಿದ್ದ ಸಾಮಾನು, ಬುಟ್ಟಿಗಳನ್ನು ಟ್ರೈನ್ನಲ್ಲಿದ್ದ ಅನೇಕ ಕೈಗಳು ತೆಗೆದುಕೊಂಡವು... ಅತ್ತಿಗೆ ಓಡುತ್ತಲೇ ಯಾವುದೋ ಒಂದು ಕಂಪಾರ್ಟಮೆಂಟನ್ನು ಹತ್ತಿದರು... ಅದನ್ನು ನೋಡಿ ಮಗು ಅಳಲಾರಂಬಿಸಿತು. ಅಯ್ಯೋ! ಮಗು ಎಂದು ಅತ್ತಿಗೆ ಕೂಗುವಾಗ, ನನ್ನ ಕೈಲಿದ್ದ ಮಗುವನ್ನು ಟ್ರೈನ್ನಲ್ಲಿದ್ದ ಪುಣ್ಯಾತ್ಮರೊಬ್ಬರು ಎತ್ತಿಕೊಂಡರು... ಮಗು ಮತ್ತು ಅಮ್ಮನ ಬೋಗಿಗಳು ಬೇರೆ ಬೇರೆ ಆಯಿತು.

ಇದೆಲ್ಲವನ್ನೂ ನೋಡಿ ನಾನೂ ಓಡುತ್ತಾ ಗಾರ್ಡ ಪಕ್ಕದಲ್ಲಿದ್ದ ಬೋಗಿಯನ್ನು ಹತ್ತಿಕೊಂಡೆ.ಆಗ ರಾಮನಗರ ಸ್ಟೇಷನ್ ಇರಲಿಲ್ಲ. ಅದರ ಹೆಸರು ಕ್ಲೋಸ್ ಪೇಟೆ. ಅಲ್ಲಿ ಗಾಡಿ ನಿಂತಾಗ ಗಾರ್ಡ ಮತ್ತು ಪ್ರಯಾಣಿಕರ ಸಹಾಯದಿಂದ, ಎಲ್ಲವನ್ನೂ ಅಮ್ಮ ಮಗುವನ್ನು  ಒಟ್ಟಿಗೆ ಸೇರಿಸಿದ್ದಾಯಿತು.



ನನ್ನ ಟಿಕೆಟ್ ಕೇಳಿದ ಟಿಕೆಟ್ ಕಲೆಕ್ಟರ್ಗೆ ಯಾವ ಪರಿಸ್ಥಿತಿಯಲ್ಲಿ ನಾನು ಟ್ರೈನ್ ಹತ್ತಿದೆ ಎಂದು ಹೇಳಿ ನನ್ನ ಹತ್ತಿರವಿದ್ದ ಪ್ಲಾಟ್ಫಾರ್ಮ ಟಿಕೆಟನ್ನು ತೋರಿಸಿದೆ. ಅದನ್ನು ನೋಡದೆ ಟಿಕೆಟ್ ಇಲ್ಲದೆ ಪ್ರಯಾಣ ಮಾಡಿದ್ದಕ್ಕೆ ಡಬಲ್ ಟಿಕೆಟ್ ಹಣ ಕೊಡಬೇಕೆಂದ. ನನ್ನ ಹತ್ತಿರ ಅಷ್ಟು ದುಡ್ಡು ಇರಲಿಲ್ಲ. ಅದಕ್ಕೆ ಮತ್ತು ವಾಪಸ್ಸು ಬಸ್ ಚಾರ್ಜು ಕಲಾಸಿಪಾಳ್ಯ ಬಸ್ ಸ್ಟಾಂಡ್ ಹೋಗುವುದಕ್ಕೆ ದುಡ್ಡು ತೆತ್ತರು ಅತ್ತಿಗೆ.

ಅವರಿಬ್ಬರೂ ಮೈಸೂರು ಸೇರಿ ಎರಡು ದಿನವಾದಮೇಲೆ ಅಣ್ಣನಿಂದ ಕಾರ್ಡ ತಪಾಲಿನಲ್ಲಿ ಬಂತು. ಸ್ಟೇಷನ್ನಿಂದ ಕೃಷ್ಣಮೂರ್ತಿಪುರಂನಲ್ಲಿದ್ದ ಅವರ ಮನೆಗೆ ಹೋಗುವುದಕ್ಕೆ, ಮಹಾರಾಜರು ದಸರ ಹಬ್ಬದಲ್ಲಿ ಬನ್ನಿ ಮಂಟಪಕ್ಕೆ ಹೋಗುವುದಕ್ಕೆ ಎಷ್ಟು ವ್ಯವಸ್ಥೆ ಬೇಕೋ ಅದರ ದುಪಟ್ಟು ಮಾಡಿ  ಮನೆ ಸೇರಿಸುವಷ್ಟರಲ್ಲಿ ಒಂದು ಯಾಗ ಮಾಡಿದ ಹಾಗಿತ್ತು ಎಂದು ಬರೆದಿದ್ದ ಅಣ್ಣ! ನನಗೆ ಅದರ ಪರಿಚಯ ಆವಾಗಲೇ ಅಗಿತ್ತು!



# ಶ್ವಾನ ಭೋಜನ–ಬಿಟ್ಟಿ ಬಿರಿಯಾನಿ

ಅಶೋಕ ಪೂಜಾರ

**ಬೀ**ದಿ ನಾಯಿಗಳಿಗೆ ಬಿರಿಯಾನಿ ಊಟದ ಪೂರೈಕೆ ಅನ್ನುವುದನ್ನು ತಿಳಿದು 'ಬೀದಿ ಶ್ವಾನ ಸಂಘ' ದ ಅಧ್ಯಕ್ಷರು ಹಾಗು ಕಾರ್ಯಕಾರಿ ಸಮಿತಿಯ ಸದಸ್ಯರು ಸರ್ವ ಸದಸ್ಯರ ವಿಶೇಷ ಸಭೆಯನ್ನು ಕರೆದರು. 'ಬೀದಿ ಶ್ವಾನ ಸಂಘ'ದ ಪದಾಧಿಕಾರಿಗಳು ಹಾಗು ಸಾವಿರಾರು ಬೀದಿ ನಾಯಿಗಳು ಒಮ್ಮಲೇ ಫ್ರೀಡಮ್ ಪಾರ್ಕ್‌ನಲ್ಲಿ ಒಟ್ಟುಗೂಡಿದವು. ತಮಗೆ ಪ್ರತಿದಿನ ಬಿರಿಯಾನಿ ಊಟ ಸಿಗುತ್ತದೆ, ಇನ್ನು ಮುಂದೆ ತಾವು ಶ್ರಮಪಡದೇ ತಮ್ಮ ಆಹಾರವನ್ನು ಪಡೆಯಬಹುದು. ಅದೂ ಕೂಡ ರುಚಿಯಾದ ಭೋಜನ. ಬಿರಿಯಾನಿ ಮಾಂಸಾಹಾರ. ಈ ಅಭೂತಪೂರ್ವ ಸರಕಾರ ತನ್ನ ನಾಗರಿಕರಿಗೆ ಹಲವಾರು ಬಿಟ್ಟಿ ಭಾಗ್ಯಗಳನ್ನು ಕೊಡಮಾಡಿದಂತೆ ತಮಗೂ 'ಬಿರಿಯಾನಿ ಭಾಗ್ಯ' ಕರುಣಿಸಿದ್ದಕ್ಕಾಗಿ ಸಂಭ್ರಮಿಸುತ್ತಿದ್ದವು. ತಾವೇನೂ ಮನುಷ್ಯರಿಗಿಂತ ಕೆಳಮಟ್ಟದಲ್ಲೇನೂ ಇಲ್ಲ, 'ನಾಯಿಯ ಜನ್ಮ ದೊಡ್ಡದು, ಅದನು ಹಾನಿಮಾಡಲು ಬೇಡ ಹುಚ್ಚ ನಾಯಿಗಳಿರಾ' ಎಂಬ ಪುರಂದರದಾಸರ ಅಣಕು ಗೀತೆಯಂತೆ ನಾಯಿ ಜನ್ಮ ಎತ್ತಿಬಂದದ್ದಕ್ಕಾಗಿ ಹೆಮ್ಮೆಪಡುತ್ತಿದ್ದವು. ತಮ್ಮನ್ನೂ ಸಹ ಮನುಷ್ಯರ ಸಮಾನವಾಗಿ ಪರಿಗಣಿಸಿದ್ದಕ್ಕೆ ಅವೆಲ್ಲವುಗಳಿಗೆ ಹೆಮ್ಮೆಯೋ ಹೆಮ್ಮೆ. ಹಲವಾರು ನಾಯಿಗಳು ತಮ್ಮ ತಮ್ಮೊಳಗೆ ಉಭಯಕುಶಲೋಪರಿ ವಿಚಾರಿಸುತ್ತಿದ್ದರೆ, ಕೆಲವು ನಾಯಿಗಳು ಮೂತಿ ಮೂತಿ ಕುಲುಕುತ್ತಿದ್ದವು, ಇನ್ನು ಕೆಲವು ನಾಯಿಗಳು ಬಾಲ ಬಾಲ ಕುಲುಕುತ್ತಿದ್ದವು. ಸಾಕಷ್ಟು ನಾಯಿಗಳು ಅಲ್ಲಿ ಸೇರಿಯಾದ ಮೇಲೆ, ಕೆಲವು ನಾಯಿಗಳು ತಮ್ಮ ವಿಚಾರಗಳನ್ನು ಮಂಡಿಸಿದವು. "ಈ ಬಗ್ಗೆ ಬಿಬಿಎಮ್‌ಪಿ ಕಮೀಶನರ್‌ರಿಗೆ ನಾವೆಲ್ಲಾ ಸೇರಿ, ಅವರು ನಮಗೆ ಈ ಬಿರಿಯಾನಿಯ ಭೋಜನ, ಅದೂ ಮಾಂಸದ ಬಿರಿಯಾನಿಯ ಭೋಜನ, ವ್ಯವಸ್ಥೆಗೊಳಿಸಿದ್ದಕ್ಕಾಗಿ ಅವರಿಗೆ ಗೌರವ ಪೂರ್ವಕವಾಗಿ ಸನ್ಮಾನ ಸಮಾರಂಭವನ್ನೋ, ಅಭಿನಂದನಾ ಸಮಾರಂಭವನ್ನೋ ಏರ್ಪಡಿಸಿ ಅವರಿಗೆ ಧನ್ಯವಾದಗಳನ್ನು ತಿಳಿಸೋಣ, ಆಗ ಅವರಿಗೆ ಇನ್ನೂ ಹೆಚ್ಚಿನ ಬಿಟ್ಟಿಭಾಗ್ಯಗಳನ್ನು ನಮಗೆ ಒದಗಿಸಲು ನಾವು ಕೇಳಿಕೊಳ್ಳೋಣ ಹಾಗು ಅವರು ಮಂಜೂರು ಮಾಡಲು ಕ್ರಮ ಕೈಕೊಳ್ಳಬಹುದು." ಎಂದೆಲ್ಲಾ ಹೇಳುತ್ತಿದ್ದವು.

ಕೆಲವು ನಾಯಿಗಳು ಭಿನ್ನವಾದ ತಮ್ಮದೇ ಆದ ವಿಚಾರಧಾರೆಯನ್ನು ಮಂಡಿಸಲು ಮುಂದಾದವು. "ನಮಗೆ ಈ ಬಿಟ್ಟಿ ಭಾಗ್ಯ ಬೇಡ, ನಾವು ಕಷ್ಟಪಟ್ಟು ದುಡಿದು ತಿನ್ನೋಣ. ದೇವರು ನಮಗೆ ಹರಿತವಾದ ಹಲ್ಲುಗಳನ್ನು ಕೊಟ್ಟಿದ್ದಾನೆ. ಬಲಿಷ್ಠವಾದ ಕಾಲುಗಳನ್ನೂ ಕೊಟ್ಟಿದ್ದಾನೆ, ಯಾರನ್ನೇ ಆಗಲಿ ತೀಕ್ಷ್ಣನೋಟದಿಂದ ನೋಡಿ 'ಗುರ್ರ್' ಎಂದು ಹೆದರಿಸುವ ವಿಶೇಷ ಗುಣ, ಧ್ವನಿ, ಶಕ್ತಿಗಳನ್ನು ದಯಪಾಲಿಸಿದ್ದಾನೆ. ಇವೆಲ್ಲವುಗಳನ್ನು ಹೊಂದಿಯೂ ನಾವು ಬಿಟ್ಟಿಭಾಗ್ಯದ ಬಿರಿಯಾನಿಗಾಗಿ ಜೊಲ್ಲು ಸುರಿಸುವುದು ಅದೆಷ್ಟು ಸರಿ? ಈ ವಿಶೇಷ ಗುಣಗಳನ್ನು ದಯಪಾಲಿಸಿದ ದೇವರಿಗೆ ನಾವು ಕೃತಘ್ನರಾದಂತಾಗುವುದಲ್ಲವೆ? ನಮಗೆ ವೃದ್ಧರು, ಮಹಿಳೆಯರು, ಅಶಕ್ತರು, ಬಾಲಕರು ಸದಾಕಾಲ ಸರಳವಾಗಿ ನಮ್ಮ ಬೇಟೆಗಳಾಗಿ ಲಭ್ಯವಿರುತ್ತಾರೆ. ಅಂಥ ಸಂದರ್ಭಗಳ ಸದುಪಯೋಗ ತಗೊಳ್ಳೋಣ. ಅವರೆಲ್ಲರ



ಮೇಲೆ ದಾಳಿ ಮಾಡಿ ನಮ್ಮ ಹಿರಿಮೆಯನ್ನು ಮೆರೆಯೋಣ." ಎಂದು ಹೇಳಿದವು. ಹಲವಾರು ನಾಯಿಗಳಿಗೆ ಈ ವಿಚಾರಧಾರೆಯು ಸರಿ ಅನ್ನಿಸತೊಡಗಿತು. "ನಮಗೆ ದೇವರು ದಯಪಾಲಿಸಿದ ಅದ್ಭುತ ಶಕ್ತಿ, ಸಾಮರ್ಥ್ಯಗಳನ್ನು ನಾವು ಪ್ರತಿದಿನ ಉಪಯೋಗಿಸಬೇಕೇ ವಿನಃ ಹೀಗೆ ಬಿಟ್ಟಿ ಬಿರಿಯಾನಿ ತಗೊಳ್ಳುವುದು ನಮ್ಮಂಥ ಬೀದಿ ನಾಯಿಗಳಿಗೆ ಶೋಭಾಯಮಾನವಲ್ಲ." -- ಹೀಗೆ ವಾದಿಸುವ ನಾಯಿಗಳ ಸಂಖ್ಯೆಯೂ ಸಾಕಷ್ಟು ದೊಡ್ಡದೇ ಇತ್ತು.

ಒಂದಕ್ಕೊಂದು ತದ್ವಿರುದ್ಧವಾದ ಈ ಎರಡೂ ಪ್ರಸ್ತಾವನೆಗಳಿಗೆ ಬದ್ಧವಾದಂತೆ ಎಲ್ಲ ನಾಯಿಗಳು ಕಚ್ಚಾಡತೊಡಗಿದವು. ತಮ್ಮ ತಮ್ಮ ಕಾಲು, ಹಲ್ಲು ಮುಖಚರ್ಯೆ, ಹಾವ-ಭಾವ ಎಲ್ಲವುಗಳನ್ನು ಪಣಕ್ಕಿಟ್ಟು ಒಬ್ಬರ ಮೇಲೊಬ್ಬರು ಎಗರಾಡತೊಡಗಿದವು. ಸಭೆಯನ್ನು ಶಾಂತ ಸ್ಥಿತಿಗೆ ತರುವುದೇ ಶ್ವಾನಾಧ್ಯಕ್ಷರಿಗೆ ಪ್ರಯಾಸದ ಕೆಲಸವಾಯಿತು. ವಿಧಾನಸಭೆಯಲ್ಲಿ ಆಳುವ ಪಕ್ಷ ಹಾಗು ವಿರೋಧ ಪಕ್ಷಗಳ ಸದಸ್ಯರು ಕಚ್ಚಾಡುವಂತೆ ಒಬ್ಬರ ಮೇಲೊಬ್ಬರು ಎಗರಾಡಲು ಮುಂದಾಗುತ್ತಿದ್ದವು. ಆಗ ಶ್ವಾನಾಧ್ಯಕ್ಷರು, "ಈ ಎರಡೂ ನಿಲುವಳಿಗಳನ್ನು ಮತಕ್ಕೆ ಹಾಕೋಣ, ಯಾವುದಕ್ಕೆ ಬಹುಮತ ಬರುತ್ತದೆಯೋ ಅದರಂತೆ ತೀರ್ಮಾನಿಸಿ ನಡೆದುಕೊಳ್ಳೋಣ" ಎಂಬ ಸಲಹೆಯನ್ನು ಎಲ್ಲರಿಗೂ ಕೇಳಿಸುವಂತೆ ದೊಡ್ಡ ಧ್ವನಿಯಲ್ಲಿ ಬೊಗಳುತ್ತಾ ಪ್ರಸ್ತಾಪಿಸಿತು.



ಆಗ ಒಂದು ವಯೋವೃದ್ಧ ಶ್ವಾನ ಮಾತ್ರ ಮುಂದೆ ಬಂದು ಶ್ವಾನಾ-ಧ್ಯಕ್ಷರನ್ನು, ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಮತ್ತು ಉಳಿದೆಲ್ಲ ಸದಸ್ಯರನ್ನು ಉದ್ದೇಶಿಸಿ, "ಯಾವುದೇ ನಿರ್ಧಾರಕ್ಕೆ ಬರುವ ಮೊದಲು ನನ್ನ ಅಭಿಪ್ರಾಯವನ್ನು ಪರಿಶೀ-ಲಿಸಿರಿ." ವಯೋ-ವೃದ್ಧ ಶ್ವಾನ ಹೇಳಿತು, "ಬಿಬಿಎಮ್‌ಪಿ ಹಾಗು ಸರ್ಕಾರದವರು ಕೋಟಿ-ಗಟ್ಟಲೆ ಹಣ ಖರ್ಚು ಮಾಡಿ ಈ ಬಿಟ್ಟಿ ಬಿರಿಯಾನಿ ಸೌಲಭ್ಯವನ್ನು ಜಾರಿಗೆ ತರುವುದರಲ್ಲಿದ್ದಾರೆ. ಅವರ ಗುಪ್ತ ಎಜೆಂಡಾ ಏನು ಅನ್ನುವುದನ್ನು ನಾವೆಲ್ಲಾ ತಿಳಿದುಕೊಳ್ಳುವುದು ಅವಶ್ಯ ಅವರಿಬ್ಬರ ಹುನ್ನಾರವೇ ಬೇರೆ. ನಮ್ಮ ಮೇಲಿನ ಕರುಣೆಯಿಂದ ಅಥವಾ ಮಮಕಾರ, ಪ್ರೀತಿಯಿಂದ ನಮಗೆ ಈ ಬಿಟ್ಟಿ ಬಿರಿಯಾನಿ ಸೌಲಭ್ಯವನ್ನು ಕಲ್ಪಿಸಿಲ್ಲ. ಅವರ ಉದ್ದೇಶ ದುಷ್ಟತನದಿಂದ ಕೂಡಿದ್ದು....." ಅಷ್ಟರಲ್ಲಿ ಒಂದು ಹದಿ ಹರೆಯದ ನಾಯಿ, "ಏ ಮುದುಕಾ, ನಮ್ಮ ಬಿಬಿಎಮ್‌ಪಿ ಹಾಗು ಸರ್ಕಾರದ ಮೇಲೆ ಏನೇನೋ ಸುಳ್ಳು ಆಪಾದನೆ ಮಾಡಬೇಡ. ನಿನಗೆ ಬುದ್ಧಿ ಅರುಳು ಮರುಳು. ಸುಮ್ಮನೆ ಕೂತ್ಕೋ." "ನಾನು ಹೇಳುವುದನ್ನು ಸ್ವಲ್ಪ ಗಮನವಿಟ್ಟು ಪೂರ್ತಿಯಾಗಿ ಕೇಳಿಸಿಕೊಳ್ಳಪ್ಪಾ, ನಂತರ ನಿನಗೆ

ತಿಳಿದ ಕಡೆ ಮತ ಹಾಕುವಿಯಂತೆ." ಎಂದು ವಯೋವೃದ್ಧ ಶ್ವಾನ ಸಮಾಧಾನ ಮಾಡಲು ಮುಂದಾಯಿತು. ಆಗ ಶ್ವಾನಾಧ್ಯಕ್ಷರು ಮಧ್ಯ ಪ್ರವೇಶಿಸಿ, ಆ ಹದಿ ಹರೆಯದ ನಾಯಿಯನ್ನು ಸುಮ್ಮನಿರಿಸಿ ವಯೋವೃದ್ಧ ಶ್ವಾನಕ್ಕೆ ಮಾತನ್ನು ಮುಂದುವರಿಸಲು ಸೂಚಿಸಿತು. ವಯೋವೃದ್ಧ ಶ್ವಾನ ಮುಂದುವರೆಯುತ್ತಾ, "ನೋಡಿ, ಬಿಬಿಎಮ್‌ಪಿ ಹಾಗು ಸರ್ಕಾರದವರು ನಮ್ಮ ಬೀದಿ ನಾಯಿಗಳ ವಂಶವನ್ನು ನಿರ್ವಂಶಮಾಡಹೊರಟಿದ್ದಾರೆ. ನಿಮಗೆಲ್ಲ ಬಿಟ್ಟಿ ಬಿರಿಯಾನಿಯ ಆಸೆ ತೋರಿಸಿ ಅದನ್ನು ತಿನ್ನಿಸಿ ನಿಮಗೆ ಮುಂದೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡುತ್ತಾರೆ. ನಿಮಗೆ ಮಕ್ಕಳು, ಮರಿಮಕ್ಕಳು ಹುಟ್ಟಲಾರರು. ಇನ್ನು ಮುಂದೆ ನಿಮಗೆ ಸಂತಾನವೇ ಆಗಲಾರದು. 'ಅಪುತ್ರ ಶ್ವಾನಸ್ಯ ಗತಿರ್ನಾಸ್ತಿ' ಎಂಬ ಸಂಸ್ಕೃತ ಅಣಕ ಸುಭಾಷಿತವೇ ಇದೆ. ನಿಮಗೆ ಸ್ವರ್ಗವೇ ಸಿಗಲಾರದು ನೀವೆಲ್ಲ ಅಂತರ್ ಪಿಶಾಚಿಯಾಗಿ ನಿರಂತರ ಗೋಳಾಡಬೇಕಾಗುತ್ತದೆ. ಬಿಟ್ಟಿ ಬಿರಿಯಾನಿಗೆ ಆಸೆಪಟ್ಟರೆ ನಿಮಗೆ ಇಂಥ ಹೀನ ಸ್ಥಿತಿ ಕಟ್ಟಿಟ್ಟ ಬುತ್ತಿ. ಈಗ ನೀವೇ ನಿರ್ಧರಿಸಿ ನಿಮಗೆ ಈ ಭಾಗ್ಯ ಬೇಕೆ ಅನ್ನುವುದನ್ನು." ವಯೋವೃದ್ಧ ಶ್ವಾನನ ಮಾತು ಕೇಳಿದಾಕ್ಷಣ ಎಲ್ಲ ನಾಯಿಗಳಿಗೂ ಬೋಧಗಯಾದಲ್ಲಿ ಬುದ್ಧನಿಗೆ ಆದಂತೆ ಜ್ಞಾನೋದಯವಾಯಿತು. "ನಮ್ಮ ವಂಶ ನಿರ್ವಂಶವಾಗುವುದು ಬೇಡ. ಇಂಥ ಬಿಟ್ಟಿ ಭಾಗ್ಯ ಬೇಡವೇ ಬೇಡ, ನಾವೆಲ್ಲ ಬೀದಿನಾಯಿಗಳಿಗೆ ಮಕ್ಕಳು ಮೊಮ್ಮಕ್ಕಳು ಬೇಕೇ ಬೇಕು, ನಮಗೆಲ್ಲ ಮೋಕ್ಷ ಬೇಕೇ ಬೇಕು." ಎಂದು ಒಮ್ಮತದ ತೀರ್ಮಾನಕ್ಕೆ ಬಂದವು. ತಮ್ಮಲ್ಲಿಯೇ ಎರಡು ಗುಂಪುಗಳಾಗಿ, ಒಂದು ಗುಂಪು ಬಿಬಿಎಮ್‌ಪಿ ಕಡೆಗೆ ಮತ್ತೊಂದು ಗುಂಪು ವಿಧಾನ ಸೌಧದ ಕಡೆಗೆ ಘೋಷಣೆ ಕೂಗುತ್ತಾ ಹೊರಟವು: "ಬಿಟ್ಟಿ ಬಿರಿಯಾನಿ ಬೇಡ, ಬಿಬಿಎಮ್‌ಪಿಗೆ ಧಿಕ್ಕಾರ, ಸರ್ಕಾರಕ್ಕೆ ಧಿಕ್ಕಾರ" ಅನ್ನುವ ಸ್ಲೋಗನ್ ಅನ್ನು ಬೊಗಳುತ್ತಾ ಮರವಣಿಗೆಯಲ್ಲಿ ತೆರಳಿದರು.



# ನಂಗೇ ಬಕ್ರಾ ಮಾಡಿದರೆ....ಬಿಡ್ತೀನಾ ?

ಎ. ವಿಜಯೇಂದ್ರ ರಾವ್

ನಿವೃತ್ತ ಶಿಕ್ಷಕರಾದ ಕೋದಂಡರಾಮಯ್ಯನವರು, ದಿಢೀರನೆ ಮೈಸೂರಿನಲ್ಲಿರುವ ತಮ್ಮ ಮಗಳು, ಮೊಮ್ಮಗಳನ್ನು ನೋಡಬೇಕು ಅನ್ನಿಸಿದರಿಂದ, ಹೆಂಡತಿಗೆ ಟಾಟಾ ಹೇಳುತ್ತಾ, ಒಬ್ಬರೇ ರೈಲ್ವೆ ಸ್ಟೇಷನ್‌ಗೆ ಹೊರಟೇಬಿಟ್ಟರು. ಅಂದು ಏನೋ ಸಾಧಾರಣವಾಗಿ ಪ್ರಯಾಣಿಕರಿಂದ ತುಂಬಿ ತುಳುಕುವುದರ ಬದಲಾಗಿ, ಖಾಲಿ ಖಾಲಿ ಇತ್ತು. ಯಾರಾದರೂ ಜೊತೆಗೆ ಇದ್ದರೆ ಮಾತಾಡುತ್ತಾ ಹೋಗಲು ಚೆನ್ನಾಗಿರುತ್ತೆ ಅನ್ನುವುದರೊಳಗೆ ಕೆಂಗೇರಿ ರೈಲ್ವೆ ಸ್ಟೇಷನ್ ಬಂದೇಬಿಡ್ತು. ಅಲ್ಲಿ ಇವರಿದ್ದ ಬೋಗಿಯೊಳಗೆ ದಬ, ದಬ ಅಂತ ಕಾಲೇಜು ಹುಡುಗರ ಒಂದು ಗ್ಯಾಂಗೇ ಹತ್ತಿ, ಇವರ ಎದುರಿಗೆ, ಪಕ್ಕದಲ್ಲಿ ಸುಮಾರು ಒಂಬತ್ತು ಜನರು ಕುಳಿತುಕೊಂಡರು. ಅವರ ಅಮೋದ, ಪ್ರಮೋದಗಳನ್ನು ನೋಡುತ್ತಾ ಇರುವುದರಲ್ಲಿ ರಾಮನಗರ ಬಂದೇಬಿಡ್ತು.

ಆ ಕಾಲೇಜು ಯುವಕರು ಅದು,ಇದು ಮಾತಾನಾಡುತ್ತಾ ಇದ್ದಾಗ ಅವರ ಗಮನ ಮೇಲಿದ್ದ "ಎಮರ್ಜೆನ್ಸಿ ಚೈನ್" ಅವರಿಗೆ ಕಾಣಿಸಿತು. ಒಬ್ಬ ಹೇಳಿದ– ಏಯ್, ನಾನು ಇದುವರೆಗೂ ಈ ಚೈನ್ ಹಿಡಿದೆಳೆದು ರೈಲನ್ನು ನಿಲ್ಲಿಸಿಯೇ ಇಲ್ಲ ಎಂದು ವ್ಯಥೆ ಪಟ್ಟನು. ಆಗ ಒಬ್ಬ–ಏನಿಲ್ಲ ಮಚ್ಚಾ, ನಿನ್ನ ಕೈಯಲ್ಲಿ ಸಾವಿರ ರೂಪಾಯಿ ಇದ್ದರೆ ಸಾಕು, ನೀನು ಧಾರಾಳವಾಗಿ ಅದನ್ನು ಎಳೆದು ಮಜಾ ತೊಗೊಂಡು, ಆಮೇಲೆ ಅದಕ್ಕೆ ಕಟ್ಟಬೇಕಾದ ದಂಡ ಕೊಡಬೇಕು ಅಷ್ಟೇ ಎಂದನು. ಅದಕ್ಕೆ ಹೌದಾ, ಇವತ್ತು ಅದು ಸಹ ಆಗಿ ಹೋಗಲಿ ಬಿಡು ಎಂದು ಹೇಳಿ– ನೋಡಪ್ಪಾ ನನ್ನ ಹತ್ತಿರ ಇನ್ನೂರು ರೂಪಾಯಿ ಇದೆ ಅಂತ ಆಚೆ ತೆಗೆದು ಕೈಯಲ್ಲಿ ಇಟ್ಟುಕೊಂಡು, ನಿಮ್ಮಗಳ ಹತ್ತಿರ ಎಷ್ಟೆಷ್ಟು ಇದೆಯೋ ಅದನ್ನು ನನ್ನ ಬೊಗಸೆಯಲ್ಲಿ ಹಾಕಿ ಎಂದನು. ಆಗ ಬಾಕಿಯವರು ತಮ್ಮಲಿದ್ದ ಹಣವನ್ನು ಸ್ವಲ್ಪ ಉಳಿಸಿಕೊಂಡು, ಬಾಕಿಯದನ್ನು ಅವನ ಬೊಗಸೆಗೆ ಹಾಕಿದರು. ನಂತರ, ಅದನ್ನೆಲ್ಲಾ ಎಣಿಸಿದಾಗ... ಇನ್ನೂರರ ನಾಲ್ಕು ನೋಟುಗಳು, ನೂರರ ಮೂರು ನೋಟುಗಳು, ಐವತ್ತರ ಎರಡು ನೋಟುಗಳು ಇದ್ದವು.ಒಟ್ಟು ಸಾವಿರದ ಇನ್ನೂರು ರೂಪಾಯಿ ಕಲೆಕ್ಷನ್ ಆಗಿತ್ತು. ಅದನ್ನು ಆ ಬೊಗಸೆಯವನು ತನ್ನ ಪ್ಯಾಂಟಿನ ಒಳ– ಜೇಬಿನಲ್ಲಿಟ್ಟುಕೊಂಡು, ಸರಿ... ಇನ್ನು ನಮ್ಮ ಆಟ ಶುರು ಮಾಡೋಣವೆಂದು ತನ್ನ ಮಿತ್ರರಿಗೆ ಕಣ್ಣು ಹೊಡೆದನು. ಎಲ್ಲರೂ ಮುಸಿ, ಮುಸಿ ನಗುತ್ತಾ ಒಬ್ಬರನ್ನೊಬ್ಬರು ನೋಡಿ ಮುಗುಳ್ನಕ್ಕರು. ಇದನ್ನೆಲ್ಲಾ ಮೌನವಾಗಿ ಕೋದಂಡರಾಮಯ್ಯನವರು ಗಮನಿಸುತ್ತಿದ್ದರು.

ರೈಲು ಅಷ್ಟರಲ್ಲಿ ಮದ್ದೂರು ದಾಟಿ, ಮಂಡ್ಯದ ಕಡೆಗೆ ಹೊರಟಿತ್ತು. ಆಗ ಅವರಲ್ಲಿ ಚೈನ್ ಎಳೆಯುವ ಆಸೆ ತೋಡಿಕೊಂಡವನಿಗೆ, ಸರಿ ಕಣೋ..ಇವತ್ತು ನಿನ್ನ ಆಸೆ ತೀರಿಸಿಕೊಂಡು ಬಿಡೋ ಎಂದಾಗ, ಅವನು ಉತ್ಸಾಹದಿಂದ ಎದ್ದು, ತನ್ನ ಬಲವನ್ನೆಲ್ಲ ಬಿಟ್ಟು ಆ ಚೈನ್ ಎಳೆದನು. ಆಗ ರೈಲು...ಕ್ರೀಕ್ ..ಶಬ್ದದೊಂದಿಗೆ ನಿಧಾನವಾಗಿ ನಿಂತಿತು. ತಕ್ಷಣವೇ ಆ ರೈಲಿನ ಗಾರ್ಡ್, ಆ ರೈಲಿನಲ್ಲಿ ಇದ್ದ ಇಬ್ಬರು ರೈಲ್ವೆ ಪೋಲಿಸ್ ಹುಡುಕುತ್ತಾ ಇವರ ಬೋಗಿಯೊಳಗೆ ಬಂದು–ಯಾರ್ರೀ ಚೈನ್






ಎಳೆದ್ದದ್ದು? ಏನಾಯ್ತು ಅಂತ ಚೈನ್ ಎಳೆದಿರಿ ಎಂದು ಜಬರ್ದಸ್ತಿನಿಂದ ವಿಚಾರಿಸಿದಾಗ, ಆ ಕಾಲೇಜು ಹುಡುಗರು ಒಕ್ಕೊರಲಿನಿಂದ–ನಾವೆಷ್ಟು ಬೇಡವೆಂದರೂ ಸಹ, ಈ ಹಿರಿಯರು ಅದನ್ನು ಎಳೆದುಬಿಟ್ಟು, ಈಗ ಸುಮ್ಮನೆ ಕುಳಿತುಬಿಟ್ಟಿದ್ದಾರೆ ಎಂದರು. ಆಗ ಅವರು – ಏನು ಸ್ವಾಮಿ, ನನ್ನ ನೋಡಿದರೆ ಹಾಗೆ ಮಾಡ್ತೀನಿ ಅನ್ನಿಸುತ್ತಾ? ನಾನು ಹಾಗೆಲ್ಲಾ ಮಾಡಬೇಡಿ ಎಂದು ಬುದ್ಧಿವಾದ ಹೇಳಿದ್ದಕ್ಕೆ, ನನಗೆ ಜೋರು ಮಾಡಿ, ಹೊಡೆದು ಬಡೆದು, ನನ್ನಲ್ಲಿದ್ದ ಹಣವನ್ನೆಲ್ಲಾ ದೋಚಿ, ಚೈನನ್ನು ಎಳೆದು, ಈಗ ನನ್ನ ಮೇಲೆ ಗೂಬೆ ಕೂರಿಸುತ್ತಿದ್ದಾರೆ ಎಂದರು. ನೀವು ನಂಬದೇ ಇದ್ರೆ..ಬೇಕಿದ್ರೆ ನೋಡಿ, ಆ ಹುಡುಗನ ಪ್ಯಾಂಟಿನ ಒಳಜೇಬಿನಲ್ಲಿ ನನ್ನ ಇನ್ನೂರರ ನಾಲ್ಕು ನೋಟುಗಳು, ನೂರರ ಮೂರು ನೋಟುಗಳು, ಮತ್ತು ಐವತ್ತರ ಎರಡು ನೋಟುಗಳು.. ಅಂದರೆ, ಒಟ್ಟು ಸಾವಿರದ ಇನ್ನೂರು ರೂಪಾಯಿ ಇರುತ್ತೆ ಎಂದು ಹೇಳಿದಾಗ, ಆ ರೈಲ್ವೆ ಪೋಲಿಸ್ ಪರಿಶೀಲಿಸಿದನು. ಅವರು ಹೇಳಿದಂತೆ, ಸರಿಯಾಗಿ ಇದ್ದದ್ದರಿಂದ ಆ ಹುಡುಗರಿಗೆ ಕೆನ್ನೆಗೆ ಹೊಡೆದು ಬೈಯ್ಯುವಷ್ಟರಲ್ಲಿ ಮಂಡ್ಯ ಸ್ಟೇಷನ್ ಬಂದೇ ಬಿಟ್ಟಿತು.ಅವರನ್ನೆಲ್ಲಾ ಇಳಿಸಿ, ಕ್ರೈಮ್ ಪೋಲಿಸರಿಗೆ ಹ್ಯಾಂಡ್ ಓವರ್ ಮಾಡಿ, ಕೋದಂಡರಾಮಯ್ಯನವರಿಗೆ – ಸಾರಿ ಸಾರ್, ಆ ಪಡ್ಡೆ ಹುಡುಗರಿಂದ ನಿಮಗೆ ತೊಂದರೆಯಾಯಿತು ಎಂದು ಹೇಳಿ, ಆ ಸಾವಿರದ ಇನ್ನೂರು ರೂಪಾಯಿಯನ್ನು ಅವರಿಗೆ ಕೊಟ್ಟು ಕೈ ಮುಗಿದು ಇಳಿದರು.

ಕೋದಂಡರಾಮಯ್ಯನವರು ಮನಸ್ಸಿನೊಳಗೆ ....ನನ್ನ ಸರ್ವೀಸಿನಲ್ಲಿ ಎಂಥೆಂಥಾ ಹುಡುಗರನ್ನು ನೋಡಿದ್ದೀನಿ. ನನಗೆ ಬಕ್ರಾ ಮಾಡಿದರೆ, ನಾನು ಬಿಟ್ಟುಬಿಡ್ತೀನಾ ಅಂದುಕೊಂಡು, ಈ ಹಣವನ್ನು ತಾನು ಪ್ರತಿ ತಿಂಗಳು ಕೊಡುವ ಬಡ ವಿಧ್ಯಾರ್ಥಿಗಳ ನಿಧಿಗೆ ಹೆಚ್ಚುವರಿಯಾಗಿ ಇದನ್ನು ಸೇರಿಸಿಕೊಟ್ಟುಬಿಡ್ತೀನಿ ಎಂದು ಧೃಡನಿಶ್ಚಯ ಮಾಡುವಷ್ಟರಲ್ಲಿ ಮೈಸೂರು ಬಂದ್ದದ್ದರಿಂದ ಮೊಮ್ಮಗಳನ್ನು ಕಾಣಲು ಲಗುಬಗೆಯಿಂದ ಆಚೆ ಬಂದು ಆಟೋವನ್ನು ಏರಿದರು.

**ಹಾದಿಯಲ್ಲಿ ಕೇಳಿಸಿದ್ದು :**

"ಅಲ್ರೀ, ನಮ್ಮೂರಲ್ಲಿ ಸಾವಿರಾರು ನಕಲಿ ವೈದ್ಯರು ಹಲವಾರು ವರ್ಷಗಳಿಂದ ಕಾರ್ಯನಿರತರಾಗಿದ್ದಾರಂತಲ್ಲಾ,

ಅವರು ಹೇಗೆ ನಿಭಾಯಿಸ್ತಾರೆ ಅನ್ನೋದರ ಬಗ್ಗೇನೇ ಒಂದು ಪಿ. ಎಚ್.ಡಿ. ಮಾಡಬೋದು ಅಂತ ಕಾಣುತ್ತೆ !"



## ಟೈಪಿಸ್ಟ್3

**ಎಂ.ಎನ್.ಸುಂದರ ರಾಜ್**

**ಪಾತ್ರ ಪರಿಚಯ:**

ಮೇನೇಜರ್ ಲಕ್ಷ್ಮೀಪತಿ : ಸುಮಾರು 50 ವರ್ಷ

ಹೆಡ್ ಕ್ಲರ್ಕ್ ಬೋಸರಾಜ: ಸುಮಾರು 40 ವರ್ಷ

ಎರಡನೇ ದರ್ಜೆ ಗುಮಾಸ್ತ ಕಿಶೋರ ಸುಮಾರು 30 ವರ್ಷ

ಕಚೇರಿ ಸಹಾಯಕ ಗೋವಿಂದು: ಸುಮಾರು 55ವರ್ಷ

### ದೃಶ್ಯ – 1

ಕಛೇರಿ ಅಸ್ತವ್ಯಸ್ತವಾಗಿದೆ. ಮೇಜಿನ ಮೇಲೆ ಫೈಲ್‌ಗಳ ರಾಶಿ. ಕುರ್ಚಿ ಅಡಾದಿಡ್ಡಿಯಾಗಿ ಹಾಕಿದ್ದಾರೆ. ಎಲ್ಲೆಲ್ಲೂ ಶಿಸ್ತು ಇಲ್ಲ. ಅಲ್ಲಿರುವ ಮೂರು ಟೇಬಲ್ ಮೇಲೆ ಅಲ್ಲಿ ಕೆಲಸ ಮಾಡುವ ಹುದ್ದೆಗಳ ಹೆಸರು ರಾರಾಜಿಸುತ್ತಿದೆ. ಮೂಲೆಯಲ್ಲೊಂದು ಮರದ ಸ್ಟೂಲು. ಅದರ ಮೇಲೆ ಗೋವಿಂದ ಕೂತು ಪತ್ರಿಕೆ ಓದುತ್ತಿದ್ದಾನೆ. ಒಬ್ಬೊಬ್ಬರೇ ಪ್ರವೇಶ.

**ಲಕ್ಷ್ಮೀಪತಿ:** (ಸ್ವಗತ) ಇಲ್ಲಿ ಯಾರಿಗೂ ಏನೂ ಹೇಳುವಂತಿಲ್ಲ. ಮೈಮೇಲೆಯೇ ಹಾರಿಬರುತ್ತಾರೆ.ಏನು ಕಚೇರೀನೋ ಏನೋ. ಟೇಬಲ್ ಮೇಲೆ ಫೈಲ್ ರಾಶಿಯೇ ಬಿದ್ದಿದೆ. ಇದನ್ನೆಲ್ಲಾ ಯಾವಾಗಪ್ಪಾ ಕ್ಲಿಯರ್ ಮಾಡೋದು.

ಲೇ ಗೋವಿಂದು, ಏನೋ ಮಾಡ್ತಿದ್ದೀಯೋ, ನಿನಗೆ ಪತ್ರಿಕೆ ಓದೋದ್ರಲ್ಲಿ ಇರೋ ಆಸಕ್ತಿ ಕೆಲಸದ ಮೇಲೆ ಇಲ್ಲ ನೋಡು.


**ಗೋವಿಂದು:** ಯಾಕ್ಸಾರ್ ಏನಾಯ್ತು? ನಾನಾಗ್ಲೇ ಬಾಗಿಲು ತೆಗೆದು ಕಸ ಹೊಡೆದಿದ್ದೇನಲ್ಲಾ, ನೀರೂ ತಂದು ನಿಮ್ಮ ಟೇಬಲ್ ಮೇಲೆ ಇಟ್ಟಿದ್ದೀನಿ.............

**ಲಕ್ಷ್ಮೀಪತಿ:** ಅದೆಲ್ಲ ಸರಿ ಕಣಯ್ಯಾ, ಹಾಳಾದ್ದು ಗಡಿಯಾರ ನಡೀತಾ ಇಲ್ವಲ್ಲ, ಅದಕ್ಕೆ ಶೆಲ್ ಹಾಕಿದ್ದೀ ತಾನೆ?

**ಗೋವಿಂದು:** ಅದು ಕೆಟ್ಟು ಹೋಗಿ ಒಂದು ವರ್ಷ ಆಯ್ತಲ್ಲಾ ಸಾರ್, ಹೊಸದು ತಂದು ಕೊಡಿ ಅಂದರೆ ಅದಕ್ಕೆ ಬಡ್ಜೆಟ್ ಇಲ್ಲ ಅಂತೀರಾ.

**ಲಕ್ಷ್ಮೀಪತಿ:** ಏನ್ಮಾಡ್ಲಯ್ಯಾ, ಎಲ್ಲದಕ್ಕೂ ಕಾನೂನಿರುತ್ತೆ ಅಲ್ವೆ? ಮೇಲಧಿಕಾರಿಗಳಿಂದ ಗಡಿಯಾರ ಕೊಳ್ಳೋದಕ್ಕೆ ಪರ್ಮಿಷನ್ ಬಂದಿಲ್ವಲ್ಲಾ. ಅದಿರ್‍ಲಿ ಎಲ್ಲಯ್ಯಾ ಬೋಸರಾಜು, ಕಿಶೋರ?. ರಜಾ

ಹಾಕಿದರೇನಯ್ಯಾ?



ಅಷ್ಟು ಹೊತ್ತಿಗೆ ನಗುತ್ತಾ, ಮಾತನಾಡುತ್ತಾ, ಬೋಸರಾಜು ಮತ್ತು ಕಿಶೋರ್ ಪ್ರವೇಶ.

**ಬೋಸರಾಜು:** ಗುಡ್ ಮಾರ್ನಿಂಗ್ ಸರ್.

**ಲಕ್ಷ್ಮೀಪತಿ:** ನಿನ್ನ ಗುಡ್ ಮಾರ್ನಿಂಗಿಗೆ ಅಷ್ಟು ಬೆಂಕಿ ಹಾಕ, ಅಲ್ಲಯ್ಯಾ

ಕಛೇರಿಗೆ ಸರಿಯಾದ ಸಮಯಕ್ಕೆ ಬರೋಕೇನಯ್ಯಾ ನಿಮಗೆ ಧಾಡಿ?

**ಬೋಸರಾಜು:** ಪ್ರತಿ ದಿನ ಬರ್ತಾ ಇರ್ಲಿಲ್ವಾ ಸರ್, ಇವತ್ತು ಬಸ್ ಸ್ವಲ್ಪ ಲೇಟಾಯ್ತು ಅಷ್ಟೆ. ಬೇಕಾದರೆ ಕಿಶೋರನ್ನ ಕೇಳಿ.

**ಲಕ್ಷ್ಮೀಪತಿ:** ಸರಿ ಸರಿ ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ. ಕೆಲಸಾ ನೋಡಿ. ಅಷ್ಟೊಂದು ಫೈಲು ಬಿದ್ದಿದೆ, ಮನೆಗೆ ತಗೊಂಡು ಹೋಗಿ ಕ್ಲಿಯರ್ ಮಾಡಿಕಂಡು ಬನ್ನಿ ಅಂದ್ರೆ ಅದಾಗಲ್ಲ. ಏನೇನೋ ಸಬೂಬು ಹೇಳ್ತೀರ, ಕಿಶೋರ ನೀನಿನ್ನೂ ಕಲಿಯೋದು ಭಾಳಾ ಇದೆ. ಸ್ವಲ್ಪ ಜವಾಬ್ದಾರಿಯಿಂದ ಕೆಲಸ ಮಾಡು.



**ಕಿಶೋರ:** ತಾವು ಹೇಳಿದ ಹಾಗೆ ಕೇಳ್ತೀನಲ್ಲಾ ಸರ್, ಈಗೇನು ಮಾಡ್ಬೇಕು ಹೇಳಿ?

**ಲಕ್ಷ್ಮೀಪತಿ:** ಏನೂ ಮಾಡಬೇಡ. ಮೊದಲು ಯಾವ ಫೈಲು ಇಂಪಾರ್ಟೆಂಟು ಅದನ್ನು ಟಿಪ್ಪಣಿ ಬರೆದುಕೊಂಡು ಬಾ.

**ಕಿಶೋರ :** ಆಗ್ಲಿ ಸರ್

ಗೋವಿಂದು: ಅವರ ಟಿಪ್ಪಣೀನಾ ಅವರೇ ಓದಕ್ಕಾಗಲ್ಲ, ಅಷ್ಟು ಚೆನ್ನಾಗಿ ಬರೀತಾರೆ

**ಬೋಸರಾಜು:** ಏಕೋ ಹಾಗಂತೀಯಾ?

**ಗೋವಿಂದು:** ಇನ್ನೇನ್ಸಾರ್? ಅವರ ಅಕ್ಷರ ನೋಡಿದ್ದೀರಾ? ಇರುವೇನಾ ಇಂಕಲ್ಲಿ ಅದ್ದಿ ಕಾಗದದ ಮೇಲೆ ಬಿಟ್ಟಂಗೆ ಇರುತ್ತೆ. ಅವ್ರು ಡಾಕ್ಟರಾಗಬೇಕಿತ್ತು, ಪಿಯುಸಿ ಡುಮ್ಕಿ ಹೊಡೆದು ಇಲ್ಲಿ ಗುಮಾಸ್ತರಾಗಿದ್ದಾರೆ.

**ಕಿಶೋರ:** ಸಾಕು ನಿಲ್ಸೋ ಮಾರಾಯ, ನನಗೆ ಮೊದಲೇ ತಲೆ ನೋಯ್ತಿದೆ. ಒಂದು ಕಾಫಿ ತಂದ್ಕೊಡು.

**ಲಕ್ಷ್ಮೀಪತಿ:** ಆಗ್ಲೇ ಶುರು ಆಯ್ತಾ, ಆಫೀಸಿಗೆ ಬರೋ ಹಾಗಿಲ್ಲ, ಆಗ್ಲೇ ಕಾಫಿ. ಹೋಗ್ಲಿ ನಂಗೆ ಮತ್ತು ಬೋಸರಾಜನಿಗೂ ತಂದ್ಬಿಡು, ಬರುವಾಗ ನೀನೂ ಅಲ್ಲೇ ಕುಡಿದು ಬಾ. ಹಣನಾ ಮಾತ್ರ ಕಿಶೋರನ ಹತ್ರ ಇಸ್ಕೋ.

**ಕಿಶೋರ:** ನಾನ್ಯಾಕಾದ್ರೂ ಕಾಫಿ ತಗೊಂಡು ಬಾ ಅಂದ್ನೋ. ಆಯ್ತು ಹೋಗಪ್ಪ. ಎಲ್ಲರ ಋಣಾನೂ ತೀರಿಸಿಬಿಡ್ತೀನಿ.



**ಲಕ್ಷ್ಮೀಪತಿ:** ಅಲ್ರೀ ಬೋಸರಾಜು ನಾವು ಮೇಲಧಿಕಾರಿಗೆ ಪತ್ರ ಬರೆದು, ಒಬ್ಬ ಟೈಪಿಸ್ಟ್ ಬೇಕು ಅಂತ ಕೇಳಿದ್ವಲ್ಲಾ, ಆ ಫೈಲು ತನ್ನಿ. ಹಾಗೇ ಮತ್ತೊಂದು ನೆನಪೋಲೆ

ಪತ್ರ ಬರೆದು ತನ್ನಿ. ಅದನ್ನು ಇವತ್ತು ಪೋಸ್ಟ್ ಮಾಡೋಣ. ನನಗಂತೂ ನಿಮ್ಮ ಜೊತೆಗೆ ಬಡಕೊಂಡು ಬಡಕೊಂಡು ಸಾಕಾಗಿ ಹೋಗಿದೆ.

(ಅಷ್ಟರಲ್ಲಿ ಗೋವಿಂದು ಮೂರು ಗಾಜಿನ ಲೋಟದಲ್ಲಿ ಕಾಫಿ ತಂದು ಎಲ್ಲರ ಮುಂದೆ ಇಡುತ್ತಾನೆ. ಎಲ್ಲರೂ ಕಾಫಿ ಹೀರುತ್ತಾ ಕುಳಿತಾಗ ಪೋಸ್ಟ್ ಮ್ಯಾನ್ ಆಗಮಿಸಿ, ಅಂದಿನ ಪೋಸ್ಟ್‌ನಲ್ಲಿ ಬಂದ ಎಲ್ಲ ಕಾಗದ ಪತ್ರಗಳನ್ನೂ ಮೇನೇಜರ್ ಟೇಬಲ್ ಮೇಲೆ ತಂದಿಡುತ್ತಾನೆ.)

(ಮೇನೇಜರ್ ಲಕ್ಷ್ಮೀಪತಿ ಪ್ರತಿಯೊಂದು ಕವರನ್ನೂ ಒಡೆದೂ ಒಡೆದೂ ನೋಡ್ತಾ) ಅಲ್ಲಯ್ಯಾ ಜನಸಂಖ್ಯಾ ಸ್ಫೋಟದ ಬಗ್ಗೆ ಅರಿವಿನ ಕಾರ್ಯಕ್ರಮ ಮಾಡ್ಬೇಕಂತೆ, ಅದೂ ಬರುವ ಭಾನುವಾರ. ಎಲ್ಲರೂ ಅಂದು ನಡೆಯುವ ಜನಸಂಖ್ಯಾ ಓಟದಲ್ಲಿ ಭಾಗವಹಿಸಬೇಕಂತೆ. ಯಾರೂ ತಪ್ಪಿಸೋ ಹಾಗಿಲ್ಲ ತಿಳೀತೆ?

**ಬೋಸರಾಜು:** ಸರ್ ನನಗೆ ಆಗೋಲ್ಲ. ಅಂದು ನಮ್ಮ ತಂದೆ ತಿಥಿ ಇದೆ.

**ಲಕ್ಷ್ಮೀಪತಿ:** ಸುಮ್ನೆ ಏನೇನೋ ಹೇಳ್ಬೇಡ್ರಿ. ಕಾರ್ಯಕ್ರಮ ಮುಗಿಸಿದ ಮೇಲೆ ಹೋಗಿ ತಿಥಿನಾದ್ರೂ ಮಾಡಿ, ಹುಟ್ಟಿದ ದಿನಾನು ಬೇಕಾದ್ರೇ ಮಾಡಿ.

**ಬೋಸರಾಜು:** ಅದಾಗಲ್ಲ ಸಾರ್. ತಿಥಿ ಅಂದ್ರೆ ನೂರೆಂಟು ಕೆಲಸ ಇರುತ್ತೆ. ನಿಮಗೇನು ಗೊತ್ತು ಇವೆಲ್ಲಾ, ನೀವು ಮಾಡಿದ್ರೆ ತಾನೆ?

**ಲಕ್ಷ್ಮೀಪತಿ:** ಯಾಕ್ರೀ ಗೊತ್ತಿಲ್ಲ, ನಾವೂ ವರ್ಷಕ್ಕೊಮ್ಮೆ ಹಿರಿಯರ ಹಬ್ಬ ಮಾಡಲ್ವೆ?

**ಬೋಸರಾಜು:** ನೀವೇನೋ ವರ್ಷಕ್ಕೊಮ್ಮೆ ಮಾಡ್ತೀರಿ. ನಾವು ಹಾಗಲ್ಲ ಸರ್. ನಮ್ಮ ಅಪ್ಪ, ಅಮ್ಮ ಮತ್ತು ಮಲತಾಯಿ ಮೂವರ ತಿಥಿನೂ ಮಾಡ್ಬೇಕು ಸಾಲದ್ದಕ್ಕೆ ಮಹಾಲಯ ಅಮಾವಾಸ್ಯೆ ದಿನ ಎಲ್ಲರ ತಿಥೀನೂ ಮಾಡ್ಬೇಕು.ಇವೆಲ್ಲ ಮಾಡೋ ಹೊತ್ತಿಗೆ ನಮ್ಮ ತಿಥಿ ಆಗಿರುತ್ತೆ.

**ಲಕ್ಷ್ಮೀಪತಿ:** ನನಗೆ ಅವೆಲ್ಲಾ ಗೊತ್ತಿಲ್ಲ. ಮೇಲಧಿಕಾರಿಗಳ ಆದೇಶ ಪಾಲನೆ ಮಾಡ್ಬೇಕು ಅಷ್ಟೆ. ಯಾವ ಸಬೂಬೂ ಹೇಳಬೇಡ್ರಿ. ಕಿಶೋರ ತಗಳಪ್ಪ, ಇದಕ್ಕೆ ಎಲ್ಲರ ಸಹಿ ಹಾಕ್ಸು.

**ಕಿಶೋರ:** ಗೋವಿಂದು ಇರೋದ್ಯಾಕೆ ಸಾರ್, ಗೋವಿಂದು ಅದನ್ನು ತಗೊಂಡು ಬಾ. ಮೊದಲು ಸಾಹೇಬರದ್ದು ಸಹ ಹಾಕ್ಸು. ಆಮೇಲೆ ನಾವು ಹಾಕೋಣ.

**ಲಕ್ಷ್ಮೀಪತಿ:** (ಇನ್ನೊಂದು ಕವರ್ ತೆಗೆದು ಅದರೊಳಗಿನ ಪತ್ರವನ್ನು ಓದಿದ ಕೂಡಲೇ ಮುಖದಲ್ಲಿ ಮಂದಹಾಸ ಮೂಡುತ್ತದೆ) ರೀ, ಎಲ್ರೂ ಇಲ್ಲಿ ಕೇಳಿಸ್ಕಳ್ಳಿ, ಇದು ತುಂಬಾ ಮುಖ್ಯವಾದದ್ದು. ನಮ್ಮ ಮನವಿಗೆ ಮೇಲಧಿಕಾರಿಗಳು ಸ್ಪಂದಿಸಿ, ಒಬ್ಬ ಟೈಪಿಸ್ಟ್ ನೇಮಕ ಮಾಡಿದ್ದಾರೆ.

**ಬೋಸರಾಜು:** (ಮೇನೇಜರ್ ಟೇಬಲ್ ಬಳಿ ಬಂದು) ಯಾರ್ಸಾರ್ ಅವ್ರು, ಎಲ್ಲಿಂದ ಬರ್ತಾರೆ?



**ಲಕ್ಷ್ಮೀಪತಿ:** ಇಲ್ನೋಡಿ ಹೆಸರು ಕೋಕಿಲವಾಣಿ. ಮುಖ್ಯ ಕಛೇರಿಯಿಂದ್ಲೇ ಬರ್ತಿದ್ದಾರೆ. ಹೆಸರು ನೋಡಿದ್ರೆ ಒಳ್ಳೆ ಆಕರ್ಷಕವಾಗಿದೆ ಅಲ್ವೇನ್ರಿ? ನೋಡೋದಕ್ಕೂ ಚೆನ್ನಾಗಿರಬಹುದು.

**ಕಿಶೋರ:** ಸಧ್ಯ ನನಗೆ ಟೈಪು ಮಾಡೋದು ತಪ್ಪು. ಇನ್ನು ಮೇಲೆ ಕೆಲಸ ಸರಾಗವಾಗಿ ನಡೆಯುತ್ತೆ. ಗೋವಿಂದು ಆ ಟೇಬಲ್ ನನ್ನ ಟೇಬಲ್ ಹತ್ರ ಹಾಕು. ಒಟ್ಟಿಗೆ ಕೆಲಸ ಮಾಡೋದಿಕ್ಕೆ ಅನುಕೂಲವಾಗುತ್ತದೆ.

**ಬೋಸರಾಜು:** ಅದೆಲ್ಲ ಆಗಲ್ಲ, ನಾನು ಹೆಚ್ಚು ಡಿಕ್ಟೇಟ್ ಮಾಡೋದಿರುತ್ತೆ. ಆ ಟೇಬಲ್‌ನ ನನ್ನ ಟೇಬಲ್‌ಗೆ ತಾಗುವಂತೆ ಹಾಕಪ್ಪಾ, ಹಾಗೇ, ಚೆನ್ನಾಗಿ ಟೇಬಲ್ ವರೆಸಿ ಇಡು. ಹೊಸದಾಗಿ ಬಂದೋವ್ರು ಏನನ್ನಕಳಲ್ಲ?

**ಲಕ್ಷ್ಮೀಪತಿ:** ಈ ಆಫೀಸಿಗೆ ನಾನು ಬಾಸೋ, ನೀವೋ? ಟೈಪಿಸ್ಟ್ ಟೇಬಲ್ ಎಲ್ಲಿ ಹಾಕ್ಬೇಕು ಅಂತ ನಾನು ತೀರ್ಮಾನ ಮಾಡೋದು. ಇಲ್ಲೇ ನನ್ನ ಪಕ್ಕದಲ್ಲಿ ಆ ಟೇಬಲ್ ಹಾಕು. ಟೈಪಿಂಗ್ ಮಾಡ್ಸೋದು ತುಂಬಾ ಇರುತ್ತೆ.

**ಕಿಶೋರ:** (ವ್ಯಂಗ್ಯದಿಂದ) ಹೌದೌದು ತುಂಬ ಟೈಪ್ ಮಾಡೋದಿರುತ್ತೆ. ಇಲ್ಲೇ ಕುಳಿತು ಟೈಪ್ ಮಾಡಬಹುದಲ್ವಾ? ಅಲ್ಲೇ ಏಕೆ?

**ಬೋಸರಾಜು:** ನೋಡಿ ಆಫೀಸಿನ ಮುಖ್ಯಸ್ಥರು ಒಬ್ಬರೇ ಇರಬೇಕು. ಅವರು ಕೇವಲ ಮೇಲ್ವಿಚಾರಣೆ ಮಾಡೋರು. ಆ ಟೇಬಲ್ ನನ್ನ ಟೇಬಲ್ ಪಕ್ಕದಲ್ಲೇ ಇರಬೇಕು.

**ಗೋವಿಂದು:** (ಸ್ವಗತ) ಇದು ಒಳ್ಳೇ ಪಂಚಾಯ್ತಿ ಆಯ್ತಲ್ಲಾ, ಟೈಪಿಸ್ಟ್ ಹುಡುಗ ಆಗಿದ್ರೆ ಇವರೆಲ್ಲಾ ಹೀಗೆ ಮಾಡ್ತಾ ಇದ್ರಾ? ಏನು ಜನಾನೋ ಏನೋ. ಬರೋದು ಹೆಣ್ಣು ಅಂತ ಗೊತ್ತಾದ ಕೂಡಲೆ ಇವರ ಚಹರೇನೇ ಬದಲಾಗಿ ಹೋಯ್ತು.

ಹೋಗ್ಲಿ ಬಿಡಿ ಸಾ, ನೀವ್ಯಾಕೆ ಬಡಿದಾಡ್ತೀರಿ. ಆ ಟೇಬಲ್‌ನ ನನ್ನ ತಾವೇ ಹಾಕ್ತೀನಿ. ನೀವು ಕೊಟ್ಟಿದ್ದೆಲ್ಲಾ ತಗಂಡೋಗಿ ಟೈಪಿಸ್ಟಮ್ಮಂಗ ಕೊಟ್ಟು ಟೈಪ್ ಆದ್ಮೇಲೆ ನಿಮಗೇ ತಂದು ಕೊಡ್ತೀನಲ್ವಾ?

**ಲಕ್ಷ್ಮೀಪತಿ:** ಸಾಕು ಸುಮ್ನಿರೋ, ನಾನು ಹೇಳ್ದಂಗೆ ಕೇಳು. ಅಪರೂಪಕ್ಕೊಂದು ಹೆಣ್ಣು ನಮ್ಮ ಆಫೀಸಿಗೆ ಬರ್ತಿದೆ. ಆಕೆಗೆ ಏನೂ ತೊಂದರೆಯಾಗಬಾರ್ದು. ಎಲ್ಲರೂ ಮೊದಲು ಗೌರವ ಕೊಡೋದನ್ನ ಕಲೀರಿ. ಟೇಬಲ್ ಹಾಕೋದ್ರಲ್ಲಿ ಇರೋ ಆಸಕ್ತಿ, ಆಫೀಸ್ನಾ ಸ್ವಚ್ಛವಾಗಿ ಇಟ್ಕೊಳ್ಳೋದಕ್ಕೂ ಇರ್ಬೇಕಲ್ವಾ? ಆಕೆ ನಾಳೇನೋ ನಾಡಿದ್ದೋ ಬರಬಹುದು. ಮೊದಲು ನಿಮ್ಮ ಟೇಬಲ್ ಕುರ್ಚಿ ವರಸಿ ಸ್ವಚ್ಛ ಮಾಡಿ. ಎಷ್ಟೊಂದು ಕಸ ಬಿದ್ದಿದೆ. ಸರಿಯಾಗಿ ಗುಡಿಸೋಕೆ ಆಗಲ್ವೇನೋ ಗೂವಿಂದು?

**ಗೋವಿಂದು:** ನಾಳೆ ನೋಡಿ ಸಾ. ನಮ್ಮ ಆಫೀಸು ಹೆಂಗೆ ಇರ್ತದೆ ಅಂತ. ಟೈಪಿಸ್ಟಮ್ಮ ಬಂದು ನೋಡಿದ್ರೆ ಖುಶಿಯಾಗ್ಬೇಕು.

**ಲಕ್ಷ್ಮೀಪತಿ:** ಸರಿ ಸರಿ, ನಿಮ್ಮ ಕೆಲಸ ನೀವು ನೋಡ್ಕಳ್ಳಿ, ಬೇರೆ ವಿಚಾರ ಬೇಡ.

## ದೃಶ್ಯ –2

ಅದೇ ಕಛೇರಿ, ಟೇಬಲ್ ಮೇಲೆ ಫೈಲ್‌ಗಳನ್ನು ಒಪ್ಪವಾಗಿ ಜೋಡಿಸಲಾಗಿದೆ. ಸ್ವಚ್ಛವಾಗಿ ಗುಡಿಸಲಾಗಿದೆ. ಎಲ್ಲರೂ ಸಮಯಕ್ಕೆ ಸರಿಯಾಗಿ ಆಗಮಿಸಿದ್ದಾರೆ. ಮೇನೇಜರ್ ಲಕ್ಷ್ಮೀಪತಿ ಸೂಟು–ಬೂಟು ಹಾಕಿಕೊಂಡು, ಟೈ ಕಟ್ಟಿಕೊಂಡು ಬಂದಿದ್ದಾರೆ. ಬೋಸರಾಜು ನೀಟಾಗಿ ತಲೆ ಬಾಚಿಕೊಂಡು ಇನ್ ಷರ್ಟ್



ಮಾಡಿಕೊಂಡು ಬಂದಿದ್ದಾರೆ. ಕೀಶೋರ್ ಅಂತೂ ಕಾಲೇಜು ಹುಡುಗನ ಹಾಗೆ ಉಡುಪು ಧರಿಸಿ, ಸ್ಟೈಲಾಗಿ ಬಂದಿದ್ದಾನೆ. ಗೋವಿಂದು ಎಲ್ಲರನ್ನೂ ನೋಡಿ ಮುಸಿ ಮುಸಿ ನಗುವನು.

**ಲಕ್ಷ್ಮೀಪತಿ:** ಯಾಕೋ ಗೋವಿಂದು ಒಬ್ನೇ ನಗ್ತಾ ಇದೀಯ, ಹುಚ್ಚು ಗಿಚ್ಚು ಹಿಡೀತೇನೋ ನಿಂಗೆ. ನೋಡು ಆ ಕಸಬರಿಕೆ ಕಾಣದ ಹಾಗೆ ಅಲ್ಲಿಡು. ನನ್ನ ಟೇಬಲ್ ಮೇಲೆ ಮೊದಲು ನೀರು, ಲೋಟ ಇಡು. ಎಲ್ಲರಿಗೂ ನಿಮ್ಮ ಕೆಲಸದ ಬಗ್ಗೆ ಆಸಕ್ತಿ ಇರಲಿ. ನೋಡು ಗೋವಿಂದು, ತಗೋ ಈ ಹಣಾನಾ, ಫ್ಲಾಸ್ಕ್ ತೊಳೆದು ಒಳ್ಳೆ ಕಾಫಿ ತಂದಿಡು.

**ಬೋಸರಾಜು:** ಕಿಶೋರ, ಬಹುಶಃ ಆ ಮೇಡಂ ಇವತ್ತು ಬರ್ತಾರೇನೋ ಕಣೋ. ಬಲಗಣ್ಣು ಹೊಡೀತಾ ಇದೆ. ಆ ಟೈಪಿಸ್ಟ ಬಂದಮೇಲೆ ನನ್ನ ಬಗ್ಗೆ ಸ್ವಲ್ಪ ಹೊಗಳಿ ಹೇಳೋದು ಮರೀಬೇಡ. ಮೇನೇಜರ್ ಇಲ್ಲದಾಗ ನಿನಗೆ ಪರ್ಮಿಶನ್ ಕೊಡೋನು ನಾನೇ ತಾನೆ.

**ಕಿಶೋರ:** ಏಕೆ ಸರ್. ನೀವೊಬ್ರೇ ಟೈಪಿಸ್ಟ್ ಜೊತೆ ಹರಟೆ ಹೊಡ್ಕೊಂಡು ಚಾಟ್ ಮಾಡ್ತಾ ಇರಬಹುದು ಅಂತಾನೋ. ನಾನು ಇನ್ಮೇಲೆ ನಿಮ್ಮ ಹತ್ರ ಪರ್ಮಿಶನ್ ತಗೊಳ್ಳೋದೇ ಇಲ್ಲ.

**ಲಕ್ಷ್ಮೀಪತಿ:** ಏನ್ರೀ ಅದು ನೀವಿಬ್ರೇ ಏನೋ ಮಾತಾಡ್ತಾ ಇದೀರಿ. ಕೆಲ್ಸ ಮಾಡ್ರಿ ಸಾಕು.

ಅಷ್ಟರಲ್ಲಿ ಗೋವಿಂದು ಕಾಫಿ ಫ್ಲಾಸ್ಕ್ ತಂದು ಲಕ್ಷ್ಮೀಪತಿಯ ಟೇಬಲ್ ಮೇಲೆ ಇಡುವನು. ನಂತರ ನೀರಿನ ಹೂಜಿ ಮತ್ತು ಲೋಟವನ್ನೂ ಸಹ ತಂದಿಡುವನು.

**ಗೋವಿಂದು:** (ಸ್ವಗತ) ಎಂದೂ ಯಾರಿಗೂ ಒಂದು ಕಾಫಿ ತರಿಸದ ಮೇನೇಜರ್ ಇವತ್ತು ಲೇಡಿ ಟೈಪಿಸ್ಟ್ ಬರ್ತಾರೆ ಅಂತ ಕಾಫಿ ತರಿಸಿದ್ದಾರೆ! ಸ್ವೀಟು, ಬಿಸ್ಕತ್ತು ಏನಾದರೂ ತರಲೇ ಸಾರ್

**ಮೇನೇಜರ್:**. ಏನೂ ಬೇಡ, ಹೇಳಿದಷ್ಟು ಕೆಲಸ ಮಾಡು

ಒಬ್ಬ ಸುಂದರ ತರುಣಿ, ಆಧುನಿಕ ಉಡುಪು ಧರಿಸಿ ಸ್ಟೈಲಾಗಿ ಆಫೀಸಿಗೆ ಪ್ರವೇಶ. ಎಲ್ಲರ ಕಣ್ಣೂ ಆಕೆಯ ಮೇಲೆಯೇ.

**ಗೋವಿಂದು:** ಬನ್ನಿ ಮೇಡಂ. ನಿಮಗಾಗೇ ನಾವು ಕಾಯ್ತಾ ಇದ್ವಿ.

**ಲಕ್ಷ್ಮೀಪತಿ:** ವೆಲ್ ಕಂ ಮೇಡಂ. ನಮಗೆ ಟೈಪಿಸ್ಟ್ ಅವಶ್ಯಕತೆ ತುಂಬಾ ಇತ್ತು. ಬನ್ನಿ ಇಲ್ಲಿ ಕುಳಿತುಕೊಳ್ಳಿ.

**ಬೋಸರಾಜು:** ಆರ್ಡರ್ ಕಾಪಿ ತಂದಿದ್ದೀರಾ? ಕೊಡಿ ಸ್ವಲ್ಪ

**ಲಕ್ಷ್ಮೀಪತಿ:** ಯಾಕಿಷ್ಟು ಆತುರ ಬೋಸರಾಜು, ಆಕೆ ಇನ್ನೂ ಈಗ ಬಂದಿದ್ದಾರೆ, ಗೋವಿಂದು ಅವರಿಗೆ ಸ್ವಲ್ಪ ನೀರು ಕೊಡು. ಆಮೇಲೆ ಕಾಫಿ ಕೊಡು. ಸ್ವಲ್ಪ ಸುಧಾರಿಸಿಕೊಳ್ಳಲಿ.



**ಕಿಶೋರ:** ನಾನೇ ಕೊಡ್ತೀನಿ ಬಿಡು. ತಗೊಳ್ಳಿ ಮೇಡಂ. ಬಳಿಸಾರಿ ಮುಗುಳ್ನಗೆಯಿಂದ ನೀರು ನೀಡುವನು. ನಂತರ ಕಾಫಿ ನೀಡಿ ಸ್ನೇಹದ ನಗೆ ಬೀರುವನು.

**ಲಕ್ಷ್ಮೀಪತಿ:** ಮೊದಲು ಕಾಫಿ ಕುಡೀರಿ, ನಂತರ ಕೆಲಸ ಇದ್ದದ್ದೇ. ಏ ಗೋವಿಂದು ಈ ಲೋಟಾನೆಲ್ಲ ತಗೊಂಡು ಹೋಗು.

ಗೋವಿಂದು ಬಂದು ಲೋಟನೆಲ್ಲ ತೆಗೆದುಕೊಂಡು ಹೋಗುವನು. ನಂತರ ಟೇಬಲ್ ಅನ್ನು ಬಟ್ಟೆಯಿಂದ ಒರಸುವನು.

**ಲಕ್ಷ್ಮೀಪತಿ:** ಒಂದು ಡ್ಯೂಟಿ ರಿಪೋರ್ಟ್ ಬರೆದು ಕೊಟ್ಟು, ಹಾಜರಿ ಪುಸ್ತಕದಲ್ಲಿ ನಿಮ್ಮ ಸಹಿ ಹಾಕ್ಬಿಡಿ. ಅಲ್ಲಿಗೆ ಒಂದು ಕೆಲಸ ಮುಗಿದು ಹೋಗುತ್ತೆ.

**ತರುಣಿ:** ಸರ್, ನಾನು ಇಲ್ಲಿಗೆ ನೇಮಕವಾದ ಟೈಪಿಸ್ಟ್ ಅಲ್ಲ.

**ಲಕ್ಷ್ಮೀಪತಿ:** ಹಾಗಾದರೆ ಯಾರು ನೀವು? ಏಕೆ ಬಂದಿದ್ದೀರಿ? (ಮಾತಿನಲ್ಲಿ ನಿರಾಶೆ ಮತ್ತು ಅಸಹನೆ)

**ತರುಣಿ:** ನಮ್ಮ ಆಂಟಿಗೆ ಇಲ್ಲಿ ಪೋಸ್ಟಿಂಗ್ ಆಗಿರೋದು. ಅವರು ಬರೋ ಮುಂಚೆ ಆಫೀಸು ನೋಡ್ಕಂಡು ಬಾ ಅಂದ್ರು. ಅದಕ್ಕೆ ಬಂದೆ. ಅವರು ಇವತ್ತು ರಿಲೀವ್ ಆಗಿ, ನಾಳೆ ಬರ್ತಾ ಇದಾರೆ ಸರ್. ನಿಮ್ಮ ಆಫೀಸು ತುಂಬ ಚೆನ್ನಾಗಿದೆ. ಅದೆಷ್ಟು ನೀಟಾಗಿ ಇಟ್ಟಿದ್ದೀರಿ. ತುಂಬ ಸಂತೋಷ ಆಯ್ತು ಸರ್. ಎಲ್ಲವನ್ನೂ ನಮ್ಮ ಆಂಟೀಗೆ ಹೇಳ್ತೀನಿ.

**ಲಕ್ಷ್ಮೀಪತಿ:** ಮೊದಲು ಆ ಕೆಲಸ ಮಾಡಿ. ನೀವು ಬಂದಿದ್ದು ನಮಗೂ ಸಂತೋಷ ಆಯ್ತು.

**ಬೋಸರಾಜು:** (ಸ್ವಗತ) ಈಕೆನೇ ಇಷ್ಟು ಚೆನ್ನಾಗಿದ್ದಾರೆ ಅಂದ್ರೆ ಇವರ ಆಂಟಿನೂ ಚೆನ್ನಾಗೇ ಇರಬೇಕು. ಆಯ್ತು ಮೇಡಂ. ನಾಳೆ ನಿಮ್ಮ ಆಂಟಿ ಜೊತೆಗೆ ನೀವೂ ಬನ್ನಿ. ಚೆನ್ನಾಗಿರುತ್ತೆ.

**ತರುಣಿ:** ಇಲ್ಲಾ ಸಾರ್, ನಾಳೆ ನನಗೆ ಬೇರೆ ಕೆಲಸ ಇದೆ. ಇನ್ನೊಮ್ಮೆ ಬರ್ತೀನಿ. ಅಂತು ನಮ್ಮ ಆಂಟಿಗೆ ಒಳ್ಳೆ ಕಛೇರೀನೇ ಸಿಗ್ತು. ಬರ್ತೀನಿ.

**ಕಿಶೋರ:** ಮತ್ತೊಮ್ಮೆ ಬನ್ನಿ ಮೇಡಂ. ಮೆಟ್ಟಿಲು ಇಳೀಬೇಕಾದರೆ ಹುಶಾರು. ತರುಣಿ ಕಿಶೋರನೆಡೆ ನಗೆಬೀರಿ ಅಲ್ಲಿಂದ ತೆರಳುವಳು.

**ಲಕ್ಷ್ಮೀಪತಿ:** ಎಲ್ಲರೂ ಕಾಫಿ ತಗೊಳ್ರಿ. ಮತ್ತೆ ನಾಳೇನೂ ತರಿಸ್ಬೇಕು, ನನ್ನ ಗ್ರಹಚಾರ.

**ಬೋಸರಾಜು:** ಸರ್, ಈಕೆ ನೋಡಿದ್ರೆ, ಅದೆಷ್ಟು ಸ್ಫುರದ್ರೂಪಿಯಾಗಿದಾಳೆ, ಇವರ ಆಂಟೀನೂ ಹೀಗೆ ಇರಬೇಕಲ್ವೆ?

**ಕಿಶೋರ:** ನೂರಕ್ಕೆ ನೂರರಷ್ಟು ಸತ್ಯ. ಅದಕ್ಕೇ ಅಲ್ವೆ, ನಮ್ಮ ಮೇನೇಜರ್ ತಮ್ಮ ಮೇಜಿನ ಪಕ್ಕದಲ್ಲೇ ಟೈಪಿಸ್ಟ್ ಟೇಬಲ್ ಹಾಕಿಸಿಕೊಂಡಿರೋದು.

**ಲಕ್ಷ್ಮೀಪತಿ:** ಸಾಕು ಸಾಕು ನಿಮ್ಮ ಹುಡುಗಾಟ. ಹೋಗಿ ಕೆಲ್ಸ ನೋಡ್ಕಳ್ಳಿ.

## ದೃಶ್ಯ – 3

ಅದೇ ಕಛೇರಿ

**ಲಕ್ಷ್ಮೀಪತಿ:** ಗೋವಿಂದು, ನಿನ್ನ ಕೆಲಸ ಮುಗಿದಿದ್ರೆ ಹೋಗಿ ಕಾಫಿ, ಬಿಸ್ಕತ್ತು ತಗೊಂಡು ಬಾ. ಹೊಸಾ ಟೈಪಿಸ್ಟು ಈಗ್ಲೋ ಆಗ್ಲೋ ಬರಬಹುದು. ಮೊದಲು



ಟೈಪಿಸ್ಟ್ ಟೇಬಲ್ ಒರೆಸು.

**ಗೋವಿಂದು:** ಆಗ್ಲಿ ಸರ್. (ಟೇಬಲ್ ಸರಿ ಮಾಡಿ, ಬಟ್ಟೆಯಿಂದ ಒರೆಸುವನು) (ಅಷ್ಟರಲ್ಲಿ ಬೋಸರಾಜು  ಮತ್ತು ಕಿಶೋರ ತಮ್ಮ ಆಸನಗಳಲ್ಲಿ ಕೂರುವರು. ಪದೇ ಪದೇ ಬಾಗಿಲಿನತ್ತ ದೃಷ್ಟಿ.–

**ಲಕ್ಷ್ಮೀಪತಿ:** ಏನ್ರಯ್ಯಾ, ಪದೆ ಪದೆ ಬಾಗಿಲು ಕಡೆ ನೋಡ್ತಿರ್ತೀರ, ಊರಿಗೆ ಬಂದವಳು ನೀರಿಗೆ ಬರೋಲ್ವೆ?

**ಕಿಶೋರ:** ಹಾಗಲ್ಲ ಸರ್. ದೂರದಲ್ಲಿ ಯಾರೋ ಬರ್ತಾ ಇದ್ದಹಾಗೆ ಇತ್ತು ಅದಕ್ಕೇ ನೋಡ್ದೆ.

**ಲಕ್ಷ್ಮೀಪತಿ.:** ಇರಲಿ ನಿಮ್ಮ ಕೆಲಸ ನೀವು ಮಾಡಿ. ಅಷ್ಟರಲ್ಲಿ ಆಟೋ ರಿಕ್ಷಾ ಶಬ್ದ ಕೇಳಿಸುವುದು,

**ಗೋವಿಂದು:** ಅವ್ರು ಆಟೋದಲ್ಲಿ ಬಂದ್ರೂ ಅಂತ ಕಾಣುತ್ತೆ. ನೋಡ್ತೀನಿ.

ಅಷ್ಟರಲ್ಲಿ ಒಬ್ಬ ವಯಸ್ಸಾದ ಕುಳ್ಳಗಿನ, ತಲೆಕೂದಲು ಅರ್ಧಂಬರ್ಧ ಬೆಳ್ಳಗಾದ ನೋಡಲು ಅಷ್ಟೇನೂ ಚೆನ್ನಾಗಿಲ್ಲದ ಒಬ್ಬ ಮಹಿಳೆ ಕಛೇರಿಗೆ ಪ್ರವೇಶ.

**ಲಕ್ಷ್ಮೀಪತಿ:** ಏನಾಗ್ಬೇಕಿತ್ತಮ್ಮ, ಏನು ನಿಮ್ಮ ಸಮಸ್ಯೆ? (ಆಸಡ್ಡೆಯಿಂದ ಕೇಳುವನು)

**ಬೋಸರಾಜು:** ಇನ್ನೇನು ಸರ್, ಆಕೆ ಬಂದಿರೋದು ನೋಡಿದ್ರೆ, ವೃದ್ಧಾಪ್ಯದ ಪೆನ್ಷನ್ ವಿಚಾರ ಅಂತ ಕಾಣ್ಸುತ್ತೆ.

**ಕಿಶೋರ:** ಮೊದಲ ಬೋಣಿಗೆ ಸರಿ ಆಗ್ಲಿಲ್ಲ. ಏನೋ ಹೇಳಿ ಕಳಿಸಿ ಬಿಡಿ.

**ಲಕ್ಷ್ಮೀಪತಿ:** ಏನಮ್ಮ ನಿಮ್ಮ ಗೋಳು? ಇಷ್ಟೆಲ್ಲಾ ಮಾತಾಡ್ತಿದ್ರೂ ಸುಮ್ನೆ ನಿಂತಿದ್ದೀರಲ್ಲಾ? ಬೇಗ ಹೇಳಿ, ಜಾಗ ಖಾಲಿ ಮಾಡಿ

**ಕಿಶೋರ:** ಇಲ್ಲಿ ಬನ್ನಿ ತಾಯಿ, ನಾನು ನೋಡಿ ಹೇಳ್ತೀನಿ

**ಮಹಿಳೆ:** ನಾನು ಇಲ್ಲಿಗೆ ಯಾವ ಅರ್ಜೀನೂ ತಗೊಂಡ್ಬಂದಿಲ್ಲ, ನನಗೇನೂ ಕೆಲಸ ಆಗ್ಬೇಕಿಲ್ಲ

**ಬೋಸರಾಜು:** ಹಾಗಾದ್ರೆ ಯಾಕೆ ಬಂದ್ರಿ, ಸುಮ್ನೆ ನಮ್ಮ ಸಮಯ ಹಾಳ್ಮಾಡೋಕೆ

**ಲಕ್ಷ್ಮೀಪತಿ:** ಹಾಗಾದ್ರೆ ಹೊರಡಿ. ಕೆಲಸ ಇಲ್ಲ ಅಂದ್ಮೇಲೆ ಇಲ್ಲಿಗೆ ಯಾಕೆ ಬರೋಕೆ ಹೋಗಿದ್ರಿ.

**ಮಹಿಳೆ:** ಸರ್, ನಾನು ಇಲ್ಲಿಗೆ ವರ್ಗವಾಗಿ ಬಂದಿರೋ ಹೊಸ ಟೈಪಿಸ್ಟ್. ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಲು ಬಂದಿದ್ದೀನಿ. ಮುಂದಿನ ವರ್ಷಾನೇ ನಾನು ರಿಟೈರು. ತಗೊಳ್ಳಿ ಆರ್ಡರ್ರು. ( ಕೈಲಿದ್ದ ಲಕೋಟೆಯನ್ನು ಮೇನೇಜರ್ ಗೆ ನೀಡುವಳು)

**ಲಕ್ಷ್ಮೀಪತಿ:** ಒಮ್ಮೆಲೇ ಹೌಹಾರಿ, ಹೌದೇನ್ರೀ? ಗೋವಿಂದು ಈ ಟೈಪಿಸ್ಟ್ ಟೇಬಲ್‌ನ ಬೋಸರಾಜು ಟೇಬಲ್ ಹತ್ರ ಹಾಕು. ಅವರಿಗೆ ಟೈಪಿಸ್ಟ್ ಅವಶ್ಯಕತೆ ತುಂಬಾ ಇರುತ್ತೆ.



**ಬೋಸರಾಜು:** ಬೇಡ ಸರ್, ನನಗೇನೂ ಅಷ್ಟೊಂದು ಟೈಪಿಂಗ್ ಕೆಲಸ ಇರೋಲ್ಲ. ಕೇಸ್ ವರ್ಕರ್ ಕಿಶೋರನಿಗೆ ತುಂಬ ಅವಶ್ಯಕತೆ ಇರುತ್ತೆ. ಈ ಟೇಬಲ್‌ನ

ಕಿಶೋರನ ಟೇಬಲ್ ಪಕ್ಕದಲ್ಲಿ ಹಾಕ್ಬಿಡಪ್ಪ.

**ಕಿಶೋರ:** ಬೇಡ ಸರ್. ನಿನ್ನೆಯಿಂದ ಮೇನೇಜರ್, ತಮಗೆ ಡಿಕ್ಟೇಟ್ ಮಾಡೋದು ತುಂಬಾ ಇರುತ್ತೆ. ಇಲ್ಲೇ ಇರ್ಲಿ ಅಂತ ಗಲಾಟೆ ಮಾಡಿ ತಮ್ಮ ಟೇಬಲ್ ಪಕ್ಕದಲ್ಲೇ ಟೈಪಿಸ್ಟ್ ಟೇಬಲ್ ಹಾಕಿಸಿಕೊಂಡಿದ್ದಾರೆ. ಆ ಟೇಬಲ್ ಅಲ್ಲೇ ಇರಲಿ.

**ಗೋವಿಂದು:** ಅಂತು ಹೊಸಾ ಟೈಪಿಸ್ಟು ಬಂದು ಎಲ್ಲರ ಬಣ್ಣ ಬಯಲು ಮಾಡ್ಬಿಟ್ರು. ಇವರಿಗೆ ಹೀಗೇ ಆಗಬೇಕು. ಇವರೆಲ್ಲಾ ಕಛೇರಿಗೆ ಬರೋದು ಕೆಲಸ ಮಡೋಕೋ, ಟೈಪಿಸ್ಟ್ ನೋಡೋಕೋ.

**(ಪರದೆ ಬೀಳುವುದು)**



# ಚಿಪ್ಪಿಂಡಿಯಾ !

**ತುರುವೇಕೆರೆ ಪ್ರಸಾದ್**

**ಹಿಂ**ದೆ ಮನೆಯಲ್ಲಿ ಯಾರಾದರೂ ಬೇಜವಾಬ್ದಾರಿ ಜನ ಇದ್ದರೆ ಹಿರಿಯರು ಅವರಿಗೆ ಉಗಿಯುತ್ತಿದ್ದರು: 'ನೀನು ಹೀಗೇ ಮೈಗಳ್ಳನ ತರ ಅಲೀತಿರು, ನಿನ್ ಕೈಗೆ ಚಿಕ್ಕನಾಯಕನಹಳ್ಳಿ ಚಿಪ್ಪೇ ಸಿಗೋದು' ಅಂತ. ಮೋಸ ಮಾಡಿ ನಾಮದುಂಡೆ ತಿಕ್ಕಿ ಹೋದವನಿಗೆ 'ಹಾಳಾದವ, ಕೈಗೆ ಚಿಪ್ಪು ಕೊಟ್ಟು ಹೋದ' ಅಂತ ಶಪಿಸ್ತಿದ್ರು.' ಅಯ್ಯೋ ! ಅವರಪ್ಪ ಎರಡು ಎಕರೆ ಭರ್ಜರಿ ತೆಂಗಿನತೋಟ ಮಾಡಿದ್ದ, ಈ ಹಾಳಾದೋನು ಯಾವುದನ್ನೂ ಉಳಿಸ್ಕೊಳ್ದೆ ಈಗ ಚಿಪ್ಪು ಸುಡ್ತಿದಾನೆ' ಅಂತ ದಾರಿ ತಪ್ಪಿದ ಮಕ್ಕಳನ್ನ ಬೈತಿದ್ರು. ಈಗ ಚಿಪ್ಪಿನ ಅರ್ಥ ವ್ಯಾಖ್ಯಾನವೇ ಬದಲಾಗಿದೆ. ಈಗ ಚಿಪ್ಪೆಂದರೆ ತೆಂಗಿನ ಕರಟವಲ್ಲ, ಚಿಪ್ ಎಂದರೆ ಮೈಕ್ರೋ ಚಿಪ್ಪು, ಸಿಲಿಕಾನ್ ಚಿಪ್ಪು. ಡಿಜಿಟಲ್ ಯುಗದಿಂದ ನಾವೀಗ ವಾಪಸ್ ಚಿಪ್ಪಿನ ಯುಗಕ್ಕೆ ಬಂದಿದ್ದೇವೆ. ಯಾರಾದರೂ ಚಿಪ್ ಕೊಡುತ್ತಾರೆಂದರೆ ಮುಗಿಬಿದ್ದು ಕಾದು ಲಕ್ಷ ಕೋಟಿ ಕೊಟ್ಟು ಕೊಳ್ಳುವಂತಾಗಿದೆ. ಮಗ, ಮಗಳು ಚಿಪ್ (ಸಾಫ್ಟ್‌ವೇರ್) ಕಂಪನಿಲಿ ಇದಾರೆ ಅಂದ್ರೆ ಅದು ಎದೆಯುಬ್ಬಿಸಿ ಹೆಮ್ಮೆಯಿಂದ ಹೇಳ್ಕೊಳೋ ಮಹಾನ್ ಸಾಧನೆ. ಇದು ಚಿಪ್ ಯುಗ! ಸರ್ವಂ ಚಿಪ್ ಮಯಂ! ಹಾಗಾಗಿ ಚಿಪ್ಪುಗಳಿಗಾಗಿ ಭಾರೀ ಬೇಡಿಕೆ. ಮೊಬೈಲು, ಎಐ, ಕಾರು, ವಾಚು ಎಲ್ಲದರಲ್ಲೂ ಚಿಪ್ಪೋ ಚಿಪ್ಪು! ಚೀನಾ ತೈವಾನ್ಗಳಿಂದ ಚಿಪ್ಪನ್ನು ಅಮದು ಮಾಡಿಕೊಳ್ಳದೆ ವಿಧಿಯಿಲ್ಲ. ಈಗ ಚಿಪ್ಪಿದ್ದವನೇ ದೊಡ್ಡಪ್ಪ.

ಕೋವಿಡ್ ಸಮಯದಲ್ಲಿ ಚೀನಾದೊಂದಿಗಿನ ಸಂಪರ್ಕ ಬಹುತೇಕ ಸ್ಥಗಿತವಾಗಿತ್ತು. ಆಗ ಚೀನಾ ಸರಬರಾಜು ಮಾಡಿದ್ದ ಮಾಸ್ಕ್‌ಗಳೂ ಸಹ ಕಳಪೆ ಎಂದು ಸಾಬೀತಾಗಿ ಚೀನಾದ ಸಹವಾಸವೇ ಬೇಡ ಎಂದು ಎಲ್ಲಾ ದೇಶಗಳಂತೆ ಭಾರತವೂ ತೀರ್ಮಾನಕ್ಕೆ ಬಂದಿತ್ತು. ಚೀನಾ ಯಾವ ಚಿಪ್ಪಲ್ಲಿ ಯಾವ ವೈರಸ್ ಅಡಗಿಸಿ ಕಳಿಸುತ್ತದೋ ಎಂದು ಚಿಪ್‌ಗಳನ್ನೂ ನಿಷೇಧಿಸಲಾಗಿತ್ತು. ಅಟೊಮೊಬೈಲ್ ಕ್ಷೇತ್ರವೇ ಅಲ್ಲಾಡಿ ಹೋಗಿತ್ತು. ಚಿಪ್ಪಿಲ್ಲ ಎಂಬ ಕಾರಣಕ್ಕೆ ನಾವು ಬುಕ್ ಮಾಡಿದ್ದ ಕಾರುಗಳು ತಿಂಗಳುಗಟ್ಟಲೆ ತಡವಾಗಿ ನಮ್ಮ ಕೈ ಸೇರಿದವು. ಆ ನಂತರವೂ ನಮ್ಮ ಕಾರಿನಲ್ಲಿ ಕೆಲವೊಂದು ಅಡ್ವಾನ್ಸ್ ಟೆಕ್ನಾಲಜಿ ಮಿಸ್ಸಾಗಿತ್ತು. ಡಿಸ್‌ಪ್ಲೇ ಮಾನಿಟರಲ್ಲಿ ಕೆಲವು ಪೀಚರ್ಸ್ ಇರಲಿಲ್ಲ, ಗೂಗಲ್ ಮ್ಯಾಪ್ ರೀಡ್ ಆಗ್ತಿರಲಿಲ್ಲ. ಜಿಪಿಎಸ್ ಟ್ರಾಕರ್ ಸರಿಯಾಗಿ ಕೆಲಸ ಮಾಡ್ತಿರಲಿಲ್ಲ. ಶೋ ರೂಮಲ್ಲಿ ಕೇಳಿದ್ರೆ 'ಚಿಪ್ ಸರಿಯಾದ ಟೈಂಗೆ ಸಿಗಲಿಲ್ಲ, ನೀವು ಅವಸರ ಮಾಡಿದ್ರಲ್ಲಾ ಅಂತ ಹಾಗೇ ಕೊಟ್ಟಿಟ್ಟಿದಾರೆ' ಅಂತ ನಮ್ ಮೇಲೇ ಗೂಬೆ ಕೂರುಸ್ತಿದ್ರು, ಅಂತೂ ಅಷ್ಟೊಂದು ದುಡ್ಡು ಕೊಟ್ಟು ಹ್ಯಾಂಡಿಕ್ಯಾಪ್ಡ್ ಕಾರ್ ತಗೊಂಡ್ನಲ್ಲ ಅನಿಸಕ್ಕೆ ಶುರುವಾಗಿತ್ತು. ಆಮೇಲೆ ಹೆತ್ತವಳಿಗೆ ಹೆಗ್ಗಣ ಮುದ್ದು ಅನ್ನೋ ಹಾಗೆ ಇ.ಎಮ್.ಐ ಕಟ್ಟೋರಿಗೆ ಕೊಂಡಿದ್ದೇ ಮುದ್ದು! ಅಂದ್ಕೊಂಡು ನಾವೇ ಹೇಗೋ ಅದಕ್ಕೆ ಹೊಂದಿಕೊಂಡು ಹೋದ್ವಿ.



ಮುಂಚೆ ಈ ಸಿಲಿಕಾನ್ ಚಿಪ್ಪು ಅಂದ್ರೆ ಈ ಕಂಪ್ಯೂಟರ್ಗಳಲ್ಲಿ ದೊಡ್ಡ ದೊಡ್ಡ ಡಾಟಾಗಳನ್ನ ಪ್ರೊಸೆಸ್ ಮಾಡಕ್ಕೆ, ದೊಡ್ಡ ದೊಡ್ಡ ಲೆಕ್ಕಾಚಾರ ಹಾಕಕ್ಕೆ, ಸರ್ವರು, ಮೊಬೈಲ್‌ಗಳ ಕಾರ್ಯದಕ್ಷತೆ ಜಾಸ್ತಿ ಮಾಡಕ್ಕೆ ಉಪಯೋಗಿಸ್ತಾರೆ ಅಂತ ಗೊತ್ತಿತ್ತು.

ಈ ದೇಶದಲ್ಲಿ ಜನಸಂಖ್ಯೆ ಅನ್ನೋ ದೊಡ್ಡ ಕೋಟಿ ಫಿಗರ್ ಒಂದೇ ಶ್ರೀಸಾಮಾನ್ಯ ಸುಲಭವಾಗಿ ಲೆಕ್ಕ ಹಾಕಬಹುದಾದಂತಾದ್ದು. ಇನ್ನೆಲ್ಲಾ ದೊಡ್ ದೊಡ್ ಮನುಷ್ಯರು. ನಮ್ಮನ್ನ ಆಳೋರು ಲೆಕ್ಕ ಹಾಕುವಂತಹವೇ! ನಮ್ ಖೋತಾ ಬಜೆಟ್‌ಗಳು, ಎಲೆಕ್ಷನ್ ಖರ್ಚುಗಳು, ಗ್ಯಾರೆಂಟಿ ವೆಚ್ಚಗಳು, ನಮ್ಮ ಸಿಎಂ. ಶಾಸಕರ ಆಸ್ತಿಗಳು, ಲಲಿತ್ ಮೋದಿ, ಮಲ್ಯನಂತೋರು ಬ್ಯಾಂಕುಗಳಿಗೆ ಕೊಟ್ಟು ಹೋದ ಚಿಪ್ಪು ಇಂತಹ ಭಾರೀ ಭಾರೀ ಲಕ್ಷ ಕೋಟಿ ಟೋಪಿ ವ್ಯವಹಾರಗಳ ಲೆಕ್ಕ ಹಾಕೋಕೇ ಸಿಲಿಕಾನ್ ಚಿಪ್ ಕಂಪ್ಯೂಟರ್‌ಗಳು ಬಂದಿರಬಹುದು ಅಂತ ನನ್ ಲೆಕ್ಕಾಚಾರ! ಇಂಥಾ ಕಂಪ್ಯೂಟರ್ ಕಂಪನಿಗಳು ಬೆಂಗಳೂರಲ್ಲಿ ನಾಯಿಕೊಡೆಗಳ ತರ ಹುಟ್ಟಿದ ಮೇಲೆ ಬೆಂಗಳೂರು ಸಿಲಿಕಾನ್ ವ್ಯಾಲಿ ಆಯ್ತು. ಕಾಂಗ್ರೆಸ್‌ನೋರು ಇದು ನಮ್ ಅವಧಿಯಲ್ಲಿ ಆಗಿದ್ದು, ಅದೂ ಎಸ್.ಎಂ. ಕೃಷ್ಣ ಸರ್ ಅವರ ಕಾಲದಲ್ಲಿ! ಅದಕ್ಕೇ ಇದು ಸಿಲಿ–ಕಾನ್ (ಗ್ರೆಸ್) ಅಂತ ಆ ಕಿರೀಟನ ತಮ್ ತಲೆಗೆ ಇಡ್ಕೊಂಡಿದ್ರು. ಬಿಜೆಪಿಯರು ಅದು ಸಿಲಿ–ಕಾನ್ ಅಲ್ಲ, ಸಿಲ್ಲಿ ಕಾನ್ ಅಂತ ಕಾಲೆಳೆದಿರಬಹುದು. ಅಥವಾ ಎಐ ಇಲ್ಲದ್ದರಿಂದ ರಾಜಕೀಯದವರ ಸ್ವಂತ ಬುದ್ಧಿಗೆ ಅದು ಹೊಳೀದೇ ಇದ್ರೂ ಇರಬಹುದು. ಇತ್ತೀಚೆಗೆ ಎಐ ಚಿಪ್ಪುಗಳು ಬಂದಿವೆ. ಇವು ಭಾರೀ ಡಿಮ್ಯಾಂಡಿರೋ ಚಿಪ್ಪುಗಳು. ಕಂಪ್ಯೂಟರ್‌ಗಳಲ್ಲಿ, ರೋಬೋಗಳಲ್ಲಿ ಇವು ಮೆರೀತಾ ಜಗತ್ತನ್ನೇ ಆಳಕ್ಕೆ ಹೊರಟಿವೆ. ಈ ಬುದ್ಧಿ ಇರೋ ಚಿಪ್ಪುಗಳು ಎಲ್ಲಾ ಕೆಲಸ ಮಾಡಕ್ಕೆ ಶುರು ಹಚ್ಕೊಂಡ ಮೇಲೆ ಮನುಷ್ಯ ಕೆಲಸ ಇಲ್ದೆ ಸೋಂಬೇರಿ ಆದ. ಅಷ್ಟೋ ಇಷ್ಟೋ ಇದ್ದ ಬುದ್ಧಿನೂ ಖರ್ಚು ಮಾಡ್ದೆ ಬುದ್ದಿಗೆಟ್ಟ ಹಾಗೆ ಆಡಕ್ಕೆ ಶುರುಮಾಡ್ದ. ಉಪಯೋಗಿಸದೆ ಇರೋದು ಯಾವುದಾದ್ರೂ ಅಷ್ಟೇ, ಕೆಟ್ಟೇ ಕೆಡುತ್ತೆ. ಬುದ್ಧಿನೂ ಅದಕ್ಕೆ ಹೊರತಲ್ಲ! ಅದೂ ಉಪಯೋಗಿಸದೆ ಕೆಟ್ಟ ಕೊಬರಿ ತರ ಕೌಟಾಗಿರುತ್ತೆ. 'ವರ್ಕ್‌ಲೆಸ್ ಮೈಂಡ್ ಈಸ್ ಎ ಡೆವಿಲ್ಸ್ ವರ್ಕ್ ಶಾಪ್' ಅಂತ ಹೇಳ್ತಾರಲ್ಲ, ಅದು ನಿಜ ಆಯ್ತು. (ಇದನ್ನ ರಿಪೇರಿ ಮಾಡೋಕೆ ಸ್ವತಃ ಎಐ ಚಿಪ್ಪಿಗೂ ಸಾಧ್ಯವಿಲ್ಲ ಅನ್ನೋದು ಬೇರೆ ಮಾತು) ಅಷ್ಟೋ ಇಷ್ಟೋ ಹೆಂಡ್ತಿಗೆ, ಬ್ಯಾಂಕಿಗೆ, ಸಾಲಗಾರರಿಗೆ ಸುಳ್ ಹೇಳ್ಕೊಂಡು ಇದ್ದೋರು ಸಮಾಜಕ್ಕೇ, ದೇಶಕ್ಕೇ ಸುಳ್ ಹೇಳೋ, ಏಮಾರೋ ತುಂಡು–ಗುಂಡು' ಗುತ್ತಿಗೆ ತಗಂಡ್ರು. ರಾಜಕೀಯದವರ ಮರ್ಜಿ ಕಾಯಕ್ಕೆ ನಿಂತು, ಸತ್ಯದ ತಲೆ ಮೇಲೆ ಹೊಡೆದ ಹಾಗೆ ಆಳ ಪಾತಾಳದ ಸುಳ್ಳು ರಾರಾಜಿಸೋಕೆ ಶುರುವಾಯ್ತು. ಡೀಪ್‌ಫ್ಲೇಕ್ ಫೋಟೋಸ್ ಆಯ್ತು. ಆಮೇಲೆ ಡೀಪ್‌ಫೇಕ್ ಆಡಿಯೋ ಆಯ್ತು, ಈಗ ಡೀಪ್‌ಫೇಕ್ ವೀಡಿಯೋಗಳು ಶುರುವಾಗಿವೆ. ರಾಜಕೀಯದೋರು ಅಂಗೈಯಲ್ಲಿ ಆಕಾಶ ತೋರಿಸೋ ಮಂದಿ. ಮುಂದೆ ಅವರು ಆಕಾಶದಲ್ಲೇ ಡೀಪ್‌ಫೇಕ್ ಲೇಸರ್ ಶೋನೂ ತೋರಿಸಿಯಾರು! ಜನನೂ ಈಗ ಸತ್ಯ ಯಾವುದು, ಸುಳ್ ಯಾವುದು ಅಂತ ತಮ್ಮ ಒರಿಜಿನಲ್ ಬುದ್ಧಿಗೆ ಹೊಳೀದೇ ತಲೆಜುಟ್ಟು ಕಿಡ್ಕೊಂಡು ಇದನ್ನ ಪತ್ತೆ ಮಾಡಕ್ಕೇ ಎಐ ಮೊರೆ ಹೋಗಿದಾರೆ.. ಎಐ ಚಿಪ್ಪವೇ ತನ್ನೈ ನಮಃ

ಮುಳ್ಳನ್ನ ಮುಳ್ಳಿಂದಲೇ ತೆಗೀಬೇಕು ಅನ್ನೋ ಹಾಗೆ ಈ ಎಐ ಚಿಪ್ಪಿಂದ ಆಗ್ತಿರೋ ಹಾವಳಿನ ಆ ಚಿಪ್ಪಿಂದಲೇ ತೆಗೀಬೇಕು. ಹೇಗಿದ್ರೂ ಮನುಷ್ಯ ಭಾವನೆ, ಖುಷಿ, ತೃಪ್ತಿ ಎಲ್ಲಾ ಅನುಭವಿಸೋದು ಮರೆತು ಯಂತ್ರವಾಗಿದಾನೆ ಅಂತ ಹೇಳ್ತಾನೇ ಇರ್ತೀವಿ. ಈಗ ಕಿಡ್ನಿ, ಲಿವರು, ಹಾರ್ಟನೇ ತೆಗೆದು ಪಕ್ಕಕ್ಕಿಟ್ಟು ಅರ್ಟಿಫಿಶಿಯಲ್ ಆರ್ಗನ್ ಜೋಡಿಸೋ ಕಾಲ ಬಂದಿದೆ. ನಮ್ ಬಾಡಿಲಿ ರಾಡು, ಸ್ಪಂಟು ಹಾಕ್ಕಂಗೆ ತಲೇಲಿ ಒಂದೊಂದು ಚಿಪ್ಪು ಹಾಕ್ಸಿದ್ರೆ ಆಯ್ತು. ಆಗ ಯಾರೂ ಸ್ವಂತ ಬುದ್ಧಿ



ಉಪಯೋಗಿಸೋ ಹಾಗಿಲ್ಲ. ಎಲ್ಲರೂ ಸರಿ ಸಮಾನರೇ ಆಗ್ಬಿಡ್ತಾರೆ. ರಾಜಕೀಯಕ್ಕೆ ಬರೋರಿಗೆ ಕಡ್ಡಾಯವಾಗಿ ಒಂದು ಚಿಪ್ ಹಾಕಿದರೆ ಅವರು ಸ್ಟಂಟು ಮಾಡೋದು ಎಲ್ರಿಗೂ ಗೊತ್ತಾಗುತ್ತೆ. ಬ್ರೈನ್ ಮ್ಯಾಪಿಂಗೇ ಬೇಕಾಗಲ್ಲ. ರಾಜಕೀಯದೋರು ಈಗ ಬಳಸೋ ಕಂತ್ರಿ ಕಿತ್ ಹೋಗಿರೋ ಭಾಷೆ ಬಿಟ್ಟು ಎಐ ಭಾಷೇಲಿ ಸೊಫಿಸ್ಟಿಕೇಟೆಡ್ ಆಗಿ ನಾಗರಿಕತೆಯಿಂದ (ಮೂರೂ ಬಿಟ್ ನನ್ಮಗನೇ ಅನ್ನೋ ಬದಲು ಮೆಗಾಬಿಟ್ ನನ್ಮಗನೇ, ಗಿಗಾಬಿಟ್ ನನ್ಮಗನೇ ಅಂತ) ಬೈಯಬಹುದು. ಆದ್ರೆ ಈ ಚಿಪ್ ಕ್ವಾಲಿಟಿಲೂ ಗೋಲ್‌ಮಾಲ್ ಆದ್ರೆ ಈ ಚಿಪ್ ಸ್ಕ್ಯಾಂಡಲ್ ತನಿಖೆಗೆ ಚೀನಾದ್ದೋ, ಅಮೇರಿಕಾದ್ದೋ ಎಜೆನ್ಸಿನೇ ಬರಬೇಕಾಗಬಹುದು. ತಲೆಯೊಳಿಗನ ಚಿಪ್ಪಿಗೂ, ಕೈಯೊಳಗಿನ ಮೊಬೈಲ್, ಲ್ಯಾಪ್ಟಾಪ್ ಮೊದಲಾದ ಯಂತ್ರಗಳ ಚಿಪ್ಪಿಗೂ ಸಂಘರ್ಷ ಉಂಟಾಗಿ ನಾನಾ–ನೀನಾ ಎಂದು ಹೊಡೆದಾಟಕ್ಕೆ ಇಳಿಯಬಹುದು. ಹೆಂಡ್ತಿ ಮಾತ್ರ ಮನೇಲಿ ಗಂಡಂಗೆ 'ಈ ಎಐ ಬುದ್ದಿ ಎಲ್ಲಾ ನನ್ ಹತ್ರ ತೋರ್ಸಕ್ಕೆ ಬರಬೇಡಿ' ಎಂದು ಗಂಡನ ತಲೆ ಚಿಪ್ ಉದುರಿಸುವ ಹೊಸ ಹೊಸ ಸಂಶೋಧನೆಗಳನ್ನು ಮಾಡಿಯಾಳು. ಹೇ ಎಐ! ಕಂಡೆಯಾ ಕಾಲಿ ಮಂಡೆಯ! ಗುಂಡಿ ಗುಂಡಿಯಲಿ ಬಿದ್ದಿಹರು ಮುಠ್ಠಾಳ, ಮಡೆಯ.. ಮುಸುಕಿದೀ ಪಬ್ಬಿನಲಿ ಕೈ ಹಿಡಿದು ನಡೆಸು ಓ ಚಿಪ್ಪಿಂಡಿಯಾ!

